ಮಂಗಳವಾರ, ನವೆಂಬರ್ 26, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 327 | ಪುಟ 14

• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂವಿಧಾನ ದಿನದ ವಿಶೇಷ

75ರ ಸಂವಿಧಾನ ಅನುಸಂಧಾನ 11

ಕರ್ನಾಟಕಕ್ಕೆ ಕಡಿಮೆ ಅನುದಾನ 9

ವಕ್ಫ್: ಕೈ–ಕಮಲ ಆರೋಪ– ಪ್ರತ್ಯಾರೋಪ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,109	24,221	₹80,900 (ಬೆಂಗಳೂರು)	₹95,200 (ಬೆಂಗಳೂರು)	84.29

13ರ ಪೋರ ವೈಭವ್ ಕೋಟಿವೀರ

ಬಿಹಾರದ 13 ವರ್ಷ ವಯಸ್ಸಿನ ಬ್ಯಾಟರ್ ವೈಭವ್ ಸೂರ್ಯವಂಶಿ ಅವರನ್ನು ರಾಜಸ್ಥಾನ ರಾಯಲ್ಸ್ ತಂಡವು ₹ 1.10 ಕೋಟಿ ನೀಡಿ ಖರೀದಿಸಿತು. ಅವರು ಐಪಿಎಲ್ ತಂಡಕ್ಕೆ ಆಯ್ಕೆಯಾದ ಅತಿ ಕಿರಿಯ ವಯಸ್ಸಿನ ಆಟಗಾರ.

ಜಂಟಿ ಸಂಸದೀಯ ಸಮಿತಿ ರಚನೆಗೆ ವಿಪಕ್ಷ ಪಟ್ಟು • ಲೋಕಸಭೆ, ರಾಜ್ಯಸಭೆ ಕಲಾಪ ಮುಂದೂಡಿಕೆ

ಸದನದಲ್ಲಿ 'ಅದಾನಿ ಲಂಚ' ಗದ್ದಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಉದ್ಯಮಿ ಗೌತಮ್ ಅದಾನಿ ಲಂಚ ಪ್ರಕರಣವನ್ನು ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು 'ಇಂಡಿಯಾ' ಮೈತ್ರಿಕೂಟದ ಸಂಸದರು ಪಟ್ಟು ಹಿಡಿದ ಕಾರಣ ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ದಿನವಾದ ಸೋಮವಾರ ಯಾವುದೇ ಕಲಾಪ ನಡೆಯಲಿಲ್ಲ.

ಭಾರತದ ಸಂವಿಧಾನವನ್ನು ಅಳವಡಿಸಿಕೊಂಡ 75ನೇ ವರ್ಷದ ಸ್ಮರಣಾರ್ಥ ಮಂಗಳವಾರ ಸಂವಿಧಾನ ದಿನವಾಗಿ ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಎರಡೂ ಸದನಗಳ ಕಲಾಪ ಬುಧವಾರ ಬೆಳಿಗ್ಗೆ ಪುನರಾರಂಭಗೊಳ್ಳಲಿದೆ.

ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ವಿಪಕ್ಷಗಳ ಸಂಸದರು ಅದಾನಿ ಲಂಚ ಪ್ರಕರಣದ ಚರ್ಚೆ ಮಾಡಬೇಕು ಎಂದು ಆಗ್ರಹಿಸಿದರು. ಇದಕ್ಕೆ ಸಭಾಧ್ಯಕ್ಷರು ಒಪ್ಪಲಿಲ್ಲ. ಆಗ ವಿಪಕ್ಷಗಳ ಸಂಸದರು ಸಭಾಧ್ಯಕ್ಷರ ನಡೆ ಖಂಡಿಸಿ ಪ್ರತಿಭಟನೆ ನಡೆಸಿದಾಗ ಕಲಾಪವನ್ನು ಬುಧವಾರದ ವರೆಗೆ ಮುಂದೂಡಲಾಯಿತು.



ಈ ಕುರಿತು 'ಎಕ್ಸ್' ಮಾಡಿರುವ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಜೈರಾಮ್ ರಮೇಶ್, 'ಮೋದಾನಿ ವಿಷಯವು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಸೋಮವಾರ ಪ್ರತಿಧ್ವನಿಸಿತು. ಮೋದಾನಿ ಹಗರಣದ ತನಿಖೆಗೆ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ರಚಿಸುವಂತೆ ಇಂಡಿಯಾ ಪಕ್ಷಗಳು ಒತ್ತಾಯಿಸಿದವು. ಅದಾನಿ ವಿರುದ್ಧದ ಲಂಚ ಮತ್ತು ಮಾಹಿತಿ ಗೋಪ್ಯವಾಗಿಟ್ಟ ದೋಷಾರೋಪಣೆಗಳು ಹಾಗೂ ಭಾರತೀಯ ಮತ್ತು ಅಮೆರಿಕ ನಿಯಂತ್ರಕರಿಂದ ಮಾಹಿತಿಯನ್ನು ಮುಚ್ಚಿಟ್ಟ ತನಿಖೆಗೆ ಸಮಿತಿ ರಚನೆ ಮಾಡಬೇಕು ಎಂದು ಒತ್ತಾಯಿಸಲಾಯಿತು' ಎಂದಿದ್ದಾರೆ.

ಇಂಡಿಯಾ ಮೈತ್ರಿಕೂಟದ ಸಂಸದರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಸೋಮವಾರ ಬೆಳಿಗ್ಗೆ ಸಭೆ ಸೇರಿ ಸದನದಲ್ಲಿ ನಡೆಸಬೇಕಾದ ಹೋರಾಟಗಳ ಕುರಿತು ಚರ್ಚಿಸಿದರು. ಸದನದಲ್ಲಿ ಅದಾನಿ ಹಗರಣವನ್ನು ಪ್ರಸ್ತಾಪಿಸಿ ತಕ್ಷಣದ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲು ನಿರ್ಧರಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ರಾಜ್ಯಸಭೆಯ ವಿಪಕ್ಷ ನಾಯಕರೂ ಆಗಿರುವ ಖರ್ಗೆ, 'ಸರ್ಕಾರ ಕೈಗೊಳ್ಳಬೇಕಾದ ಮೊದಲ ಹೆಜ್ಜೆಯೆಂದರೆ ಜಾಗತಿಕ ಮಟ್ಟದಲ್ಲಿ ಭಾರತದ ಹೆಸರಿಗೆ ಮಸಿ ಬಳಿಯಬಹುದಾದ ಅದಾನಿ ಹಗರಣದ ಕುರಿತು ವಿಸ್ತೃತ ಚರ್ಚೆಯನ್ನು ಕೈಗೊಳ್ಳಬೇಕು. ಇಂಡಿಯಾ ಮೈತ್ರಿಕೂಟದ ಪಕ್ಷಗಳು ಇದೇ ಬೇಡಿಕೆಯನ್ನು ಮುಂದಿಟ್ಟಿವೆ. ಅದಾನಿ ಹಗರಣದಿಂದಾಗಿ ಈಗ ಚಿಲ್ಲರೆ ಹೂಡಿಕೆದಾರರ ಶ್ರಮದ ಹೂಡಿಕೆಗಳು ಸಂಕಷ್ಟದಲ್ಲಿವೆ' ಎಂದರು.

ಲೋಕಸಭೆಯ ಕಲಾಪವು ಬೆಳಿಗ್ಗೆ 11 ಗಂಟೆಗೆ ಆರಂಭಗೊಂಡಿತು ಮತ್ತು ನಿಧನರಾದ ಇಬ್ಬರು ಹಾಲಿ ಸಂಸದರಿಗೆ ಸಂತಾಪ ಸೂಚಿಸಿದ ನಂತರ 12 ಗಂಟೆಯವರೆಗೆ ಮುಂದೂಡಲಾಯಿತು.

9ನೇ ಪುಟ ನೋಡಿ

ಹೊಸ ಹೂಡಿಕೆ ತಡೆಹಿಡಿದ ಫ್ರಾನ್ಸ್‌ನ ಟೋಟಲ್ ಎನರ್ಜಿ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಕಂಪನಿಯಲ್ಲಿ ಹೊಸ ಹೂಡಿಕೆಯನ್ನು ತಡೆಹಿಡಿದಿರುವುದಾಗಿ ಫ್ರಾನ್ಸ್‌ನ ಇಂಧನ ಕ್ಷೇತ್ರದ ದೈತ್ಯ 'ಟೋಟಲ್ ಎನರ್ಜೀಸ್ ಎಸ್‌ಇ' ಸೋಮವಾರ ತಿಳಿಸಿದೆ.

ಟೋಟಲ್ ಎನರ್ಜೀಸ್ ಕಂಪನಿಯು ಅದಾನಿ ಸಮೂಹದ ಅತಿದೊಡ್ಡ ವಿದೇಶಿ ಹೂಡಿಕೆದಾರರಲ್ಲಿ ಒಂದಾಗಿದೆ. ಕಂಪನಿಯು ಅದಾನಿ ಗ್ರೀನ್ ಎನರ್ಜೀಸ್ ಲಿಮಿಟೆಡ್ (ಎಜಿಇಎಲ್) ಮತ್ತು ಅದಾನಿ ಟೋಟಲ್ ಗ್ಯಾಸ್ ಲಿಮಿಟೆಡ್‌ನಲ್ಲಿ (ಎಟಿಜಿಎಲ್) ಈ ಹಿಂದೆ ಭಾರಿ ಮೊತ್ತದ ಹೂಡಿಕೆ ಮಾಡಿದೆ.

ತನ್ನ ಪಾಲುದಾರ ಅದಾನಿ ಸಮೂಹದ ಸಂಸ್ಥಾಪಕ ಅಧ್ಯಕ್ಷರು ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ಅಮೆರಿಕದಲ್ಲಿ ತನಿಖೆ ಎದುರಿಸುತ್ತಿರುವ ಬಗ್ಗೆ ತಿಳಿದಿಲ್ಲ ಎಂದು ಟೋಟಲ್ ಎನರ್ಜೀಸ್ ಪ್ರಕಟಣೆಯಲ್ಲಿ ತಿಳಿಸಿದೆ.

'ದೋಷಾರೋಪಣೆಯು ಎಜಿಇಎಲ್ ಅನ್ನು ಅಥವಾ ಎಜಿಇಎಲ್ ಜತೆ ಪಾಲುದಾರಿಕೆ ಹೊಂದಿರುವ ಕಂಪನಿಗಳನ್ನು ಗುರಿಯಾಗಿಸಿ ಕೊಂಡಿಲ್ಲ. ಆದರೂ, ಅದಾನಿ ಸಮೂಹದ ವ್ಯಕ್ತಿಗಳ ವಿರುದ್ಧ ಕೇಳಿಬಂದಿರುವ ಆರೋಪಗಳು ಮತ್ತು ಅದರ ಪರಿಣಾಮಗಳು ಏನು ಎಂಬುದು ಸ್ಪಷ್ಟವಾಗುವವರೆಗೂ ಅದಾನಿ ಸಮೂಹದಲ್ಲಿ ಯಾವುದೇ ಹೊಸ ಹೂಡಿಕೆ ಮಾಡುವುದಿಲ್ಲ' ಎಂದು ಹೇಳಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಸಂವಿಧಾನದಲ್ಲಿ ಜಾತ್ಯತೀತ ಪದ ಆಕ್ಷೇಪ ತಳ್ಳಿಹಾಕಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಸಂವಿಧಾನದ ಪ್ರಸ್ತಾವನೆಗೆ 'ಸಮಾಜವಾದಿ', 'ಜಾತ್ಯತೀತ' ಮತ್ತು 'ಸಮಗ್ರತೆ' ಎಂಬ ಪದಗಳನ್ನು ಸೇರಿಸಿದ್ದ 1976ರ ತಿದ್ದುಪಡಿಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

1976ರಲ್ಲಿ, ಅಂದಿನ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಅವರು 42ನೇ ತಿದ್ದುಪಡಿ ಮೂಲಕ ಭಾರತದ ಸಂವಿಧಾನದ ಪ್ರಸ್ತಾವನೆಗೆ 'ಜಾತ್ಯತೀತ', 'ಸಮಾಜವಾದಿ' ಮತ್ತು 'ಸಮಗ್ರತೆ' ಪದಗಳನ್ನು ಸೇರಿಸಿದ್ದರು.

'ಸಂವಿಧಾನದ 368ನೇ ವಿಧಿಯು ಸಂವಿಧಾನಕ್ಕೆ ತಿದ್ದುಪಡಿ ತರುವುದನ್ನು ಅನುಮತಿಸುತ್ತದೆ. ತಿದ್ದುಪಡಿ ಮಾಡುವ ಸಂಪೂರ್ಣ ಅಧಿಕಾರವು ಸಂಸತ್ತಿಗೆ ಇರುತ್ತದೆ. ಈ ತಿದ್ದುಪಡಿ ಅಧಿಕಾರವು ಸಂವಿಧಾನದ ಪೀಠಿಕೆಗೂ ಅನ್ವಯವಾಗುತ್ತದೆ' ಎಂದು ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರ ಪೀಠವು ಹೇಳಿದೆ.

8ನೇ ಪುಟ ನೋಡಿ

ಪರ್ತ್ ಟೆಸ್ಟ್ ಭಾರತ ಜಯಭೇರಿ

ಪರ್ತ್ (ಪಿಟಿಐ): ಜಸ್‌ಪ್ರೀತ್ ಬೂಮ್ರಾ ನಾಯಕತ್ವದ ಭಾರತ ಕ್ರಿಕೆಟ್ ತಂಡವು ಆಸ್ಟ್ರೇಲಿಯಾ ಎದುರಿನ ಮೊದಲ ಟೆಸ್ಟ್ ಪಂದ್ಯವನ್ನು ಸೋಮವಾರ 295 ರನ್‌ಗಳಿಂದ ಜಯಿಸಿತು. ಐದು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

534 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಆತಿಥೇಯ ಆಸ್ಟ್ರೇಲಿಯಾ ತಂಡವು 58.4 ಓವರ್‌ಗಳಲ್ಲಿ 238 ರನ್ ಗಳಿಸಿತು. ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಗಳಿಸಿದ್ದ ಬೂಮ್ರಾ, ಎರಡನೇ ಇನಿಂಗ್ಸ್‌ನಲ್ಲಿ ಮೂರು ವಿಕೆಟ್ ಪಡೆದರು. ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರರಾದರು. ಮೊಹಮ್ಮದ್ ಸಿರಾಜ್ 3 ಮತ್ತು ಸ್ಪಿನ್ನರ್ ವಾಷಿಂಗ್ಟನ್ ಸುಂದರ್ 2 ವಿಕೆಟ್ ಗಳಿಸಿದರು. ಎರಡನೇ ಟೆಸ್ಟ್ ಡಿ. 6 ರಿಂದ ಅಡಿಲೇಡ್‌ನಲ್ಲಿ ನಡೆಯಲಿದೆ.

ಜಸ್‌ಪ್ರೀತ್ ಬೂಮ್ರಾ

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯ ರಸ್ತೆ, ಬೆಂಗಳೂರು–560 099.
ಫೋನ್: 080–27835122, ಫ್ಯಾಕ್ಸ್: 080–27836569, www.anekal.tpa.gov.in, www.e-vinyasa.kar.nic.in

ಸಂ:ಆಯೋಪ್ರಾ/ಭೂ.ಬ/58/2023–24 ದಿನಾಂಕ: 20.11.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ. ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಜನಾರ್ಧನ ರೆಡ್ಡಿ ಬಿನ್ ಲೇ. ಬಿ. ಬೈಯಣ್ಣ.	ಆನೇಕಲ್	ಕಸಬಾ	ಸಮಂದೂರು	185/3	03–05 ಪೈಕಿ 0–10	ಕೃಷಿ	ವಾಣಿಜ್ಯ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಿದಂತಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಸದಸ್ಯ ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್.

ವಾಸಾಸಂಇ/ವಾಪ್ರ/ಜಿಎ/3423/2024–25

ಆಯುಷ್: 28ರವರೆಗೆ ಮತ್ತೆ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಕನಿಷ್ಠ ಅರ್ಹತೆಯ ಅಂಕಗಳನ್ನು ಪರಿಷ್ಕರಿಸಿರುವ ಕಾರಣ ಹೊಸದಾಗಿ ನೋಂದಣಿ, ಅರ್ಜಿ ಸಲ್ಲಿಕೆ ಹಾಗೂ ಶುಲ್ಕ ಪಾವತಿಗೆ ನ. 28ರವರೆಗೆ ಪೋರ್ಟಲ್ ತೆರೆಯಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಭಾರತೀಯ ವೈದ್ಯ ಪದ್ಧತಿಯ ರಾಷ್ಟ್ರೀಯ ಆಯೋಗ ಪ್ರಸಕ್ತ ಸಾಲಿಗೆ ಆಯುಷ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಎಲ್ಲ ವರ್ಗದ ಅಭ್ಯರ್ಥಿಗಳಿಗೆ ನೀಟ್‌ನಲ್ಲಿ ಕನಿಷ್ಠ 15 ಪರ್ಸೆಂಟೈಲ್ ನಗದಿ ಮಾಡಿದ್ದು, ಎಲ್ಲ ಅರ್ಹರಿಗೂ ಅನುಕೂಲ ಮಾಡಲು ಮತ್ತೊಮ್ಮೆ ಅವಕಾಶ ನೀಡಲಾಗಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಮಾಹಿತಿ ನೀಡಿದ್ದಾರೆ.

ತಾತ್ಕಾಲಿಕ ಸೀಟು ಹಂಚಿಕೆ ಫಲಿತಾಂಶವನ್ನು ಡಿ.2ರಂದು, ಡಿ.3ರಂದು ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ. ಶುಲ್ಕ ಪಾವತಿಸಿ, ಡಿ.5ರೊಳಗೆ ಕಾಲೇಜಿಗೆ ಪ್ರವೇಶ ಪಡೆಯಬಹುದು.

ಸಂಕ್ಷಿಪ್ತ ಸುದ್ದಿ

'ಅಂಗಳದಲ್ಲಿ ತಿಂಗಳ ಪುಸ್ತಕ' ನಾಳೆ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರವು ಪ್ರತಿ ತಿಂಗಳು 'ಅಂಗಳದಲ್ಲಿ ತಿಂಗಳ ಪುಸ್ತಕ' ಎಂಬ ಕಾರ್ಯಕ್ರಮ ಆರಂಭಿಸುತ್ತಿದೆ. ಒಂದು ಪುಸ್ತಕದ ಬಗ್ಗೆ ಪ್ರಮುಖ ಸಾಹಿತಿಯೊಬ್ಬರು ತಮ್ಮ ಅನಿಸಿಕೆಗಳನ್ನು ಸಭಿಕರಿಗೆ ವ್ಯಕ್ತಪಡಿಸಲಿದ್ದಾರೆ. ನವೆಂಬರ್ 27ರಂದು ಬೆಳಿಗ್ಗೆ 11 ಗಂಟೆಗೆ ಕನ್ನಡ ಭವನದ 2ನೇ ಮಹಡಿಯ ವರ್ಣ ಗ್ಯಾಲರಿಯಲ್ಲಿ ನಡೆಯುವ ಸಮಾರಂಭದಲ್ಲಿ ಈ ಕಾರ್ಯಕ್ರಮದ ಉದ್ಘಾಟನೆಯಾಗಲಿದೆ. ಕರ್ನಾಟಕ ಸಂಭ್ರಮದ ಸಂದರ್ಭದಲ್ಲಿ ಬಿಡುಗಡೆಯಾದ ಆರು ಪುಸ್ತಕಗಳ ಬಗ್ಗೆ ಪರಿಚಯ ನಡೆಯಲಿದೆ. ಪ್ರಾಧಿಕಾರದ ಅಧ್ಯಕ್ಷ ಮಾನಸ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಆಡಳಿತಾಧಿಕಾರಿ ಕೆ.ಬಿ.ಕಿರಣ್ ಸಿಂಗ್ ತಿಳಿಸಿದ್ದಾರೆ.

ಹಳೆ ವಿದ್ಯಾರ್ಥಿಗಳ ಸಮಾವೇಶ

ಬೆಂಗಳೂರು: ಎಪಿಎಸ್ ವಿಶ್ವಸ್ಥ ಸಂಸ್ಥೆಯು ಜನವರಿ 26ರಂದು ಆಚಾರ್ಯ ಪಾಠಶಾಲಾ ವಿಶ್ವಸ್ಥ ಸಂಸ್ಥೆಯಲ್ಲಿ ಅಭ್ಯಾಸ ಮಾಡಿದ ಹಳೆಯ ವಿದ್ಯಾರ್ಥಿಗಳ ಸಮಾವೇಶವನ್ನು ಹಮ್ಮಿಕೊಂಡಿದೆ.

https://docs.google.com/forms/d/e/1FAIpQLSdYKt_Fot0uiFpAE2gDn61R38_O2V_HufKdM10hojZjs2-e1A/viewform?usp=sf_link ಈ ಲಿಂಕ್ ಬಳಸಿ ಅಭ್ಯರ್ಥಿಗಳು ತಮ್ಮ ಹೆಸರು ನೋಂದಣಿ ಮಾಡಿಕೊಳ್ಳಬೇಕು ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪ್ರೊ.ಎ. ಪ್ರಕಾಶ್ ತಿಳಿಸಿದ್ದಾರೆ.

ಲಲಿತಾ ಕೆ ಹೊಸಪ್ಯಾಟಿಗೆ ಕಾವ್ಯಾನಂದ ಪುರಸ್ಕಾರ

ಬೆಂಗಳೂರು: ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ ನೀಡುವ 2023ರ ಕಾವ್ಯಾನಂದ ಪುರಸ್ಕಾರಕ್ಕೆ ಲಲಿತಾ ಕೆ. ಹೊಸಪ್ಯಾಟಿ ಅವರ 'ಬ್ಯೂಟಿ ಬೆಳ್ಳಕ್ಕಿ' ಎಂಬ ಕೃತಿ ಆಯ್ಕೆಯಾಗಿದೆ.

ಸಿದ್ಧಯ್ಯ ಪುರಾಣಿಕ ಅವರ ಕಾವ್ಯನಾಮ 'ಕಾವ್ಯಾನಂದ' ಹೆಸರಿನಲ್ಲಿ ನೀಡುವ ಪುರಸ್ಕಾರವು ₹50 ಸಾವಿರ ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. 2025ರ ಜನವರಿ 10ರಂದು ನಗರದ ರವೀಂದ್ರ ಕಲಾಕ್ಷೇತ್ರ ಆವರಣದಲ್ಲಿರುವ ನಯನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷೆ ವಿಜಯಾ ನಂದೀಶ್ವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ವಾರ್ತೆ

ಕಾಶೀನಾಥ ಕಾಡಾದಿ

ಬೆಂಗಳೂರು: ಹಟ್ಟಿ ಚಿನ್ನದ ಗಣಿ ನಿವೃತ್ತ ಪ್ರಧಾನ ವ್ಯವಸ್ಥಾಪಕ ಕಾಶೀನಾಥ ಕಾಡಾದಿ (85) ನಗರದ ಮಹಾಲಕ್ಷ್ಮಿ ಬಡಾವಣೆಯ ಸ್ವಗೃಹದಲ್ಲಿ ಭಾನುವಾರ ನಿಧನರಾದರು.

ಬಸವ ಸಮಿತಿಯಲ್ಲಿ ಕಾರ್ಯದರ್ಶಿ ಯಾಗಿದ್ದರು. ಅವರಿಗೆ ಇಬ್ಬರು ಪುತ್ರರು, ಒಬ್ಬರು ಪುತ್ರಿ ಇದ್ದಾರೆ. ಕಾಶೀನಾಥ ಅವರ ಮೃತದೇಹವನ್ನು ಮಂಗಳವಾರ ರಾಮಯ್ಯ ಆಸ್ಪತ್ರೆಗೆ ದಾನ ಮಾಡಲಾಗುವುದು ಎಂದು ಅವರ ಪುತ್ರ ಡಾ. ಭರತ್ ಕಾಡಾದಿ ತಿಳಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ: ಬೆಂಅಪ್ರಾ/ಕಾಇಂ(ವಿ)/556/2024–25 ದಿನಾಂಕ: 25.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿನ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗೆ ಅಡ್ಡಲಾಗಿರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವ 3 ಸಂಖ್ಯೆಯ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ ಕೆಳಕಂಡಂತೆ ಇರುತ್ತದೆ.

ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ: (1) ಟೆಂಡರ್ ದಾಖಲಾತಿಗಳು ಇ–ಪೋರ್ಟಲ್‌ನಲ್ಲಿ ಲಭ್ಯವಾಗುವ **ದಿನಾಂಕ: 25.11.2024.** (2) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ ಮತ್ತು ಸಮಯ: 02.12.2024, 16.00 ಗಂಟೆ.** (3) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **03.12.2024 ಸಂಜೆ 17.00ರ ನಂತರ.**

ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನ್ನು ನೋಡಿ ಅಥವಾ ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್) ಇವರ ಕಚೇರಿ, ಬೆಂ.ಅ.ಪ್ರಾ., ಟಿ.ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು, ಸಂ: **91+9845630164** ಸಂಪರ್ಕಿಸಿ. ವಿಚಾರಣೆಗಾಗಿ ಸಂಪರ್ಕಿಸಿ ಇ–ಮೇಲ್ ಐಡಿ: **eeelec.bda@gmail.com**

ಸಹಿ/– ಕಾರ್ಯಪಾಲಕ ಅಭಿಯಂತರರು(ವಿದ್ಯುತ್), ವಿದ್ಯುತ್ ವಿಭಾಗ, ಬೆಂಅಪ್ರಾ, ಬೆಂಗಳೂರು.

SEBI ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ

ಪ್ರಕಟಣೆ

ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ರವರಿಂದ ನೇಮಕಗೊಂಡಿರುವ, ತೀರ್ಪು ನೀಡುವ ಪ್ರಾಧಿಕಾರದ ಅಧಿಕಾರಿ ಶ್ರೀಮತಿ. ಆಶಾ ಶೆಟ್ಟಿ ರವರು ಕೆಳಕಂಡ ಸಂಸ್ಥೆಗೆ/ನೋಟಿಸ್‌ದಾರರಿಗೆ ಶೋಕಾಸ್ ನೋಟಿಸ್ (ಎಸ್‌ಸಿಎನ್) ಹೊರಡಿಸಿದ್ದರು, ಆದರೆ ಸದರಿ ನೋಟಿಸ್‌ಗಳು ಅವರ ಹಿಂದಿನ ಬಲ್ಲ ವಿಳಾಸಕ್ಕೆ ಬಟವಾಡೆ ಆಗಿರುವುದಿಲ್ಲ. ಆದ್ದರಿಂದ, ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ವಿಚಾರಣೆ ಕೈಗೊಳ್ಳುವುದಕ್ಕೆ, ಸದರಿ ತೀರ್ಪು ಪ್ರಾಧಿಕಾರದ ಅಧಿಕಾರಿಯು ಸೆಬಿ ಸಂಸ್ಥೆಯ (www.sebi.gov.in ಅಡಿಯಲ್ಲಿನ ಶೀರ್ಷಿಕೆ Enforcement->Unserved Summons/Notices) ವೆಬ್‌ಸೈಟ್‌ನಲ್ಲಿ ನೋಟಿಸ್‌ದಾರರ ಮಾಹಿತಿಗಾಗಿ ಕೆಳಕಂಡ ಎಸ್‌ಸಿಎನ್ ಪ್ರಕಟಿಸಿರುತ್ತಾರೆ. ಸದರಿ ನೋಟಿಸ್‌ದಾರರು ತಮ್ಮ ಯಾವುದೇ ಪ್ರತಿಕ್ರಿಯೆ ನೀಡುವುದಾದಲ್ಲಿ, ಅದು ಎಸ್‌ಸಿಎನ್ ನಿಬಂಧನೆಗಳ ಪ್ರಕಾರ ಈ ಪ್ರಕಣೆಯು ಪ್ರಕಟಗೊಂಡ ದಿನಾಂಕದಿಂದ 14 ದಿನಗಳೊಳಗೆ ashas@sebi.gov.in, deeptis@sebi.gov.in ಮತ್ತು vijayc@sebi.gov.in ಇಮೇಲ್ ಮುಖಾಂತರ ತೀರ್ಪು ಪ್ರಾಧಿಕಾರದ ಅಧಿಕಾರಿಗೆ ತಲುಪುವಂತೆ ರವಾನಿಸತಕ್ಕದ್ದು. ಈ ವಿಷಯದಲ್ಲಿ ವಿಚಾರಣೆಯನ್ನು ಕೈಗೊಳ್ಳುವ ನಿಟ್ಟಿನಲ್ಲಿ, ತೀರ್ಪು ಪ್ರಾಧಿಕಾರದ ಅಧಿಕಾರಿಯು ಕೆಳಗಿನ 'ಕೋಷ್ಟಕ ಎ' ದಲ್ಲಿ ನೀಡಲಾಗಿರುವ ದಿನಾಂಕ ಮತ್ತು ಸಮಯದಲ್ಲಿ ದೂರವಾಣಿ/ವಿಡಿಯೋ ಕಾನ್ಫರೆನ್ಸ್ ಮುಖಾಂತರ ಅಥವಾ ಖುದ್ದಾಗಿ ಸೆಬಿ ಭವನ 2, ಸಿ7, ಜಿ ಬ್ಲಾಕ್, ಬಾಂದ್ರ ಕುರ್ಲಾ ಕಾಂಪ್ಲೆಕ್ಸ್, ಮುಂಬೈ 400051 ವಿಳಾಸದಲ್ಲಿ ವಿಚಾರಣೆ ಕೈಗೊಳ್ಳುವ ಒಂದು ಅವಕಾಶವನ್ನು ಒದಗಿಸಿರುತ್ತಾರೆ.

ಶೋಕಾಸ್ ನೋಟಿಸ್‌ಗಳು (ಎಸ್‌ಎನ್‌ಎಸ್)

ಕೋಷ್ಟಕ ಎ

ಎಸ್‌ಸಿಎನ್ ಔಟ್‌ವಾರ್ಡ್ ನಂ. (ಎ)	ನೋಟಿಸ್‌ದಾರರ ಹೆಸರು ಮತ್ತು ವಿಳಾಸ (ಬಿ)	ವಿಚಾರಣೆ ದಿನಾಂಕ (ಸಿ)	ವಿಚಾರಣೆ ಸಮಯ (ಡಿ)
ಸೆಬಿ/ಹೆಚ್‌ಒ/ಡಿಪಾ–2/ಡಿಪಾ–2_ಸಿಆರ್‌ಡಿ/ಪಿ/ಒಡಬ್ಲ್ಯು/2021/0000038412/1	ಶ್ಯಾಮಲ ಕಿಶೋರ ಅಗರವಾಲ್ (ಪಾನ್: ಎಎಫ್‌ವಿಪಿಎ3127ಕ್ಯೂ) 4, ಪೈಪ್‌ಲೈನ್ ಚೊಳೂರಪಾಳ್ಯ ವಿಜಯನಗರ, ಬೆಂಗಳೂರು, ಕರ್ನಾಟಕ, 560040	ಡಿಸೆಂಬರ್ 02, 2024	ಬೆಳಗ್ಗೆ 11:15 ಗಂಟೆ

ಸದರಿ ನೋಟಿಸ್‌ದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ, ಮೇಲ್ಕಂಡ ಕೋಷ್ಟಕದಲ್ಲಿನ ಕಾಲಂ (ಸಿ) ಯಲ್ಲಿ ತಿಳಿಸಲಾಗಿರುವ ವಿಚಾರಣೆಗೆ ನಿಗದಿಯಾಗಿರುವ ದಿನಾಂಕಕ್ಕೆ ಕನಿಷ್ಠ ಮೂರು ದಿನ ಮುಂಚಿತವಾಗಿ ashas@sebi.gov.in, deeptis@sebi.gov.in ಮತ್ತು vijayc@sebi.gov.in ಇಮೇಲ್ ವಿಳಾಸಕ್ಕೆ ವಿಚಾರಣೆಗೆ ಯಾರು ಹಾಜರಾಗುತ್ತಿದ್ದಾರೆ ಎಂಬ ಮಾಹಿತಿಯನ್ನು ತಿಳಿಸತಕ್ಕದ್ದು. ಟೆಲೆ/ವಿಡಿಯೋ ಕಾನ್ಫರೆನ್ಸ್ ಮುಖಾಂತರ ವಿಚಾರಣೆಯ ವೆಬ್–ಲಿಂಕ್ ಮಾಹಿತಿಯನ್ನು, ಮೇಲ್ಕಂಡ ಇಮೇಲ್ ವಿಳಾಸಗಳಲ್ಲಿ ನೀವು ನೀಡಿರುವ ಇಮೇಲ್ ಐಡಿ / ಮೊಬೈಲ್ ಸಂಖ್ಯೆಗಳಿಗೆ ನೀಡಲಾಗುತ್ತದೆ. ಮೇಲ್ಕಂಡ ಕೋಷ್ಟಕದ ಕಾಲಂ (ಸಿ) ಮತ್ತು ಗಳಲ್ಲಿ ನೀಡಲಾಗಿರುವ ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ನೋಟಿಸ್‌ದಾರರು ತಮ್ಮ ಖಚಿತತೆಯನ್ನು ತಿಳಿಸಲು ವಿಫಲರಾದಲ್ಲಿ, ನೋಟಿಸ್‌ದಾರನು ವೈಯಕ್ತಿಕ ವಿಚಾರಣೆಯ ಅವಕಾಶ ಪಡೆದುಕೊಳ್ಳುವುದನ್ನು ನಿರಾಕರಿಸಿದ್ದಾನೆ ಎಂದು ಪರಿಗಣಿಸಲಾಗುತ್ತದೆ. ಒಂದು ವೇಳೆ, ನೋಟಿಸ್‌ದಾರ ಅಥವಾ ನೋಟಿಸ್‌ದಾರರ ಅಧಿಕೃತ ಪ್ರತಿನಿಧಿಯು ಸದರಿ ದಿನಾಂಕ ಮತ್ತು ಸಮಯದಂದು ವಿಚಾರಣೆಗೆ ಹಾಜರಾಗದಿದ್ದಲ್ಲಿ, ತೀರ್ಪು ನೀಡುವ ಪ್ರಾಧಿಕಾರದ ಅಧಿಕಾರಿಯು ಸದರಿ ವಿಷಯದಲ್ಲಿ ದಾಖಲೆಗಳಲ್ಲಿ ಲಭ್ಯವಿರುವ ಅಂಶಗಳ ಆಧಾರದ ಮೇರೆಗೆ ಮುಂದುವರಿಯುತ್ತಾರೆ.

ದಿನಾಂಕ: ನವಂಬರ್ 08, 2024 — **ಆಶಾ ಶೆಟ್ಟಿ**
ಸ್ಥಳ: ಮುಂಬೈ — **CBC 15204/11/0171/2425** — **ಚೀಫ್ ಜನರಲ್ ಮ್ಯಾನೇಜರ್**

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2024–25/67
ದಿನಾಂಕ : 12–11–2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
(ಮರು–ಟೆಂಡರ್) ಸಹಾಯಕ ವಿಭಾಗೀಯ ಇಂಜಿನಿಯರ್ / ಸಕಲೇಶಪುರ ಉಪ–ವಿಭಾಗ : ರಸ್ತೆ ಕೆಳಸೇತುವೆ ಸಂ.20, 366, 473, 484, 500, 539 ಮತ್ತು 577 ನಲ್ಲಿ ಸ್ಟೀಲ್ ಗರ್ಡರ್‌ನ ಸೂಪರ್ ಸ್ಟ್ರಕ್ಚರ್‌ನೊಂದಿಗೆ ಅಪ್ರೋಚ್‌ಗಳಲ್ಲಿ ಹೆಚ್ಚುವರಿ ಹೈಟ್ ಗೇಜ್‌ಗಳನ್ನು ಒದಗಿಸುವುದು.	ರೂ. 7,04,803.48

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **03–12–2024 ರಂದು 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಸಾಮಾನ್ಯ ಮೈಸೂರು

ಪಿಯುಬಿ/588/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR | SWRRLY | SWRRLY

SOBHA LIMITED

CIN : L45201KA1995PLC018475
Regd. Office: 'SOBHA' Sarjapur – Marathahalli Outer Ring Road (ORR), Devarabisanahalli, Bellandur Post Bangalore - 560 103
Ph: +91-80-49320000
email: investors@sobha.com
website: www.sobha.com

Contact Person: Bijan Kumar Dash, Company Secretary and Compliance Officer

SOBHA

NOTICE FOR RECORD DATE FOR FIRST AND FINAL CALL ON PARTLY PAID-UP RIGHTS EQUITY SHARES OF THE COMPANY

The Board of Directors of the Company ('the Board') at its meeting held on November 14, 2024, has approved making of the first and final call of ₹825.50/- (comprising ₹ 5 towards face value and ₹ 820.50 towards premium) per partly paid-up equity share ("**First and Final Call**"), on 1,21,07,981 outstanding partly paid-up equity shares of face value ₹ 10 each, issued by the Company on a rights basis, pursuant to its Letter of Offer dated June 12, 2024.

The Board has fixed **Friday, December 06, 2024**, as the record date for the purpose of determining the holders of partly paid-up equity shares having **ISIN IN9671H01013** to whom the First and Final Call notice will be sent. The intimation of the said Record date has also been disseminated to BSE Limited and the National Stock Exchange of India Limited (together, the "**Stock Exchanges**") where the equity shares of the Company are listed. The ISIN 'IN9671H01013' partly paid-up equity shares of face value ₹5.00/- (Rupees Five Only) will be suspended by the Stock Exchanges effective Friday, December 06, 2024.

Further details in relation to the First and Final Call, will be included in the First and Final Call notice which will be dispatched in due course. This notice is hereby given pursuant to Section 91 of the Companies Act, 2013, read with Rule 10(1) of the Companies (Management and Administration) Rules, 2014, and Regulation 42 of the Securities and Exchange Board of India (Listing Obligations and Disclosure Requirements) Regulations, 2015.

For Sobha Limited

Sd/-
Bijan Kumar Dash
Company Secretary & Compliance Officer

Place: Bengaluru, India
Date: November 26, 2024

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

ಕ್ಲಾಸಿಫೈಡ್ಸ್ — ADMISSION CORNER

ಕ್ಲಾಸಿಫೈಡ್ಸ್ — CONNECT

PERSONAL

Change of Name

CHANGE OF NAME
I, **Prabhuling** S/o Shreemant Mullolli, residing at # E/7/185, Yedrami Post, Yedrami Dist, Kalaburagi, Karnataka-585325, have changed my name to **PRABHULING MULLOLLI** vide affidavit dated 25/11/2024 before Notary Muniraju G, Bengaluru. Henceforth I shall be called as **PRABHULING MULLOLLI** only

I CHANDRAKALA C.N Residing at Kanvanagar, 3rd cross, No.121 Nelamangala Town have changed my name to NIKITHA SUDHA ANJAN Vide affidavit dated 25-11-2024 Before Notary R.Lakshminarayana Nelamangala town Bangalore.

I, ASHA V NAIR W/o.Yesu R. R/a#14/15 115 1st Main Road Mallappa Layout, Virgonagar Post Seegehalli Bangalore 560049 have changed my Name to ASHA V vide affidavit dated:8.11.2024 before Notary C.Sasikala Bangalore

I, ASHIKA KRISHNA D/o Krishna. S, R/o 19K, 14th Cross, 1st Block, Rajajinagar, Bengaluru-10 have changed my name as AASHIKA KRISHNA vide affidavit dated 25/11/2024 Before Norary Bhagya Kumari. N, Bangalore

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

MSME LOANS:WE arrange msme business loans against your existing or new businesses also.Contact: 7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಬಸವನಗುಡಿಯಲ್ಲಿ ದೊಡ್ಡ ಬಸವನಿಗೆ 500 ಕೆ.ಜಿ. ಕಡಲೆಕಾಯಿ ಅಭಿಷೇಕ; ಜನಜಾತ್ರೆಯ ಸಂಭ್ರಮ

ಸುಂಕೇನಹಳ್ಳಿಯಲ್ಲಿ ರಾಶಿ ರಾಶಿ ಕಡಲೆಕಾಯಿ

ಕಡಲೆಕಾಯಿ ಪರಿಷೆಯಲ್ಲಿ ಯುವತಿಯರ ಸಂಭ್ರಮ (ಎಡಚಿತ್ರ) ಪರಿಷೆ ಅಂಗವಾಗಿ ನಂದಿ ತೆಪ್ಪೋತ್ಸವ ಸೋಮವಾರ ನಡೆಯಿತು

ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್‌.ಜಿ, ಕಿಶೋರ್ ಕುಮಾರ್ ಬೋಳಾರ್

ಕೆಂಪಾಂಬುಧಿ ಕೆರೆಯಲ್ಲಿ ತೆಪ್ಪೋತ್ಸವ

ಕಡಲೆಕಾಯಿ ಪರಿಷೆ ಅಂಗವಾಗಿ ಕೆಂಪಾಂಬುಧಿ ಕೆರೆಯಲ್ಲಿ ತೆಪ್ಪೋತ್ಸವ ನಡೆಯಿತು. 2008ರಲ್ಲಿ ನಿಂತುಹೋಗಿದ್ದ ತೆಪ್ಪೋತ್ಸವ 2022ರಿಂದ ಆರಂಭಗೊಂಡಿತ್ತು. ಕೆಂಪಾಂಬುಧಿ ಕೆರೆಯಲ್ಲಿ ಸೋಮವಾರ ಸಂಜೆ ವೈಭವದ ನಂದಿ ವಿಗ್ರಹವನ್ನು ಹೊತ್ತ ಹಲವು ಬಗೆಯ ಹೂವು ಮತ್ತು ಬಣ್ಣಬಣ್ಣದ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡ ತೆಪ್ಪ ಸಂಚರಿಸಿತು. ತೆಪ್ಪೋತ್ಸವ ಸಂಚರಿಸುವ ಸಂದರ್ಭದಲ್ಲಿ ಪೂಜಾ ವಿಧಿ-ವಿಧಾನಗಳನ್ನು ಅರ್ಚಕರು ನೆರವೇರಿಸಿದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ತೀಕ ಮಾಸದ ಕೊನೆಯ ಸೋಮವಾರ ಬನವನ ಗುಡಿಯ ದೊಡ್ಡ ಬಸವಣ್ಣನಿಗೆ ಪುಷ್ಪಾಲಂಕಾರದ ಜೊತೆಗೆ ಕಡಲೆಕಾಯಿ ಅಭಿಷೇಕ ಹಾಗೂ ನೈವೇದ್ಯದ ವೈಭವ ಒಂದೆಡೆಯಾದರೆ, ಮತ್ತೊಂದೆಡೆ ನಾಗರಿಕರು ಹತ್ತಾರು ರೀತಿಯ ಕಡಲೆ-ಕಾಯಿಗಳನ್ನು ಖರೀದಿಸುವ, ಸವಿಯುವ ಸಂಭ್ರಮದಲ್ಲಿದ್ದರು.

ಸುಂಕೇನಹಳ್ಳಿಯಲ್ಲಿ ಪ್ರತಿ ವರ್ಷ ನಡೆಯುವ ಐತಿಹಾಸಿಕ ಕಡಲೆಕಾಯಿ ಪರಿಷೆಯ ಸೊಬಗು ಶುಕ್ರವಾರ ದಿಂದಲೇ ಆರಂಭವಾಗಿದ್ದರೂ, ಸೋಮವಾರ ಅದಕ್ಕೆ ಅಧಿಕೃತ ಚಾಲನೆ ದೊರಕಿತು. ಬಸವನಗುಡಿ ರಸ್ತೆಯನ್ನು ನಾಲ್ಕು ಭಾಗಗಳಾಗಿ ಮಾಡಿ, ಅಷ್ಟೂ ಬದಿಯಲ್ಲಿ ಕಡಲೆಕಾಯಿ ಸೇರಿದಂತೆ ವ್ಯಾಪಾರಿಗಳು ಹಲವು ರೀತಿಯ ವಸ್ತು, ತಿನಿಸುಗಳನ್ನು ಮಾರಾಟ ಮಾಡಿದರು.

ರಾಮಕೃಷ್ಣ ಆಶ್ರಮದಿಂದ ತ್ಯಾಗ ರಾಜನಗರ ಮುಖ್ಯರಸ್ತೆಯವರೆಗೂ ಗುರುವಾರ ಸಂಜೆಯಿಂದಲೇ ಕಡಲೆಕಾಯಿ ಹಾಗೂ ಆಟಿಕೆ, ತಿನಿಸುಗಳ ಮಳಿಗೆಗಳು ಆರಂಭವಾಗಿದ್ದವು. ವಾರಾಂತ್ಯದಲ್ಲಿ ಮಳಿಗೆ ಹಾಗೂ ಜನರ ಜಾತ್ರೆಯೂ ಹೆಚ್ಚಾಯಿತು. ಸೋಮವಾರ ಬೆಳಿಗ್ಗೆ ಸಂಭ್ರಮ ಮತ್ತಷ್ಟು ಗರಿಗೆದರಿತು.

ದೊಡ್ಡ ಬಸವಣ್ಣ, ದೊಡ್ಡ ಗಣಪತಿ, ಕಾರಂಜಿ ಆಂಜನೇಯನ ದರ್ಶನ ಪಡೆದ ಜನರು ಜಾತ್ರೆಯ ಸೊಬಗನ್ನು ಅನುಭವಿಸಿದರು. ದೊಡ್ಡಗಣೇಶನಿಗೆ 500 ಕೆ.ಜಿ. ಕಡಲೆ ಕಾಯಿಯಿಂದ ಅಭಿಷೇಕವನ್ನೂ ಮಾಡಲಾಯಿತು. ಸೋಮವಾರ ಸಂಜೆ ದೀಪಾಲಂಕಾರದ ಮಧ್ಯೆಯೇ ಜಾತ್ರೆಯ ಸಂಭ್ರಮದಲ್ಲಿ ನಾಗರಿಕರು ಮಿಂದೆದ್ದರು.

ಕಡಲೆಕಾಯಿ ಬೆಲೆ ಕೆ.ಜಿಗೆ ₹40ರಿಂದ ಆರಂಭವಾಗಿ ₹100ರವರೆಗೂ ಇತ್ತು. ಕೆ.ಜಿ ಬದಲಿಗೆ ಲೀಟರ್ ಲೆಕ್ಕದಲ್ಲೂ ಕಡಲೆಕಾಯಿ ಲಭ್ಯವಿತ್ತು.

‘ಕನಕಪುರ, ದೊಡ್ಡಬಳ್ಳಾಪುರ, ರಾಮನಗರ, ಮಾಗಡಿ, ಚಿಕ್ಕಬಳ್ಳಾ-ಪುರ, ಕೋಲಾರ, ಮೈಸೂರು, ಮಂಡ್ಯ, ತುಮಕೂರು ಕಡೆಗಳಿಂದ ಕಡಲೆ ಕಾಯಿಯನ್ನು ತರುತ್ತೇವೆ. ತಮಿಳುನಾಡಿ-ನಿಂದಲೂ ಕೆಲವರು ತರುತ್ತಾರೆ’ ಎಂದು ವ್ಯಾಪಾರಿ ರಾಮವ್ವ ಹೇಳಿದರು.

ಪ್ಲಾಸ್ಟಿಕ್ ಮುಕ್ತ: ವ್ಯಾಪಾರಿಗಳು ಕಾಗದ ಅಥವಾ ಬಟ್ಟೆ ಚೀಲಗಳಲ್ಲಿ ಕಡಲೆಕಾಯಿ ನೀಡುತ್ತಿದ್ದರು. ಪ್ಲಾಸ್ಟಿಕ್ ಮುಕ್ತ ವಾತಾವರಣ ಇತ್ತು.

ವೃಷಭಾವತಿ ನದಿ ಉಗಮ ಸ್ಥಾನಕ್ಕೆ ಮರುಜೀವ: ಡಿಸಿಎಂ

‘ಬ್ರ್ಯಾಂಡ್ ಬೆಂಗಳೂರು ಅಡಿಯಲ್ಲಿ ವೃಷಭಾವತಿ ನದಿ ಉಗಮಸ್ಥಾನಕ್ಕೆ ಮರುಜೀವ ನೀಡಲಾಗುತ್ತದೆ. ಧಾರ್ಮಿಕ ಮತ್ತು ಪಾರಂಪರಿಕ ಕಾರಿಡಾರ್ ಅಭಿವೃದ್ಧಿಪಡಿಸಲಾಗು-ತ್ತದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಪರಿಷೆಗೆ ಚಾಲನೆ ನೀಡಿ ಅವರು ಮಾತನಾಡಿದರು. ‘ಕಡಲೆಕಾಯಿ ಪರಿಷೆಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಎಲ್ಲರೂ ಶ್ರಮಿಸಬೇಕು. ಕಾಂಗ್ರೆಸ್ ಕಡಲೆಕಾಯಿ ಎಂದು ಕರೆಯಲಾಗುತ್ತದೆ. ಯಾರು ಈ ಹೆಸರು ಇಟ್ಟರು ಎಂಬ ಮಾಹಿತಿಯಿಲ್ಲ. ಮಹಾತ್ಮ ಗಾಂಧಿ ಅವರು ಹೆಸರಿಟ್ಟಿರಬಹುದು ಎನ್ನುವುದು ನನ್ನ ಅಭಿಪ್ರಾಯ’ ಎಂದರು. ‘ವಿರೋಧ ಪಕ್ಷದ ನಾಯಕರು ಬ್ರ್ಯಾಂಡ್ ಬೆಂಗಳೂರು ಬಗ್ಗೆ ಟೀಕೆ ಮಾಡಿದ್ದಾರೆ. 2028ಕ್ಕೆ ಮುಂಚಿತವಾಗಿ ನಾನು ಉತ್ತರ ನೀಡುತ್ತೇನೆ’ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಸವಣ್ಣನ ವಿಗ್ರಹಕ್ಕೆ ಕಡಲೆಕಾಯಿಯಿಂದ ತುಲಾಭಾರ ಮಾಡುವ ಮೂಲಕ ಕಡಲೆಕಾಯಿ ಪರಿಷೆಗೆ ಸೋಮವಾರ ಚಾಲನೆ ನೀಡಿದರು. ಶಾಸಕರಾದ ಗರುಡಾಚಾರ್, ಸಿ.ಕೆ. ರಾಮಮೂರ್ತಿ, ಯು.ಬಿ. ವೆಂಕಟೇಶ್, ರವಿ ಸುಬ್ರಮಣ್ಯ, ಟಿ.ಎ. ಶರವಣ ಉಪಸ್ಥಿತರಿದ್ದರು

ನಿಯಮ ಉಲ್ಲಂಘನೆ ₹69.46 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿರುವ ವಾಹನ ಸವಾರರು ಹಾಗೂ ಚಾಲಕರ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರೆಸಿರುವ ನಗರ ಸಂಚಾರ ವಿಭಾಗದ ಪೊಲೀಸರು, ತಪ್ಪಿತಸ್ಥರ ವಿರುದ್ಧ 11,340 ಪ್ರಕರಣ ದಾಖಲಿಸಿಕೊಂಡು, ₹69.46 ಲಕ್ಷ ದಂಡ ಸಂಗ್ರಹಿಸಿದ್ದಾರೆ.

ಉತ್ತರ ವಿಭಾಗದ ಸಂಚಾರ ಪೊಲೀಸರು ಏಳು ದಿನ ನಡೆಸಿದ ಕಾರ್ಯಾಚರಣೆಯಲ್ಲಿ 9,912 ಪ್ರಕರಣ ದಾಖಲಿಸಿಕೊಂಡು, ₹66.46 ಲಕ್ಷ ದಂಡ ಸಂಗ್ರಹಿಸಿದ್ದಾರೆ.

ಉತ್ತರ ವಿಭಾಗದ ವ್ಯಾಪ್ತಿಯಲ್ಲಿ ಉಂಟಾಗುತ್ತಿರುವ ಅಪಘಾತ ತಡೆಗಟ್ಟುವ ಹಾಗೂ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಕಡಿವಾಣ ಹಾಕಲು ನವೆಂಬರ್ 17ರಿಂದ 23ರವರೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಪ್ರತಿನಿತ್ಯ ಬೆಳಿಗ್ಗೆ 11.30ರಿಂದ ಸಂಜೆ 4ರ ತನಕ ಕಾರ್ಯಾಚರಣೆ ನಡೆಸಲಾಯಿತು. ಕಾರ್ಯಾಚರಣೆಯ ವೇಳೆ ತಪ್ಪಿತಸ್ಥ ಚಾಲಕರನ್ನು ಪತ್ತೆಹಚ್ಚಿ ದಂಡ ಹಾಕಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಅಡ್ಡಾದಿಡ್ಡಿ ಚಾಲನೆಯ 12, ಅತಿವೇಗದ ವಾಹನ ಸಂಚಾರ 154, ನಿಗದಿಗಿಂತ ಹೆಚ್ಚಿನ ಪ್ರಯಾಣಿಕರ-ನ್ನು ಕರೆದೊಯ್ಯುತ್ತಿದ್ದವರ ವಿರುದ್ಧ 107, ಮದ್ಯ ಸೇವಿಸಿ ಚಾಲನೆ 223, ಸೈಲೆನ್ಸರ್ ಮಾರ್ಪಾಡು 8, ಕರ್ಕಶ ಹಾರ್ನ್ ಅಳವಡಿಕೆ 8, ಚಾಲನಾ ಪರವಾನಗಿ ಇಲ್ಲದೇ ಚಾಲನೆ ಮಾಡುತ್ತಿದ್ದವರ ವಿರುದ್ಧ 134,

ಟ್ರಾಫಿಕ್ ಸಿಗ್ನಲ್ ಅನ್ನು ದಾಟಿದ್ದವರ ವಿರುದ್ಧ 92, ನಿಷೇಧಿತ ಸ್ಥಳದಲ್ಲಿ ವಾಹನ ನಿಲುಗಡೆ ಮಾಡಿದ್ದ 337, ನಿರ್ಬಂಧಿತ ರಸ್ತೆಗಳಲ್ಲಿ ವಾಹನ ಸಂಚಾರ 1,495, ಸಮವಸ್ತ್ರರಹಿತ ವಾಹನ ಚಾಲನೆ 107, ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ 117, ಬೈಕ್‌ನಲ್ಲಿ ಮೂವರು ಕುಳಿತು ಸವಾರಿ ಮಾಡುತ್ತಿದ್ದವರ ವಿರುದ್ಧ 154, ಸೀಟ್ ಬೆಲ್ಟ್‌ರಹಿತ ಚಾಲನೆ 301, ಹೆಲ್ಮೆಟ್‌ರಹಿತ ಚಾಲನೆ 1,194 ಸೇರಿದಂತೆ ಒಟ್ಟು 9,912 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾ-ಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಪೂರ್ವ ವಿಭಾಗದಲ್ಲೂ ಕಾರ್ಯಾಚರಣೆ ನಡೆಸಿದ ಪೊಲೀಸರು, ನಿಯಮ ಉಲ್ಲಂಘಿಸಿದ ವಾಹನ ಸವಾರರು ಹಾಗೂ ಚಾಲಕರ ವಿರುದ್ಧ ಒಟ್ಟು 626 ಪ್ರಕರಣ ದಾಖಲಿಸಿದ್ದಾರೆ. ಜತೆಗೆ ₹3.13 ಲಕ್ಷ ದಂಡ ಸಂಗ್ರಹಿಸಿದ್ದಾರೆ.

ಮದ್ಯ ಸೇವಿಸಿ, ಚಾಲನೆ: ಸಂಚಾರ ವಿಭಾಗದ 50 ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮದ್ಯ ಸೇವಿಸಿದ್ದ ಚಾಲಕರ ವಿರುದ್ಧ 802 ಪ್ರಕರಣ ದಾಖಲಾಗಿದೆ. ಒಟ್ಟು 60,692 ವಾಹನಗಳನ್ನು ತಪಾಸಣೆ ನಡೆಸಲಾಯಿತು ಎಂದು ಸಂಚಾರ ಪೊಲೀಸರು ಹೇಳಿದರು.

ವಿಜೃಂಭಣೆಯ ಸಹಸ್ರಾರ್ಜುನ ಮಹಾರಾಜರ ಜಯಂತ್ಯುತ್ಸವ

ವಿಜಯನಗರ ಶಾಸಕ ಎಂ. ಕೃಷ್ಣಪ್ಪ ಅವರು (ಕುಳಿತವರಲ್ಲಿ ಎಡದಿಂದ ಆರನೆಯವರು) ಎಬಿಎಸ್‌ಎಸ್‌ಕೆ ಉಪಾಧ್ಯಕ್ಷ ಡಮಾಮ್ ವಿ. ಸತ್ಯನಾರಾಯಣ ಅವರೊಂದಿಗೆ ಚರ್ಚಿಸಿದರು.(ಎಡದಿಂದ) ಶಂಕರ್ ಲಾಡ್ವಾ, ಸತೀಶ್ ವಾಗ್ಲೆ, ಶ್ಯಾಮ್ ಕಬಾಡಿ, ಶಾಸಕ ಪ್ರಿಯಕೃಷ್ಣ, ಬ್ರಿಜ್ ಮೋಹನ್ ಎಸ್. ಖೋಡೆ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರ ಸಹಸ್ರಾರ್ಜುನ ಮಹಾರಾಜ ಜಯಂತಿ ಮಹೋತ್ಸವ ಭಾನುವಾರ ವಿಜಯ ನಗರದ ಬಂಟರ ಸಂಘದ ಸಭಾಭವನ ದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಅಖಿಲ ಭಾರತೀಯ ಸೋಮವಂಶೀಯ ಕ್ಷತ್ರಿಯ ಸಮಾಜ(ಎಬಿಎಸ್‌ಎಸ್‌ಕೆ), ಎಸ್‌ಎಸ್‌ಕೆ ಸಂಘ ಹಾಗೂ ಎಸ್‌ಎಸ್‌ಎಸ್‌ಕೆ ಕೋ - ಆಪರೇಟಿವ್ ಸೊಸೈಟಿ ಸಹಯೋಗದಲ್ಲಿ ಈ ಮಹೋತ್ಸವವನ್ನು ಆಯೋಜಿಸಲಾಗಿತ್ತು.

ಸಭಾ ಕಾರ್ಯಕ್ರಮಕ್ಕೂ ಮುನ್ನ, ವಿಜಯನಗರದ ಟೋಲ್‌ಗೇಟ್ ನಲ್ಲಿರುವ ಶ್ರೀ ಅಂಬಾಭವಾನಿ ಸೇವಾ ಕೇಂದ್ರದಿಂದ ಬಂಟರ ಸಂಘದವರೆಗೆ ರಾಜರಾಜೇಶ್ವರ ಸಹಸ್ರಾರ್ಜುನ ಮಹಾರಾಜರ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಸಲಾಯಿತು. ಸಂಸದ ಪಿ.ಸಿ.ಮೋಹನ್, ಸಮಾಜದ ಹಿರಿಯರು, ಮಹಿಳೆಯರು ಮತ್ತು ಯುವಕರು ಸೇರಿದಂತೆ ನೂರಾರು ಮಂದಿ ಮೆರ ವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಸಭಾ ಕಾರ್ಯಕ್ರಮದಲ್ಲಿ ವಿಜಯನಗರ ಶಾಸಕ ಎಂ.ಕೃಷ್ಣಪ್ಪ ಧ್ವಜಾರೋಹಣ ನೆರವೇರಿಸಿದರು. ನಂತರ ಮಾತನಾಡಿದ ಅವರು, ‘ಸಮಾಜದ ಸಂಘಕ್ಕೆ ಒಂದು ನಿವೇಶನ ಮಂಜೂರು ಮಾಡಿಸುತ್ತೇನೆ’ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಸಮುದಾಯದ ಮಹಿಳೆಯರು ಆಯೋಜಿಸಿದ್ದ ‘ಮುಕ್ತ ಮಾರುಕಟ್ಟೆ’ಯನ್ನು ಗೋವಿಂದರಾಜ ನಗರ ಶಾಸಕ ಪ್ರಿಯಕೃಷ್ಣ ಉದ್ಘಾಟಿಸಿದರು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಎಸ್‌ಎಸ್‌ಕೆ ಸಂಘದ ಅಧ್ಯಕ್ಷ ಎಸ್. ಅನಂತ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಮಾಜದ 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರನ್ನು ಸನ್ಮಾನಿಸಲಾಯಿತು. ಜೊತೆಗೆ ಪ್ರತಿಭಾ ವಂತ ಯುವಕ-ಯುವತಿಯರು, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ಪಡೆದ ಸಾಧಕರನ್ನು ಗೌರವಿಸಲಾಯಿತು. ಇದೇ ವೇಳೆ ಬಡ ಕುಟುಂಬದವರಿಗೆ ಪಡಿತರ ಕಿಟ್ ವಿತರಿಸಲಾಯಿತು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಮಹೋತ್ಸವ ಸಮಿತಿಯ ಖಜಾಂಚಿ ಎಂ.ಸಿ.ಉಮಾಶಂಕರ್, ಎಬಿಎಸ್‌ಎಸ್‌ಕೆ ಉಪಾಧ್ಯಕ್ಷ ಡಮಾಮ್ ವಿ. ಸತ್ಯನಾರಾಯಣ, ಬ್ರಿಜ್ ಮೋಹನ್ ಎಸ್. ಖೋಡೆ, ಸಹಜಾನಂದಸಾ ಕಬಾಡಿ, ಎಸ್‌ಎಸ್‌ಕೆ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಸತೀಶ್ ಇ. ವಾಗ್ಲೆ, ಸಂಚಾಲಕ ಎಂ.ಎನ್.ರಾಮ್, ಸಮಿತಿಯ ಸದಸ್ಯ ಕೆ.ವಸಂತ್ ಕುಮಾರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸೇವಾಸಿಂಧು ಪೋರ್ಟಲ್‌ನಲ್ಲಿ 15 ದಿನದಿಂದ ನೋಂದಣಿಯಾಗದ ಅರ್ಜಿ

ಬಿಡಿಎ: ಇ–ಖಾತಾ ಸ್ಥಗಿತ; ಪರದಾಟ

• ಆರ್. ಮಂಜುನಾಥ್

ಬೆಂಗಳೂರು: ಆನ್‌ಲೈನ್ ವ್ಯವಸ್ಥೆ ಜಾರಿ ಮಾಡುವಲ್ಲಿ ಇನ್ನೂ ಆಮೆ ಗತಿಯಲ್ಲೇ ಇರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಇ-ಖಾತಾ ನೀಡುವುದನ್ನೇ ಸ್ಥಗಿತಗೊಳಿ-ಸಿದೆ. ಆಸ್ತಿ ಮಾಲೀಕರು 15 ದಿನಗಳಿಂದ ಇ-ಖಾತಾ ಸಿಗದೆ ಪರದಾಡುತ್ತಿದ್ದಾರೆ.

ನಿವೇಶನ ಮಾರಾಟ ಹಾಗೂ ಯಾವುದೇ ರೀತಿಯ ನೋಂದಣಿಗೆ ಕಂದಾಯ ಇಲಾಖೆ ಇ-ಖಾತಾವನ್ನು ಕಡ್ಡಾಯಗೊಳಿಸಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಇ-ಖಾತಾ ನೀಡಲು ಹಲವು ರೀತಿಯ ಕ್ರಮಗಳನ್ನು ಕೈಗೊಂಡಿದೆ. ಆದರೆ, ಬಿಡಿಎ ತಡವಾಗಿ ಎಚ್ಚೆತ್ತುಕೊಂಡಿದ್ದು, ಇದೀಗ ಸಾಫ್ಟ್‌ವೇರ್ ಬದಲಾವಣೆಯ ಪ್ರಕ್ರಿಯೆ ಆರಂಭಿಸಿದೆ.

ಬಿಬಿಎಂಪಿಗಿಂತ ಕಡಿಮೆ ನಿವೇಶನ ಅಥವಾ ಕಟ್ಟಡಗಳನ್ನು ತನ್ನ ವ್ಯಾಪ್ತಿಯಲ್ಲಿ ಹೊಂದಿರುವ ಬಿಡಿಎ, ಆಸ್ತಿ ತೆರಿಗೆ ಪಾವತಿಯನ್ನು ಹೊರತು-ಪಡಿಸಿದರೆ ನಕ್ಷೆ, ಖಾತಾ ಸೇರಿದಂತೆ ಯಾವುದೇ ವ್ಯವಸ್ಥೆಯನ್ನು ಸಂಪೂರ್ಣ ಆನ್‌ಲೈನ್‌ನಲ್ಲಿ ಅಳವಡಿಸಿ ಕೊಂಡಿಲ್ಲ. ನಾಡಪ್ರಭು ಕೆಂಪೇಗೌಡ ಬಡಾವಣೆಯ (ಎನ್‌ಪಿಕೆಎಲ್) ನಿವೇಶನಗಳಿಗೆ ಇ-ಖಾತಾ ನೀಡಲಾಗಿದ್ದರೂ ಅದರಲ್ಲಿ ಎಲ್ಲವನ್ನೂ ಕಂದಾಯ ಇಲಾಖೆಯ ‘ಕಾವೇರಿ ತಂತ್ರಾಂಶ’ಕ್ಕೆ ಜೋಡಿಸಿಲ್ಲ.

ಬಿಡಿಎ ನಿವೇಶನ ಅಥವಾ ಕಟ್ಟಡಗಳಿಗೆ ಇ-ಖಾತಾ ಪಡೆಯಲು ರಾಜ್ಯ ಸರ್ಕಾರದ ‘ಸೇವಾ ಸಿಂಧು’ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬಹು-ದಿತ್ತು. ಕ್ರಯ/ಗುತ್ತಿಗೆ ಪತ್ರ, ಖಾತಾ ಸೇರಿದಂತೆ ಕೆಲವು ದಾಖಲೆಗಳನ್ನು ಅಪ್‌ಲೋಡ್ ಮಾಡಿದ ನಂತರ, ಸಂಬಂಧಿಸಿದ ಬಿಡಿಎ ಕಚೇರಿಗೆ ಹೋಗಿ ದಾಖಲೆಗಳನ್ನು ಪರಿಶೀಲಿಸಿಕೊಂಡು ಅಲ್ಲಿ ಇ-ಖಾತಾ ಪಡೆದುಕೊಳ್ಳುವ ವ್ಯವಸ್ಥೆ ಇತ್ತು. ಆದರೆ, ಈ ಪ್ರಕ್ರಿಯೆಯೂ ಈಗ ಸ್ಥಗಿತಗೊಂಡಿದೆ.

ಸಂಕಷ್ಟ: ಬಿಡಿಎ ಬಡಾವಣೆಗಳಲ್ಲಿರುವ ಆಸ್ತಿಗಳಿಗೆ ಇ-ಖಾತಾ ಪಡೆಯಲು ‘ಸೇವಾ ಸಿಂಧು’ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಮುಂದಾದರೆ, ‘ದತ್ತಾಂಶದ ನಿರ್ವಹಣೆಯಿಂದಾಗಿ ನವೆಂಬರ್ 15 ಮತ್ತು 16ರಂದು ಖಾತಾ ಸೇವೆ ಲಭ್ಯವಿಲ್ಲ’ ಎಂಬ ಸಂದೇಶ ನವೆಂಬರ್ 25ರಂದೂ ಬರುತ್ತಿದೆ. ಇದರಿಂದ ಆಸ್ತಿ ಮಾಲೀಕರು ಸಂಕಷ್ಟಕ್ಕೆ ಒಳಗಾಗಿದ್ದಾರೆ.

‘ಆಸ್ತಿ ಮಾರಾಟಕ್ಕಾಗಿ ಇ-ಖಾತಾವನ್ನು ಕಡ್ಡಾಯ ಮಾಡಲಾಗಿದೆ. ಆದರೆ, ಬಿಡಿಎ ಇ-ಖಾತಾ ನೀಡುವ ಪ್ರಕ್ರಿಯೆಯನ್ನೇ ಸ್ಥಗಿತಗೊಳಿಸಿದೆ. ಆಸ್ತಿ ಮಾರಾಟ ಮಾಡಲು ಸಾಧ್ಯವಾಗದೆ, ಪೂರ್ವನಿರ್ಧರಿತ ಆರ್ಥಿಕ ವಹಿವಾಟನ್ನು ಪೂರ್ಣಗೊಳಿಸಲಾಗದೆ ಸಂಕಷ್ಟ ಎದುರಿಸುತ್ತಿದ್ದೇನೆ’ ಎಂದು ಜಯನಗರದ ರಮೇಶ್ ಹೇಳಿದರು.

‘ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಬಿಡಿಎ ನಿವೇಶನದ ಮೇಲೆ ಸಾಲ ಪಡೆಯಲು ಅರ್ಜಿ ಸಲ್ಲಿಸಿದ್ದೇನೆ. ಎಲ್ಲವೂ ಅನುಮೋ-ದನೆಯಾಗಿದೆ. ಆದರೆ, ನಿವೇಶನವನ್ನು ಬ್ಯಾಂಕ್‌ಗೆ ಋಣಭಾರದ ನೋಂದಣಿ ಮಾಡಿಕೊಡಬೇಕು. ಇ-ಖಾತಾ ಇಲ್ಲದೆ ನೋಂದಣಿ ಸಾಧ್ಯವಿಲ್ಲ ಎಂದು ಉಪ ನೋಂದಣಾಧಿಕಾರಿ ಹೇಳುತ್ತಿದ್ದಾರೆ. ಬಿಡಿಎ ಅಧಿಕಾರಿಗಳು ಸಾಫ್ಟ್‌ವೇರ್ ಅಪ್‌ಡೇಟ್ ಆಗುತ್ತಿದೆ ಎಂದು 10 ದಿನದಿಂದಲೂ ಹೇಳುತ್ತಿದ್ದಾರೆ’ ಎಂದು ರಾಜಾಜಿನಗರದ ರವಿಕಿಶೋರ್ ತಿಳಿಸಿದರು.

‘ಎಲ್ಲವೂ ಆನ್‌ಲೈನ್: ಹೀಗಾಗಿ ತಡ’

‘ನಿವೇಶನ ಅಥವಾ ಕಟ್ಟಡಗಳಿಗೆ ಇ-ಖಾತಾವನ್ನು ನೀಡುವ ಎಲ್ಲ ಪ್ರಕ್ರಿಯೆ-ಯನ್ನೂ ಆನ್‌ಲೈನ್‌ನಲ್ಲೇ ನಿರ್ವಹಣೆ ಮಾಡಲು ಸಾಫ್ಟ್‌ವೇರ್ ಅಪ್‌ಡೇಟ್ ಮಾಡಲಾಗುತ್ತಿದೆ. ಸರ್ಕಾರದ ಇ-ಆಡಳಿತ ಕೇಂದ್ರ (ಸಿಇಜಿ) ಪ್ರಕ್ರಿಯೆ ನಡೆಸುತ್ತಿದೆ. ಎರಡು ದಿನದಲ್ಲಿ ಪ್ರಕ್ರಿಯೆ ಮುಗಿಯುತ್ತದೆ ಎಂದು ಸಿಇಜಿ ಅವರು ಹೇಳಿದ್ದರು. ಆದರೆ, ಇನ್ನೂ ಮುಗಿದಿಲ್ಲ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಬಿಡಿಎ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಇ-ಖಾತಾ ಪ್ರಕ್ರಿಯೆಯನ್ನು ಆನ್‌ಲೈನ್‌ನಲ್ಲೇ ಪೂರ್ಣಗೊಳಿಸಲಾಗುತ್ತದೆ. ಇದಕ್ಕಾಗಿ ಉಪ ನೋಂದಣಾಧಿಕಾರಿ ಕಚೇರಿಯ ‘ಕಾವೇರಿ ತಂತ್ರಾಂಶ’ಕ್ಕೆ ಮಾಹಿತಿಗಳನ್ನು ಅಳವಡಿಸಲಾಗುತ್ತಿದೆ. ಒಂದು ಬಾರಿ ಪ್ರಕ್ರಿಯೆ ಮುಗಿದ ಮೇಲೆ ಎಲ್ಲವೂ ಆನ್‌ಲೈನ್‌ನಲ್ಲೇ ಲಭ್ಯವಾಗುತ್ತದೆ. ಬಿಡಿಎ ಕಚೇರಿಗೆ ಬರುವಂತಿಲ್ಲ. ಈ ವ್ಯವಸ್ಥೆ ಜಾರಿಯಾಗಲು ಇನ್ನು ಮೂರ್ನಾಲ್ಕು ದಿನವಾಗಬಹುದು’ ಎಂದರು.

ಅಪಘಾತ: ವ್ಯಕ್ತಿ ಸಾವು

ಬೆಂಗಳೂರು: ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ರಾಮಗೊಂಡನ ಹಳ್ಳಿ ಬಳಿ ಸಂಭವಿಸಿದ ಅಪಘಾತದಲ್ಲಿ ಫ್ಲಿಪ್‌ಕಾರ್ಟ್ ಡೆಲಿವರಿ ಮಾಡುತ್ತಿದ್ದ ವ್ಯಕ್ತಿ ಮೃತಪಟ್ಟಿದ್ದಾರೆ. ಪಶ್ಚಿಮ ಬಂಗಾಳದ ಸಂಜಿತ್ ಆಡ್ಯಾ (47) ಮೃತಪಟ್ಟವರು. ಅವರು ತೂಬರಹಳ್ಳಿಯ ಬಾಡಿಗೆ ಮನೆಯಲ್ಲಿ ನೆಲಸಿದ್ದರು.

ಫ್ಲಿಪ್‌ಕಾರ್ಟ್‌ನಲ್ಲಿ ಬುಕ್ ಮಾಡಿದ್ದ ವಸ್ತುಗಳನ್ನು ಡೆಲಿವರಿ ಮಾಡಲು ಸಂಜಿತ್ ಆಡ್ಯಾ ಬೈಕ್‌ನಲ್ಲಿ ತೆರಳುತ್ತಿದ್ದರು. ರಾಮಗೊಂಡನಹಳ್ಳಿ ಎಂಬಲ್ಲಿ ರಸ್ತೆಯುಬ್ಬಿನ ಬಳಿ ನಿಯಂತ್ರಣ ತಪ್ಪಿ ಬೈಕ್‌ನಿಂದ ಉರುಳಿ ಬಿದ್ದ ಪರಿಣಾಮ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಸ್ಥಳೀಯರು ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತನಿಖಾಧಿಕಾರಿಗಳ ಕೈಸೇರಿದ ಎಫ್‌ಎಸ್‌ಎಲ್ ವರದಿ

ಜಾತಿ ನಿಂದನೆ ಪ್ರಕರಣ: ಮುನಿರತ್ನ ಧ್ವನಿ ದೃಢ

ಪ್ರಜಾವಾಣಿ ವಾರ್ತೆ

ಮುನಿರತ್ನ

ಬೆಂಗಳೂರು: ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ದಾಖಲಾಗಿದ್ದ ಜಾತಿ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಿದ್ದ ಆಡಿಯೊ ಮಾದರಿ ವರದಿ ಬಂದಿದ್ದು, ‘ಆಡಿಯೊದಲ್ಲಿ ಇರುವುದು ಮುನಿರತ್ನ ಅವರದ್ದೇ ಧ್ವನಿ’ ಎಂದು ದೃಢಪಟ್ಟಿದೆ.

‘ಶಾಸಕರು ಜಾತಿ ನಿಂದನೆ ಮಾಡಿದ್ದಾರೆ’ ಎಂದು ಆರೋಪಿಸಿ ಬಿಬಿಎಂಪಿ ಗುತ್ತಿಗೆದಾರ ವೇಲು ನಾಯ್ಕರ್ ಅವರು ವೈಯಾಲಿಕಾವಲ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರು ಆಧರಿಸಿ ಮುನಿರತ್ನ ವಿರುದ್ಧ ಸೆ.13ರಂದು ಎಫ್‌ಐಆರ್ ದಾಖಲಾಗಿತ್ತು. ಕೋಲಾರದ ಸಮೀಪ ಮುನಿರತ್ನ ಅವರನ್ನು ಸೆ.14ರಂದು ವೈಯಾಲಿಕಾವಲ್ ಠಾಣೆ ಪೊಲೀಸರು ಬಂಧಿಸಿದ್ದರು. ಅದಾದ ನಂತರ ಮುನಿರತ್ನ ಅವರ ವಿರುದ್ಧ ಅತ್ಯಾಚಾರ ಆರೋಪದ ಅಡಿ ರಾಮನಗರ ಜಿಲ್ಲೆಯ ಕಗ್ಗಲೀಪುರ ಠಾಣೆಯಲ್ಲಿ ಮತ್ತೊಂದು ಎಫ್‌ಐಆರ್ ದಾಖಲಾಗಿತ್ತು. ಎರಡೂ ಪ್ರಕರಣದ ತನಿಖೆಯನ್ನು ಸರ್ಕಾರ ಎಸ್‌ಐಟಿಗೆ ವರ್ಗಾವಣೆ ಮಾಡಿತ್ತು.

‘ದೂರುದಾರರು ನೀಡಿದ ಆಡಿಯೊ ಕ್ಲಿಪ್ ಅನ್ನು ಎಸ್‌ಐಟಿ ಪೊಲೀಸರು, ಎಫ್‌ಎಸ್‌ಎಲ್‌ಗೆ ರವಾನೆ ಮಾಡಿದ್ದರು. ಇದೀಗ ಅದರ ವರದಿ ಬಂದಿದ್ದು, ಆಡಿಯೊದಲ್ಲಿ ಇರುವುದು ಮುನಿರತ್ನ ಅವರದ್ದೇ ಧ್ವನಿ ಎಂದು ದೃಢವಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಅಶೋಕನಗರ ಠಾಣೆಯಲ್ಲಿ ವಿಚಾರಣೆ ನಡೆಯುತ್ತಿದ್ದ ವೇಳೆ ಎಫ್‌ಎಸ್‌ಎಲ್ ತಜ್ಞರು ಮುನಿರತ್ನ ಅವರ ಧ್ವನಿ ಮಾದರಿಯನ್ನು ಸಂಗ್ರಹಿಸಿ ಪರೀಕ್ಷೆಗೆ ಕೊಂಡೊಯ್ದಿದ್ದರು. ದೂರುದಾರ ಧ್ವನಿ ಮಾದರಿಯನ್ನೂ ಸಂಗ್ರಹಿಸಲಾ-ಗಿತ್ತು. ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದ ಆಡಿಯೊದ ಮೂಲ ತುಣುಕು, ಆಡಿಯೊ ರೆಕಾರ್ಡ್ ಮಾಡಿದ್ದ ಸಾಧನವನ್ನು ವಶಕ್ಕೆ ಪಡೆಯಲಾಗಿತ್ತು. ಇದೀಗ ತಜ್ಞರ ವರದಿ ತನಿಖಾಧಿಕಾರಿಗಳ ಕೈಸೇರಿದೆ’ ಎಂದು ಮೂಲಗಳು ಹೇಳಿವೆ.

ಎಟಿಎಂ ಹೊತ್ತೊಯ್ದರೂ ದಕ್ಕಲಿಲ್ಲ ₹10 ಲಕ್ಷ!

ಆನೇಕಲ್: ಅತ್ತಿಬೆಲೆ ಕೈಗಾರಿಕಾ ಪ್ರದೇಶ ವಡ್ಡರಪಾಳ್ಯ ಬಳಿಯ ಎಟಿಎಂ ಯಂತ್ರವನ್ನು ಕದ್ದೊಯ್ದ ಕಳ್ಳರು ಅದರಲ್ಲಿದ್ದ ಹಣ ಪಡೆಯಲಾಗದೆ ಯಂತ್ರವನ್ನು ಮಂಚನಹಳ್ಳಿಯ ನೀಲಗಿರಿ ತೋಪಿನಲ್ಲಿ ಎಸೆದು ಹೋಗಿದ್ದಾರೆ. ಅತ್ತಿಬೆಲೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೋಮವಾರ ಬೆಳಗಿನ ಜಾವ ಸರಕು ಸಾಗಣೆ ವಾಹನದಲ್ಲಿ ಬಂದ ವ್ಯಕ್ತಿಗಳಿಬ್ಬರು ವಡ್ಡರಪಾಳ್ಯದ ಬಳಿ ಇರುವ ಎಟಿಎಂನಲ್ಲಿ ಹಣ ಕದಿಯಲು ಯತ್ನಿಸಿದ್ದರು. ಅದು ಸಾಧ್ಯವಾಗದೇ ಎಟಿಎಂ ಯಂತ್ರವನ್ನೇ ಕಿತ್ತು ವಾಹನದಲ್ಲಿ ಹಾಕಿಕೊಂಡು ಹೋಗಿರುವ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ. ಮಂಚನಹಳ್ಳಿಯ ನೀಲಗಿರಿ ತೋಪಿನಲ್ಲಿ ಎಟಿಎಂ ಅನ್ನು ಹ್ಯಾಕ್–ಸಾ ಬ್ಲೇಡ್ ನಿಂದ ಕತ್ತರಿಸಿ ಹಣ ದೋಚುವ ಯತ್ನ ನಡೆಸಿದ್ದಾರೆ. ಆದರೆ, ಬೆಳಗಾದರೂ ಎಟಿಎಂನಿಂದ ಹಣ ತೆಗೆಯಲು ಸಾಧ್ಯವಾಗಲಿಲ್ಲ. ಜನಸಂಚಾರ ಆರಂಭ ವಾದೊಡನೆ ಕಳ್ಳರು ಯಂತ್ರವನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದಾರೆ. ಕೆನರಾ ಬ್ಯಾಂಕ್‌ಗೆ ಸೇರಿದ್ದ ಎಟಿಎಂನಲ್ಲಿ ₹10 ಲಕ್ಷ ಹಣವಿತ್ತು ಎನ್ನಲಾಗಿದೆ.

ಪತ್ನಿ ಕೊಂದು, ಮಗು ಜತೆ ಪರಾರಿ

ಬೆಂಗಳೂರು: ಪತ್ನಿಯ ಕುತ್ತಿಗೆಯನ್ನು ದುಪಟ್ಟಾದಿಂದ ಬಿಗಿದು ಕೊಲೆ ಮಾಡಿ, ನಾಲ್ಕು ವರ್ಷದ ಮಗು ಜತೆಗೆ ಪರಾರಿ ಆಗಿರುವ ಆರೋಪಿ ಪತ್ತೆಗೆ ಚಂದ್ರಾ ಲೇಔಟ್ ಠಾಣೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಇಮ್ರಾನ್ ಖಾನ್

ಗಂಗೊಂಡನಹಳ್ಳಿಯ ಮೂರನೇ ಮುಖ್ಯರಸ್ತೆಯ ನಿವಾಸಿ ಗೌಸಿಯಾ ಬಿ (31) ಎಂಬುವವರನ್ನು ಪತಿ ಇಮ್ರಾನ್ ಖಾನ್ ಕೊಲೆ ಮಾಡಿದ್ದಾರೆ ಎಂಬ ಆರೋಪವಿದೆ. ಪತಿ–ಪತ್ನಿಯ ನಡುವೆ ಜಗಳ ಆಗಿದ್ದರಿಂದ ಕೊಲೆ ನಡೆದಿದೆ. ಗೌಸಿಯಾ ಅವರ ಸಹೋದರ ನೀಡಿರುವ ದೂರಿನನ್ವಯ ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ದೇವತೆಗಳ ಅವಹೇಳನ: ಎಫ್‌ಐಆರ್

ಬೆಂಗಳೂರು: ಹಿಂದೂ ದೇವತೆಗಳ ಬಗ್ಗೆ ಅಶ್ಲೀಲ ಪದ ಬಳಸಿ, ಅವಹೇಳನ ಮಾಡಿದ ವ್ಯಕ್ತಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಪದಾಧಿಕಾರಿಗಳು ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರಿಗೆ ದೂರು ಸಲ್ಲಿಸಿದ್ದು, ಎಫ್‌ಐಆರ್ ದಾಖಲಾಗಿದೆ.

ಮಹಾಸಭಾದ ಉಪಾಧ್ಯಕ್ಷ ಬಿ.ಎಸ್. ರಾಘವೇಂದ್ರ ಭಟ್ ಎಂಬುವವರು ನೀಡಿದ ದೂರಿನ ಮೇರೆಗೆ ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು ಅಂಜುಂ ಶೇಕ್ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಆರೋಪಿಯ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

‘ಫೇಸ್‌ಬುಕ್‌ನಲ್ಲಿ ಆರೋಪಿ ಅಂಜುಂ ಶೇಕ್ ಎಂಬಾತ ಶೃಂಗೇರಿಯ ಶಾರದಾಂಬೆ, ಕೊಲ್ಲೂರು ಮೂಕಾಂಬಿಕೆ, ತಿರುಪತಿ ತಿಮ್ಮಪ್ಪ, ಹೊರನಾಡು ಅನ್ನಪೂರ್ಣೇಶ್ವರಿ, ಕಟೀಲು ದುರ್ಗಾಪರಮೇಶ್ವರಿ ಬಗ್ಗೆ ಅಶ್ಲೀಲ ಪದ ಬಳಸಿ ಟೀಕಿಸಿದ್ದಾನೆ. ಆರೋಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ರಾಘವೇಂದ್ರ ಭಟ್ ದೂರು ದಾಖಲಿಸಿದ್ದರು.

ಭೋವಿ ನಿಗಮದಲ್ಲಿ ನಡೆದಿದ್ದ ಹಗರಣ: ಆರೋಪಿಗೆ ಸಿಐಡಿ ಡಿವೈಎಸ್‌ಪಿ ಕಿರುಕುಳ ನೀಡಿದ್ದ ಆರೋಪ

ಜೀವಾ ಆತ್ಮಹತ್ಯೆ: ಸಿಸಿಬಿ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ದಯಾನಂದ

ಬೆಂಗಳೂರು: ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣದ ಆರೋಪಿ, ಮಹಿಳೆ ಎಸ್.ಜೀವಾ ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವರ್ಗಾವಣೆಗೊಳಿಸಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಆದೇಶಿಸಿದ್ದಾರೆ.

ಭೋವಿ ನಿಗಮದಲ್ಲಿ ನಡೆದಿದ್ದ ಹಗರಣದ ತನಿಖೆಯನ್ನು ಸಿ.ಐ.ಡಿ ನಡೆಸುತ್ತಿದ್ದು, ಜೀವಾ ಅವರೂ ವಿಚಾರಣೆ ಎದುರಿಸಿದ್ದರು. ವಿಚಾರಣೆ ವೇಳೆ ತನಿಖಾಧಿಕಾರಿಗಳು ಕಿರುಕುಳ ನೀಡಿದ್ದರು ಎಂದು ಆರೋಪಿಸಿ, ಮರಣಪತ್ರ ಬರೆದಿಟ್ಟು ಜೀವಾ ಆತ್ಮಹತ್ಯೆ ಮಾಡಿಕೊಂಡಿದ್ದರು. ಆತ್ಮಹತ್ಯೆಯ ಕುರಿತು ಅವರ ಸಹೋದರಿ ಸಂಗೀತಾ ನೀಡಿದ್ದ ದೂರಿನ ಅನ್ವಯ ಸಿಐಡಿ ಡಿವೈಎಸ್‌ಪಿ ಕನಕಲಕ್ಷ್ಮಿ ವಿರುದ್ಧ ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇದೀಗ ಪ್ರಕರಣದ ಮುಂದಿನ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ.

ಸಿಸಿಬಿಯ ಎಸಿಪಿ ದರ್ಜೆಯ ಅಧಿಕಾರಿ ನೇತೃತ್ವದಲ್ಲಿ ತನಿಖೆಗೆ ಆದೇಶಿಸಲಾಗಿದ್ದು, ಪ್ರಕರಣದ ಪ್ರಾಥಮಿಕ ತನಿಖೆಯ ದಾಖಲೆಗಳನ್ನು ಹಸ್ತಾಂತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬನಶಂಕರಿ ಠಾಣಾ ವ್ಯಾಪ್ತಿಯ ರಾಘವೇಂದ್ರ ಲೇಔಟ್‌ನ ಮನೆಯಲ್ಲಿ ಮರಣಪತ್ರ ಬರೆದಿಟ್ಟು, ನ.22ರಂದು ಜೀವಾ ಆತ್ಮಹತ್ಯೆ ಮಾಡಿಕೊಂಡಿದ್ದರು.

‘ವಿಚಾರಣೆಗೆ ಹಾಜರಾಗಿದ್ದ ಜೀವಾಗೆ ಸಿಐಡಿಯ ಡಿವೈಎಸ್‌ಪಿ ಮಾನಸಿಕ ಕಿರುಕುಳ ನೀಡಿದ್ದಾರೆ. ₹25 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ’ ಎಂದು ಮೃತಳ ಸಹೋದರಿ ಸಂಗೀತಾ ಆರೋಪಿಸಿ, ದೂರು ನೀಡಿದ್ದರು.

‘ಜೀವಾ ಬರೆದಿದ್ದಾರೆ ಎನ್ನಲಾದ 11 ಪುಟಗಳ ಮರಣಪತ್ರವನ್ನೂ ವಶಕ್ಕೆ ಪಡೆದು ಪರಿಶೀಲಿಸಲಾಗುವುದು. ಜೀವಾ ಅವರ ಕೈಬರಹದ ಮಾದರಿಯನ್ನೂ ಸಂಗ್ರಹಿಸಿ ತನಿಖೆ ನಡೆಸಲಾಗುವುದು. ಮರಣಪತ್ರದ ನೈಜತೆ ತಿಳಿದುಕೊಳ್ಳಲು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್.ಎಸ್.ಎಲ್) ಬನಶಂಕರಿ ಠಾಣೆ ಪೊಲೀಸರು ಕಳುಹಿಸಿದ್ದಾರೆ. ಅದರ ವರದಿ ನಿರೀಕ್ಷೆಯಲ್ಲಿ ಇದ್ದೇವೆ’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಸಿಬಿಐ ತನಿಖೆಗೆ ಆಗ್ರಹ: ಜೀವಾ ಅವರು ಉದ್ಯಮಿ ಆಗಿದ್ದರು. ಅಲ್ಲದೇ ವಕೀಲ ವೃತ್ತಿಯನ್ನೂ ಮಾಡುತ್ತಿದ್ದರು. ಜೀವಾ ಆತ್ಮಹತ್ಯೆಯ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ವಕೀಲರ ಸಂಘ ಆಗ್ರಹಿಸಿದೆ.

ತನಿಖಾ ಪ್ರಗತಿಯ ವಿವರ ಒದಗಿಸಿ: ಪ್ರಾಸಿಕ್ಯೂಷನ್‌ಗೆ ಹೈಕೋರ್ಟ್

ಬೆಂಗಳೂರು: ‘ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ಹಣದ ಅವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಆರೋಪಿಯಾಗಿದ್ದ ವಕೀಲೆ ಎಸ್.ಜೀವಾ ಅವರ ಆತ್ಮಹತ್ಯೆ ಪ್ರಕರಣದ ತನಿಖಾ ಪ್ರಗತಿಯ ವಿವರಗಳನ್ನು ನ್ಯಾಯಾಲಯಕ್ಕೆ ಒದಗಿಸಿ’ ಎಂದು ಹೈಕೋರ್ಟ್, ರಾಜ್ಯ ಪ್ರಾಸಿಕ್ಯೂಷನ್‌ಗೆ ಆದೇಶಿಸಿದೆ.

‘ಭೋವಿ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣದ ಆರೋಪಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ವಕೀಲೆ ಎಸ್.ಜೀವಾ ಅವರು 2023ರ ಆಗಸ್ಟ್ 24 ರಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ‘ತನಿಖೆ ನಡೆಸುತ್ತಿರುವ ಸಿಐಡಿ ತನಿಖಾಧಿಕಾರಿಗಳ ಮುಂದೆ ನವೆಂಬರ್ 14 ರಂದು ಹಾಜರಾಗಿ ತನಿಖೆಗೆ ಸಹಕಾರ ನೀಡಬೇಕು. ವಿಚಾರಣಾ ಪ್ರಕ್ರಿಯೆಯನ್ನು ವಿಡಿಯೋಗ್ರಾಫ್ ಮಾಡಿ ಅದರ ವರದಿಯನ್ನು ಕೋರ್ಟ್‌ಗೆ ಸಲ್ಲಿಸಬೇಕು’ ಎಂದು 2024ರ ನವೆಂಬರ್ 11 ರಂದು ಆದೇಶಿಸಿತ್ತು.

ಏತನ್ಮಧ್ಯೆ, ‘2024ರ ನವೆಂಬರ್ 22ರಂದು ಮುಂಜಾನೆ ಜೀವಾ ಅವರು ತಮ್ಮ ಮನೆಯಲ್ಲಿ ನೇಣು ಬಿಗಿದುಕೊಡು ಆತ್ಮಹತ್ಯೆಗೆ ಶರಣಾಗಿದ್ದಾರೆ’ ಎಂದು ಬೆಂಗಳೂರು ವಕೀಲರ ಸಂಘವು, ಜೀವಾ ಅವರು ಸಲ್ಲಿಸಿದ್ದ ಮೂಲ ಅರ್ಜಿಗೆ ಪೂರಕವಾಗಿ ಸೋಮವಾರ ಮಧ್ಯಂತರ ಅರ್ಜಿಯೊಂದನ್ನು ಹೈಕೋರ್ಟ್‌ಗೆ ಸಲ್ಲಿಸಿತು.

ಈ ಮಧ್ಯಂತರ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಸಂಘದ ಅಧ್ಯಕ್ಷರೂ ಆದ ಹಿರಿಯ ವಕೀಲ ವಿವೇಕ್ ರೆಡ್ಡಿ ಸುದೀರ್ಘ ವಾದ ಮಂಡಿಸಿ, ‘ಪ್ರಕರಣದ ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸಿ ಆದೇಶಿಸಬೇಕು’ ಎಂದು ಮನವಿ ಮಾಡಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, ‘ಪ್ರಕರಣದ ತನಿಖೆಯ ಸಮಗ್ರ ವಿವರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿ’ ಎಂದು ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರಿಗೆ ಸೂಚಿಸಿ ವಿಚಾರಣೆಯನ್ನು ಇದೇ 27ಕ್ಕೆ ಮುಂದೂಡಿತು.

ಸುದ್ದಿ 2 ನಿಮಿಷ

ಧರ್ಮಸ್ಥಳ: ಇಂದಿನಿಂದ 30ರವರೆಗೆ ಕಾರ್ತಿಕ ಲಕ್ಷದೀಪೋತ್ಸವ

ಉಜಿರೆ: ಧರ್ಮಸ್ಥಳದಲ್ಲಿ ಕಾರ್ತಿಕ ಮಾಸದ ಲಕ್ಷದೀಪೋತ್ಸವ ಕಾರ್ಯಕ್ರಮಗಳು ಇದೇ 26ರಿಂದ 30ರ ವರೆಗೆ ನಡೆಯಲಿವೆ.

ನ.26ರಂದು ರಾತ್ರಿ ಹೊಸಕಟ್ಟೆ ಉತ್ಸವದೊಂದಿಗೆ ಲಕ್ಷದೀಪೋತ್ಸವ ಕಾರ್ಯಕ್ರಮಗಳಿಗೆ ಚಾಲನೆ ಸಿಗಲಿದೆ. ಧರ್ಮಸ್ಥಳದ ದೇವಸ್ಥಾನ, ಬಸದಿ, ವಸತಿಛತ್ರಗಳು, ಪ್ರವೇಶದ್ವಾರ, ಉದ್ಯಾನ ಹಾಗೂ ಎಲ್ಲ ಕಟ್ಟಡಗಳನ್ನು ಆಕರ್ಷಕ ವಿನ್ಯಾಸದ ವಿದ್ಯುದ್ದೀಪಗಳಿಂದ ಅಲಂಕರಿಸಲಾಗಿದೆ. ನೇತ್ರಾವತಿ ಸ್ನಾನಘಟ್ಟದಿಂದ ಧರ್ಮಸ್ಥಳದವರೆಗೆ ರಸ್ತೆಯ ಎರಡೂ ಬದಿಯಲ್ಲಿ ಆಕರ್ಷಕ ದೀಪಗಳು ಹಾಗೂ ಸ್ವಾಗತ ಫಲಕಗಳನ್ನು ಹಾಕಲಾಗಿದೆ.

ಪ್ರೌಢಶಾಲೆ ಆವರಣದಲ್ಲಿ ಸುಮಾರು 300 ಮಳಿಗೆ ಇರುವ ರಾಜ್ಯಮಟ್ಟದ ವಸ್ತುಪ್ರದರ್ಶನ ಆಯೋಜಿಸಿದ್ದು, ಎಲ್ಲರಿಗೂ ಉಚಿತ ಪ್ರವೇಶ ಇದೆ. ಅಮೃತವರ್ಷಿಣಿ ಸಭಾ ಭವನದಲ್ಲಿ ನ.29ರಂದು ಸಂಜೆ 4ರಿಂದ ಸರ್ವಧರ್ಮ ಸಮ್ಮೇಳನ, ನ.30ರಂದು ಸಂಜೆ 4ರಿಂದ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ.

ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ಮಂಗಳವಾರ ರಾತ್ರಿ ಹೊಸಕಟ್ಟೆ ಉತ್ಸವ, ಬುಧವಾರ ರಾತ್ರಿ ಕೆರೆಕಟ್ಟೆ ಉತ್ಸವ, ಗುರುವಾರ ರಾತ್ರಿ ಕಂಚಿಮಾರುಕಟ್ಟೆ ಉತ್ಸವ, ಶನಿವಾರ ರಾತ್ರಿ ಗೌರಿಮಾರುಕಟ್ಟೆ ಉತ್ಸವ (ಲಕ್ಷದೀಪೋತ್ಸವ) ನಡೆಯುತ್ತದೆ. ಕೆಎಸ್‌ಆರ್‌ಟಿಸಿಯಿಂದ ವಿಶೇಷ ಬಸ್ ಸೌಲಭ್ಯ ಇದೆ. ಹಲವು ಮಂದಿ ಭಕ್ತರು ಪಾದಯಾತ್ರೆಯಲ್ಲೂ ಧರ್ಮಸ್ಥಳಕ್ಕೆ ಬರುತ್ತಾರೆ. ಹೆಚ್ಚಿನ ಮಾಹಿತಿಗೆ ದೇವಳ ಕಚೇರಿ ದೂ: 08256 266655 ಸಂಪರ್ಕಿಸಬಹುದು.

ಕೊನೆಗೂ ಚಿರತೆ ಬೋನಿಗೆ ಬಿತ್ತು

ದಾಬಸ್ ಪೇಟೆ: ಅರಣ್ಯ ಇಲಾಖೆ ಒಂದು ವಾರದಿಂದ ನಡೆಸಿದ ಕಾರ್ಯಚರಣೆಯ ನಂತರ ಕಂಬಾಳು ಗೊಲ್ಲರಹಟ್ಟಿಯ ಕರಿಯಮ್ಮ ಅವರನ್ನು ಕೊಂದಿದ್ದ ಸ್ಥಳದ ಸಮೀಪದಲ್ಲಿಟ್ಟಿದ್ದ ‘ತುಮಕೂರು ಬೋನಿ’ನಲ್ಲಿ ಚಿರತೆಯೊಂದು ಸೆರೆಯಾಗಿದೆ.

ಸೋಮವಾರ ಬೆಳಿಗ್ಗೆ ಅರಣ್ಯ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಬೋನನ್ನು ಗಮನಿಸಿದಾಗ ಚಿರತೆ ಸೆರೆಯಾಗಿರುವುದು ಗೊತ್ತಾಗಿದೆ.

ನ.18ರಂದು ನೆಲಮಂಗಲ ತಾಲ್ಲೂಕಿನ ಶಿವಗಂಗೆ ಬೆಟ್ಟದ ತಪ್ಪಲಲ್ಲಿರುವ ಕಂಬಾಳು ಗೊಲ್ಲರಹಟ್ಟಿಯ ಕರಿಯಮ್ಮ ಎಂಬುವವರನ್ನು ಸಂಜೆ 5ರ ಸಮಯದಲ್ಲಿ ಚಿರತೆ ಕೊಂದು ಎಳೆದುಕೊಂಡು ಹೋಗಿತ್ತು. ಇದರಿಂದ ಗ್ರಾಮದ ಜನರು ಭಯಗೊಂಡಿದ್ದರು. ಚಿರತೆ ಹಿಡಿಯಲು ಅರಣ್ಯ ಇಲಾಖೆಯವರು ಘಟನೆ ನಡೆದ ಸ್ಥಳದ ಸುತ್ತಮುತ್ತ ಒಂಬತ್ತು ಬೋನುಗಳನ್ನು ಇಟ್ಟಿದ್ದರು.

ನ. 24ರ ಸಂಜೆ 5 ಗಂಟೆ ವೇಳೆ ಕರಿಯಮ್ಮನನ್ನು ಕೊಂದ ಸ್ಥಳದ 100 ಮೀಟರ್ ದೂರದಲ್ಲಿ ಚಿರತೆಯೊಂದು ಬಂಡೆ ಮೇಲೆ ಕಾಣಿಸಿಕೊಂಡಿತ್ತು. ಇದು ಜನರನ್ನು ಇನ್ನಷ್ಟು ಭಯಕ್ಕೆ ದೂಡಿತ್ತು.

ಈಗ ಸೆರೆ ಸಿಕ್ಕಿರುವ ಚಿರತೆ ಸುಮಾರು ಮೂರು ವರ್ಷ ವಯಸ್ಸಿನದ್ದಾಗಿದೆ. ಆಹಾರ ಅರಸಿ ಬಂದ ಚಿರತೆ ಬೋನಿಗೆ ಬಿದ್ದಿದೆ.

‘ಚಿರತೆಯ ಜೊಲ್ಲು (ಸಲೈವಾ), ಉಗುರಿನಲ್ಲಿನ ಮಾಂಸದ ತುಣುಕು ಹಾಗೂ ಅಂಟಿಕೊಂಡಿರುವ ರಕ್ತದ ಮಾದರಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ಮೇಲೆ ಅದು ಕರಿಯಮ್ಮ ಅವರನ್ನು ಕೊಂದ ಚಿರತೆಯೋ ಅಲ್ಲವೋ ಎಂಬುದು ತಿಳಿಯುತ್ತದೆ’ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಸರೀನಾ ಸಿಕ್ಕಲಿಗಾರ್ ತಿಳಿಸಿದರು.

‘ಸೆರೆಯಾಗಿರುವ ಚಿರತೆಯನ್ನು ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಕಳುಹಿಸಲಾಗಿದೆ. ಎಫ್‌ಎಸ್‌ಎಲ್ ವರದಿ ಬರುವ ತನಕ ಅರಣ್ಯ ಇಲಾಖೆಯ ಕಾರ್ಯಾಚರಣೆ ಮುಂದುವರೆಯಲಿದೆ’ ಎಂದು ನೆಲಮಂಗಲ ತಾಲ್ಲೂಕು ಉಪ ವಲಯ ಅರಣ್ಯಾಧಿಕಾರಿ ಮಂಜುನಾಥ್ ತಿಳಿಸಿದರು.

ನ.30, ಡಿ.1ರಂದು ಅಪಾರ್ಟ್‌ಮೆಂಟ್ ಕ್ರೀಡಾ ಉತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ಕೆಬಿಜಿ ಸ್ವಯಂಸೇವಕರ ತಂಡದ ವತಿಯಿಂದ ನವೆಂಬರ್ 30 ಮತ್ತು ಡಿಸೆಂಬರ್ 1ರಂದು ಬ್ಯಾಟರಾಯನಪುರದಲ್ಲಿ ಅಂತರ ಅಪಾರ್ಟ್‌ಮೆಂಟ್ ಕ್ರೀಡಾ ಉತ್ಸವವನ್ನು ಏರ್ಪಡಿಸಲಾಗಿದೆ.

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಸುಮಾರು 400 ಅಪಾರ್ಟ್‌ಮೆಂಟ್‌ಗಳ ನಿವಾಸಿಗಳು ಈ ಕ್ರೀಡಾ ಉತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ವಿದ್ಯಾರಣ್ಯಪುರದಲ್ಲಿರುವ ಒಳಾಂಗಣ ಕ್ರೀಡಾಂಗಣ, ಕೆಂಪಾಪುರದಲ್ಲಿ ನೂತನವಾಗಿ ಆರಂಭವಾಗಿರುವ ಒಳಾಂಗಣ ಕ್ರೀಡಾಂಗಣ ಸೇರಿ ವಿವಿಧ ಮೈದಾನಗಳಲ್ಲಿ ಕ್ರೀಡೆಗಳು ನಡೆಯಲಿವೆ.

ಸುಮಾರು 2,500 ಮಂದಿ ಅಪಾರ್ಟ್‌ಮೆಂಟ್ ನಿವಾಸಿಗಳು, ಕ್ರಿಕೆಟ್, ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಈಜು, ಫುಟ್‌ಬಾಲ್, ಬ್ಯಾಸ್ಕೆಟ್ ಬಾಲ್, ಕೇರಂ, ಹಗ್ಗ ಜಗ್ಗಾಟ ಮತ್ತಿತರ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಗುವುದು ಎಂದು ಸಾಮಾಜಿಕ ಕಾರ್ಯಕರ್ತೆ, ಕಂದಾಯ ಸಚಿವರ ಪತ್ನಿ ಮೀನಾಕ್ಷಿ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಸುತ್ತಮುತ್ತಲ ಜನರ ಜೊತೆಗೆ ಸಂಪರ್ಕ ಕಡಿಮೆಯಿರುತ್ತದೆ. ಅವರೂ ಸ್ಥಳೀಯ ಜನರೊಂದಿಗೆ ಬೆರೆತು ಪರಿಚಯವಾಗಬೇಕು. ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರ ಜೊತೆಗೆ ಲಭ್ಯವಿರುವ ಕ್ರೀಡಾಂಗಣಗಳ ಸದುಪಯೋಗ ಪಡೆದುಕೊಂಡು, ಕ್ರೀಡೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಬೇಕೆಂಬ ಉದ್ದೇಶದಿಂದ ಎರಡನೇ ಬಾರಿಗೆ ಕ್ರೀಡಾ ಉತ್ಸವವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

30ರೊಳಗೆ ₹4 ಸಾವಿರ ಕೋಟಿ ತೆರಿಗೆ ಸಂಗ್ರಹ

ಒಟಿಎಸ್ ಯೋಜನೆ ಮುಗಿಯುವ ವೇಳೆಗೆ ದಾಖಲೆ ಸಂಗ್ರಹದ ಗುರಿ: ಬಿಬಿಎಂಪಿ ಮುಖ್ಯ ಆಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಬಾರಿ ಪರಿಹಾರ ಯೋಜನೆ (ಒಟಿಎಸ್) ನವೆಂಬರ್ 30 ರಂದು ಮುಕ್ತಾಯಗೊಳ್ಳುತ್ತಿದ್ದು, ಆ ವೇಳೆಗೆ ಒಟ್ಟು ₹4 ಸಾವಿರ ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಬಡ್ಡಿ ಹಾಗೂ ದಂಡಕ್ಕೆ ವಿನಾಯಿತಿ ನೀಡಲಾಗಿರುವ ಒಟಿಎಸ್ ಯೋಜನೆಯ ಕೊನೆಯ ದಿನಗಳಲ್ಲಿ ನಾಗರಿಕರು ಅದರ ಉಪಯೋಗ ಪಡೆದುಕೊಳ್ಳಬೇಕು. ಇಲ್ಲದಿದ್ದರೆ ಡಿಸೆಂಬರ್ 1ರಿಂದ ಸುಮಾರು ಎರಡು ಪಟ್ಟು ಹೆಚ್ಚು ಪಾವತಿಸಬೇಕಾಗುತ್ತದೆ ಎಂದು ಸುದ್ದಿಗಾರರಿಗೆ ಸೋಮವಾರ ತಿಳಿಸಿದರು.

ಒಟಿಎಸ್ ಯೋಜನೆ ಅವಧಿಯನ್ನು ವಿಸ್ತರಿಸುವುದಿಲ್ಲ. ಹೀಗಾಗಿ, ಆಸ್ತಿ ಮಾಲೀಕರು ಕೊನೆಯ ದಿನಕ್ಕಾಗಿ ಕಾಯದೆ ಈಗಲೇ ಪಾವತಿಸಬೇಕು. ಆನ್‌ಲೈನ್‌ನಲ್ಲಿ ಸಮಸ್ಯೆಯಾದರೆ ಸಹಾಯಕ ಕಂದಾಯ ಆಯುಕ್ತರ (ಎಆರ್‌ಒ) ಕಚೇರಿಯಲ್ಲಿ ಡಿಡಿ ಅಥವಾ ಚೆಕ್ ನೀಡಿ ಪಾವತಿ ಮಾಡಬಹುದು ಎಂದರು.

ಆಸ್ತಿ ತೆರಿಗೆ ಈವರೆಗೆ ₹3,751 ಕೋಟಿ ಸಂಗ್ರಹವಾಗಿದೆ. ನವೆಂಬರ್ 30ರ ಅಂತ್ಯಕ್ಕೆ ಈ ಮೊತ್ತವನ್ನು ₹4,000 ಕೋಟಿಗೆ ಮುಟ್ಟಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ. ನಂತರದ ನಾಲ್ಕು ತಿಂಗಳಲ್ಲಿ ಆರ್ಥಿಕ ವರ್ಷದ ಗುರಿ ₹5,200 ಕೋಟಿಯನ್ನು ಮುಟ್ಟಲು ಪ್ರಯತ್ನಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ವಲಯವಾರು ಬಜೆಟ್: ಬಿಬಿಎಂಪಿಯಲ್ಲಿ ವಲಯವಾರು ಬಜೆಟ್ ಅನ್ನು ಈ ಬಾರಿ ಅನುಷ್ಠಾನಗೊಳಿಸಲಾಗುತ್ತದೆ. ಕಳೆದ ಬಾರಿಯೇ ವಲಯವಾರು ಬಜೆಟ್ ಮಾಡಲು ನಿರ್ಧರಿಸಲಾಗಿತ್ತು. ಅದು ಸಾಧ್ಯವಾಗಲಿಲ್ಲ. ಈ ಬಾರಿ ವಲಯಕ್ಕೆ ಅಗತ್ಯವಾದ ಯೋಜನೆಗಳ ಪಟ್ಟಿಯನ್ನು ನೀಡಲು ವಲಯ ಆಯುಕ್ತರಿಗೆ ಸೋಮವಾರ ನಡೆದ ಸಭೆಯಲ್ಲಿ ಸೂಚಿಸಲಾಗಿದೆ ಎಂದರು.

ಬಜೆಟ್‌ನಲ್ಲಿ ಯಾವ ವಲಯಕ್ಕೆ ಎಷ್ಟು ಅನುದಾನವು ಯಾವ ಮುಖ್ಯ ಶೀರ್ಷಿಕೆ ಹಾಗೂ ಯೋಜನೆಯಲ್ಲಿ ಲಭ್ಯವಾಗುತ್ತದೆ ಎಂಬುದನ್ನು ತಿಳಿಸಲಾಗುತ್ತದೆ. ಇದರಿಂದ ವಲಯ ಆಯುಕ್ತರು ತಮ್ಮ ವ್ಯಾಪ್ತಿಯ ಯೋಜನೆಗಳನ್ನು ನಿರ್ವಹಿಸಲು ಅನುಕೂಲವಾಗುತ್ತದೆ ಎಂದರು.

ಇ–ಖಾತಾ: ಬಿಬಿಎಂಪಿ ವ್ಯಾಪ್ತಿಯಲ್ಲಿ ಇ–ಖಾತಾ ನೀಡಲು ಹಲವು ನಿಯಮಗಳನ್ನು ಸಡಿಲಿಕೆ ಮಾಡಲಾಗಿದೆ. ನಾಗರಿಕರು ತಾವೇ ಎಲ್ಲ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಎಆರ್‌ಒ ಕಚೇರಿಗೆ ಹೋಗದೆ ಇ–ಖಾತಾ ಪಡೆಯಬಹುದಾಗಿದೆ ಎಂದು ತಿಳಿಸಿದರು.

ರಾಜಾಜಿನಗರದಲ್ಲಿ ಮರ ಬಿದ್ದು ಮೃತಪಟ್ಟ ವ್ಯಕ್ತಿಯ ಕುಟುಂಬದವರಿಗೆ ಬಿಬಿಎಂಪಿ ವತಿಯಿಂದ ಪರಿಹಾರ ನೀಡಲಾಗುತ್ತದೆ. ಕಂದಾಯ ಅಧಿಕಾರಿಯ ವರದಿ ಆಧರಿಸಿ ಮೊತ್ತ ನಿಗದಿಮಾಡಲಾಗುತ್ತದೆ ಎಂದರು.

ಆಸ್ತಿ ತೆರಿಗೆ ಸಂಗ್ರಹ ಅಂಕಿ–ಅಂಶ

ವಲಯ	2024–25ರ ಗುರಿ	ನ.23ರವರೆಗಿನ ಸಂಗ್ರಹ	ಶೇಕಡ
ಪೂರ್ವ	₹891.89 ಕೋಟಿ	₹648.63 ಕೋಟಿ	72.72
ದಾಸರಹಳ್ಳಿ	₹164.95 ಕೋಟಿ	₹112.81 ಕೋಟಿ	68.39
ಬೊಮ್ಮನಹಳ್ಳಿ	₹585.11 ಕೋಟಿ	₹376.14 ಕೋಟಿ	64.28
ಆರ್‌.ಆರ್‌. ನಗರ	₹434.35 ಕೋಟಿ	₹293.64 ಕೋಟಿ	67.60
ಮಹದೇವಪುರ	₹1,309.04 ಕೋಟಿ	₹996.11 ಕೋಟಿ	76.09
ಯಲಹಂಕ	₹445.24 ಕೋಟಿ	₹389.90 ಕೋಟಿ	87.57
ಪಶ್ಚಿಮ	₹610.39 ಕೋಟಿ	395.93 ಕೋಟಿ	64.86
ದಕ್ಷಿಣ	₹769.50 ಕೋಟಿ	₹537.86 ಕೋಟಿ	69.90
ಒಟ್ಟು	₹5,210.48 ಕೋಟಿ	₹3,751.01 ಕೋಟಿ	71.99

‘5 ವರ್ಷ ಅಭಿವೃದ್ಧಿ ಕಾಮಗಾರಿ ನಡೆದಿಲ್ಲ’

ತುಷಾರ್ ಗಿರಿನಾಥ್

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಐದು ವರ್ಷಗಳಿಂದ ರಸ್ತೆ ಅಭಿವೃದ್ಧಿ ಕಾಮಗಾರಿ ನಡೆದಿಲ್ಲ. ಹೀಗಾಗಿ ಗುಂಡಿಗಳನ್ನು ಮುಚ್ಚುತ್ತಿದ್ದರೂ ಮತ್ತೆ ಸೃಷ್ಟಿಯಾಗುತ್ತಿವೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ನಗರದಲ್ಲಿ ಸುಮಾರು 400 ಕಿ.ಮೀ ಉದ್ದ ರಸ್ತೆಗಳನ್ನು ಅಭಿವೃದ್ಧಿ ಮಾಡಲು ₹694 ಕೋಟಿ ವೆಚ್ಚದ ಕ್ರಿಯಾಯೋಜನೆಗೆ ನಗರಾಭಿವೃದ್ಧಿ ಇಲಾಖೆ ಅನುಮೋದನೆ ನೀಡಿದೆ. ಡಿಸೆಂಬರ್ ಅಂತ್ಯಕ್ಕೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ಜನವರಿಯಿಂದ ಕಾಮಗಾರಿ ಆರಂಭಿಸಲಾಗುತ್ತದೆ’ ಎಂದರು.

ನಮ್ಮ ಕ್ಲಿನಿಕ್‌ಗಳಲ್ಲಿ ಹಿಂದಿನ ಯೋಜನೆಯಂತೆಯೇ ಯೋಗ ಮತ್ತು ಆಯುರ್ವೇದ ಚಿಕಿತ್ಸೆಗಳನ್ನು ನೀಡಲಾಗುತ್ತದೆ. ಕೆಲವು ಕಡೆ ಆರಂಭವಾಗಿದೆ. ಉಳಿದ ಕಡೆ ಆರಂಭಕ್ಕೆ ಸ್ಥಳೀಯ ವೈದ್ಯಾಧಿಕಾರಿ ಪ್ರಸ್ತಾವ ಸಲ್ಲಿಸಿದರೆ, ಇತಿಮಿತಿಗಳನ್ನು ಗಮನಿಸಿ ಅನುಮೋದನೆ ನೀಡಲಾಗುತ್ತದೆ ಎಂದು ತಿಳಿಸಿದರು.

ಸುಸ್ತಿದಾರರಿಂದ ₹365 ಕೋಟಿ ಬಾಕಿ

ಬಿಬಿಎಂಪಿ ವ್ಯಾಪ್ತಿಯ ಆಸ್ತಿ ತೆರಿಗೆ ಬಾಬ್ತಿನಲ್ಲಿ ಸುಸ್ತಿದಾರರಿಂದ ಇನ್ನೂ ₹365.47 ಕೋಟಿ ಸಂಗ್ರಹವಾಗಬೇಕಿದೆ.

2024ರ ಏಪ್ರಿಲ್ 1ರಂತೆ 3.95 ಲಕ್ಷ ಸುಸ್ತಿದಾರರು ₹733.61 ಕೋಟಿ ಆಸ್ತಿ ತೆರಿಗೆ ಪಾವತಿಸಬೇಕಾಗಿತ್ತು. ಈ ಆರ್ಥಿಕ ವರ್ಷದಲ್ಲಿ 1.67 ಲಕ್ಷ ಸುಸ್ತಿದಾರರು ₹368.14 ಕೋಟಿಯನ್ನು ಪಾವತಿಸಿದ್ದಾರೆ. 2.27 ಲಕ್ಷ ಆಸ್ತಿಗಳ ಮಾಲೀಕರು ಇನ್ನೂ ಸುಸ್ತಿದಾರರಾಗಿದ್ದಾರೆ.

ಆಸ್ತಿ ತೆರಿಗೆ ಪಾವತಿಸಲು ಸುಸ್ತಿದಾರರಿಗೆ ಹಲವು ಬಾರಿ ನೋಟಿಸ್ ಜಾರಿ ಮಾಡಲಾಗಿದ್ದರೂ, ತೆರಿಗೆ ಪಾವತಿಸಿಲ್ಲ. ಹೀಗಾಗಿ, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಈವರೆಗೆ 82,770 ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಆಸ್ತಿ ತೆರಿಗೆ ಪಾವತಿಸದ 6,613 ವಾಣಿಜ್ಯ ಕಟ್ಟಡಗಳಿಗೆ ಬೀಗಮುದ್ರೆ ಹಾಕಲಾಗಿದೆ.

ಆಸ್ತಿ ತೆರಿಗೆಯನ್ನು ತಪ್ಪಾಗಿ ಪಾವತಿಸುತ್ತಿದ್ದ 15,731 ಸ್ವತ್ತುಗಳ ತೆರಿಗೆಯನ್ನು ಪುನರ್ ವಿಮರ್ಶೆ ಮಾಡಲಾಗಿದ್ದು, ₹398.49 ಕೋಟಿ ವ್ಯತ್ಯಾಸ ಮೊತ್ತ ಪಾವತಿಯಾಗಬೇಕಿದೆ. 8,091 ಆಸ್ತಿಗಳಿಂದ ₹106.68 ಕೋಟಿ ಸಂಗ್ರಹವಾಗಿದೆ. ಇನ್ನೂ 10,405 ಆಸ್ತಿಗಳಿಂದ ₹196.08 ಕೋಟಿ ಪಾವತಿಯಾಗಬೇಕಿದೆ ಎಂದರು.

ನಗರದಲ್ಲಿ ಇಂದು

‘ಎಕ್ಸ್‌ಪ್ರೆಷನ್ಸ್’ ಅಂತರ್ ಶಾಲಾ ಪ್ರತಿಭಾ ಸ್ಪರ್ಧೆ: ಅತಿಥಿಗಳು: ವೂಡೇ ಪಿ.ಕೃಷ್ಣ, ಆಯೋಜನೆ: ಡಿ.ಎಚ್. ಐ.ಇ., ಸ್ಥಳ: ನೌಕರರ ಭವನ, ಕಬ್ಬನ್ ಪಾರ್ಕ್, ಬೆಳಿಗ್ಗೆ 9.30

ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯದ ತಾತ್ವಿಕ ಆಯಾಮಗಳು– ವಿಚಾರಗೋಷ್ಠಿ: ಉದ್ಘಾಟನಾ ಸಮಾರಂಭ: ಎಲ್. ಸುರೇಶ್ ಕುಮಾರ್, ಕರೀಗೌಡ ಬೀಚನಹಳ್ಳಿ, ರೆ.ಫಾ. ವರ್ಗೀಸ್ ಕೆ.ಜೆ., ರತಿ ಎಂ.ಟಿ., ಮೊದಲ ಗೋಷ್ಠಿ: ಎಚ್.ಆರ್. ವಿಜಯಶಂಕರ, ಕೆ. ಸತ್ಯನಾರಾಯಣ, ವಿಕ್ರಮ ವಿಸಾಜಿ, ಅಪ್ಪಗೆರೆ ಸೋಮಶೇಖರ, ಎರಡನೇ ಗೋಷ್ಠಿ: ಶಶಿಕಲಾ ಎಚ್., ರಘುನಾಥ ಚ.ಹ., ಮೂರನೇ ಗೋಷ್ಠಿ: ಪಿ. ಚಂದ್ರಿಕಾ, ಸುಭಾಷ್ ರಾಜಮಾನೆ, ಆಯೋಜನೆ: ಸಾಹಿತ್ಯ ಅಕಾಡೆಮಿ, ಕ್ರೈಸ್ಟ್ ವಿಶ್ವವಿದ್ಯಾಲಯದ ಕನ್ನಡ ಸಂಘ, ಸ್ಥಳ: ಕ್ರೈಸ್ಟ್ ವಿಶ್ವವಿದ್ಯಾಲಯದ ಸಿಂಡಿಕೇಟ್ ರೂಂ, ಹೊಸೂರು ರಸ್ತೆ, ಬೆಳಿಗ್ಗೆ 9.30

ಭಾರತ ಸಂವಿಧಾನ ದಿನಾಚರಣೆ: ಆಯೋಜನೆ: ಮೈಸೂರು ಪೌರ ಮತ್ತು ಸಾಮಾಜಿಕ ಪ್ರಗತಿ ಸಂಘ, ಲೋಕಮಾನ್ಯ ಸಂಘ, ವಾಸವಿ ಕ್ಲಬ್, ಕರ್ನಾಟಕ ಲೇಖಕರ ಸಂಘ, ಸಮರ್ಪಣಾ ಸಂಘಟನೆ, ಕನ್ನಡ ಪಕ್ಷ, ರಾಮಯ್ಯಂಗಾರ್ ರಸ್ತೆ ನಿವಾಸಿಗಳ ಸಂಘ, ನಾಗರಿಕ ಸೇವಾ ಸಮಿತಿ, ತೆಲುಗು ಸ್ಮಾರ್ತ ವೇದಿಕೆ, ಮುಲುಕನಾಡು ಮಹಾಸಂಘ, ಚಾರು ಕೀರ್ತಿ ಭಟ್ಟಾರಕ ವೇದಿಕೆ, ಧನ್ವಂತರಿ ಫೌಂಡೇಶನ್, ಭಾರತ ಸ್ವಾತಂತ್ರ್ಯ ಹೋರಾಟಗಾರರ ಸಮಿತಿ, ಸ್ಥಳ: ಸಜ್ಜನ ರಾವ್ ವೃತ್ತ, ವಿಶ್ವೇಶ್ವರಪುರ, ಬೆಳಿಗ್ಗೆ 10

ಸಂವಿಧಾನ ಸೈನಿಕರ ಸಮಾವೇಶ:


ಎಚ್‌.ಕೆ. ಪಾಟೀಲ್

ಉದ್ಘಾಟನೆ: ಎಚ್.ಕೆ. ಪಾಟೀಲ, ಅತಿಥಿ: ನ್ಯಾ. ಶಿವರಾಜ್ ವಿ. ಪಾಟೀಲ್, ಅಧ್ಯಕ್ಷತೆ: ಸಿ.ಎಸ್. ಪಾಟೀಲ್, ಉಪಸ್ಥಿತಿ: ಪ್ರಭುದೇವ ಕಲ್ಮಠ, ಆಯೋಜನೆ: ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಸ್ಥಳ: ಜಗದ್ಗುರು ರೇಣುಕಾಚಾರ್ಯ ಕಾನೂನು ಮಹಾವಿದ್ಯಾಲಯ, ಬೆಳಿಗ್ಗೆ 10

ಹವಾಮಾನ ಬದಲಾವಣೆ ಕುರಿತ ಶೃಂಗ: ಉದ್ಘಾಟನೆ: ಟಿ.ಬಿ. ಜಯಚಂದ್ರ, ದಿಕ್ಸೂಚಿ ಭಾಷಣ: ಎನ್.ಎಚ್. ರವೀಂದ್ರನಾಥ್, ಮುಖ್ಯ ಭಾಷಣ: ಬಿ.ಕೆ. ಚಂದ್ರಶೇಖರ್, ಅಧ್ಯಕ್ಷತೆ: ಎ. ರವೀಂದ್ರ, ಅತಿಥಿಗಳು: ಗೌರವ್ ಗುಪ್ತ, ಶ್ರೀನಿವಾಸ್ ಆರ್., ಎಂ.ಕೆ. ರಮೇಶ್, ಆಯೋಜನೆ: ಸೆಂಟರ್ ಫಾರ್ ಸಸ್ಟೈನಬಲ್ ಡೆವಲಪ್‌ಮೆಂಟ್, ಗ್ರೀನ್ ಸ್ಕಿಲ್ಸ್ ಅಕಾಡೆಮಿ, ಸ್ಥಳ: ದಿ. ಕ್ಯಾಪಿಟಲ್, ಬೆಳಿಗ್ಗೆ 10

ಸಿದ್ದರಾಮಯ್ಯ

ಸಂವಿಧಾನ ದಿನಾಚರಣೆ: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಬಸವರಾಜ ಎಸ್. ಹೊರಟ್ಟಿ, ಯು.ಟಿ. ಖಾದರ್, ಡಿ.ಕೆ. ಶಿವಕುಮಾರ್, ಎಚ್.ಡಿ. ದೇವೇಗೌಡ, ಎಚ್.ಸಿ. ಮಹದೇವಪ್ಪ, ನಿರ್ಮಲಾ ಸೀತಾರಾಮನ್, ಎಚ್.ಡಿ. ಕುಮಾರಸ್ವಾಮಿ, ಪ್ರಲ್ಹಾದ್ ಜೋಶಿ, ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷತೆ:ರಿಜ್ವಾನ್ ಅರ್ಷದ್, ಆಯೋಜನೆ: ಸಮಾಜ ಕಲ್ಯಾಣ ಇಲಾಖೆ, ಸ್ಥಳ : ಡಾ. ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10.30

ಬಸವರಾಜ ಹೊರಟ್ಟಿ

ಯು.ಟಿ. ಖಾದರ್

ಸಂವಿಧಾನಕ್ಕೆ 75 ವರ್ಷ–ಅಮೃತ ಮಹೋತ್ಸವ ಕಾರ್ಯಕ್ರಮ: ಉದ್ಘಾಟನೆ: ಸಿದ್ದರಾಮಯ್ಯ, ಸಂವಿಧಾನ ಪೀಠಿಕೆ ಬೋಧನೆ: ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಗೌರವ ಉಪಸ್ಥಿತಿ: ಎಂ.ಕೆ. ಪ್ರಾಣೇಶ್, ರುದ್ರಪ್ಪ ಮಾನಪ್ಪ ಲಮಾಣಿ, ಸಂವಿಧಾನ ಗೀತೆ ಲೋಕಾರ್ಪಣೆ: ಡಿ.ಕೆ. ಶಿವಕುಮಾರ್, ಸಾಕ್ಷ್ಯಚಿತ್ರ ಲೋಕಾರ್ಪಣೆ: ಎಚ್.ಸಿ. ಮಹದೇವಪ್ಪ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅಂಬೇಡ್ಕರ್ ಅವರ 1200 ಚದರ ಅಡಿಯ ಕಲಾಕೃತಿ ಲೋಕಾರ್ಪಣೆ: ಜಿ. ಪರಮೇಶ್ವರ, ಸತೀಶ ಜಾರಕಿಹೊಳಿ, ಎಂ.ಬಿ. ಪಾಟೀಲ, ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್, ಆಯೋಜನೆ: ವಿಶ್ವಗುರು ಬುದ್ಧ ಪ್ರೊಡಕ್ಷನ್, ಸಮಾಜ ಕಲ್ಯಾಣ ಇಲಾಖೆ, ವಿಧಾನಸಭೆ ಸಚಿವಾಲಯ, ವಿಧಾನ ಪರಿಷತ್ತು ಸಚಿವಾಲಯ, ಶಾಸಕರ ಭವನ ಪೊಲೀಸ್ ಭದ್ರತಾ ವಿಭಾಗ, ಸ್ಥಳ: ಶಾಸಕರ ಭವನ, ಬೆಳಿಗ್ಗೆ 11

ಸಂವಿಧಾನ ದಿನಾಚರಣೆಯ ಅಂಗವಾಗಿ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ: ಎಸ್.ಆರ್. ಉಮಾಶಂಕರ್, ತುಷಾರ್ ಗಿರಿನಾಥ್, ಆಯೋಜನೆ ಮತ್ತು ಸ್ಥಳ: ಬಿಬಿಎಂಪಿ, ಬೆಳಿಗ್ಗೆ 10.30

75ನೇ ಸಂವಿಧಾನ ಸಮರ್ಪಣಾ ದಿನಾಚರಣೆ ಮತ್ತು ರಾಜ್ಯಮಟ್ಟದ ಪದಾಧಿಕಾರಿಗಳ ಸಭೆ: ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ (ಸಂಯೋಜಕ), ಸ್ಥಳ: ಗಾಂಧಿಭವನ, ಕುಮಾರ ಪಾರ್ಕ್ ಪೂರ್ವ, ಬೆಳಿಗ್ಗೆ 11.30

ಕರ್ನಾಟಕ ರಾಜ್ಯೋತ್ಸವ: ಉದ್ಘಾಟನೆ: ಎನ್.ಪಿ. ಕಾರ್ತಿಕ್, ಅತಿಥಿಗಳು: ಸಂತ ವಾಣಿ ಸುಧಾಕರ್, ಭಾಸ್ಕರ್ ಬಿ.ಜಿ., ಅಧ್ಯಕ್ಷತೆ: ಮಂಜುನಾಥ ಆರ್.ವಿ., ಆಯೋಜನೆ: ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು, ಮಧ್ಯಾಹ್ನ 12.10

ಕನ್ನಡ ನುಡಿ ಹಬ್ಬ: ಅತಿಥಿಗಳು: ನ್ಯಾ. ಎಂ. ನಾಗಪ್ರಸನ್ನ, ಗೊ.ರು. ಚನ್ನಬಸಪ್ಪ, ವಿವೇಕ್ ಸುಬ್ಬಾರೆಡ್ಡಿ, ಟಿ.ಜಿ. ರವಿ, ಹರೀಶ್ ಎಂ.ಟಿ.: ಆಯೋಜನೆ: ವಕೀಲರ ಸಂಘ, ಸ್ಥಳ: ಹೈಕೋರ್ಟ್ ಹಾಲ್ ನಂ.1, ಮಧ್ಯಾಹ್ನ 1.45

ಸಂವಿಧಾನ ದಿನಾಚರಣೆ ಮತ್ತು ಜೈಭೀಮ್ ವೃತ್ತ ಬಸ್ ನಿಲ್ದಾಣ ಉದ್ಘಾಟನೆ: ಚಾಲನೆ ನೀಡುವವರು: ಪ್ರಭಾಕರ್ ರೆಡ್ಡಿ, ಆಯೋಜನೆ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಾಲ್ಕು ನಿಗಮಗಳ ಪರಿಶಿಷ್ಟ ಜಾತಿ/ಪಂಗಡದ ನೌಕರರ ಸಂಘಗಳ ಐಕ್ಯತಾ ವೇದಿಕೆ, ಸ್ಥಳ: ಜೈಭೀಮ್ ಭವನ, ಮಧ್ಯಾಹ್ನ 3

ಕರ್ನಾಟಕ ರಾಜ್ಯೋತ್ಸವ ಮತ್ತು ‘ಬಿದ್ದೂರಿನ ಬಿಗ್ ಬೆನ್’ ನಾಟಕ, ಮನರಂಜನಾ ಕಾರ್ಯಕ್ರಮ: ಅಧ್ಯಕ್ಷತೆ: ಎಸ್. ರಾಜೇಂದ್ರ ಕುಮಾರ್, ಆಯೋಜನೆ: ಬೆಂಗಳೂರು ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಕಚೇರಿಯ ಮನರಂಜನಾ ಕೂಟ, ಸ್ಥಳ: ಮೇಘದೂತ್ ಆಡಿಟೋರಿಯಂ, ಜಿಪಿಒ, ಮಧ್ಯಾಹ್ನ 3

ಅಂಬೇಡ್ಕರ್ ಜಯಂತಿ, ಸಂವಿಧಾನ ದಿನಾಚರಣೆ: ಬುದ್ಧವಂದನೆ: ಮಹಾಬೋಧಿ ಬಿಕ್ಕು, ಉದ್ಘಾಟನೆ: ಸತೀಶ ಜಾರಕಿಹೊಳಿ, ಉಪಸ್ಥಿತಿ: ನ್ಯಾ. ಎಚ್.ಎನ್. ನಾಗಮೋಹನದಾಸ್, ರಿಜ್ವಾನ್ ಅರ್ಷದ್, ಎಲ್.ಎನ್. ಮುಕುಂದರಾಜ್, ಎಂ.ಟಿ. ರೇಜು, ಅಧ್ಯಕ್ಷತೆ: ಪುರುಷೋತ್ತಮ ಬಿಳಿಮಲೆ, ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಮಧ್ಯಾಹ್ನ 3

ಕಡಿಮೆ ಖರ್ಚಿನಲ್ಲಿ ರಾಸು ನಿರ್ವಹಣೆ, ಪಶು ಆಹಾರ, ಹಸಿರು ಮೇವಿನ ಬಳಕೆ ಬಗ್ಗೆ ‘ತಾಂತ್ರಿಕ ವಿಚಾರಗೋಷ್ಠಿ’: ಆಯೋಜನೆ: ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ, ಸ್ಥಳ: ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣ, ಜಿಕೆವಿಕೆ, ಮಧ್ಯಾಹ್ನ 3.30

ನೂತನ ಸಂಘದ ಉದ್ಘಾಟನೆ, 75ನೇ ಸಂವಿಧಾನ ಸಮರ್ಪಣಾ ದಿನಾಚರಣೆ: ಉದ್ಘಾಟನೆ: ಜ್ಞಾನಪ್ರಕಾಶ ಸ್ವಾಮೀಜಿ, ಅಧ್ಯಕ್ಷತೆ: ಎಂ. ಮುನಿಯಪ್ಪ, ಅತಿಥಿಗಳು: ನ್ಯಾ. ಕೆ. ಸೋಮಶೇಖರ್, ನ್ಯಾ. ಕೃಷ್ಣ ಎಸ್. ದೀಕ್ಷಿತ್, ಜಿ. ಪರಮೇಶ್ವರ, ಎಚ್. ಸಿ. ಮಹದೇವಪ್ಪ, ಕೆ.ಎಚ್. ಮುನಿಯಪ್ಪ, ಭಕ್ತವಚ್ಛಲ, ಎಸ್.ಎ. ಅಹಮದ್, ಆಯೋಜನೆ: ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡ ವಕೀಲರ ಸಂಘ, ಸ್ಥಳ: ಯವನಿಕಾ ಸಭಾಂಗಣ, ನೃಪತುಂಗ ರಸ್ತೆ, ಮಧ್ಯಾಹ್ನ 3.30

‘ಸಂವಿಧಾನ ಉಳಿಸೋಣ: ಪ್ರಜಾಪ್ರಭುತ್ವ ರಕ್ಷಿಸೋಣ’ ಚಿಂತನಾಗೋಷ್ಠಿ: ಉದ್ಘಾಟನೆ: ಆರ್. ಚಂದ್ರಶೇಖರ್, ವಿಚಾರ ಮಂಡನೆ: ಆರ್.ಜಿ. ಹಳ್ಳಿ ನಾಗರಾಜ್, ಅಧ್ಯಕ್ಷತೆ: ಎನ್. ರಾಜಣ್ಣ, ಆಶಯನುಡಿ: ಗೌಡಗೆರೆ ಮಾಯುಶ್ರೀ, ಉಪಸ್ಥಿತಿ: ಗಣಪತಿ ಗೋ ಚಲವಾದಿ, ಆಯೋಜನೆ: ದಲಿತ ಸಾಹಿತ್ಯ ಪರಿಷತ್ತು, ದಲಿತ ಹಕ್ಕುಗಳ ಸಮಿತಿ, ಸ್ಥಳ: ಗಾಂಧಿ ಸಾಹಿತಯ ಸಂಘ, 8ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 5

‘ಕ್ಷೀರಕ್ರಾಂತಿ’ ಪುಸ್ತಕ ಬಿಡುಗಡೆ ಮತ್ತು ನಾಟಕ ಪ್ರದರ್ಶನ: ಉದ್ಘಾಟನೆ: ಎಂ.ಕೆ. ಜಗದೀಶ್, ಕೃತಿ ಬಿಡುಗಡೆ: ಎಲ್. ಎನ್. ಮುಕುಂದರಾಜ್, ಅಧ್ಯಕ್ಷತೆ: ಎ.ಎಸ್. ಜಯರಾಮ್, ಕೃತಿ ಕುರಿತು: ಎಸ್. ರಂಗಸ್ವಾಮಿ, ಕೃತಿಕಾರ: ಕೆ.ಎಸ್. ರಂಗೇಗೌಡ, ಉಪಸ್ಥಿತಿ: ರಮೇಶ್ ಬಿ. ಕೊಣ್ಣೂರ್, ರಾಜು ಆರ್., ಮಲ್ಲಿಕಾರ್ಜುನಯ್ಯ ಬಿ.ಟಿ., ಗೋಪಾಲಯ್ಯ, ಆಯೋಜನೆ: ಸುಸ್ಥಿರ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.15

ಬಸವನಗುಡಿ ಕಡಲೆಕಾಯಿ ಪರಿಷೆ ಪ್ರಯುಕ್ತ ಕನ್ನಡ ಡಿಂಡಿಮ–ಚಿತ್ರಗೀತೆಗಳ ಕಾರ್ಯಕ್ರಮ: ಸ್ಥಳ: ಬ್ಯೂಗಲ್‌ರಾಕ್ ಉದ್ಯಾನ, ಸಂಜೆ 7

ಬಸವನಗುಡಿ ಕಡಲೆಕಾಯಿ ಪರಿಷೆ ಪ್ರಯುಕ್ತ ಭರತನಾಟ್ಯ, ವೀಣಾ ವಾದನ, ಹರಿಕಥೆ ಕಾರ್ಯಕ್ರಮ, ಸ್ಥಳ: ನರಸಿಂಹಸ್ವಾಮಿ ಉದ್ಯಾನ, ಸಂಜೆ 6

***

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಟ್ಯಾಕ್ಸಿ ಸಂಘದ ಅರ್ಜಿ: ಕೇಂದ್ರ–ರಾಜ್ಯಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಾಹನಗಳ ಮೇಲಿನ ನಿಗಾ ವ್ಯವಸ್ಥೆ (ಟ್ರ್ಯಾಕಿಂಗ್ ಸಿಸ್ಟಂ) ಹಾಗೂ ಅಪಾಯ ಸೂಚನಾ ಒತ್ತುಗುಂಡಿ (ಪ್ಯಾನಿಕ್ ಬಟನ್) ಅಳವಡಿಸದೇ ಇದ್ದರೆ ವಾಹನ ಸದೃಢ (ಫಿಟ್ನೆಸ್) ಪ್ರಮಾಣಪತ್ರ ನವೀಕರಿಸಬಾರದು’ ಎಂಬ ರಾಜ್ಯ ಸಾರಿಗೆ ಇಲಾಖೆಯ ಆದೇಶ ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ‘ಬೆಂಗಳೂರು ಪ್ರವಾಸಿಗರ ಟ್ಯಾಕ್ಸಿ ಮಾಲೀಕರ ಸಂಘ’ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಬಿ.ಆರ್. ಸುಂದರ್ ರಾಜ್ ಗುಪ್ತ ಅವರ ವಾದ ಆಲಿಸಿದ ನ್ಯಾಯಪೀಠ, ‘ಸರ್ಕಾರದ ಅಧಿಸೂಚನೆಗೆ ಏಕಾಏಕಿ ತಡೆ ನೀಡಲು ಆಗುವುದಿಲ್ಲ. ಸರ್ಕಾರಕ್ಕೆ ನೋಟಿಸ್ ಜಾರಿಯಾಗಲಿ. ಅವರು ಆಕ್ಷೇಪಣೆ ಸಲ್ಲಿಸಲಿ. ನಂತರ ಮಧ್ಯಂತರ ಮನವಿ ಪರಿಗಣಿಸಲಾಗುವುದು’ ಎಂದು ತಿಳಿಸಿ ವಿಚಾರಣೆ ಮುಂದೂಡಿತು.

ಪ್ರತಿವಾದಿಗಳಾದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಾರಿಗೆ ಸಚಿವಾಲಯದ ಕಾರ್ಯದರ್ಶಿ, ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯ ಸಾರಿಗೆ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ನ್ಯಾಯಪೀಠ ಆದೇಶಿಸಿದೆ.

ರೋಟರಿ ಇಂಟರ್‌ನ್ಯಾಷನಲ್ ಜಿಲ್ಲೆ 3191 ವತಿಯಿಂದ ರೋಟರಿ ಗವರ್ನರ್ ಸತೀಶ್ ಮಾಧವನ್ ಅವರು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ವೂಡೇ ಪಿ.ಕೃಷ್ಣ ಅವರಿಗೆ ಜೀವಮಾನದ ಸಾಧನಾ ಪ್ರಶಸ್ತಿ ನೀಡಿ ಗೌರವಿಸಿದರು.

ಘಟಿಕೋತ್ಸವದಲ್ಲಿ ಬೆಂಗಳೂರು ವಿ.ವಿ. ಕುಲಪತಿ ಪ್ರೊ.ಜಯಕರ ಶೆಟ್ಟಿ ಎಂ.

‘ಶಿಕ್ಷಣದೊಂದಿಗೆ ಸಾಧನೆಗೂ ಅಣಿಯಾಗಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯಾರ್ಥಿಗಳು ಕೇವಲ ಶಿಕ್ಷಣ, ಪಡೆದರೆ ಸಾಲದು, ಜೀವನದಲ್ಲಿ ಉನ್ನತಮಟ್ಟದ ಸಾಧನೆಗೆ ಪ್ರಯತ್ನಿಸಬೇಕು’ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಂ.ಜಯಕರ ಶೆಟ್ಟಿ ಸಲಹೆ ನೀಡಿದರು.

ಜಯನಗರ ನ್ಯಾಷನಲ್ ಕಾಲೇಜಿನ 13ನೇ ಘಟಿಕೋತ್ಸವದಲ್ಲಿ ಭಾಷಣ ಮಾಡಿದ ಅವರು, ‘ದೇಶ ಹಾಗೂ ರಾಜ್ಯದಲ್ಲಿ ಅತ್ಯುತ್ತಮ ಶಿಕ್ಷಣ ವ್ಯವಸ್ಥೆ ಇದೆ. ಇದು ವಿದ್ಯಾರ್ಥಿಗಳನ್ನು ಜಾಗತಿಕ ಸವಾಲುಗಳಿಗೆ ಸಜ್ಜುಗೊಳಿಸಲು ಸಹಕಾರಿಯಾಗಲಿದೆ’ ಎಂದು ಅಭಿಪ್ರಾಯಪಟ್ಟರು.

‘ಶಿಕ್ಷಣವೆಂದರೆ ಪ್ರಮಾಣಪತ್ರ, ಚಿನ್ನದ ಪದಕಗಳಷ್ಟೇ ಅಲ್ಲ. ನೈತಿಕ ಶಿಕ್ಷಣ ನಿಮ್ಮ ಬದುಕಿಗೆ ಬುನಾದಿಯಾಗಬೇಕು’ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಫ್ಲಾರಿಡಾ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸುಂದರರಾಜ ಸೀತಾರಾಮ ಅಯ್ಯಂಗಾರ್ ರ‍್ಯಾಂಕ್ ವಿಜೇತರಿಗೆ ಪದಕಗಳನ್ನು ವಿತರಿಸಿದರು.

ಜಯನಗರ ನ್ಯಾಷನಲ್ ಕಾಲೇಜಿನಲ್ಲಿ ಆಯೋಜಿಸಿದ್ದ 13ನೇ ಘಟಿಕೋತ್ಸವದಲ್ಲಿ ಕಾಲೇಜಿನ ವಿವಿಧ ವಿಭಾಗಗಳ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಮತ್ತು ಪದವಿ ಪ್ರದಾನ ಮಾಡಲಾಯಿತು –ಪ್ರಜಾವಾಣಿ ಚಿತ್ರ

ನಂತರ ಮಾತನಾಡಿದ ಅವರು, ‘ನ್ಯಾಷನಲ್ ಕಾಲೇಜು ಶಿಕ್ಷಣ ಕ್ಷೇತ್ರದಲ್ಲಿನ ದೂರದೃಷ್ಟಿಯ ಜೊತೆಗೆ, ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣಗಳನ್ನು ಬೆಳೆಸುತ್ತಿದೆ’ ಎಂದು ಅವರು ಶ್ಲಾಘಿಸಿದರು.

‘ಅಪರಾಧ ವಿಜ್ಞಾನ ವ್ಯಾಪಕವಾಗಿ ಬೆಳೆಯುತ್ತಿದೆ. ಈ ವಿಭಾಗದಲ್ಲಿ ಅಧ್ಯಯನ ಮಾಡಿದವರಿಗೆ ವಿಪುಲ ಉದ್ಯೋಗ ಅವಕಾಶಗಳಿವೆ. ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು’ ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ವಿವಿಧ ವಿಭಾಗಗಳ 16 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ 485 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಎಂ.ಕಾಂ, ಗಣಿತ, ಭೌತವಿಜ್ಞಾನ ವಿಭಾಗದ 52 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿ ಹಾಗೂ 433 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ವಿತರಿಸಲಾಯಿತು.

ಎನ್‌ಇಎಸ್ ಆಫ್ ಕರ್ನಾಟಕ ಅಧ್ಯಕ್ಷ ಎಚ್.ಎನ್.ಸುಬ್ರಹ್ಮಣ್ಯ, ಗೌರವ ಕಾರ್ಯದರ್ಶಿ ವಿ.ವೆಂಕಟಶಿವಾ ರೆಡ್ಡಿ, ಕಾರ್ಯದರ್ಶಿ ಬಿ.ಎಸ್.ಅರುಣ್ ಕುಮಾರ್, ಜಂಟಿ ಕಾರ್ಯದರ್ಶಿ ಸುಧಾಕರ ಇಸ್ತೂರಿ, ಕೋಶಾಧಿಕಾರಿ ತಲ್ಲಂ ಆರ್. ದ್ವಾರಕನಾಥ್, ಅಧ್ಯಕ್ಷ ಪಿ.ಎಲ್.ವೆಂಕಟರಾಮ ರೆಡ್ಡಿ, ಸಹ ಉಪಾಧ್ಯಕ್ಷ ವಿ. ಮಂಜುನಾಥ್, ಪ್ರಾಚಾರ್ಯ ಪಿ.ಎಲ್.ರಮೇಶ್, ಕಾಲೇಜು ಮಂಡಳಿಯ ಕಾರ್ಯದರ್ಶಿ ಪ್ರೊ. ಚೆಲುವಪ್ಪ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಎಂಜಿನಿಯರ್‌ಗಳಿಗೆ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಎಚ್ಚರಿಕೆ

'ಶಾಸಕರ ಒತ್ತಡಕ್ಕೆ ಮಣಿಯದಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೀರಾವರಿ ಯೋಜನೆಗಳನ್ನು ರೂಪಿಸುವಾಗ ಶಾಸಕರ ಒತ್ತಡಕ್ಕೆ ಮಣಿಯಬೇಡಿ. ಲೆಕ್ಕಾಚಾರ ಹೆಚ್ಚು ಕಡಿಮೆಯಾದರೆ, ಅಂತಹ ಯೋಜನೆಗೆ ಅಂದಾಜು ಸಿದ್ಧಪಡಿಸಿದವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ತಮ್ಮ ಇಲಾಖೆಯ ಎಂಜಿನಿಯರ್‌ಗಳಿಗೆ ಜಲಸಂಪನ್ಮೂಲ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದರು.

'ಕರ್ನಾಟಕ ನೀರಾವರಿ (ತಿದ್ದುಪಡಿ) ಕಾಯ್ದೆ- 2024'ರ ಕುರಿತು ಇಲಾಖೆಯ ಅಧಿಕಾರಿಗಳು ಮತ್ತು ಎಂಜಿನಿಯರ್‌ಗಳಿಗೆ ವಿಧಾನಸೌಧದಲ್ಲಿ ಸೋಮವಾರ ನಡೆದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಶಾಸಕರು ಹೇಳಿದರು ಎಂಬ ಕಾರಣಕ್ಕೆ ಯೋಜನೆಗಳನ್ನು ಬರೆದು ಕೊಡುತ್ತಿದ್ದೀರಿ. ₹5 ಕೋಟಿವರೆಗೂ ಯೋಜನೆಗಳಿಗೆ ನೀವೇ ಅನುಮತಿ ನೀಡಬಹುದು ಎಂಬ ಕಾರಣಕ್ಕೆ ₹4.99 ಕೋಟಿಯ ಅಂದಾಜು ಬರೆದು ಕೊಡುತ್ತಿದ್ದೀರಿ. ಈ ರೀತಿ ಮಾಡಲು ಹೇಳಿದವರು ಯಾರು' ಎಂದು ಪ್ರಶ್ನಿಸಿದರು.

'ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಅವಧಿಯಲ್ಲಿ ಎಲ್ಲವನ್ನೂ ಹಾಳು ಮಾಡಲಾಗಿದೆ. ನೀರಾವರಿ ಯೋಜನೆಗಳಿಗೆ ₹21 ಸಾವಿರ ಕೋಟಿ ಘೋಷಣೆ ಮಾಡಿ, ₹16 ಸಾವಿರ ಕೋಟಿ ನೀಡಲಾಗಿದೆ. ₹5 ಸಾವಿರ ಕೋಟಿಯನ್ನು ಕೇಂದ್ರ ಸರ್ಕಾರ ಹಿಡಿದಿಟ್ಟು-ಕೊಂಡಿದೆ. ಆದರೆ, ₹1 ಲಕ್ಷ ಕೋಟಿ ಮೊತ್ತದ ಕೆಲಸ ನಡೆಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಗುತ್ತಿಗೆದಾರರಿಗೆ ಬಿಲ್ ಪಾವತಿ ಹೇಗೆ ಸಾಧ್ಯ. ಹೊಸ ಯೋಜನೆ ಕೈಗೆತ್ತಿಕೊಳ್ಳುವುದು ಹೇಗೆ' ಎಂದೂ ಕೇಳಿದರು.

'ಬೇರೆಯವರನ್ನು ಮೆಚ್ಚಿಸಲು ಕೆಲಸ ಮಾಡಬೇಡಿ. ನಿಮ್ಮ ಆತ್ಮಸಾಕ್ಷಿ ಮೆಚ್ಚಿಸಲು ಕೆಲಸ ಮಾಡಿ. ಈಗಾಗಲೇ ಆರಂಭಿಸಿದ ಯೋಜನೆಗಳನ್ನು ಪೂರ್ಣಗೊಳಿಸ-ಬೇಕಿದೆ. ಕೆಲವೇ ದಿನಗಳಲ್ಲಿ ಮಂಡಳಿ ಸಭೆ ಇದ್ದು, ₹1 ಲಕ್ಷ ಕೋಟಿಯಷ್ಟು ಯೋಜನೆಗಳಿಗೆ ಮನವಿ ಇದೆ. ಇಲಾಖೆಯಲ್ಲಿ ಇರುವುದೇ ₹16 ಸಾವಿರ ಕೋಟಿ, ಅದರಲ್ಲೂ ಹಳೇ ಯೋಜನೆಯ ಕಾಮಗಾರಿಗಳಿವೆ. ಈ ಪರಿಸ್ಥಿತಿಯಲ್ಲಿ ನಾನು ಯಾರಿಗೆ ಸಹಾಯ ಮಾಡಬೇಕು? ಈ ವಿಚಾರದಲ್ಲಿ ನೀವು ಜವಾಬ್ದಾರಿ ತೆಗೆದುಕೊಳ್ಳಬೇಕು' ಎಂದರು.

'ಎತ್ತಿನಹೊಳೆ ಯೋಜನೆ ನೀರು ಕೋಲಾರಕ್ಕೆ ಇನ್ನೂ ಹೋಗಿಲ್ಲ. ಶಾಸಕರು ₹100 ಕೋಟಿ, ₹150 ಕೋಟಿ ಮೊತ್ತದ ಯೋಜನೆಗಳನ್ನು ತರುತ್ತಿದ್ದಾರೆ. ಎಲ್ಲ ಅಣೆಕಟ್ಟುಗಳ ಗೇಟ್‌ಗಳ ದುರಸ್ತಿಗೆ ನಿರ್ಧರಿಸಿದ್ದೇವೆ. ಇದಕ್ಕಾಗಿ ಸಮಿತಿ ರಚಿಸಿ, ವರದಿ ಪಡೆಯಲಾಗಿದೆ' ಎಂದು ಹೇಳಿದರು.

'ನನ್ನ ಅವಧಿಯಲ್ಲಿ ಈ ವಿಚಾರದಲ್ಲಿ ಸುಧಾರಣೆ ತರದಿದ್ದರೆ ಮುಂದೆ ಸುಧಾರಣೆ ಆಗುವುದಿಲ್ಲ ಎಂದೂ ಗೊತ್ತಿದೆ. ಹೀಗಾಗಿ, ವಿರೋಧ ಪಕ್ಷಗಳ ನಾಯಕರೂ ಸೇರಿದಂತೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅನುಮತಿ ನೀಡಲಾಗುತ್ತಿದೆ' ಎಂದರು.

'ಕಾಲುವೆ ನೀರು ಅಕ್ರಮ ಎತ್ತುವಿಕೆ ತಡೆಗೆ ಕಾರ್ಯಪಡೆ'

'ನೀರು ಬಳಕೆದಾರರ ಸಹಕಾರ ಸಂಘಕ್ಕೆ ಶಕ್ತಿ ತುಂಬಿ ಕಾಲುವೆಗಳಿಂದ ಅಕ್ರಮವಾಗಿ ನೀರು ಎತ್ತದಂತೆ ರೈತರಲ್ಲಿ ಅರಿವು ಮೂಡಿಸಬೇಕು. ಹಂತಹಂತವಾಗಿ ಕರ್ನಾಟಕ ನೀರಾವರಿ (ತಿದ್ದುಪಡಿ) ಕಾಯ್ದೆಯನ್ನು ಜಾರಿಗೊಳಿಸಬೇಕು' ಎಂದು ಎಂಜಿನಿಯರ್‌ಗಳಿಗೆ ಶಿವಕುಮಾರ್ ಸೂಚಿಸಿದರು.

'ನೀರು ಬಳಕೆದಾರರ ಒಕ್ಕೂಟ ಸ್ಥಾಪಿಸಬೇಕು. ರೈತರಿಗೆ ನೀಡುವ ಉಚಿತ ವಿದ್ಯುತ್‌ಗೆ ₹13 ಸಾವಿರ ಕೋಟಿ ವೆಚ್ಚ ಮಾಡಲಾಗುತ್ತಿದ್ದು, ಇದು ಸರಿಯಾದ ರೀತಿಯಲ್ಲಿ ಬಳಕೆಯಾಗಬೇಕು. ನೀರಾವರಿಗೆ ಸಂಪರ್ಕ ಪಡೆದು ವಾಣಿಜ್ಯ ಉದ್ದೇಶಕ್ಕೆ ಬಳಸಲಾಗುತ್ತಿದೆ. ಈ ಬಗ್ಗೆ ನಿಗಾವಹಿಸಬೇಕು. ಕಾಲುವೆಗಳಿಂದ ಅಕ್ರಮವಾಗಿ ನೀರು ಎತ್ತುವುದನ್ನು ತಡೆಯಲು ನೀರಾವರಿ ಮತ್ತು ಇಂಧನ ಇಲಾಖೆಯ ಅಧಿಕಾರಿಗಳ ಕಾರ್ಯಪಡೆ ರಚಿಸಲಾಗುವುದು' ಎಂದರು.

ಕೊನೆ ಹಂತದವರೆಗೂ ನೀರು ತಲುಪಬೇಕು: 'ಕೆಆರ್‌ಎಸ್ ನೀರು ಮಳವಳ್ಳಿಗೆ ಹರಿಯುತ್ತಿಲ್ಲ. ಬೆಳಗಾವಿ, ತುಂಗಭದ್ರಾ ನೀರಾವರಿ ವಿಭಾಗದಲ್ಲೂ ಇದೇ ರೀತಿಯ ಸಮಸ್ಯೆ ಇದೆ. 10 ಎಚ್.ಪಿ ಸಾಮರ್ಥ್ಯದ ಮೋಟಾರ್‌ಗಳನ್ನು 100 ಮೀ. ಅಂತರದಲ್ಲಿ ಹಾಕಿ ತಮ್ಮದೇ ಹೊಂಡ ಮಾಡಿಕೊಂಡು ಅಲ್ಲಿಂದ 20 ಕಿ.ಮೀ ದೂರದವರೆಗೂ ನೀರು ತೆಗೆದುಕೊಂಡು ಹೋಗಲಾಗುತ್ತಿದೆ' ಎಂದ ಅವರು, 'ಎತ್ತಿನಹೊಳೆ ಯೋಜನೆಗೆ ₹ 25 ಸಾವಿರ ಕೋಟಿ ವೆಚ್ಚ ಮಾಡುತ್ತಿದ್ದೇವೆ. ಇಷ್ಟು ಹಣ ಖರ್ಚು ಮಾಡಿ ಕೋಲಾರ, ಚಿಕ್ಕಬಳ್ಳಾಪುರಕ್ಕೆ ನೀರು ಒದಗಿಸದಿದ್ದರೆ ಹೇಗೆ? ನೀರಾವರಿ ಕಾಲುವೆಯ ಕೊನೆಯವರೆಗೂ ಸಮರ್ಪಕವಾಗಿ ನೀರು ತಲುಪಬೇಕು. ಇಲ್ಲದಿದ್ದರೆ, ಯೋಜನೆ ಸಾಕಾರಗೊಳ್ಳುವುದು ಹೇಗೆ' ಎಂದೂ ಪ್ರಶ್ನಿಸಿದರು.

ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳು ಮತ್ತು ಎಂಜಿನಿಯರ್‌ಗಳಿಗೆ ಕರ್ನಾಟಕ ನೀರಾವರಿ (ತಿದ್ದುಪಡಿ) ಕಾಯ್ದೆ ಕುರಿತು ನಡೆದ ಕಾರ್ಯಾಗಾರದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿದರು

ಶಿಲೆಗಳ ಸಂಗೀತ ಆಲಿಸಲು ಕ್ಯೂಆರ್ ಕೋಡ್

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಹಂಪಿಯ ವಿಜಯ ವಿಠಲ ದೇವಸ್ಥಾನದ ಸಂಗೀತ ಮಂಟಪದಲ್ಲಿನ ಶಿಲಾ ಕಂಬಗಳನ್ನು ಮೀಟಿದರೆ ಬರುವ ಸಂಗೀತ ತರಂಗವನ್ನು ಈಗ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿಯೂ ಆಲಿಸಬಹುದು.

ಕಂಬಗಳನ್ನು ನಿರಂತರ ಮೀಟಿದರೆ, ಅವು ಶಿಥಿಲಗೊಳ್ಳುವ ಸಾಧ್ಯತೆ ಇದೆ ಎಂಬ ಕಾರಣಕ್ಕೆ 2008ರಿಂದ ಸಂಗೀತ ಮಂಟಪದಲ್ಲಿ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ. ಅದಕ್ಕೆ ಈಗ ಕ್ಯೂಆರ್ ಕೋಡ್‌ನ ವ್ಯವಸ್ಥೆ ಮಾಡಲಾಗಿದೆ. ಅದನ್ನು ಸ್ಕ್ಯಾನ್ ಮಾಡಿದರೆ, ಕಂಬಗಳನ್ನು ಮೀಟಿದರೆ ಬರುವ ಸಂಗೀತವನ್ನು ಆಲಿಸಬಹುದು.

'ಸದ್ಯ ಹತ್ತು ಕಂಬಗಳ ತಳಭಾಗದಲ್ಲಿ ಪ್ರವಾಸಿಗರಿಗೆ ಎಟುಕುವ ಎತ್ತರದಲ್ಲಿ ಕ್ಯೂಆರ್ ಕೋಡ್ ಅಳವಡಿಸಲಾಗಿದೆ. ಪ್ರವಾಸಿಗರ ಅನುಭವ, ಬೇಡಿಕೆ ನೋಡಿ ಎಲ್ಲಾ 46 ಕಂಬಗಳ ತಳಭಾಗದಲ್ಲಿ ಕ್ಯೂಆರ್ ಕೋಡ್ ಅಳವಡಿಸುವ ಚಿಂತನೆ ಇದೆ' ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಹಂಪಿ ವೃತ್ತದ ಅಧೀಕ್ಷಕ ನಿಹಿಲ್ ದಾಸ್ ತಿಳಿಸಿದರು.

25 ಸೆಕೆಂಡ್ ಸಂಗೀತ: 'ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ, 25 ಸೆಕೆಂಡ್ ಸಂಗೀತ ಆಲಿಸಬಹುದು. ಹಂಪಿಯ ಕಲ್ಲಿನ ಕಂಬಗಳು ಸಂಗೀತ ಹೊಮ್ಮಿಸುತ್ತಿದ್ದುವು ಎಂಬ ಇತಿಹಾಸದ ಪಾಠಕ್ಕೆ ಇದೀಗ ಡಿಜಿಟಲ್ ಸ್ಪರ್ಶ ನೀಡಿದಂತಾಗಿದೆ' ಎಂದು ಇಲಾಖೆಯ ಸಂರಕ್ಷಣಾ ಸಹಾಯಕ ಅನಿರುದ್ಧ ದೇಸಾಯಿ ತಿಳಿಸಿದರು.

'ಹಂಪಿಗೆ ಅತಿ ಹೆಚ್ಚು ಪ್ರವಾಸಿಗರು ಬರುತ್ತಿದ್ದು, ಅವರಿಗೆ ಈ ಹೊಸ ಸೌಲಭ್ಯದಿಂದ ಖುಷಿಯಾಗಲಿದೆ, ಅವರಿಗೆ ವಿಶಿಷ್ಟ ಸಂಗೀತದ ಪರಿಚಯವಾಗುತ್ತಿದೆ' ಎಂದು ಕರ್ನಾಟಕ ರಾಜ್ಯ ಪ್ರವಾಸಿ ಮಾರ್ಗದರ್ಶಿಗಳ ಸಂಘದ ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷಿ ವಿ.ಹಂಪಿ ತಿಳಿಸಿದರು.

ಹಂಪಿಯ ವಿಜಯ ವಿಠ್ಠಲ ದೇವಸ್ಥಾನದ ಸಂಗೀತ ಮಂಟಪದಲ್ಲಿ ಅಳವಡಿಸಿರುವ ಕ್ಯೂಆರ್ ಕೋಡ್‌ಅನ್ನು ಪ್ರವಾಸಿಗರು ಸ್ಕ್ಯಾನ್ ಮಾಡಿದರು ಪ್ರಜಾವಾಣಿ ಚಿತ್ರ

ತಂತಿಯ ರೂಪದಲ್ಲಿ ಕಲ್ಲಿನ ಸರಳು

ಬೃಹತ್ ಕಲ್ಲಿನಲ್ಲಿ ವಿವಿಧ ಆಕಾರದ ತಂತಿ ಮಾದರಿಯಲ್ಲಿ ಸರಳು ಕೊರೆದು ಈ ಸಂಗೀತ ಕಂಬಗಳನ್ನು ರಚಿಸಲಾಗಿದೆ. ವಿಜಯನಗರ ಕಾಲದಲ್ಲಿ ಈ ಮಂಟಪದಲ್ಲಿ ಇಂತಹ 56 ಕಂಬಗಳಿದ್ದವು.

1565ರಲ್ಲಿ ತಾಳಿಕೋಟೆ ಕದನದ ಬಳಿಕ ವಿಜಯನಗರ ಸುಲ್ತಾನರ ದಾಳಿಗೆ ಒಳಗಾದ ಈ ಮಂಟಪದ ಚಾವಣಿ, 10 ಸಂಗೀತ ಕಂಬಗಳು ಧ್ವಂಸವಾದವು. ಕಂಬಗಳನ್ನು ಸಂರಕ್ಷಿಸುವ ಕೆಲಸ ಎಎಸ್‌ಐ ವತಿಯಿಂದ ನಡೆದಿದೆ. ಫೈಬರ್ ಚಾವಣಿ ಅಳವಡಿಸುವ ಚಿಂತನೆಯೂ ಇದೆ. ಸದ್ಯ ಡಿಜಿಟಲ್ ಮಾದರಿಯಲ್ಲಿ ಸಂಗೀತ ಕೇಳುವ ವ್ಯವಸ್ಥೆ ಮಾಡಲಾಗಿದೆ.

ಡಿಸೆಂಬರ್ 12, 13ರಂದು ಹನುಮಮಾಲಾ ವಿಸರ್ಜನೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಅಂಜನಾದ್ರಿ ಬೆಟ್ಟದಲ್ಲಿ ಡಿ. 12 ಮತ್ತು 13ರಂದು ಹನುಮಮಾಲಾ ವಿಸರ್ಜನೆ ಕಾರ್ಯಕ್ರಮ ನಡೆಯಲಿದ್ದು, ಸುಮಾರು ಎರಡು ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಬರುವ ಭಕ್ತರಿಗೆ ವಸತಿ, ಆಹಾರ ಸೇರಿದಂತೆ ಇನ್ನಿತರ ಮೂಲಸೌಕರ್ಯಗಳನ್ನು ಒದಗಿಸಲು ಜಿಲ್ಲಾಡಳಿತ 14 ಸಮಿತಿಗಳನ್ನು ರಚನೆ ಮಾಡಿದೆ. ಉಚಿತವಾಗಿ ಪ್ರಸಾದದ ವ್ಯವಸ್ಥೆ ಮಾಡಲಾಗುತ್ತದೆ.

'ಭಕ್ತರಿಗೆ ಸೂಕ್ತ ಭದ್ರತಾ ವ್ಯವಸ್ಥೆ, ಆಹಾರ ಹಾಗೂ ವಸತಿ ಕಲ್ಪಿಸಲಾಗುತ್ತದೆ. ಆಹಾರದ ಗುಣಮಟ್ಟ ಪರಿಶೀಲನೆ ನಂತರವೇ ಭಕ್ತರಿಗೆ ಪ್ರಸಾದ ನೀಡಲಾಗುತ್ತದೆ' ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ತಿಳಿಸಿದ್ದಾರೆ.

ಪ್ರತಿ ವರ್ಷ ಮಾಲೆ ವಿಸರ್ಜನೆ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಲಕ್ಷಾಂತರ ಭಕ್ತರು ಇಲ್ಲಿಗೆ ಬರುತ್ತಾರೆ.

ಅಡಿಗಾಸ್: ಪ್ರವಾಸಕ್ಕೆ ಶೇ 9 ರಿಯಾಯಿತಿ

ಹುಬ್ಬಳ್ಳಿ: ಪ್ರವಾಸೋದ್ಯಮ ಕ್ಷೇತ್ರದಲ್ಲಿ ಮೂರು ದಶಕಗಳಿಂದ ತನ್ನದೇ ಆದ ಛಾಪು ಮೂಡಿಸಿರುವ ಅಡಿಗಾಸ್ ಯಾತ್ರಾ ಸಂಸ್ಥೆಯು ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ತನ್ನ ಎಲ್ಲಾ ಪ್ರವಾಸಗಳಿಗೆ ಶೇ 9ರಷ್ಟು ರಿಯಾಯಿತಿ ಘೋಷಿಸಿದೆ.

'ರಿಯಾಯಿತಿ ಕೊಡುಗೆಯ ಅವಧಿ ಸೀಮಿತವಾಗಿದ್ದು, ಸಂಸ್ಥೆಯಿಂದ ಯಾವುದೇ ಪ್ರವಾಸಕ್ಕೆ ಮುಂಗಡವಾಗಿ ಕಾಯ್ದಿರಿಸಿ-ದವರಿಗೆ ಇದು ಅನ್ವಯವಾಗಲಿದೆ. ದೇಶಿ ಮತ್ತು ವಿದೇಶಿ ಪ್ರವಾಸಿ ಯೋಜನೆಗಳಿದ್ದು, ಆಸಕ್ತ ಪ್ರವಾಸಿಗರು ಇದರ ಪ್ರಯೋಜನ ಪಡೆಯಬಹುದು. ಆದಾಯಕ್ಕೆ ಅನುಗುಣವಾಗಿಯೂ ಪ್ರವಾಸ ಯೋಜನೆಯನ್ನು ರೂಪಿಸಿಕೊಳ್ಳಬಹುದು' ಎಂದು ಅಡಿಗಾಸ್ ಯಾತ್ರಾ ಸಂಸ್ಥೆಯ ಮಾಲೀಕ ಕೆ.ನಾಗರಾಜ ಅಡಿಗ ತಿಳಿಸಿದ್ದಾರೆ.

ದೇಶಿ ಪ್ರವಾಸಿ ಯೋಜನೆಯಡಿ ದೇಶದ ವಿವಿಧ ಪ್ರವಾಸಿ ತಾಣಗಳಿಗೆ ಪ್ರವಾಸ ಕೈಗೊಳ್ಳಬಹುದು. ವಿದೇಶಿ ಪ್ರವಾಸಿ ಯೋಜನೆಯಡಿ ಯುರೋಪ್, ಇಂಗ್ಲೆಂಡ್, ಆಸ್ಟ್ರೇಲಿಯಾ, ದುಬೈ, ಸಿಂಗಪುರ, ಮಲೇಷಿಯಾ, ಥಾಯ್ಲೆಂಡ್, ಶ್ರೀಲಂಕಾ, ನೇಪಾಳ ಅಲ್ಲದೇ ಇತರ ದೇಶಗಳಿಗೆ ಭೇಟಿ ನೀಡಬಹುದು.

ಪ್ರವಾಸದ ಸಂದರ್ಭದಲ್ಲಿ ಪ್ರವಾಸಿಗಳಿಗೆ ಪಂಚತಾರಾ ಹೋಟೆಲ್ ಮತ್ತು ರೆಸಾರ್ಟ್‌ಗಳಲ್ಲಿ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ. ಐಷಾರಾಮಿ ವಾಹನಗಳಲ್ಲಿ ಪ್ರಯಾಣಿಸಬಹುದು. ಮುಂಚಿತವಾಗಿ ಕಾಯ್ದಿರಿಸಿದ ಅತ್ಯುತ್ತಮ ಹೋಟೆಲ್‌ಗಳಲ್ಲಿ ಊಟೋಪಹಾರ, ಗೈಡ್‌ಗಳ ಸೌಲಭ್ಯ, ಆಯಾ ದಿನಗಳ ಕಾರ್ಯಕ್ರಮಗಳ ಪಟ್ಟಿ ಎಲ್ಲವೂ ಒಳಗೊಂಡಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080-2661 6678 ಅಥವಾ 7022259008.
ವೆಬ್‌ಸೈಟ್ ವಿಳಾಸ: www.adigasyatra.com

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಇಲಾಖೆ ವಿಭಾಗ ಕಲಬುರಗಿ ದೂ.: 08472-220196, midnglb@rediffmail.com / midnglb1@gmail.com

ಇಫಿಟಿ. ನಂ: ಕಾನಿಅ/ಸನೀಅಅಇ/ಕ.ಬಿ.ಜೆ/ಟೆಂಡರ್-4/ಕೆ.ಡಬ್ಲ್ಯೂ-2, 3 & 4/2024-25/2761 ದಿ:22-11-2024

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ-2, 3 & 4) ::

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2024-25ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಹಾಗೂ ಕೆರೆಗಳ ಅಧುನೀಕರಣ ಯೋಜನೆ ಅಡಿ ಕಾಮಗಾರಿಗಳಿಗಾಗಿ ಇ-ಟೆಂಡರ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: ಗರಿಷ್ಠ ರೂ. 169,44,319.26 ಕನಿಷ್ಠ ರೂ. 41,48,433.03, 3) ಗುತ್ತಿಗೆದಾರರ ಅರ್ಹತೆ ವಿವರ: 3ನೇ ದರ್ಜೆ ಹಾಗೂ ಮೇಲ್ಪಟ್ಟು, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: ಅರ್ಜಿಯ ಬೆಲೆ ಕೆ.ಪಿ.ಪಿ.ಪಿ.ನಂತೆ, ಇ.ಎಂ.ಡಿ. ಗರಿಷ್ಠ ರೂ. 2,54,200.00 ಕನಿಷ್ಠ ರೂ. 41,500.00, 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: 02-12-2024 ಬೆಳಿಗ್ಗೆ 11.00 ಗಂಟೆಯ ವರೆಗೆ, 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: 03-12-2024 ಸಾಯಂಕಾಲ 17.30 ಗಂಟೆಯ ವರೆಗೆ, 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04-12-2024 ಸಾಯಂಕಾಲ 17.30 ಗಂಟೆಯ ವರೆಗೆ, 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: 05-12-2024 ಸಾಯಂಕಾಲ 17.30 ಗಂಟೆಯ ವರೆಗೆ, 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ: (https://kppp.karnataka.gov.in).

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/653/ಕೆ.ಎಸ್.ಎಂ.ಸಿ.&ಎ/2024-25

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು - 560 064. ವೆಬ್‌ಸೈಟ್: www.rwf.indianrailways.gov.in

ಇ-ಟೆಂಡರ್ ಸೂಚನೆ

ಸಂ: ಆರ್‌ಡಬ್ಲ್ಯೂಎಫ್/ಎಸ್/13/2024-25 ದಿ. 18.11.2024

ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ಈ ಕೆಳಗಿನವುಗಳ ಪೂರೈಕೆಗಾಗಿ ತಯಾರಕರು / ಅಧಿಕೃತ ವಿತರಕರಿಂದ ಗ್ಲೋಬಲ್ ಓಪನ್ ಟೆಂಡರ್‌ಗಳನ್ನು ಆನ್‌ಲೈನ್ ವೆಬ್‌ಸೈಟ್ http://www.ireps.gov.in ಮೂಲಕ ಆಹ್ವಾನಿಸಿದ್ದಾರೆ.
ಟೆಂಡರ್ ನಂ: 33245042, ಐಟಂ ವಿವರ: [illegible] ಮಾದರಿಯ ಹೈಡ್ರಾಲಿಕ್ ಸಿಲಿಂಡರ್. ಪರಿಮಾಣ: 03 ನಂ. ಟೆಂಡರು ಕೊನೆಗೊಳ್ಳುವ ದಿನಾಂಕ & ಸಮಯ: 02.12.2024, ಬೆಳಿಗ್ಗೆ 14.00 ಗಂಟೆಗೆ. ಟೆಂಡರ್ ಕುರಿತ ವಿವರಗಳನ್ನು ನಮ್ಮ ವೆಬ್‌ಸೈಟ್ ಆದ www.rwf.indianrailways.gov.in ಅಥವಾ http://www.ireps.gov.in ರಲ್ಲಿ ನೋಡಬಹುದು. ಟೆಂಡರ್ ದಸ್ತಾವೇಜುಗಳು ಮತ್ತು ಇತರ ತಿದ್ದುಪಡಿಗಳಿದ್ದಲ್ಲಿ, ಅವುಗಳು ಪೋರ್ಟಲ್‌ನಲ್ಲಿ ಮಾತ್ರ ಲಭ್ಯವಿರುವುದು.

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯುತ್ತ ಸಂಸ್ಥೆ)
ನಿರ್ದೇಶಕರು ಹಾಗೂ ಡೀನ್ ರವರ ಕಛೇರಿ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು-560002.
ದೂರವಾಣಿ : 080-26700810, ಟೆಲಿ ಫ್ಯಾಕ್ಸ್: 080-26704342 ಇ-ಮೇಲ್: director_bmcri@yahoo.co.in

ಸಂಖ್ಯೆ: ಬೆಂವೈವಿಸಂಸಂ/ಟೆಂಡರ್/ಸ್ವಚ್ಛ/01/2023-24 ದಿನಾಂಕ: 22-11-2024

ಮರು ಇ-ಟೆಂಡರ್ ಅಧಿಸೂಚನೆ

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಗೆ ಹಾಗೂ ಇದಕ್ಕೆ ಹೊಂದಿಕೊಂಡ ವಿದ್ಯಾರ್ಥಿಗಳ ವಸತಿ ನಿಲಯ, ವಿಕ್ಟೋರಿಯಾ ಆಸ್ಪತ್ರೆ, ವಾಣಿ ವಿಲಾಸ ಆಸ್ಪತ್ರೆ ಮತ್ತು ಮಿಂಟೋ ಕಣ್ಣಾಸ್ಪತ್ರೆಗೆ ಅಗತ್ಯವಿರುವ ಸ್ವಚ್ಛತಾ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯುವ ಸಲುವಾಗಿ ಮರು ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂ, ಇ.ಎಂ.ಡಿ. ವಿವರ ಮತ್ತು ಷರತ್ತು ಮುಂತಾದ ವಿವರಗಳನ್ನು https://www.kppp.karnataka.gov.in ಈ ವೆಬ್‌ಸೈಟ್‌ನಲ್ಲಿ ವೀಕ್ಷಿಸಿ, ಟೆಂಡರ್‌ಗಳನ್ನು ಸಲ್ಲಿಸಬಹುದು.
1) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ: 25-11-2024. 2) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: 03-12-2024 ರಂದು ಪೂರ್ವಾಹ್ನ 11.30 ಗಂಟೆಗೆ. 3) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 24-12-2024 ರಂದು ಅಪರಾಹ್ನ 4.30 ಗಂಟೆಯವರೆಗೆ. 4) ಟೆಂಡರ್ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 26-12-2024 ರಂದು ಪೂರ್ವಾಹ್ನ 11.30 ಗಂಟೆಗೆ.
ಹೆಚ್ಚಿನ ವಿವರಗಳಿಗಾಗಿ ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು.

ಸಹಿ/- ನಿರ್ದೇಶಕರು ಹಾಗೂ ಡೀನ್,
ಬೆಂವೈವಿಸಂಸಂ, ಬೆಂಗಳೂರು.

ವಾಸಾಸಂಇ/ವಾ.ಪ್ರ/3420/ಅಡ್ವರ್ಟೋರ್/2024-25

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
KUIDFC
ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಕ್ರಾಸ್, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ 2ನೇ ಹಂತ, ಬಿ.ಎಂ.ಟಿ.ಸಿ ಡಿಪೋ ಹತ್ತಿರ, ಬೆಂಗಳೂರು-560038.
ಫೋ.ನಂ.: 080-25196100/25196124 । ಇ-ಮೇಲ್: info@kuidfc.com

ಸಂಖ್ಯೆ: ಕೆಯುಐಡಿಎಫ್‌ಸಿ/ಯುಡಬ್ಲ್ಯೂಎಮ್/37/ಟೆಂ.ಪ್ರ/2024-25 ದಿನಾಂಕ:22.11.2024

ಕೊಟೇಷನ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕೆಯುಐಡಿಎಫ್‌ಸಿ ಸಂಸ್ಥೆಯು ಜಲಶುದ್ಧಿ ಅಭಿಯಾನ (ಬಳಸಿದ ನೀರು ನಿರ್ವಹಣೆ) ಯೋಜನೆಯಡಿ ಎನ್.ಇ.ಬಿ.ಆರ್ (NEBR) ತಂತ್ರಜ್ಞಾನದ ಅಂಶಗಳಿಗೆ ಕೊಟೇಷನ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು ಆಸಕ್ತ ಬಿಡ್‌ದಾರರು ತಮ್ಮ ದರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in)ನಲ್ಲಿ ಸಲ್ಲಿಸಲು ಕೋರಿದೆ.
ಕೊಟೇಷನ್ ಪೂರ್ವಭಾವಿ ಸಭೆಯ ದಿನಾಂಕ & ಸಮಯ: 27.11.2024ರ ಪೂರ್ವಾಹ್ನ 11:30 ಗಂಟೆಗೆ. ಕೊಟೇಷನ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ: 30.11.2024ರ ಸಂಜೆ 5:30 ಗಂಟೆಯವರೆಗೆ. ಕೊಟೇಷನ್ ತೆರೆಯುವ ದಿನಾಂಕ & ಸಮಯ: 02.12.2024ರ ಬೆಳಿಗ್ಗೆ 10:30 ಗಂಟೆಗೆ.
ಆಸಕ್ತ ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ, ಮುಂದಿನ ಯಾವುದೇ ಮಾಹಿತಿಗಳನ್ನು ಕಪಿಪಿ ಪೋರ್ಟಲ್ ಹಾಗೂ KUIDFC Official website ಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಯೋಜನಾ ಮೇಲ್ವಿಚಾರಣಾ ಘಟಕ, ಯುಡಬ್ಲ್ಯೂಎಮ್-ಕೆಯುಐಡಿಎಫ್‌ಸಿ, ಬೆಳಗಾವಿ ವಿಭಾಗ, ಬೆಂಗಳೂರು

ವಾಸಾಸಂಇ/ವಾಪ್ರ/ಜೆಎ/3412/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಚೇರಿ, ರಸ್ತೆ ಮೂಲಭೂತ ಸೌಕರ್ಯ-ಪಶ್ಚಿಮ ವಿಭಾಗ, ಪಾಲಿಕೆ ಸೌಧ, 14ನೇ ಅಡ್ಡರಸ್ತೆ, 1ನೇ ಹಂತ, ಚಂದ್ರಾ ಬಡಾವಣೆ, ಬೆಂಗಳೂರು - 560 039.

ಸಂಖ್ಯೆ:ಕಾಪಾಅ/ರಮೂ-ಪಶ್ಚಿಮ/ಟೆಂಡರ್/03/2024-25 ದಿನಾಂಕ:25.11.2024

ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ)
(ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಮೂಸೌ-ಪಶ್ಚಿಮ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು
ಬಿನ್ನಿ ಮಿಲ್ ಕೆರೆ ಏರಿ ರಸ್ತೆಯಿಂದ ವಿಜಯನಗರ ಪೈಪ್‌ಲೈನ್ ರಸ್ತೆಯವರೆಗೆ ಪಾದರಾಯನಪುರ ಮುಖ್ಯರಸ್ತೆಯನ್ನು ಅಗಲೀಕರಣ ಮಾಡುವುದು. **ಟೆಂಡರಿಗಿಟ್ಟ ಮೊತ್ತ: ರೂ.3158.00 ಲಕ್ಷಗಳು, ಇಎಂಡಿ: ರೂ.32.00 ಲಕ್ಷಗಳು (ರೂ.1 ಲಕ್ಷ ಕೆಪಿಪಿ ಪೋರ್ಟಲ್ ಮೂಲಕ, ಉಳಿದ ರೂ.31.00 ಲಕ್ಷಗಳನ್ನು ಬ್ಯಾಂಕ್ ಗ್ಯಾರಂಟಿ / ಇ-ಬ್ಯಾಂಕ್ ಗ್ಯಾರಂಟಿ ಮೂಲಕ ಭರಿಸುವುದು)**

<u>ಟೆಂಡರ್ ವೇಳಾಪಟ್ಟಿ:</u> (1) ಟೆಂಡರ್ ದಾಖಲೆಗಳು ಮತ್ತು ಇತರೆ ಮಾಹಿತಿಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ 28.11.2024ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 04.01.2025ರ ಸಂಜೆ 4:00 ಗಂಟೆಗೆ ಅಥವಾ ಮುಂಚಿತವಾಗಿ. (3) ಟೆಂಡರ್ ದಾಖಲೆಗಳು ದಿನಾಂಕ 28.11.2024ರಿಂದ ಲಭ್ಯವಿರುತ್ತದೆ. (4) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 16.12.2024ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (5) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 04.01.2025ರ ಸಂಜೆ 4:00 ಗಂಟೆಗೆ. (6) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 05.01.2025ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (7) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ಪಡೆದ ನಂತರ ತಿಳಿಸಲಾಗುವುದು)

ಸಹಿ/- ಕಾರ್ಯಪಾಲಕ ಅಭಿಯಂತರರು, ರಮೂಸೌ-ಪಶ್ಚಿಮ ವಿಭಾಗ

ಕರ್ನಾಟಕ ಸರ್ಕಾರ
ಆಯುಕ್ತಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು- 560023.

ಸಂಖ್ಯೆ : ಡಿಹೆಚ್‌ಎಸ್/ರಿಟ್/13/2024-25 ದಿನಾಂಕ : 25.11.2024

ಪ್ರಕಟಣೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾನೂನು ಸಲಹೆಗಾರರು/ಸಮಾಲೋಚಕರ ಸೇವೆಯನ್ನು ಪಡೆಯಲು ಅರ್ಹ ವಕೀಲರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
1) ಕಾನೂನು ಸಲಹೆಗಾರರು (Legal Advisor), ಹುದ್ದೆ-1, ಕೆ.ಎ.ಟಿ/ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ ಕನಿಷ್ಠ 15 ರಿಂದ 20 ವರ್ಷಗಳ ಅನುಭವ ಹೊಂದಿರಬೇಕು.
2) ಕಾನೂನು ಸಮಾಲೋಚಕರು (Legal Consultant), ಹುದ್ದೆ-2, ಕೆ.ಎ.ಟಿ/ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ ಕನಿಷ್ಠ 3 ರಿಂದ 10 ವರ್ಷಗಳ ಅನುಭವ ಹೊಂದಿರಬೇಕು.
ವಿದ್ಯಾರ್ಹತೆ, ಅನುಭವ ಹಾಗೂ ಇತರೆ ಮಾಹಿತಿಗಾಗಿ ಇಲಾಖೆಯ ಈ ಕೆಳಕಂಡ ಜಾಲತಾಣವನ್ನು ವೀಕ್ಷಿಸುವುದು. https://hfwcom.karnataka.gov.in

ಸಹಿ/-
ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

DIPR/CP/3416/Zen/2024-25

ನೋಂದಣಿ ಮತ್ತು ಮುದ್ರಾಂಕ ಇಲಾಖೆ
ಸಹಾಯಕ ನೋಂದಣಿ ಮಹಾಪರಿವೀಕ್ಷಕರು (ಆಡಳಿತ), ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು-560 009. ದೂರವಾಣಿ (080) 22220374

ಸಂಖ್ಯೆ: ಸಿಬ್ಬಂದಿ-2-124/2024-25 ದಿನಾಂಕ: 21-11-2024

ತಿದ್ದುಪಡಿ ಟೆಂಡರ್ ಜಾಹೀರಾತು

ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುವಂತೆ ಬೆರಳಚ್ಚುಗಾರರು ಮತ್ತು ಡಿ ಗ್ರೂಪ್ ನೌಕರರ ಹಾಗೂ ವಾಹನ ಚಾಲಕರ ಸೇವೆಯನ್ನು ಒದಗಿಸಲು ಆಸಕ್ತಿ ಹೊಂದಿರುವ ಏಜೆನ್ಸಿಗಳು ಟೆಂಡರುಗಳನ್ನು ಸಲ್ಲಿಸಲು ಈಗಾಗಲೇ ದಿನಾಂಕ: 18-10-2024 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಕಾರಣಾಂತರಗಳಿಂದ ಮೇಲ್ಕಂಡ ದಿನದಂದು ಪ್ರಕಟಿಸಿದ ಪ್ರಕಟಣೆಯನ್ನು ಮಾರ್ಪಡಿಸಿದ್ದು, ಮಾರ್ಪಡಿಸಿರುವ ಟೆಂಡರ್ ಸಂಖ್ಯೆ: ಸಿಬ್ಬಂದಿ-2-124/2024-25/37250, ದಿನಾಂಕ: 07-11-2024 ರಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ಈ ಮೂಲಕ ಆಹ್ವಾನ ನೀಡಲಾಗಿದೆ. ಟೆಂಡರ್ ಫಾರಂಗಳು ಮತ್ತು ಷರತ್ತುಗಳನ್ನು ಇ ಟೆಂಡರ್ ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಬಹುದು. ಪೂರ್ಣಗೊಳಿಸಿದ ಟೆಂಡರ್ ಫಾರಂಗಳನ್ನು ದಿನಾಂಕ: 07-12-2024 ರ ಸಂಜೆ 5.30 ಘಂಟೆವರೆವಿಗೂ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕೆಳಕಂಡ ಅಧಿಕಾರಿಯನ್ನು ಸಂಪರ್ಕಿಸಿ.

ಸಹಾಯಕ ನೋಂದಣಿ ಮಹಾಪರಿವೀಕ್ಷಕರು (ಆಡಳಿತ) ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು-560 009. ದೂರವಾಣಿ (080) 22220374

ಸಹಿ/-
ಸಹಾಯಕ ನೋಂದಣಿ ಮಹಾಪರಿವೀಕ್ಷಕರು (ಆಡಳಿತ), ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/3415/ಆಕಾರ್/2024-25

ರೇಷ್ಮೆ ಇಲಾಖೆ
ರೇಷ್ಮೆ ಉಪ ನಿರ್ದೇಶಕರ ಕಛೇರಿ,
ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ನಂ. 14, ರೇಷ್ಮೆ ಭವನ, ಓಕಳೀಪುರಂ, ಬೆಂಗಳೂರು - 560 021. ಮೊಬೈಲ್ : 94481 06715,
ಇ-ಮೇಲ್ : ddszpurabanbangalore@gmail.com

ಸಂಖ್ಯೆ : ರೇ.ಉ.ನಿ./ಬೆಂ.ನಗರ.ಜಿ.ಪಂ./ಟಿ-1/ಡಿ.ಐ.ಎಸ್./01/2024-25
ದಿನಾಂಕ : 25-11-2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಮೂಲಕ ಸಾರ್ವಜನಿಕರ ಮಾಹಿತಿಗಾಗಿ ತಿಳಿಯಪಡಿಸುವುದೇನೆಂದರೆ, 2024-25 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆಯಡಿ ಬೆಂಗಳೂರು ನಗರ ಜಿಲ್ಲೆಯ ರೇಷ್ಮೆ ಇಲಾಖೆಯ ವ್ಯಾಪ್ತಿಯಲ್ಲಿ ರೇಷ್ಮೆ ಬೆಳೆಗಾರರಿಗೆ ಉಚಿತವಾಗಿ ವಿತರಿಸಲು ಸೋಂಕು ನಿವಾರಕಗಳು, ಹಾಸಿಗೆ ಸೋಂಕು ನಿವಾರಕಗಳು, ಸಸ್ಯ ಸಂವರ್ಧನಗಳು, ಊಜಿ ನಿಯಂತ್ರಕಗಳು, ಸುಣ್ಣ ಮತ್ತು ಗ್ರೇಡ್ ಒನ್ ಬ್ಲೀಚಿಂಗ್ ಪೌಡರ್‌ಗಳನ್ನು ಜಿಲ್ಲೆಯ ತಾಂತ್ರಿಕ ಸೇವಾ ಕೇಂದ್ರಗಳಿಗೆ ಸರಬರಾಜು ಮಾಡಲು ಆಸಕ್ತ ಸರಬರಾಜುದಾರರಿಂದ https://kppp.karnataka.gov.in ಪೋರ್ಟಲ್ ಮೂಲಕ ಟೆಂಡರ್‌ನಲ್ಲಿ (ದ್ವಿ-ಲಕೋಟೆ) ಭಾಗವಹಿಸಬಹುದಾಗಿದೆ.

1) ಬಿಡ್‌ಗಳನ್ನು ಸಲ್ಲಿಸಲು ದಿನಾಂಕ : 09-12-2024 ರ ಸಂಜೆ 5.00 ಗಂಟೆ ಕೊನೆಯ ದಿನವಾಗಿದ್ದು, 2) ತಾಂತ್ರಿಕ ಬಿಡ್‌ಗಳನ್ನು ದಿನಾಂಕ : 11-12-2024 ರ ಬೆಳಿಗ್ಗೆ 11.30 ಗಂಟೆಯ ನಂತರ ತೆರೆಯಲಾಗುವುದು, 3) ಯಶಸ್ವಿ ತಾಂತ್ರಿಕ ಬಿಡ್‌ಗಳನ್ನು ದಿನಾಂಕ : 13-12-2024 ರ ಬೆಳಿಗ್ಗೆ 11.30 ಗಂಟೆಯ ನಂತರ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ಪೋರ್ಟಲ್‌ನಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅಥವಾ ಮೊಬೈಲ್ ಸಂಖ್ಯೆ : 94481 06715 ಗೆ ಸಂಪರ್ಕಿಸಬಹುದು.

ಸಹಿ/- ರೇಷ್ಮೆ ಉಪ ನಿರ್ದೇಶಕರು,
ಬೆಂಗಳೂರು ನಗರ ಜಿಲ್ಲಾ ಪಂಚಾಯತ್,
ಬೆಂಗಳೂರು.

ವಾಸಾಇ/ಬೆಂ.ನ./3411/ಮಣಿಪಾಲ್/2024-25

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಸ್ತಿ ಅಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ

ಸಂಖ್ಯೆ.ಆಅ/ಟಿ.ಎನ್/9/2024-25 ದಿನಾಂಕ : 20-11-2024

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂ-1 ಮತ್ತು ಕೆಡಬ್ಲ್ಯೂ-2ರಂತೆ ನೋಂದಣಿ ಪಡೆದ ಕೆಪಿಡಬ್ಲ್ಯೂಡಿ/ಪಿಡಬ್ಲ್ಯೂಡಿ/ಗುತ್ತಿಗೆದಾರರುಗಳಿಂದ ಕ್ರಮ ಸಂಖ್ಯೆ. 1 ರಿಂದ 7ರವರೆಗಿನ ಕಾಮಗಾರಿಗಳಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್ https://www.kppp.karnataka.gov.in. ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯೂಮೆಂಟ್‌ನ ಶುಲ್ಕ ಕೆಪಿಪಿ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಕೆಪಿಪಿ ಮಾದರಿಯಂತೆ ಕೆಪಿಪಿ ಪೋರ್ಟಲ್‌ನಲ್ಲಿ ಸಲ್ಲಿಸುವುದು.
ಮೇಲಿನ ಕಾಮಗಾರಿಯು ದ್ವಿ-ಲಕೋಟೆ ಪದ್ಧತಿಯಲ್ಲಿರುತ್ತದೆ. ದ್ವಿ-ಲಕೋಟೆ ಪದ್ಧತಿಯ ಷರತ್ತುಗಳ ವಿವರಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ರಂತೆ ಅಪ್‌ಲೋಡ್ ಮಾಡಲಾಗಿದೆ.
ಖಾಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು www.kppp.karnataka.gov.in ಇಂದ ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆ ದಿನಾಂಕ: 30-11-2024ರಂದು ಸಾಯಂಕಾಲ 4.00 ಗಂಟೆಯವರೆಗೆ ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು ದಿನಾಂಕ : 03-12-2024ರಂದು ಬೆಳಗ್ಗೆ 10.30ಕ್ಕೆ ತೆರೆಯಲಾಗುವುದು ಮತ್ತು ಹಣಕಾಸಿನ ಬಿಡ್ಡನ್ನು ದಿನಾಂಕ: 05-12-2024ರಂದು ಬೆಳಗ್ಗೆ 10.30ಕ್ಕೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ: 080-23332765ರಲ್ಲಿ ಸಂಪರ್ಕಿಸುವುದು. ಕೆಪಿಪಿ ನ ಸಹಾಯವಾಣಿ: upport@eprochelpdesk.com ಅಥವಾ 8046010000 ಮತ್ತು 8068948777.

ಸಹಿ/-
ಆಸ್ತಿ ಅಧಿಕಾರಿಗಳು

DIPR/CP/RO3418/AAPL/2024-25

ನಗರಸಭಾ ಕಾರ್ಯಾಲಯ
ದೊಡ್ಡಬಳ್ಳಾಪುರ - 561 203.
E-mail : itstaff_ulb_doddaballapur@yahoo.com
Website : www.doddaballapurcity.gov.in
स्वच्छ भारत एक कदम स्वच्छता की ओर

ಸಂಖ್ಯೆ : ನ.ಸ.ದೊ./ಆ.ಶಾ./ಸಿ.ಆರ್./22-38, 45-49/2024-25
ದಿನಾಂಕ : 22-11-2024

ಮರು ಇ-ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಅಧಿಕೃತ ಮಾನ್ಯತೆ ಪಡೆದ ಅರ್ಹ ಗುತ್ತಿಗೆದಾರರು / ಏಜೆನ್ಸಿಯವರಿಂದ ಸಾಮಾಗ್ರಿಗಳ ಸರಬರಾಜು & ಸೇವೆಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 1) Goods Indent No. : a) DMA/2023-24/IND0032/Call-2, b) DMA/2024-25/IND1923, c) DMA/2024-25/IND1929/Call-3, d) DMA/2024-25/IND1930/Call-3, e) DMA/2024-25/IND1933/Call-2, f) DMA/2024-25/IND1934/Call-2 g) DMA/2024-25/IND2135/Call-2, h) DMA/2024-25/IND2873/Call-2, i) DMA/2024-25/IND3920, j) DMA/2024-25/IND3921, k) DMA/2024-25/IND 3921, 2) Service Indent No. : a) DMA/2023-24/SE3494/Call-2, b) DMA/2023-24/SE3493, c) DMA/2023-24/SE3798/Call-2 and d) DMA/2023-24/SE4124, ರ ಮೂಲಕ ಇ-ಟೆಂಡರ್‌ಗಳನ್ನು ಕೆ.ಟಿ.ಪಿ.ಪಿ. ನಿಯಮಗಳನ್ವಯ ಆಹ್ವಾನಿಸಲಾಗಿದ್ದು, ಆಸಕ್ತರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಲಾಗಿನ್ ಮೂಲಕ ಈ ಕೆಳಕಾಣಿಸಿದ ವಿವರಗಳಂತೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ.

ಟೆಂಡರ್‌ನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ : 11-12-2024 ರ 17.00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 13-12-2024 ರ 17.15 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ : 16-12-2024 ರ 17.30 ಗಂಟೆಗೆ, ಇ-ಟೆಂಡರ್‌ಗಳಿಗೆ ಸಂಬಂಧಿಸಿದಂತೆ ವೇಳಾಪಟ್ಟಿ ಅಥವಾ ಇನ್ನಿತರ ಬದಲಾವಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಅಥವಾ www.doddaballapurcity.gov.in, https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯತಕ್ಕದ್ದು.

ಸಹಿ/- ಅಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ. ಸಹಿ/- ಉಪಾಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ. ಸಹಿ/- ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ.

ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/3386/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ದ್ವಿ-ಹಂತದ ಟೆಂಡರ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿಗಳ ವಿವರ	ಕಾಮಗಾರಿಗಿಟ್ಟ ಮೊತ್ತ / ಇಎಂಡಿ ಮೊತ್ತ
ಮುಖ್ಯ ಅಭಿಯಂತರರ ಕಛೇರಿ (ಯೋಜನೆ), 3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು - 560 009		
ಸಂ:ಬೆಂ.ಜ.ಮಂ/ಮುಅ(ಯೋ)/ಅಮುಅ(ಕೇಂಉ&ಡಿಸಿಡಬ್ಲ್ಯೂ)/1675/2024-25		ದಿನಾಂಕ:25.11.2024
1	ಸಂಯೋಜಿತ ಜೆಟ್ಟಿಂಗ್ / ಸಕ್ಷನ್ ಯಂತ್ರಕ್ಕಾಗಿ ನಿರ್ದಿಷ್ಟತೆಯ ಪ್ರಕಾರ 27000ಆರ್‌ಎಂಟಿ, 19ಮಿಮೀ ವ್ಯಾಸದ ಥರ್ಮೋಪ್ಲಾಸ್ಟಿಕ್ ಒಳಚರಂಡಿ ಮೆದುಗೊಳವೆಯನ್ನು ಒದಗಿಸುವುದು ಮತ್ತು ಅಳವಡಿಸುವುದು.	ರೂ. 4,10,67,540/- / ರೂ. 6,16,100/-
ಸಂ:ಬೆಂ.ಜ.ಮಂ/ಮುಅ(ಯೋ)/ಅಮುಅ(ಕೇಂಉ&ಡಿಸಿಡಬ್ಲ್ಯೂ)/1674/2024-25		ದಿನಾಂಕ:25.11.2024
2	P N 1.6ನ ಇತ್ತೀಚಿನ ತಿದ್ದುಪಡಿಗಳೊಂದಿಗೆ BS:5163-1986/IS:14846-2000ಗೆ ಅನುಗುಣವಾಗಿ ಬೋಲ್ಟ್, ನಟ್ ಮತ್ತು ರಬ್ಬರ್ ಅಳವಡಿಕೆಯೊಂದಿಗೆ ವಿವಿಧ ವ್ಯಾಸದ 1812 ಸಂಖ್ಯೆಯ ಗ್ಲಾಂಡ್‌ಲೆಸ್ ಡಿಐ ಸ್ಲೂಯಿಸ್ ವಾಲ್ವ್‌ಗಳನ್ನು ಖರೀದಿಸುವುದು.	ರೂ. 4,60,62,626/- / ರೂ. 6,91,000/-

ಮೇಲಿನ ಕಾಮಗಾರಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 05.12.2024ರ ಸಂಜೆ 4.00 ಗಂಟೆಯೊಳಗೆ. ಟೆಂಡರ್‌ಗಳನ್ನು ತೆರೆಯುವ ದಿನಾಂಕ:06.12.2024 ರ ಸಂಜೆ 4.30 ಗಂಟೆಗೆ.

ಸಹಿ/- ಮುಖ್ಯ ಅಭಿಯಂತರರು(ಯೋಜನೆ)

ಟೆಂಡರ್ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ವಿವರಗಳನ್ನು https://kppp.karnataka.gov.in ಗೆ ಭೇಟಿ ನೀಡುವ ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ವಾಸಾಸಂಇ/ವಾಪ್ರ/ಜೆಎ/3425/2024-25

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ(ಐ.ಟಿ)

ಇ-ಟೆಂಡರ ಅಧಿಸೂಚನೆ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999-2000 ರ ಪ್ರಕಾರ ಆ್ಯಕ್ಟ 2000 ರ ನಿಯಮದಂತೆ ಸರ್ಕಾರದ ಅಧೀಕೃತ ಏಜನ್ಸಿದಾರರು/ ಪರವಾನಿಗೆ ಹೊಂದಿರುವ / ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರಮೆಂಟ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸಬಹುದು.
ಸಾಮಾನ್ಯ ಸೂಚನೆಗಳು:- ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು.
ಹೆಚ್ಚಿನ ಮಾಹಿತಿಯನ್ನು ಕಾರ್ಯನಿರ್ವಾಹಕ ಇಂಜಿನೀಯರ (ಐ.ಟಿ) ಇವರ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. **ದೂರವಾಣಿ ಸಂಖ್ಯೆ: 0836-2251955** ಮತ್ತು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ https://kppp.karnataka.gov.in/ ರಲ್ಲಿ ಪಡೆಯಬಹುದು ಹಾಗೂ ಸದರ ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರಮೆಂಟನಲ್ಲಿ ದಿನಾಂಕ: 26-11-2024 ರಿಂದ ಪಡೆಯಬಹುದು. ಒಂದು ವೇಳೆ ಸದರಿ ಟೆಂಡರಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ-ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಟೆಂಡರ್ ಕಾಮಗಾರಿಗಳು

ಅ. ನಂ	ಇಂಡೆಂಟ ನಂ	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಕಾಮಗಾರಿ ನಿರ್ವಹಣೆಯ ಅವಧಿ	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	ಟೆಂಡರ ತೆರೆಯುವ ದಿನಾಂಕ
1	DMA/2024-25/OW/WORK_INDENT30477/CALL-2 (Ward No.61)	25.00	45 ದಿನಗಳು	03.12.2024 ಮುಂಜಾನೆ 11:00	04.12.2024 ಮುಂಜಾನೆ 11:30
2	DMA/2024-25/OW/WORK_INDENT27727/CALL-3 (Ward No.55)	20.00	45 ದಿನಗಳು		
3	DMA/2024-25/OW/WORK_INDENT32602 (Ward No.71)	49.00	60 ದಿನಗಳು	24.12.2024 ಮುಂಜಾನೆ 11:00	26.12.2024 ಮುಂಜಾನೆ 11:30

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಐ.ಟಿ)
ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ವಾ.ಸಾ.ಇ/ಧಾರವಾಡ/644/ದೇಶಪಾಂಡೆಪಬ್ಲಿಸಿಟಿ/2024-25

ಕ್ಷೇಮ ಕುಶಲ

ಗೊರಕೆಯ ಸದ್ದು ಆರೋಗ್ಯಕ್ಕೆ ಸೆಡ್ಡು

ಡಾ. ಸುಜಿತ್ ಹಾಲಪ್ಪ

ಗೊರಕೆಯು ಎಲ್ಲಾ ವಯಸ್ಸಿನವರ ಮೇಲೆ ಪರಿಣಾಮ ಬೀರಬಹುದಾದ ಸಾಮಾನ್ಯ ಸಂಗತಿ. ನಿದ್ರೆಯ ಸಮಯದಲ್ಲಿ ಬಾಯಿ ಮತ್ತು ಮೂಗಿನ ಮೂಲಕ ಗಾಳಿಯ ಹರಿವು ಭಾಗಶಃ ಅಡಚಣೆಯಾದಾಗ ಇದು ಸಂಭವಿಸುತ್ತದೆ. ಇದರಿಂದಾಗಿ ಗಂಟಲಿನ ಅಂಗಾಂಶಗಳು ಕಂಪಿಸುತ್ತವೆ; ಆಗ ವಿಶಿಷ್ಟವಾದ ಧ್ವನಿಯೊಂದು ಉಂಟಾಗುತ್ತದೆ. ಇದೇ ಗೊರಕೆ. ಅನೇಕ ಜನರು ಗೊರಕೆಯನ್ನು ಕೇವಲ ಕಿರಿಕಿರಿ ಎಂದಷ್ಟೆ ಪರಿಗಣಿಸುತ್ತಾರೆ. ಆದರೆ ಇದು ಗಮನಾರ್ಹವಾದ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡಬಹುದು.

ಕಾರಣವೇನು?

1. ಅಂಗರಚನಾ ಅಂಶಗಳು: ಬಾಯಿ ಮತ್ತು ಗಂಟಲಿನ ರಚನೆಯು ಮಹತ್ವದ ಪಾತ್ರವನ್ನು ವಹಿಸುತ್ತದೆ. ಕಡಿಮೆ, ದಪ್ಪ ಮೃದು ಅಂಗುಳಿನ, ಉದ್ದವಾದ ಕಿರುನಾಲಿಗೆ ಅಥವಾ ವಿಸ್ತರಿಸಿದ 'ಟಾನ್ಸಿಲ್' ಅನ್ನು ಹೊಂದಿರುವವರು ಗೊರಕೆಗೆ ಹೆಚ್ಚು ಒಳಗಾಗುತ್ತಾರೆ.

2. ಮೂಗಿನ ಸಮಸ್ಯೆಗಳು: ಮೂಗಿನ ದಟ್ಟಣೆ (Sinusitis), ವಿಚಲನ ಸೆಪ್ಟಮ್ (DNS), ಮೂಗಿನ 'ಪಾಲಿಪೋಸಿಸ್' ಅಥವಾ ಅಲರ್ಜಿಗಳು ಗಾಳಿಯ ಮಾರ್ಗವನ್ನು ಕಿರಿದಾಗಿಸಬಹುದು; ಇದು ಉಸಿರಾಟವನ್ನು ಹೆಚ್ಚು ಕಷ್ಟಕರವಾಗಿಸುತ್ತದೆ; ಗೊರಕೆಯ ಸಾಧ್ಯತೆಯನ್ನು ಹೆಚ್ಚಿಸುತ್ತದೆ.

3. ಸ್ಥೂಲಕಾಯ (Obesity): ಕುತ್ತಿಗೆಯ ಸುತ್ತ ಅಧಿಕ ಕೊಬ್ಬಿನಂಶ ಶ್ವಾಸನಾಳವನ್ನು ಕಿರಿದಾಗಿಸಬಹುದು; ಇದೂ ಗೊರಕೆಗೆ ಕಾರಣವಾಗಬಹುದು. ಸ್ಥೂಲಕಾಯದ ವ್ಯಕ್ತಿಗಳು ಆರೋಗ್ಯಕರ ತೂಕದಲ್ಲಿರುವವರಿಗಿಂತ ಗೊರಕೆ ಹೊಡೆಯುವ ಸಾಧ್ಯತೆ ಹೆಚ್ಚು ಎಂದು ಅಧ್ಯಯನಗಳು ತೋರಿಸಿವೆ.

4. ಮದ್ಯ ಮತ್ತು ನಿದ್ರಾಜನಕಗಳು: ಇವನ್ನು ಅತಿಯಾಗಿ ಸೇವಿಸಿದಾಗ ಗಂಟಲಿನ ಸ್ನಾಯುಗಳನ್ನು ಸಡಿಲಗೊಳಿಸುತ್ತವೆ. ಇದರಿಂದ ಗೊರಕೆ ಉಂಟಾಗಬಹುದು.

5. ನಿದ್ರೆಯ ಸ್ಥಾನ: ಅಂಗಾತ ಮಲಗುವುದರಿಂದ ನಾಲಿಗೆ ಮತ್ತು ಮೃದು ಅಂಗುಳದ ಭಾಗ ಗಂಟಲಿನ ಕಡೆಗೆ ವಾಲಿಕೊಳ್ಳುತ್ತವೆ. ಇದು ಕೂಡ ಗೊರಕೆಗೆ ಕಾರಣವಾಗಬಹುದು.

6. ವಯಸ್ಸು: ವಯಸ್ಸಾದಂತೆ, ಸ್ನಾಯುಗಳು ಸಡಿಲಗೊಳ್ಳುತ್ತವೆ. ಅದರಲ್ಲಿಯೂ ಗಂಟಲಿನ ಸ್ನಾಯುಗಳು ಸಡಿಲಗೊಳ್ಳುವುದರಿಂದ. ವಯಸ್ಸಾದವರಲ್ಲಿ ಗೊರಕೆ ಸಾಮಾನ್ಯ.

ಪರಿಣಾಮಗಳು

ಸಾಂದರ್ಭಿಕ ಗೊರಕೆಯು ಗಂಭೀರ ಆರೋಗ್ಯದ ಅಪಾಯಗಳನ್ನು ಉಂಟುಮಾಡದಿದ್ದರೂ, ದೀರ್ಘಕಾಲದ ಗೊರಕೆಯು ಹಲವಾರು ಆರೋಗ್ಯ ಸಮಸ್ಯೆಗಳನ್ನು ತರಬಲ್ಲದು.

- ಗೊರಕೆಯು ನಿದ್ರೆಯಲ್ಲಿ ಉಸಿರುಗಟ್ಟುವಿಕೆ ಸಮಸ್ಯೆಗೆ (OSA) ಕಾರಣವಾಗಬಹುದು. ಇಂಥ ಸಮಸ್ಯೆ ಇದ್ದವರಿಗೆ ನಿದ್ರೆಯ ಸಮಯದಲ್ಲಿ ಉಸಿರಾಟ ನಿಂತಂತಾಗುತ್ತದೆ. ಇದು ನಿದ್ರಾಹೀನತೆಗೆ ಕಾರಣವಾಗಬಹುದು. ಇಡೀ ರಾತ್ರಿ ಮಲಗಿದ್ದರೂ ನಿದ್ರೆಯ ಕೊರತೆಯ ಕಾರಣದಿಂದ ಹಗಲು ಬಳಲಿಕೆ ಎನಿಸಬಹುದು. ಇದು ಹೃದ್ರೋಗ, ಅಧಿಕ ರಕ್ತದೊತ್ತಡ, ಪಾರ್ಶ್ವವಾಯು ಮತ್ತು ಮಧುಮೇಹ ಬರುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ.
- ನಿದ್ರೆಯಲ್ಲಿ ಉಸಿರುಗಟ್ಟುವುದರಿಂದ ಹೃದಯದ ಚಟುವಟಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಆಮ್ಲಜನಕ ಪೂರೈಕೆಯ ಮಟ್ಟ ಕಡಿಮೆಯಾಗಬಹುದು. ಇದರಿಂದ ಹೃದಯವು ಹೆಚ್ಚು ಕೆಲಸ ಮಾಡಬೇಕಾಗುತ್ತದೆ. ಇದು ಅಧಿಕ ರಕ್ತದೊತ್ತಡ (ಅಧಿಕ ರಕ್ತದೊತ್ತಡ) ಮತ್ತು ಹೃದ್ರೋಗಕ್ಕೆ ಕಾರಣವಾಗುತ್ತದೆ. 'ಸ್ಲೀಪ್ ಅಪ್ನಿಯಾ'ವನ್ನು ಹೊಂದಿರುವವರು ಹೃದಯಾಘಾತ, ಪಾರ್ಶ್ವವಾಯು ಮತ್ತು ಆರ್ಹೆತ್ಮಿಯಾಗಳ ಅಪಾಯಗಳಿಗೆ ತುತ್ತಾಗುವ ಸಾಧ್ಯತೆ ಹೆಚ್ಚು.
- ದೀರ್ಘಕಾಲದ ಗೊರಕೆಯಿಂದ ರಾತ್ರಿಯ ಸಮಯದಲ್ಲಿ ಆಗಾಗ್ಗೆ ಎಚ್ಚರವಾಗುವುದರಿಂದ ಒಳ್ಳೆಯ ನಿದ್ರೆಗೆ ತೊಂದರೆಯಾಗಬಹುದು. ಹಾಗಾಗಿ ಹಗಲಿನಲ್ಲಿ ನಿದ್ರೆ ಮಾಡಬೇಕೆನಿಸುತ್ತದೆ. ಇದರಿಂದ ಏಕಾಗ್ರತೆ, ಸ್ಮರಣೆ ಮತ್ತು ಅರಿವಿನ ಕಾರ್ಯಕ್ಷಮತೆಯಲ್ಲಿ ವ್ಯತ್ಯಾಸ ಉಂಟಾಗಬಹುದು.
- ಗೊರಕೆಯ ಕಾರಣದಿಂದಾಗಿ ಅಸಮರ್ಪಕ ನಿದ್ರೆ ಉಂಟಾದರೆ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.
- ನಿದ್ರಾಹೀನತೆಯು ಕಿರಿಕಿರಿಯುಂಟುಮಾಡುವಿಕೆ, ಮಾನಸಿಕ ಬದಲಾವಣೆಗಳು, ಆತಂಕ ಮತ್ತು ಖಿನ್ನತೆ ತರಬಲ್ಲದು.
- ಗೊರಕೆ ಸಮಸ್ಯೆ ಇರುವವರ ಜತೆಗಾರರು ನಿದ್ರಾಭಂಗ ಅನುಭವಿಸುವುದರಿಂದ ಸಂಬಂಧಗಳ ಮೇಲೂ ಪ್ರಭಾವ ಬೀರಬಹುದು.
- ಗೊರಕೆ-ಸಂಬಂಧಿತ ನಿದ್ರಾಭಂಗವು ದೇಹದ ಪ್ರತಿರಕ್ಷಣಾ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ. ಸಾಕಷ್ಟು ನಿದ್ರೆ ಮಾಡದವರಿಗೆ ಶೀತ, ಜ್ವರ ಮತ್ತು ಇತರ ಕಾಯಿಲೆಗಳ ಸೋಂಕು ಬಹುಬೇಗ ತಗಲುತ್ತದೆ ಎಂದು ಅಧ್ಯಯನಗಳು ತೋರಿಸಿವೆ.

ರೋಗನಿರ್ಣಯ ಮತ್ತು ಚಿಕಿತ್ಸೆ

'ಸ್ಲೀಪ್ ಅಪ್ನಿಯ' (OSA) ಸಮಸ್ಯೆಯನ್ನು ನಿರ್ಣಯಿಸಲು ಮತ್ತು ಚಿಕಿತ್ಸೆ ನೀಡಲು 'ನಿದ್ರಾ ಅಧ್ಯಯನ' (Sleep Study) ಎಂದೂ ಕರೆಯಲ್ಪಡುವ 'ಪೋಲಿಸೊಮ್ನೋಗ್ರಾಫಿ' (Polysomnography) ಎಂಬ ಪರೀಕ್ಷೆಯನ್ನು ಮಾಡಲಾಗುತ್ತದೆ. ಇದು ನಿದ್ರಾ ಪ್ರಯೋಗಾಲಯದಲ್ಲಿ ನಡೆಯುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ, ಮನೆಯಲ್ಲಿಯೇ ಈ ಪರೀಕ್ಷೆಯನ್ನು ಮಾಡಬಹುದಾಗಿದೆ. ಈ ಪರೀಕ್ಷೆಯು ಉಸಿರಾಟ, ಹೃದಯ, ಮಿದುಳು ಮತ್ತು ದೇಹದ ಚಟುವಟಿಕೆಗಳನ್ನು ಮಾಪನ ಮಾಡುತ್ತದೆ.

1. ಉಸಿರಾಟದ ಮಾಪನ: ಶ್ವಾಸಕೋಶದ ಚಲನೆ ಮತ್ತು ಉಸಿರಾಟದ ಪ್ರಮಾಣವನ್ನು ಅಳೆಯುತ್ತದೆ.

2. ಆಮ್ಲಜನಕ ಮಟ್ಟ: ರಕ್ತದಲ್ಲಿರುವ ಆಮ್ಲಜನಕದ ಮಟ್ಟವನ್ನು ಗಮನಿಸುತ್ತದೆ.

3. ಹೃದಯದ ಚಟುವಟಿಕೆ: ಇಸಿಜಿ ಮೂಲಕ ಹೃದಯ ಚಟುವಟಿಕೆಗಳನ್ನು ಪರಿಶೀಲಿಸಲಾಗುತ್ತದೆ.

4. ನಿದ್ರೆಯ ಹಂತಗಳು: ಮಿದುಳಿನ ಚಟುವಟಿಕೆಗಳನ್ನು ಇಇಜಿಗೆ (EEG) ಮೂಲಕ ಗುರುತಿಸಲಾಗುತ್ತದೆ.

ಗೊರಕೆಯು ದೈನಂದಿನ ಜೀವನದ ಮೇಲೆ ಪರಿಣಾಮ ಬೀರುತ್ತಿದ್ದರೆ, ವೈದ್ಯರನ್ನು ಸಂಪರ್ಕಿಸುವುದು ಅಗತ್ಯ. ಕೆಲವೊಮ್ಮೆ ಸರಳ ಜೀವನಶೈಲಿಯ ಬದಲಾವಣೆಗಳು ಗೊರಕೆಯನ್ನು ಗಮನಾರ್ಹವಾಗಿ ಕಡಿಮೆ ಮಾಡಬಲ್ಲದು.

ಪರಿಹಾರ ಮಾರ್ಗಗಳು

- **ತೂಕ ನಿರ್ವಹಣೆ:** ದೇಹದ ತೂಕವನ್ನು ಕಳೆದುಕೊಳ್ಳುವುದು, ಕುತ್ತಿಗೆಯ ಸುತ್ತ ಕೊಬ್ಬಿನ ಅಂಗಾಂಶವನ್ನು ಕಡಿಮೆ ಮಾಡಿಕೊಳ್ಳುವುದು ಅಗತ್ಯ.
- **ಮಲಗುವ ಭಂಗಿಯ ಬದಲಾವಣೆ:** ಅಂಗಾತ ಮಲಗುವ ಬದಲು, ಒಂದು ಕಡೆ ಮುಖ ಮಾಡಿ ಮಲಗುವುದರಿಂದ ಸರಾಗ ಉಸಿರಾಟಕ್ಕೆ ತೊಂದರೆಯಾಗುವುದಿಲ್ಲ.
- **ಮಲಗುವ ಮುನ್ನ:** ಮದ್ಯ ಮತ್ತು ನಿದ್ರಾಜನಕಗಳ ಸೇವನೆಯನ್ನು ಮಿತಿಗೊಳಿಸುವುದರಿಂದ ಗೊರಕೆಗೆ ಕಾರಣವಾಗುವ ಸ್ನಾಯು ಸಡಿಲಗೊಳ್ಳುವ ಸಮಸ್ಯೆ ಕಡಿಮೆಯಾಗುತ್ತದೆ.
- **'ಡೈಲೇಟರ್' ಬಳಕೆ:** ಡೈಲೇಟರ್‌ಗಳ ಬಳಕೆಯಿಂದ ಮೂಗಿನ ಹೊಳ್ಳೆಗಳ ಹಾದಿ ಸುಗಮವಾಗುತ್ತದೆ. ಇವು ಗಾಳಿಯ ಹರಿವನ್ನು ಸರಾಗವಾಗಿಸಿ, ಗೊರಕೆಯನ್ನು ಕಡಿಮೆ ಮಾಡುತ್ತದೆ.
- ನಿಗದಿತ ಸಮಯದಲ್ಲಿ ನಿದ್ರೆ ಮಾಡುವುದು ಮತ್ತು ಆರಾಮವೆನಿಸುವ ನಿದ್ರೆಯ ವಾತಾವರಣವನ್ನು ಸೃಷ್ಟಿಸುವುದು ಅಗತ್ಯ.
- ವಿಶೇಷವಾಗಿ ನಿದ್ರೆಯಲ್ಲಿ ಉಸಿರುಗಟ್ಟುವಿಕೆಯಂಥ ಸಮಸ್ಯೆ ಕಾಣಿಸಿಕೊಂಡಾಗ, ಸುಧಾರಿತ ಚಿಕಿತ್ಸೆಗಳು ಬೇಕಾಗಬಹುದು.
- ನಿದ್ರೆಯಲ್ಲಿ ಉಸಿರುಗಟ್ಟುವಿಕೆಯ ಸಮಸ್ಯೆ ಇರುವವರಿಗೆ ಸಾಮಾನ್ಯವಾಗಿ ಸಿಪಿಎಪಿ (CPAP) ಯಂತ್ರದ ಬಳಕೆಗೆ ಸೂಚಿಸಲಾಗುತ್ತದೆ. ಗಾಳಿ ಸ್ಥಿರವಾದ ಒತ್ತಡದಲ್ಲಿ ನಿರಂತರವಾಗಿ ಸಿಗುತ್ತದೆ. ಶ್ವಾಸನಾಳವನ್ನು ಗಾಳಿ ಸಂಚಾರಕ್ಕೆ ಅನುಕೂಲವಾಗುವಂತೆ ತೆರೆದಿಡಲು ಇದು ಸಹಕರಿಸುತ್ತದೆ.
- ಕುತ್ತಿಗೆಯ ಸುತ್ತ ಇರುವ ಹೆಚ್ಚುವರಿ 'ದುರ್ಮಾಂಸ'ದಂಥ ಅಂಗಾಂಶಗಳನ್ನು ತೆಗೆದುಹಾಕಲು ಅಥವಾ ಗೊರಕೆಗೆ ಕಾರಣವಾಗುವ ಮೂಗು ಮತ್ತು ಗಂಟಲಿನ ರಚನಾತ್ಮಕ ಸಮಸ್ಯೆಗಳನ್ನು ಸರಿಪಡಿಸಲು ಶಸ್ತ್ರಚಿಕಿತ್ಸೆ ಅಗತ್ಯವಾಗಬಹುದು.

ಗೊರಕೆಯನ್ನು ಚಿಕ್ಕ ಸಮಸ್ಯೆ ಎಂದು ತಳ್ಳಿಹಾಕಲಾಗುತ್ತದೆ. ಆದರೆ ಅದರಿಂದಾಗುವ ಸಂಭಾವ್ಯ ಆರೋಗ್ಯ ಪರಿಣಾಮಗಳನ್ನು ನಿರ್ಲಕ್ಷಿಸಬಾರದು. ❖

ಚಳಿಯಲ್ಲಿ ಸುಳಿಯದಿರಲಿ ರೋಗ

ಡಾ. ಸತ್ಯನಾರಾಯಣ ಭಟ್ ಪಿ.

ಆಯುರ್ವೇದದ ಅಷ್ಟಾಂಗಗಳಲ್ಲಿ ಕಾಯಚಿಕಿತ್ಸೆ ಮೊದಲಿನದು. 'ಕಾಯ' ಎಂದರೆ ದೇಹಾಗ್ನಿ, ಅರ್ಥಾತ್ ಜಠರದ ಹಸಿವೆ. ಅದು ಅಣುವೂ ಹೌದು; ಇಡೀ ದೇಹವ್ಯಾಪಿ ಸಹ. ಪಿತ್ತವು ಶರತ್ಕಾಲದಲ್ಲಿ ಕೆಡುತ್ತದೆ. ಪಿತ್ತಕ್ಕೆ 'ತಾಪ' ಎಂಬ ಪರ್ಯಾಯ ಹೆಸರಿದೆ. ದೇಹದ ತಾಪ, ಎಂದರೆ 'ಟೆಂಪರೇಚರ್' ಇದೇನೇ. ಹೊರಗಿನ ಚಳಿಗಾಳಿಗೆ ಇದು ವ್ಯತ್ಯಯ. ಹೀಗಾಗಿ ಈ ಅಣು ಮಾತ್ರದ, ಆದರೆ ಸಕಲ ದೇಹ ವ್ಯಾಪಿ ಪಿತ್ತವನ್ನು ತಹಬಂದಿಗೆ ತರುವ ಕಠಿಣ ಕೆಲಸ ಚಳಿಗಾಲದ ಆರೋಗ್ಯ ರಕ್ಷಣೆಯ ಉಪಾಯ.

'ಸುಶ್ರುತ ಸಂಹಿತೆ'ಯು ತಿಳಿಸುವಂತೆ ಆಶ್ವಯುಜ ಕಾರ್ತಿಕ ಅಥವಾ ಆಶ್ವಯುಜ ಮಾರ್ಗಶಿರ ಪರ್ಯಂತ ಶರದೃತು ವ್ಯಾಪ್ತಿ. ಅನಂತರ ಹೇಮಂತಾಗಮನ. ಆ ಬಳಿಕ ಶಿಶಿರ. ಇವು ಮೂರೂ ಸಹ ವಿಸರ್ಗ ಕಾಲ. ಮಳೆಗಾಲದುದ್ದಕ್ಕೆ ಜರ್ಜರಿತಗೊಂಡ ದೇಹ ಕ್ರಮೇಣ ಚೇತರಿಕೆಗಿದು ಸಕಾಲ. ಮನುಷ್ಯನಿಗೆ ಕೊಂಚ ಬಲ, ಅರ್ಥಾತ್ ರೋಗನಿರೋಧಕ ಕಸುವಿನ ಏರುಮುಖದ ಸಮಯ. ಆದರೂ ಪಿತ್ತದೋಷ ಸಂಚಯವಾಗುವ ಕಾಲ. ಪಿತ್ತಶಾಮಕ ಆಹಾರಗಳಲ್ಲಿ ಮಧುರಪ್ರಾಯ ತಿಂಡಿ–ತಿನಿಸುಗಳು ಪ್ರಧಾನ. ಹಾಗಾಗಿಯೇ ನವರಾತ್ರಿಯಾಗಲಿ, ದೀವಳಿಗೆಯಿರಲಿ ಭಕ್ಷ್ಯ ಭೋಜ್ಯಗಳಿಗೆ ಬಲು ಮನ್ನಣೆ. ಕಡುಬು ಕಜ್ಜಾಯಗಳಿಗೆ ಆದ್ಯತೆ. ಪಿತ್ತಪರಿಹಾರಿ ಉಪಾಯಗಳಲ್ಲಿ ತುಪ್ಪಕ್ಕೆ ಅಗ್ರಸ್ಥಾನ. ಕಹಿ ಒಗರು ರಸದ ಅರಶಿನ ಬೆರಸಿದ ತುಪ್ಪದಡುಗೆ ಆರೋಗಣೆಯಿಂದ ಆರೋಗ್ಯ. 'ಶರದೃತು ವಿರೇಚನ' ಎಂಬ ಪಂಚಕರ್ಮದ ಒಂದು ಉಪಾಯವಿದೆ. ಇದು ಕ್ರಮವರಿತ ಭೇದಿ ಚಿಕಿತ್ಸೆ. ಅದನ್ನು ಅನುಸರಿಸಲು ಇದು ಸಕಾಲ.

ಊಟೋಪಚಾರಕ್ಕೆ ಬೂದುಗುಂಬಳ, ತೊಂಡೆ, ಪಡವಲ, ಹಾಗಲ, ಸಂಬಾರ ಸೌತೆ, ಹೀರೆ, ಸೋರೆಯಂತಹ ಸಿಹಿಕಹಿ ತರಕಾರಿ ಬಳಸಿರಿ. ಹಾಲು–ಮಜ್ಜಿಗೆಗಳ ಬಳಕೆಗೆ ಇದು ಪ್ರಶಸ್ತ ಸಮಯ. ಶರದೃತುವಿನುದ್ದಕ್ಕೆ ಹೆಸರುಬೇಳೆಯ ನಾನಾ ಅಡುಗೆ ಪ್ರಶಸ್ತ; ಮಕರ ಸಂಕ್ರಮಣ ಪರ್ಯಂತ ಆರೋಗ್ಯದಾಯಿ. ಅದುವೆ ಪೊಂಗಲ್ ಅಡುಗೆ. ಚಳಿಯ ದಿನಗಳ ಚರ್ಮ ಬಿರುಸುತನಕ್ಕೆ, ನೆಗಡಿ ನಿರೋಧಕತನಕ್ಕೆ ಮೆಟ್ಟಲು ನೆಲ್ಲಿಕಾಯಿ ಸಹಕಾರಿ. ತುಳಸಿಯ ಹಬ್ಬದಲ್ಲಿ ತುಳಸಿ ಮತ್ತು ನೆಲ್ಲಿಯ ನೆನಪಾಗುತ್ತದೆ. ಸಣ್ಣಕ್ಕಿಯ ಅನ್ನದ ಸಂಗಡ ನೆಲ್ಲಿಯ ತಂಬುಳಿ, ಸಾರು ಬಳಸುವಿರಂತೆ. ನೆನಪಿಡಿ. ಹುಣಿಸೆ, ಲಿಂಬೆ, ನೆಲ್ಲಿಯಂತಹ ಹುಳಿಯಿಂದ ಎಂದಿಗೂ ಪಿತ್ತ ದೋಷ ಕೆಡದು. ಆದರೆ ಟೊಮೆಟೊದಲ್ಲಿ ಮಾತ್ರ ಯೂರಿಕ್ ಅಮ್ಲದ ಅಂಶ ಹೆಚ್ಚಾಗಿದೆ. ವಾತ ಮತ್ತು ರಕ್ತದೋಷ ಕೆಟ್ಟು ಗೌಟ್, ಕೀಲುಗಂಟಿನ ವಾತಕ್ಕೆ ಕಾರಣವಾಗುತ್ತದೆ ಈ ಪರದೇಶೀ ಬೆಳೆ. ಚಳಿಯ ದಿನಗಳಲ್ಲಿ ಸದ್ದಿಲ್ಲದ ನಿದ್ರೆಯಲ್ಲಾಗುವ ಹೃದಯಾಘಾತ ಬಹಳ ಹೆಚ್ಚು. ಅದರ ತಡೆಗೂ ಹಲವು ಉಪಾಯಗಳಿವೆ. ತುಳಸಿಯ ಹಬ್ಬದ ಹಿಂದೆ ತುಳಸಿ ಬಳಕೆಯ ಸಂಕೇತವಿದೆ. ಕುಡಿಯುವ ನೀರಿಗೆ ತುಳಸೀದಳವನ್ನು ಹಾಕಿಡಿರಿ. ಅದು ಕಡುರಸದ್ದು. ಅದು ಹಸಿವೆ ಹೆಚ್ಚಳಕ್ಕೂ ಮಾರ್ಗ.

ಕುಡಿಯಲು ಬಳಸುವ ನೀರಿಗೆ ಕೊಂಚ ಜೇನನ್ನೂ ಸೇರಿಸಲಾದೀತು. ಇದರಿಂದ ಕಫ, ಪಿತ್ತಗಳಿಗೆ ಕಡಿವಾಣವಾಗುತ್ತದೆ. ಇಂದು ನಾವು ಬಳಸುವ 'ಆರ್ವೋ ನೀರು' ಹಲವು ಕಾಯಿಲೆಗಳ ಮೂಲ; ಉಗುರು, ಕೂದಲು, ಮೂಳೆಗಳ ಮತ್ತು ಚರ್ಮಾರೋಗ್ಯಕ್ಕೆ ಬಾಧಕ. ಮೂಳೆಗಳ ಮಿದುತನ, ಅನ್ನಾಂಗ ದೇಹಕ್ಕೆ ಸೇರದಂತೆ ಮಾಡುವ ಹಾನಿಕರ ಜಲವದು.

ನಾವು ದಿನವೂ ನಸುಕಿನ ನಡಿಗೆ ಮಾಡುವೆವು ಎಂಬ ಹಮ್ಮು ಬಿಮ್ಮು ತರವಲ್ಲ. ಮುಂಜಾವಿನ ಮಂಜು ಮತ್ತು ಇದಿರು ಗಾಳಿ ಖಂಡಿತ ಅನಾರೋಗ್ಯಕರ. ಬಿಸಿಲೇರಿದರೆ ಖಂಡಿತ ಓಡಾಡಬಾರದು. ತೀಕ್ಷ್ಣ ಮದ್ಯಪಾನ ಅನುಚಿತ. ಹಗಲು ನಿದ್ರೆ ಖಂಡಿತ ತರವಲ್ಲ. ಮೈಗೆ ಶ್ರೀಗಂಧ, ಪಚ್ಚೆಕರ್ಪೂರ, ಪನ್ನೀರು ಬಳಿದುಕೊಳ್ಳುವಾ ಮತ್ತು ಬೆಳದಿಂಗಳ ವಿಹಾರದ ಸುಮಧುರ ಋತುಚರ್ಯೆಯನ್ನು ಆಚರಿಸುವಾ. ಚಳಿಗಾಲ, ಎಂದರೆ ಹೇಮಂತದ ಆರೋಗ್ಯ ಕಾಳಜಿ ನಮಗಿರಲಿ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ – ಗಣಿತ

ಅಧ್ಯಾಯ–10 ವೃತ್ತಗಳು

ಅಭ್ಯಾಸ 10.2

6) ವೃತ್ತ ಕೇಂದ್ರದಿಂದ **5cm** ದೂರದಲ್ಲಿರುವ **A** ಬಿಂದುವಿನಿಂದ ಎಳೆದ ಸ್ಪರ್ಶಕದ ಉದ್ದವು **4cm** ಇದೆ. ವೃತ್ತದ ತ್ರಿಜ್ಯದ ಉದ್ದವನ್ನು ಕಂಡುಹಿಡಿಯಿರಿ.

ಪರಿಹಾರ:– ಸಮಸ್ಯೆಯನ್ನು ಆಧರಿಸಿ ಕೆಳಗಿನಂತೆ ರೇಖಾ ನಕ್ಷೆಯನ್ನು ಬರೆಯಿರಿ.



ಇಲ್ಲಿ **AB** ಯು ವೃತ್ತ ಸ್ಪರ್ಶಕವಾಗಿದೆ, ಇದು **B** ಬಿಂದುವಿನಲ್ಲಿ ವೃತ್ತಕ್ಕೆ ಸ್ಪರ್ಶಿಸಿದೆ

OB ಯು ABಗೆ ಲಂಬವಾಗಿದೆ. $OB \perp AB$

ನಮಗೆ ಗೊತ್ತಿರುವಂತೆ OA = 5cm ಮತ್ತು AB = 4 cm

△ABO ದಲ್ಲಿ ಪೈಥಾಗೋರಸ್ ಪ್ರಮೇಯದ ಪ್ರಕಾರ

$OA^2 = AB^2 + BO^2$ (ಪೈಥಾಗೋರಸ್ ಪ್ರಮೇಯದ ಪ್ರಕಾರ)

$5^2 = 4^2 + BO^2$

$BO^2 = 25 - 16$

$BO^2 = 9$

$BO = 3$

ಹೀಗಾಗಿ ತ್ರಿಜ್ಯದ ಉದ್ದ 3 cm.

7) ಎರಡು ಏಕಕೇಂದ್ರಿಯ ವೃತ್ತಗಳ ತ್ರಿಜ್ಯಗಳು 5 **cm** ಮತ್ತು 3 **cm** ಆಗಿವೆ. ಚಿಕ್ಕ ವೃತ್ತಕ್ಕೆ ಸ್ಪರ್ಶಿಸುವಂತೆ ದೊಡ್ಡ ವೃತ್ತದ ಜ್ಯಾದ ಉದ್ದವನ್ನು ಕಂಡುಹಿಡಿಯಿರಿ.

ಪರಿಹಾರ:– ಸಮಸ್ಯೆಯನ್ನು ಆಧರಿಸಿ ಕೆಳಗಿನಂತೆ ರೇಖಾ ನಕ್ಷೆಯನ್ನು ಬರೆಯಿರಿ.



ಎರಡು ಏಕಕೇಂದ್ರಿಯ ವೃತ್ತಗಳ ತ್ರಿಜ್ಯಗಳು 5**cm** ಮತ್ತು 3**cm** ಆಗಿವೆ. ಇದರ ಕೇಂದ್ರ ಆಗಿರಲಿ, AB ರೇಖಾಖಂಡವನ್ನು ರಚಿಸಿ ಅದೂ ಒಳಗಿರುವ ಸಣ್ಣ ವೃತ್ತಕ್ಕೆ P ಬಿಂದುವಿನಲ್ಲಿ ಸ್ಪರ್ಶಿಸುವಂತೆ ಇರಲಿ. ಅಂದರೆ AB ಯು ಸಣ್ಣವೃತ್ತಕ್ಕೆ ಸ್ಪರ್ಶಕವಾಗಿದೆ ಹೀಗಾಗಿಯೇ

$\therefore OP \perp AB$

OPA ತ್ರಿಭುಜದಲ್ಲಿ

$OA^2 = AP^2 + OP^2$

$5^2 = AP^2 + 3^2$

$AP^2 = 25 - 9$

$AP = 4$

AP ಯು PBಗೆ ಸಮವಾಗಿದೆ

ಹೀಗಾಗಿ $AB = 2AP = 2 \times 4 = 8$ cm

ದೊಡ್ಡ ವೃತ್ತದ ಜ್ಯಾದ ಉದ್ದ= 8 cm

8) ABCD ಚತುರ್ಭುಜದಲ್ಲಿ ವೃತ್ತವು ಅಂತಸ್ಥವಾಗಿದೆ. (ಚಿತ್ರ 10.12 ನೋಡಿ). **AB + CD = AD + BC** ಎಂದು ಸಾಧಿಸಿ.



ಚಿತ್ರ 10.12



ಚಿತ್ರ 10.13

ಪರಿಹಾರ:– ಮೊದಲಿಗೆ ಚಿತ್ರವನ್ನು ಗಮನಿಸಿ



ಗಮನಿಸಿದಾಗ

(i) DR = DS (ii) BP = BQ
(iii) AP = AS (iv) CR = CQ

ವೃತ್ತಕ್ಕೆ D, B, A, ಮತ್ತು Cನಿಂದ ಸ್ಪರ್ಶವನ್ನು ಎಳೆಯಲಾಗಿದೆ ಎಡ ಮತ್ತು ಬಲ ಭಾಗವನ್ನು ಗಮನಿಸಿದಾಗ

DR+BP+AP+CR = DS+BQ+AS+CQ

ಇವುಗಳನ್ನು ಪುನರ್ ಜೋಡಿಸಿದಾಗ

(DR+CR) + (BP+AP) = (CQ+BQ) + (DS+AS)

ಹೀಗಾಗಿ AD+BC= CD+AB

9) ಚಿತ್ರ 4.13ರಲ್ಲಿ, `**O**' ವೃತ್ತ ಕೇಂದ್ರ ಹೊಂದಿರುವ ಒಂದು ವೃತ್ತಕ್ಕೆ **XY** ಮತ್ತು **X'Y'** ಸಮಾಂತರ ಸ್ಪರ್ಶಕಗಳಾಗಿವೆ ಮತ್ತು ಸ್ಪರ್ಶ ಬಿಂದು **C**ನಲ್ಲಿ ಎಳೆದ ಮತ್ತೊಂದು ಸ್ಪರ್ಶಕ **AB** ಯು **XY**ಅನ್ನು **A** ಬಿಂದುವಿನಲ್ಲಿ ಮತ್ತು **X'Y'**ಅನ್ನು **B** ಬಿಂದುವಿನಲ್ಲಿ ಛೇದಿಸುತ್ತದೆ. ಹಾಗಾದರೆ **AOB** = 90^0 ಎಂದು ಸಾಧಿಸಿ.

(ಮುಂದುವರಿಯುವುದು).

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC: PHYSICS

MOVING CHARGES AND MAGNETISM

10. A positively charged particle moving due east enters a region of uniform magnetic field directed vertically upward. The particle will
a) get deflected in vertically upward direction
b) move in circular path with an increased speed
c) move in circular path with a decreased speed
d) move in circular path with uniform speed

11. A proton and an alpha particle enter in a uniform field with the same velocity. The time period of rotation of the alpha particle will be –
a) four times that of the proton
b) two times that of the proton
c) three times that of the proton
d) same as that of the proton

12. A straight wire of diameter 0.5 mm carrying a current of 1 A is replaced by another wire of 1 mm diameter carrying the same current. The strength of the magnetic field far away is –
A. Unchanged
B. Quarter of its earlier value
C. Half of the earlier value
D. Twice the earlier value

13. A vertical straight conductor carries a current vertically upwards. A point P lies to the east of it at a small distance and another point Q lies to the west at the same distance. The magnetic field at P is
a) greater than at Q
b) same as at Q
c) less than at Q
d) greater or less than at Q depending upon the strength of current

14. A galvanometer acting as voltmeter will have –.............
a) high resistance in parallel with its coil
b) high resistance in series with its coil
c) low resistance in parallel with coil
d) low resistance in series with coil

15. A sensitive galvanometer like a moving coil galvanometer can be converted into an ammeter or a voltmeter by connecting a proper resistance to it. Which of the following statements is not true?
a) a voltmeter is connected in parallel and current through it is negligible
b) an ammeter is connected in parallel and p.d across it is small.
c) a voltmeter is connected in series and p.d across it is small
d) an ammeter is connected in series in a circuit and the current through it is negligible.

16. A uniform electric field and a uniform magnetic field are acting along the same direction in a certain region. If an electron is projected along the direction of the fields with a certain velocity, then
a) its velocity will decrease
b) its velocity will increase
c) it will turn towards right of direction of motion
d) it will turn towards left of direction of motion.

17. A charged particle moves through a magnetic field perpendicular to its direction. Then
a) kinetic energy changes but the momentum is constant
b) the momentum changes but the kinetic energy is constant
c) both momentum and kinetic energy of the particle are not constant
d) both momentum and kinetic energy of the particle are constant.

18. A very high magnetic field is applied to a stationary charge. Then, the charge experiences
a) a force in the direction of magnetic field
b) a force perpendicular to the magnetic field
c) a force in an arbitrary direction
d) no force

19. The electrons in the beam of a television tube move horizontally from south to north. The vertical component of the earth's magnetic field points down. The electron is deflected towards
a) west b) no deflection
c) east d) north to south

20. An electron is projected along the axis of a circular conductor carrying some current, Electron will experience force -
a) along the axis
b) perpendicular to the axis
c) at an angle of 4^0 with axis
d) no force experienced.

21. When deuterium and helium are subjected to an accelerating field simultaneously, then -
a) both acquire same energy
b) deuterium accelerates faster
c) helium accelerates faster
d) neither of them is accelerated

22. A straight wire of diameter 0.5mm carrying a current of 1 A is replaced by another wire of 1 mm diameter carrying same current. The strength of the magnetic field far away is –
a) twice the earlier value
b) half the earlier value
c) quarter of the earlier value
d) no change

Ans:- 10)d 11)b 12)a 13)a 14)a 15)d 16)a 17)b 18)d 19)a 20)d 21)d 22)d

ವಕ್ಫ್: ಕೈ–ಕಮಲ ಆರೋಪ– ಪ್ರತ್ಯಾರೋಪ

ವಕ್ಫ್ ಅಸ್ತಿಗಳ ಒತ್ತುವರಿಯನ್ನು ತೆರವು ಮಾಡಿಸಬೇಕು ಮತ್ತು ಪಹಣಿಗಳಲ್ಲಿ 'ವಕ್ಫ್ ಆಸ್ತಿ' ಎಂದು ನಮೂದಿಸಬೇಕು ಎಂಬ ನಿರ್ಧಾರವು ಬಿ.ಎಸ್.ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಅವಧಿಯಲ್ಲೇ ಆಗಿತ್ತು. ಈ ಅವಧಿಯಲ್ಲಿ ರೈತರು ಮತ್ತು ಭೂಮಾಲೀಕರಿಗೆ ಅತಿ ಹೆಚ್ಚು ಸಂಖ್ಯೆಯಲ್ಲಿ ನೋಟಿಸ್ ನೀಡಲಾಗಿತ್ತು ಎಂಬ ವಿಚಾರವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ಮಧ್ಯೆ ವಾಕ್ಸಮರ ಆರಂಭವಾಗಿದೆ.

ಬಿಜೆಪಿ ಪ್ರತಿಭಟನೆ ರಾಜಕೀಯ ದಿವಾಳಿತನ: ಸಿದ್ದರಾಮಯ್ಯ

ಬೆಂಗಳೂರು: 'ವಕ್ಫ್ ಆಸ್ತಿ ವಿಚಾರದಲ್ಲಿ ರಾಜ್ಯ ಬಿಜೆಪಿಯ ಆತ್ಮವಂಚನೆಯ ನಡವಳಿಕೆ ಮತ್ತೆ ಮತ್ತೆ ಬಯಲಾಗುತ್ತಿದ್ದರೂ ಕನಿಷ್ಠ ನಾಚಿಕೆ, ಮರ್ಯಾದೆ ಇಲ್ಲದೆ ಬೀದಿಗಿಳಿದು ನಮ್ಮ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುತ್ತಿರುವುದು ಆ ಪಕ್ಷದ ರಾಜಕೀಯ ದಿವಾಳಿತನ ಮತ್ತು ಹತಾಶ ಮನಸ್ಥಿತಿಯನ್ನು ಸೂಚಿಸುತ್ತದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ತಮ್ಮ ಫೇಸ್ ಬುಕ್ ಖಾತೆಯಲ್ಲಿ ಬರೆದುಕೊಂಡಿರುವ ಅವರು, 'ಬಣ ರಾಜಕೀಯದಿಂದ ಒಡೆದು ಹೋಗಿರುವ ರಾಜ್ಯ ಬಿಜೆಪಿಯ ನಾಯಕರು ಪ್ರತಿಭಟನೆ ನಡೆಸುತ್ತಿರುವುದು ವಕ್ಫ್ ಆಸ್ತಿ ರಕ್ಷಣೆಗಾಗಿ ಅಲ್ಲ, ಬೀದಿಪಾಲಾಗಿರುವ ತಮ್ಮ ಮಾನ ರಕ್ಷಣೆಗೆ ಎನ್ನುವುದನ್ನು ರಾಜ್ಯದ ಜನ ಅರ್ಥ ಮಾಡಿಕೊಂಡಿದ್ದಾರೆ' ಎಂದು ಕುಟುಕಿದ್ದಾರೆ.

'ವಕ್ಫ್ ಆಸ್ತಿ ಸಂರಕ್ಷಣೆಗೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ರೈತರಿಗೆ ನೋಟಿಸ್ ನೀಡಿರುವುದು ಬಿ.ಎಸ್. ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಸರ್ಕಾರ ಎನ್ನುವುದನ್ನು ಬಿಜೆಪಿ ಶಾಸಕ ಕುಮಾರ ಬಂಗಾರಪ್ಪ ಅಧ್ಯಕ್ಷತೆಯ ವಿಧಾನಮಂಡಲದ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯೇ ವರದಿ ನೀಡಿರುವುದನ್ನು 'ಪ್ರಜಾವಾಣಿ' ಪತ್ರಿಕೆ ಸೋಮವಾರದ ಸಂಚಿಕೆಯಲ್ಲಿ ಪ್ರಕಟಿಸಿದೆ. ತನ್ನ ಬಣ್ಣ ಬಯಲಾದ ನಂತರವಾದರೂ ಬುದ್ಧಿ ಕಲಿತು, ಪ್ರತಿಭಟನೆಯ ನಾಟಕ ನಿಲ್ಲಿಸಿ ತಮ್ಮ ಮರ್ಯಾದೆ ಅವರು ಉಳಿಸಿಕೊಳ್ಳಬೇಕು' ಎಂದಿದ್ದಾರೆ.

'ಸುಳ್ಳು ಆರೋಪ ಮತ್ತು ಅಪಪ್ರಚಾರಕ್ಕೆ ಸರಿಯಾದ ಶಿಕ್ಷೆಯನ್ನು ಇತ್ತೀಚಿನ ಉಪಚುನಾವಣೆಯಲ್ಲಿ ರಾಜ್ಯದ ಜಾಗೃತ ಮತದಾರರು ಬಿಜೆಪಿಗೆ ನೀಡಿದ್ದಾರೆ. ಇದರಿಂದಲೂ ಬುದ್ಧಿ ಕಲಿಯದೆ ಇದ್ದರೆ ರಾಜ್ಯದಲ್ಲಿ ಬಿಜೆಪಿಯನ್ನು ಶಾಶ್ವತವಾಗಿ ವಿರೋಧ ಪಕ್ಷದಲ್ಲಿಯೇ ಕುಳ್ಳಿರಿಸುವುದು ಖಚಿತ' ಎಂದೂ ಹೇಳಿದ್ದಾರೆ.

'ಮುಖಭಂಗ ಮಾಡಲು ಯತ್ನಾಳ ಹೋರಾಟ'

ಬೆಂಗಳೂರು: 'ರೈತರಿಗೆ ವಕ್ಫ್ ನೋಟಿಸ್ ವಿಚಾರದಲ್ಲಿ ನಮ್ಮ ಸರ್ಕಾರದ ಮೇಲೆ ಮಾಡುತ್ತಿದ್ದ ಆಪಾದನೆ ಏನೆಂಬ ಸತ್ಯ ಬಯಲಾಗಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸತ್ಯವನ್ನು ಯಾವತ್ತೂ ಹೆಚ್ಚು ದಿನ ಮುಚ್ಚಿಡಲು ಆಗುವುದಿಲ್ಲ. ರೈತರಿಗೆ ನೋಟಿಸ್ ಕೊಟ್ಟಿದ್ದೇವೆ ಎಂದು ನಮ್ಮ ಸರ್ಕಾರದ ಮೇಲೆ ಆಪಾದನೆ ಮಾಡುತ್ತಿದ್ದರು. ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರೈತರಿಗೆ ಹೆಚ್ಚು ನೋಟಿಸ್ ನೀಡಲಾಗಿದೆ. ಈಗ ಬಿಜೆಪಿಯವರು ಏನು ಹೇಳುತ್ತಾರೆ' ಎಂದು ಪ್ರಶ್ನಿಸಿದರು.

'ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ವಕ್ಫ್ ವಿಚಾರದಲ್ಲಿ ತಮ್ಮ ಪಕ್ಷದವರಿಗೆ ಮುಖಭಂಗ ಮಾಡಲು ಹೋರಾಟಕ್ಕೆ ಮುಂದಾಗಿದ್ದಾರೆ' ಎಂದರು. 'ನಾವು ವಿರೋಧ ಪಕ್ಷದಲ್ಲಿದ್ದಾಗ ರೈತರಿಗೆ ನೋಟಿಸ್ ನೀಡಿರುವ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ಹೀಗಾಗಿ ನಾವು ಆ ವಿಚಾರವನ್ನು ಕೈಗೆತ್ತಿಕೊಂಡಿರ ಲಿಲ್ಲ. ಈಗ ನಮ್ಮ ಗಮನಕ್ಕೆ ಬಂದಿರುವುದರಿಂದ ಎಚ್ಚರಿಕೆ ಯಿಂದ ಕೆಲಸ ಮಾಡುತ್ತೇವೆ' ಎಂದೂ ಹೇಳಿದರು.



'ಕೈ ನಾಯಕರಿಗೂ ನೋಟಿಸ್ ನೀಡಿದ್ದೆವು'

ಬೆಂಗಳೂರು: ಕಾಂಗ್ರೆಸ್ ನಾಯಕರು ಭಾರೀ ಪ್ರಮಾಣದಲ್ಲಿ ವಕ್ಫ್ ಭೂಮಿ ಕಬಳಿಸಿ ಮಾರಾಟ ಮಾಡಿರುವುದು ಅನ್ವರ್ ಮಾಣಿಪ್ಪಾಡಿ ಸಮಿತಿ ವರದಿಯಿಂದ ಬೆಳಕಿಗೆ ಬಂದಿತ್ತು. ಕಬಳಿಕೆ ಮಾಡಿದ ಕಾಂಗ್ರೆಸ್ ನಾಯಕರಿಗೆ ನೋಟಿಸ್ ನೀಡಲಾಗಿತ್ತೇ ಹೊರತು ಬಡ ರೈತರಿಗೆ ನೋಟಿಸ್ ನೀಡಿರಲಿಲ್ಲ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದಿನ ಬಿಜೆಪಿ ಸರ್ಕಾರ ಅನ್ವರ್ ಮಾಣಿಪ್ಪಾಡಿ ನೇತೃತ್ವದಲ್ಲಿ ಸಮಿತಿ ರಚಿಸಿ, ವಕ್ಫ್ ಭೂಕಬಳಿಕೆ ಕುರಿತು ವರದಿಯನ್ನು ಸಿದ್ಧಪಡಿಸಿತ್ತು. ಆಗ ಭೂಕಬಳಿಕೆ ಆಗಿದೆ ಎನ್ನುವುದನ್ನು ಒಪ್ಪಿಕೊಳ್ಳಲೂ ಕಾಂಗ್ರೆಸ್ ಸಿದ್ಧವಿರಲಿಲ್ಲ ಎಂದು ತಿಳಿಸಿದರು

ಕಾಂಗ್ರೆಸ್ ಪಕ್ಷದ ಅನೇಕ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪ್ರಭಾವಿ ಮುಖಂಡರು ಸಾವಿರಾರು ಎಕರೆ ವಕ್ಫ್ ಭೂಮಿ ಕಬಳಿಸಿರುವುದು ಮಾಣಿಪ್ಪಾಡಿ ವರದಿ ಉಲ್ಲೇಖಿಸಿದೆ. ಬಡವರ ಭೂಮಿ ನುಂಗಿರುವ ದೊಡ್ಡ ದೊಡ್ಡ ತಿಮಿಂಗಿಲಗಳನ್ನು ಹಿಡಿಯುವ ಉದ್ದೇಶದಿಂದ ಸರ್ಕಾರ ನೋಟಿಸ್ ಕೊಟ್ಟಿತ್ತು. ಈಗ ಕಾಂಗ್ರೆಸ್ ಸರ್ಕಾರವೇ ಇದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೊಟ್ಟ ನೋಟಿಸ್‌ಗಳಲ್ಲಿ ಏನಾದರೂ ತಪ್ಪಿದ್ದರೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಿ ಎಂದು ಅಶೋಕ ಸವಾಲು ಹಾಕಿದರು.

ಬಿಜೆಪಿ ಸರ್ಕಾರ ಬಡ ರೈತರಿಗೆ, ತಲೆ ತಲಾಂತರಗಳಿಂದ ಉಳುಮೆ ಮಾಡಿಕೊಂಡು ಬಂದಿರುವ ಕೃಷಿ ಜಮೀನುಗಳಿಗೆ, ಗೋಮಾಳಗಳಿಗೆ ಸ್ಮಶಾನಗಳಿಗೆ, ನೂರಾರು ವರ್ಷ ಇತಿಹಾಸ ಇರುವ ಸರ್ಕಾರಿ ಶಾಲೆಗಳು, ದೇವಸ್ಥಾನಗಳಿಗೆ, ಮಠ- ಮಾನ್ಯಗಳಿಗೆ ಪಾರಂಪರಿಕ ತಾಣಗಳಿಗೆ ಜನಸಾಮಾನ್ಯರ ಆಸ್ತಿಪಾಸ್ತಿಗಳಿಗೆ ಮತ್ತು ಮಾಜಿ ಶಾಸಕರ ಮನೆಗಳಿಗೆ ನೋಟಿಸ್ ನೀಡಿರಲಿಲ್ಲ. ಆದರೆ, ಕಾಂಗ್ರೆಸ್ ಈ ಕುರಿತು ಅಪಪ್ರಚಾರದಲ್ಲಿ ತೊಡಗಿದೆ ಎಂದು ಹರಿಹಾಯ್ದರು.

ವಕ್ಫ್ ವಿಚಾರದಲ್ಲಿ ದಿನಕ್ಕೊಂದು ನಾಟಕ, ಕ್ಷಣಕ್ಕೊಂದು ಸುಳ್ಳು ಹೇಳುತ್ತಿರುವ ಕಾಂಗ್ರೆಸ್ ಸರ್ಕಾರ ಈಗ ಮತ್ತೊಮ್ಮೆ ಜನರ ದಿಕ್ಕು ತಪ್ಪಿಸಲು ಹೊಸ ನಾಟಕ ಆರಂಭಿಸಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲೇ ಹೆಚ್ಚು ನೋಟಿಸ್ ನೀಡಲಾಗಿದೆ ಎಂದು ಮತ್ತೊಂದು ದಿಕ್ಕು ತಪ್ಪಿಸುವ ಪ್ರಯತ್ನ ಕಾಂಗ್ರೆಸ್‌ನಿಂದ ನಡೆದಿದೆ. ಓಲೈಕೆ ರಾಜಕಾರಣಕ್ಕೆ ಇನ್ನೆಷ್ಟು ಸುಳ್ಳು ಹೇಳುತ್ತೀರಿ ಎಂದು ಅವರು ಪ್ರಶ್ನಿಸಿದರು.

ಸಿದ್ದರಾಮಯ್ಯ ಸರ್ಕಾರ ಒಂದು ಕಡೆ ನೋಟಿಸ್ ನೀಡುತ್ತಿಲ್ಲ ಎಂದು ಹೇಳುತ್ತಿದೆ. ಆದರೆ, ರೈತರಿಗೆ, ಮಠ–ಮಂದಿರಗಳಿಗೆ ನೋಟಿಸ್ ಕಳಿಸುವುದು, ರಾತ್ರೋರಾತ್ರಿ ತರಾತುರಿಯಲ್ಲಿ ಭೂದಾಖಲೆಗಳನ್ನು ತಿದ್ದುವುದು ಮಾತ್ರ ನಿಂತೇ ಇಲ್ಲ. ಜಮೀರ್ ಅಹಮದ್ ಖಾನ್ ಅವರು ಇದೆಲ್ಲಾ ಮುಖ್ಯಮಂತ್ರಿಯವರ ಸೂಚನೆ ಮೇರೆಗೆ ನಡೆಯುತ್ತಿದೆ ಎಂದು ಹೇಳುವ ವಿಡಿಯೋ ಬಹಿರಂಗ ಆದ ಮೇಲೆ ಕಾಂಗ್ರೆಸ್ ಸುಳ್ಳುಗಳು ಬಯಲಾಯಿತು ಎಂದಿದ್ದಾರೆ.

ಡಿ.4 ರಿಂದ ಪ್ರವಾಸ: ಬೆಂಗಳೂರು: ರಾಜ್ಯದಲ್ಲಿನ ವಕ್ಫ್ ಆಸ್ತಿ ಒತ್ತುವರಿಯ ಮಾಹಿತಿ ಸಂಗ್ರಹಕ್ಕೆ ಬಿಜೆಪಿಯ 3 ತಂಡಗಳು ಡಿ.4ರಿಂದ 6ರವರೆಗೆ ರಾಜ್ಯ ಪ್ರವಾಸ ನಡೆಸಲಿವೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಡಿ.9ರಿಂದ ಆರಂಭ ವಾಗುವ ಬೆಳಗಾವಿ ಅಧಿವೇಶನದಲ್ಲಿ ಸದನದ ಒಳಗೆ, ಹೊರಗೆ ರೈತರ ಪರವಾಗಿ ಬಿಜೆಪಿ ಹೋರಾಟ ಮುಂದುವರೆಸಲಿದೆ ಎಂದರು.

'ಒಕ್ಕಲಿಗರಿಗೆ ಪರ್ಯಾಯ ನಾಯಕತ್ವದ ಅಗತ್ಯವಿದೆ'

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರು ಈಗಲಾದರೂ ರಾಜಕೀಯದಿಂದ ನಿವೃತ್ತಿಯಾಗಿ ಬೇರೆಯವರಿಗೆ ಅವಕಾಶ ಕೊಡಬೇಕು. ಯೋಗ ಮತ್ತು ಯೋಗ್ಯತೆ ಇರುವವರು ಸಮುದಾಯದ ನಾಯಕತ್ವ ವಹಿಸಿಕೊಳ್ಳಲಿ ಎಂದು ಶಾಸಕ ಸಿ.ಪಿ. ಯೋಗೇಶ್ವರ್ ಹೇಳಿದರು.

ಒಕ್ಕಲಿಗರ ಸಮುದಾಯ ಈಗಲಾದರೂ ಎಚ್.ಡಿ. ದೇವೇಗೌಡರ ಕುಟುಂಬದ ನಾಯಕತ್ವ ಬಿಟ್ಟು, ಪರ್ಯಾಯ ಒಕ್ಕಲಿಗ ನಾಯಕತ್ವದ ಕುರಿತು ಯೋಚಿಸಬೇಕು ಎಂದು ಅವರು ಸಲಹೆ ಮಾಡಿದರು.

ಪಟ್ಟಣದಲ್ಲಿ ಸೋಮವಾರ ಮಾಧ್ಯಮ ದವರೊಂದಿಗೆ ಮಾತನಾಡಿದ ಅವರು, ಒಕ್ಕಲಿಗರ ಶಕ್ತಿಯನ್ನು ಗೌಡರ ಕುಟುಂಬದವರು ಸ್ವಂತಕ್ಕೆ ಬಳಸಿಕೊಳ್ಳು ವುದು ಎಷ್ಟು ಸರಿ ಎಂದು ಅವರು ಪ್ರಶ್ನಿಸಿದರು. ಗೌಡರ ಕುಟುಂಬದಲ್ಲಿ ಎಷ್ಟು ಜನ ಶಾಸಕರಿದ್ದಾರೆ ಎಂಬುದನ್ನು ಒಕ್ಕಲಿಗ ಸಮುದಾಯದವರು ಗಮನಿಸಬೇಕು. ಗೌಡರ ಕುಟುಂಬದ ರಾಜಕಾರಣ ಸ್ವಾರ್ಥದಿಂದ ಕೂಡಿದೆ ಎಂದರು.

ಉಪ ಚುನಾವಣೆಯಲ್ಲಿ ಮೊಮ್ಮಗನನ್ನು ಪಣಕ್ಕಿಟ್ಟ ದೇವೇಗೌಡರನ್ನು ಜನ ತಿರಸ್ಕರಿಸಿದ್ದಾರೆ. ಪ್ರಾದೇಶಿಕ ಪಕ್ಷದ ಹೆಸರಿನಲ್ಲಿ ಕುಟುಂಬ ರಾಜಕಾರಣ ಮಾಡಿಕೊಂಡು ಬಂದಿರುವ ಅವರು, ಸಮಾಜವನ್ನು ದಿಕ್ಕು ತಪ್ಪಿಸುವ ಕೆಲಸ ಮಾಡಿದ್ದಾರೆ. ದೇವೇಗೌಡರನ್ನು ಹಳೆ ಮೈಸೂರು ಭಾಗದ ಜನ ಒಪ್ಪುತ್ತಿಲ್ಲ ಎಂಬುದು ಉಪ ಚುನಾವಣೆಯಲ್ಲಿ ಸಾಬೀತಾಗಿದೆ ಎಂದರು.

ನಾನು ಕಾಂಗ್ರೆಸ್‌ನಲ್ಲೇ ಇರುತ್ತೇನೆ. ಕುಮಾರಸ್ವಾಮಿ, ಯಡಿಯೂರಪ್ಪ ಹಾಗೂ ವಿಜಯೇಂದ್ರ ಪಿತೂರಿಯಿಂದ ಬಿಜೆಪಿಯಿಂದ ಹೊರಬಂದೆ. ನಾನು ಪಕ್ಕಾ ಕಾಂಗ್ರೆಸ್ಸಿಗ. ಪಕ್ಷ ಬಿಡಲ್ಲ

ಸಿ.ಪಿ. ಯೋಗೇಶ್ವರ್, ಚನ್ನಪಟ್ಟಣ ಶಾಸಕ

'ಜೆಡಿಎಸ್‌ನವರು ಬರುವುದಾದರೆ ಮಾತನಾಡುವೆ'

'ಜೆಡಿಎಸ್ ನಶಿಸುತ್ತಿರುವುದರಿಂದ ಅಲ್ಲಿನ ಶಾಸಕರು ಬೇರೆಡೆಗೆ ಮುಖ ಮಾಡುವುದು ಸಹಜ. ನಾನು ಜೆಡಿಎಸ್ ಶಾಸಕರನ್ನು ಆಪರೇಷನ್ ಮಾಡುವುದಿಲ್ಲ. ಅವರೇ ಪಕ್ಷ ತೊರೆದು ಬರುವುದಾದರೆ, ನಮ್ಮ ಹೈಕಮಾಂಡ್ ಜೊತೆ ಮಾತನಾಡುವೆ. ಜೆಡಿಎಸ್‌ನಲ್ಲಿ ಭವಿಷ್ಯವಿಲ್ಲ ಎಂಬುದನ್ನು ಅಲ್ಲಿನ ಶಾಸಕರು ಅರಿಯಬೇಕು. ಗೌಡರು ಹಳ್ಳಿ ಹಳ್ಳಿಗೆ ಬಂದು ಪ್ರಚಾರ ಮಾಡಿದರೂ ಸಮುದಾಯ ಗೌರವ ಕೊಡಲಿಲ್ಲ. ಕುಟುಂಬ ರಾಜಕಾರಣವನ್ನು ತಿರಸ್ಕರಿಸಿರುವುದು ಸ್ಪಷ್ಟವಾಗಿದೆ' ಎಂದು ಯೋಗೇಶ್ವರ್ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಭೈರತಿ ರಣಗಲ್ ಸಂಭ್ರಮಾಚರಣೆ

'ಭೈರತಿ ರಣಗಲ್' ಸಿನಿಮಾದ ಯಶಸ್ಸಿನ ಹಿನ್ನೆಲೆಯಲ್ಲಿ ಹುಬ್ಬಳ್ಳಿಯ ಅಪ್ಸರಾ ಚಿತ್ರಮಂದಿರದ ಆವರಣದಲ್ಲಿ ಸೋಮವಾರ ನಡೆದ ಸಂಭ್ರಮಾಚರಣೆಯಲ್ಲಿ ನಟ ಶಿವರಾಜ್‌ಕುಮಾರ್ ಅವರನ್ನು ನೋಡಲು ಅಭಿಮಾನಿಗಳು ಮುಗಿಬಿದ್ದರು

ಪ್ರಜಾವಾಣಿ ಚಿತ್ರ

ಅಂತರ ಕಾಯ್ದುಕೊಂಡ ಬೀದರ್ ಜಿಲ್ಲೆಯ ಬಿಜೆಪಿ ಶಾಸಕರು: ಜಿಲ್ಲಾ ಘಟಕದ ಅಧ್ಯಕ್ಷ ದೂರು

ಯತ್ನಾಳ ತಂಡದಿಂದ ವಕ್ಫ್ ಹೋರಾಟ ಆರಂಭ

ಪ್ರಜಾವಾಣಿ ವಾರ್ತೆ

ಬೀದರ್: ವಿಜಯಪುರದ ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದ ಬಿಜೆಪಿ ತಂಡವು 'ವಕ್ಫ್ ಭೂಕಬಳಿಕೆ ವಿರೋಧಿ ಜನಜಾಗೃತಿ ಹೋರಾಟ'ವನ್ನು ಬೀದರ್ ಜಿಲ್ಲೆಯಿಂದ ಸೋಮವಾರ ಆರಂಭಿಸಿತು. ಆದರೆ, ಜಿಲ್ಲೆಯ ನಾಲ್ವರು ಬಿಜೆಪಿ ಶಾಸಕರು, ಪಕ್ಷದ ಜಿಲ್ಲಾಧ್ಯಕ್ಷ ಸೇರಿದಂತೆ ಪ್ರಮುಖ ಮುಖಂಡರು ಈ ಹೋರಾಟದಿಂದ ದೂರ ಉಳಿದರು. ಅನಧಿಕೃತವಾಗಿ ಫ್ಲೆಕ್ಸ್ ಹಾಕಿರುವುದಕ್ಕೆ ಬಿಜೆಪಿ ಜಿಲ್ಲಾಧ್ಯಕ್ಷರೇ ಎಸ್ಪಿಗೆ ದೂರು ಸಲ್ಲಿಸಿದ್ದಾರೆ.

ಶಾಸಕರಾದ ರಮೇಶ ಜಾರಕಿಹೊಳಿ, ಬಿ.ಪಿ. ಹರೀಶ್, ಮುಖಂಡರಾದ ಅರವಿಂದ ಲಿಂಬಾವಳಿ, ಕುಮಾರ ಬಂಗಾರಪ್ಪ, ಜಿ.ಎಂ. ಸಿದ್ದೇಶ್ವರ ಅವರು ಯತ್ನಾಳ ತಂಡದಲ್ಲಿದ್ದಾರೆ. ಜಿಲ್ಲೆಯ ಬಿಜೆಪಿ ಮುಖಂಡ ಈಶ್ವರ ಸಿಂಗ್ ಠಾಕೂರ್ ಹೊರತುಪಡಿಸಿ ಬೇರೆ ಯಾರೂ ಅವರತ್ತ ಸುಳಿಯಲಿಲ್ಲ. ನಗರದಲ್ಲಿ ಮಧ್ಯಾಹ್ನ ನಡೆದ ಪ್ರತಿಭಟನಾ ಸಭೆಯಲ್ಲಿ ಬಿಜೆಪಿ ಮುಖಂಡ ಪ್ರಕಾಶ ಖಂಡ್ರೆ, ಜೆಡಿಎಸ್ ಮುಖಂಡ ಬಂಡೆಪ್ಪ ಕಾಶೆಂಪುರ್ ಪಾಲ್ಗೊಂಡಿದ್ದರು.

ಇದಕ್ಕೂ ಮುನ್ನ ನಗರದ ನರಸಿಂಹ ಝರಣಿಯಲ್ಲಿ ಗೋಪೂಜೆ, ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಯತ್ನಾಳ ತಂಡ ಪ್ರವಾಸ ಆರಂಭಿಸಿತು. ಬೀದರ್ ತಾಲ್ಲೂಕಿನ ಧರ್ಮಾಪೂರಕ್ಕೆ ಭೇಟಿ ನೀಡಿ, ಗ್ರಾಮಸ್ಥರೊಂದಿಗೆ ಚರ್ಚಿಸಿ, ಅವರ ದಾಖಲೆಗಳನ್ನು ಪರಿಶೀಲಿಸಿತು. ಇದಾದ ಕೆಲ ನಿಮಿಷಗಳಲ್ಲಿ ಅವರದೇ ಪಕ್ಷದ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರೂ ಆದ ರಾಜ್ಯ ಬಿಜೆಪಿ ಘಟಕದ ಕಾರ್ಯದರ್ಶಿ ಡಾ. ಶೈಲೇಂದ್ರ ಕೆ. ಬೆಲ್ದಾಳೆ ಬೆಂಬಲಿಗರು ಯತ್ನಾಳ ವಿರುದ್ಧ 'ಧಿಕ್ಕಾರ' ಘೋಷಣೆ ಕೂಗಿದರು.

'ಯತ್ನಾಳ ನೇತೃತ್ವದ ತಂಡ ಹೋರಾಟದ ವಿಷಯವನ್ನು ಕ್ಷೇತ್ರದ ಶಾಸಕರು ಹಾಗೂ ಬಿಜೆಪಿ ಕಾರ್ಯಕರ್ತರ ಗಮನಕ್ಕೆ ತಂದಿಲ್ಲ. ತಂದಿದ್ದರೆ ಹೋರಾಟ ಯಶಸ್ವಿ ಆಗುತ್ತಿತ್ತು. ಬಿಜೆಪಿಯಲ್ಲಿ ಬಹಳಷ್ಟು ನಾಯಕರಿದ್ದಾರೆ. ಕೇವಲ ನಾಲ್ಕು ಜನ ಕೂಡಿ ಏನೂ ಮಾಡಲು ಆಗುವುದಿಲ್ಲ. ಯತ್ನಾಳ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನು ಗೌರವಿಸಬೇಕು. ಇಲ್ಲವಾದರೆ ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕು' ಎಂದು ಆಗ್ರಹಿಸಿದರು. ಇದಕ್ಕೆ ಗ್ರಾಮಸ್ಥರು ಆಕ್ಷೇಪ ತೆಗೆದರು. ಬೆಲ್ದಾಳೆ ಅವರ ಬೆಂಬಲಿಗರು ಯತ್ನಾಳ ಹೋರಾಟದ ಬಗ್ಗೆ ತಗಾದೆ ತೆಗೆದಿರುವುದು ಸರಿಯಲ್ಲ ಎಂದು ಪ್ರತಿಪಾದಿಸಿದರು.

'ಅನಾಮಿಕರು ಬಿಜೆಪಿ ಹೆಸರಿನಲ್ಲಿ ವಕ್ಫ್ ಹೋರಾಟದ ಕುರಿತು ಬೀದರ್ ನಗರದಲ್ಲಿ ಪೋಸ್ಟರ್, ಫ್ಲೆಕ್ಸ್‌ಗಳನ್ನು ಹಾಕಿದ್ದಾರೆ. ಪಕ್ಷಕ್ಕೂ ಇದಕ್ಕೂ ಸಂಬಂಧವಿಲ್ಲ. ಪಕ್ಷದ ಹೆಸರು ದುರುಪಯೋಗ ಪಡಿಸಿಕೊಂಡವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಫ್ಲೆಕ್ಸ್, ಬ್ಯಾನರ್ ತೆರವುಗೊಳಿಸಬೇಕು' ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸೋಮನಾಥ ಪಾಟೀಲ ಅವರು ಎಸ್ಪಿ ಹಾಗೂ ನಗರಸಭೆ ಪೌರಾಯುಕ್ತರಿಗೆ ದೂರು ಸಲ್ಲಿಸಿದ್ದರು. ಈ ಸಂಬಂಧ 'ಪ್ರಜಾವಾಣಿ' ನಗರಸಭೆ ಪೌರಾಯುಕ್ತ ಶಿವರಾಜ ರಾಠೋಡ್ ಅವರನ್ನು ಸಂಪರ್ಕಿಸಿದಾಗ, 'ಬಿಜೆಪಿಯ ಕೆಲ ಮುಖಂಡರು ಅನುಮತಿ ಪಡೆದುಕೊಂಡೇ ಫ್ಲೆಕ್ಸ್‌ಗಳನ್ನು ಹಾಕಿದ್ದಾರೆ. ಹೀಗಾಗಿ ತೆರವುಗೊಳಿಸಿಲ್ಲ' ಎಂದು ತಿಳಿಸಿದ್ದಾರೆ.

ನಗರದಲ್ಲಿ ಪ್ರತಿಭಟನಾ ರ್‍ಯಾಲಿ ನಡೆಸಿದ ಯತ್ನಾಳ ಹಾಗೂ ತಂಡದ ಬೆಂಬಲಿಗರು, ರೈತರ ಪಹಣಿಯಿಂದ ವಕ್ಫ್ ಆಸ್ತಿ ಎಂದು ನಮೂದಾಗಿರುವುದನ್ನು ಕೈಬಿಡಬೇಕು ಎಂದು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಇದಕ್ಕೂ ಮುನ್ನ ನಡೆದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಲಿಂಬಾವಳಿ, 'ಇದು ಒಂದು ಗುಂಪಿನ ಹೋರಾಟವಲ್ಲ. ವಿವಾದ ಸೃಷ್ಟಿಸಲೂ ಬಂದಿಲ್ಲ. ಹಿಂದೂ ಸಮಾಜದ ಆಸ್ತಿ ರಕ್ಷಣೆಗೆ ಬಂದಿದ್ದೇವೆ. ಹೀಗಾಗಿಯೇ ಜನಜಾಗೃತಿ ಮೂಡಿಸುತ್ತಿದ್ದೇವೆ. ಕಲಬುರಗಿ, ಬಾಗಲಕೋಟೆ, ರಾಯಚೂರು ಹಾಗೂ ಬೆಳಗಾವಿಗೂ ಭೇಟಿ ಕೊಟ್ಟು ಜನರಲ್ಲಿ ಜಾಗೃತಿ ಮೂಡಿಸುತ್ತೇವೆ' ಎಂದು ಹೇಳಿದರು.

'ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರ ಕಾಲದಲ್ಲಿ ನೋಟಿಸ್ ಕೊಡಲಾಗಿದೆ ಎಂಬುದು ನಮಗೆ ಸಂಬಂಧವಿಲ್ಲದ ವಿಷಯ. ರೈತರು, ಮಠ–ಮಂದಿರಗಳ ಜಮೀನು ಅವರ ಬಳಿಯೇ ಇರಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ' ಎಂದು ಸ್ಪಷ್ಟಪಡಿಸಿದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದಲ್ಲಿ ಬೀದರ್‌ನಲ್ಲಿ ಸೋಮವಾರ 'ವಕ್ಫ್ ಭೂಕಬಳಿಕೆ ವಿರೋಧಿ ಜನಜಾಗೃತಿ ಹೋರಾಟ'ದ ಪ್ರತಿಭಟನಾ ರ್‍ಯಾಲಿ ನಡೆಯಿತು

ಮುಸ್ಲಿಮರು ಹೋರಾಟ ಮಾಡುತ್ತಾರೆ, ಬೆಂಕಿ ಹಚ್ಚುತ್ತಾರೆ. ನಾವು ಹಿಂದೂಗಳು ಹೊರಗೆ ಬರದೆ ಸುಮ್ಮನೆ ಕೂರಬಾರದು. ನಿಮ್ಮಿಂದ ಏನೂ ಮಾಡಲಾಗದಿದ್ದರೆ ಬಸವಣ್ಣನವರಂತೆ ಹೊಳ್ಯಾಗ (ನದಿಗೆ) ಜಿಗೀರಿ, ಇಲ್ಲವಾದರೆ ಸಾಬ್ರು (ಮುಸ್ಲಿಂ) ಆಗ್ರಿ

ಬಸನಗೌಡ ಪಾಟೀಲ ಯತ್ನಾಳ, ಶಾಸಕ

'ವಕ್ಫ್ ದಂಧೆ ತಡೆಗೆ ನೋಟಿಸ್'

ಬೀದರ್: 'ವಕ್ಫ್ ಆಸ್ತಿ ಹೆಸರಲ್ಲಿ ದೊಡ್ಡ ದಂಧೆ, ಮೋಸ ಮಾಡುತ್ತಿದ್ದಾರೆ ಎಂಬ ಕಾರಣಕ್ಕಾಗಿಯೇ ಬಿಜೆಪಿ ಸರ್ಕಾರದ ಅವಧಿಯಲ್ಲಿ ಹೆಚ್ಚು ನೋಟಿಸ್ ಕೊಡಲಾಗಿದೆ. ಕಾಂಗ್ರೆಸ್ ಮುಖಂಡರಾದ ರೆಹಮಾನ್ ಖಾನ್, ಜಾಫರ್ ಷರೀಫ್, ಎನ್.ಎ. ಹ್ಯಾರಿಸ್ ಅಂಥವರಿಗೆ ನೋಟಿಸ್ ಕೊಟ್ಟಿದ್ದೇವೆ. ನಮ್ಮ ಕಾಲದಲ್ಲಿ ಯಾವುದೇ ರೈತರಿಗೆ ನೋಟಿಸ್ ಕೊಟ್ಟಿಲ್ಲ' ಎಂದು ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಮಾಜಿ ಅಧ್ಯಕ್ಷರೂ ಆದ ಬಿಜೆಪಿ ಮುಖಂಡ ಕುಮಾರ್ ಬಂಗಾರಪ್ಪ ಹೇಳಿದರು.

ನಗರದಲ್ಲಿ ಸೋಮವಾರ ನಡೆದ 'ವಕ್ಫ್ ಭೂಕಬಳಿಕೆ ವಿರೋಧಿ ಜನಜಾಗೃತಿ ಹೋರಾಟ'ದಲ್ಲಿ ಮಾತನಾಡಿದ ಅವರು, 'ಸಿಕ್ಕ ಸಿಕ್ಕವರ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ಸೇರಿಸುವುದು ಒಂದು ದಂಧೆಯಾಯಿತು. ಕಣ್ಣಿಗೆ ಕಾಣಿಸಿದಷ್ಟು ವಕ್ಫ್ ಆಸ್ತಿ ಎಂದು ನಮೂದಿಸಿದರು. ರಾಜಕಾರಣಿಗಳು, ಅಧಿಕಾರಿಗಳು ಸೇರಿಕೊಂಡು ದಂಧೆ, ಮೋಸ ಮಾಡುತ್ತಿದ್ದಾರೆ ಎಂಬುದು ಗಮನಕ್ಕೆ ಬಂದ ನಂತರ ನೋಟಿಸ್ ಕೊಟ್ಟಿದ್ದೇವೆ. ಈ ವಿಷಯವನ್ನು ಗೃಹಸಚಿವ ಡಾ. ಜಿ.ಪರಮೇಶ್ವರ ಹಾಗೂ ಕಾಂಗ್ರೆಸ್ ಮುಖಂಡರು ಗಮನಿಸಬೇಕು' ಎಂದರು.

ಗ್ಯಾರಂಟಿ: ಜಾರ್ಜ್ ಭಾಷಣಕ್ಕೆ ಅಡ್ಡಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಒಕ್ಕಲಿಗರ ಬೆಳ್ಳಿ ಭವನ ಉದ್ಘಾಟನಾ ಸಮಾರಂಭದಲ್ಲಿ ಗ್ಯಾರಂಟಿ ಯೋಜನೆಗಳನ್ನು ಪ್ರಸ್ತಾಪಿಸಿದ ಸಚಿವ ಕೆ.ಜೆ.ಜಾರ್ಜ್ ಅವರ ಭಾಷಣಕ್ಕೆ ಕೆಲವರು ಅಡ್ಡಿಪಡಿಸಿದರು.

ನಗರದ ಎಐಟಿ ವೃತ್ತದ ಬಳಿ ಜಿಲ್ಲಾ ಒಕ್ಕಲಿಗರ ಸಂಘದಿಂದ ನಿರ್ಮಿಸಿರುವ ಬೆಳ್ಳಿ ಭವನ ಉದ್ಘಾಟನೆಯನ್ನು ಸೋಮವಾರ ನೆರವೇರಿಸಿ ಸಚಿವರು ಭಾಷಣ ಆರಂಭಿಸಿದರು. ಮಾತಿನ ನಡುವೆ ಗ್ಯಾರಂಟಿ ಯೋಜನೆ ಪ್ರಸ್ತಾಪಿಸಿದಾಗ ಕೆಲವರು ವೇದಿಕೆಯ ಮುಂದೆ ಬಂದು ಆಕ್ಷೇಪ ವ್ಯಕ್ತಪಡಿಸಿದರು. 'ಇದು ರಾಜಕೀಯ ವೇದಿಕೆಯಲ್ಲ, ರಾಜಕೀಯ ಮಾತನಾಡುವುದಾದರೆ ಕೆಳಗೆ ಇಳಿಯಿರಿ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮುಜುಗರಕ್ಕೆ ಒಳಗಾದ ಸಚಿವರು, 'ಭಾಷಣಕ್ಕೆ ಅಡ್ಡಿಪಡಿಸಿ ರಾಜಕೀಯ ಮಾಡಬೇಡಿ, ನನಗೂ ರಾಜಕೀಯ ಬರುತ್ತದೆ' ಎಂದು ಸಿಟ್ಟಾದರು. ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು. ಮತ್ತೆ ಮೈಕ್ ಬಳಿ ಬಂದ ಸಚಿವರು, 'ನನ್ನ ಮಾತಿನಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಕೇಳುತ್ತೇನೆ' ಎಂದರು. ನಂತರ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಕೆ.ಜೆ.ಜಾರ್ಜ್, 'ಗ್ಯಾರಂಟಿ ಯೋಜನೆಗಳ ಬಗ್ಗೆ ಮಾತನಾಡಿದ್ದಕ್ಕೆ ಒಕ್ಕಲಿಗರ ಸಂಘದ ಸಮಾರಂಭದಲ್ಲಿ ಕೆಲವರು ಆಕ್ಷೇಪಿಸಿದರು. ಗ್ಯಾರಂಟಿ ಯೋಜನೆಗಳು ರಾಜ್ಯ ಸರ್ಕಾರದ ಕಾರ್ಯಕ್ರಮ ಆಗಿರುವುದರಿಂದ ಜನರಿಗೆ ಅನುಕೂಲ ಆಗಲಿ ಎಂಬ ಕಾರಣಕ್ಕೆ ಹೇಳಿದೆ' ಎಂದರು.



ಶಿಗ್ಗಾವಿಯಲ್ಲಿ ಕಾಂಗ್ರೆಸ್ ಗೆಲುವು: ಹೆಸ್ಕಾಂಗೆ ಖಾದ್ರಿ ಅಧ್ಯಕ್ಷ

ಹಾವೇರಿ: ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾಸೀರ ಅಹಮದ್ ಖಾನ್ ಅವರ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಸೈಯದ್ ಅಜ್ಜಂಪೀರ ಖಾದ್ರಿ ಅವರನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ (ಹೆಸ್ಕಾಂ) ಅಧ್ಯಕ್ಷರನ್ನಾಗಿ ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಟಿಕೆಟ್ ವಿಷಯದಲ್ಲಿ ಬಂಡಾಯ ಎದ್ದಿದ್ದ ಖಾದ್ರಿ ಅವರು ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನವೊಲಿಕೆ ಬಳಿಕ ನಾಮಪತ್ರ ಹಿಂಪಡೆದಿದ್ದರು.



ಸೈಯದ್ ಅಜ್ಜಂಪೀರ ಖಾದ್ರಿ

ಜಿ.ಟಿ. ದೇವೇಗೌಡರೊಂದಿಗೆ ಚರ್ಚೆ; ಕುಮಾರಸ್ವಾಮಿ ವಿರುದ್ಧ ಅಸಮಾಧಾನ

'ಜೆಡಿಎಸ್‌ನಲ್ಲಿ ನೊಂದ ಶಾಸಕರ ಒಗ್ಗೂಡಿಸುವೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಜಿ.ಟಿ. ದೇವೇಗೌಡ ಸೇರಿದಂತೆ ಜೆಡಿಎಸ್‌ನ 12ರಿಂದ 13 ಶಾಸಕರು ಪಕ್ಷದಲ್ಲಿ ನಡೆಯುತ್ತಿರುವ ಬೆಳವಣಿಗೆಯ ಬಗ್ಗೆ ಬೇಸರಗೊಂಡಿದ್ದು, ನೋವು ನುಂಗಿಕೊಂಡಿದ್ದಾರೆ. ಈಗ ಅವರೆನ್ನಲ್ಲಾ ಒಗ್ಗೂಡಿಸಲು ಆರಂಭಿಸಿದ್ದೇನೆ. ಮುಂದೆ ಏನೇನಾಗುತ್ತದೋ ನೋಡೋಣ' ಎಂದು ಕೇಂದ್ರದ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ತಿಳಿಸಿದರು. ಇಲ್ಲಿ ಸೋಮವಾರ ಜಿ.ಟಿ. ದೇವೇಗೌಡರನ್ನು ಭೇಟಿಯಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ಪಕ್ಷದ ರಾಜ್ಯ ಘಟಕಕ್ಕೆ ಈಗಲೂ ನಾನೇ ಅಧ್ಯಕ್ಷ. ನಮ್ಮ ಶಾಸಕರ ನೋವು ನಿವಾರಿಸುವ ಜವಾಬ್ದಾರಿ ನನ್ನದು' ಎಂದರು.

ಸಿ.ಎಂ.ಇಬ್ರಾಹಿಂ

'ಜಿಟಿಡಿ ಕಳೆದ ವಿಧಾನಸಭೆ ಚುನಾವಣೆ ವೇಳೆಯೇ ಕಾಂಗ್ರೆಸ್‌ಗೆ ಹೋಗಿದ್ದರೆ ಸಚಿವರಾಗುತ್ತಿದ್ದರು. ಪಕ್ಷವನ್ನು ಬಲಪಡಿಸಲೆಂದು ನಾನೇ ಅವರನ್ನು ಉಳಿಸಿಕೊಂಡೆ. ಈಗ ಅವರ ಕತ್ತು ಕೊಯ್ಯುವ ಕೆಲಸ ನಡೆದಿದೆ. ಎಲ್ಲಾ ವಿಚಾರಗಳ ಬಗ್ಗೆಯೂ ಅವರೊಂದಿಗೆ ಚರ್ಚಿಸಿದ್ದೇನೆ' ಎಂದರು.

'ಶೀಘ್ರ ರಾಜ್ಯ ಪ್ರವಾಸ ಮಾಡಲಿದ್ದು, ಕೆಲವು ನಾಯಕರನ್ನು ಭೇಟಿಯಾಗಿ, ಮತ್ತೆ ಜಿಟಿಡಿಯವರನ್ನು ಭೇಟಿಯಾಗುತ್ತೇನೆ. ಮೂಲ ಜೆಡಿಎಸ್ ನಮ್ಮದೇ. ಅದರ ಖಾತೆ, ಪಹಣಿ ನಮ್ಮ ಹೆಸರಿನಲ್ಲಿವೆ. ಈಗಲೂ ಎಚ್.ಡಿ. ದೇವೇಗೌಡರು ಬಿಜೆಪಿ ಬಿಟ್ಟು ಬರಲಿ. ಪಕ್ಷವನ್ನು ಕಟ್ಟುತ್ತೇವೆ. ಹೊಸ ಪಕ್ಷವೋ, ಬಲವರ್ಧನೆಯೋ? ಪರಿಸ್ಥಿತಿ ಆಧರಿಸಿ ತೀರ್ಮಾನಿಸುತ್ತೇವೆ. ಕಾಂಗ್ರೆಸ್‌ನೊಂದಿಗೆ ಹೋಗುವುದಿಲ್ಲ. ತೃತೀಯರಂಗ ಸ್ಥಾಪಿಸುವ ಮನಸ್ಸು ಮಾಡುತ್ತಿದ್ದೇವೆಯಷ್ಟೆ' ಎಂದರು.

ಬೆಂಕಿ ಬಿದ್ದಿದೆ: 'ಜೆಡಿಎಸ್ ಮನೆಗೆ ಬೆಂಕಿ ಬಿದ್ದಾಗಿದೆ. ಪಕ್ಷದ ಎಲ್ಲಾ ಶಾಸಕರೂ ಕ್ಷೇತ್ರ ಕಾಪಾಡಿಕೊಳ್ಳಬೇಕು. ಹೀಗಾಗಿ ಒಬ್ಬೊಬ್ಬರೇ ಮಾತನಾಡಲಾರಂಭಿಸಿದ್ದಾರೆ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಇನ್ನಾದರೂ ಬುದ್ಧಿ ಕಲಿಯಬೇಕು. ಪಕ್ಷವನ್ನು ಫ್ಯಾಮಿಲಿ ಕಂಪನಿ ಮಾಡುವುದನ್ನು ಬಿಡಬೇಕು. ಆಗ ಪಕ್ಷವನ್ನು ಉಳಿಸಿಕೊಳ್ಳಬಹುದು. ಪಕ್ಷವು ಬಸ್ ನಿಲ್ದಾಣದಲ್ಲಿ ನಿಂತ ಬಸವಿಯಂತಾಗಿದೆ. ಬಿಜೆಪಿಯನ್ನು ಲವ್ ಮಾಡಿದ್ದಾಯಿತು. ಈಗ ಅವರನ್ನು ಅಲ್ಲೇ ಬಿಟ್ಟು ಬಿಡಬೇಕು' ಎಂದರು.

'ನಾನು ಕುಮಾರಸ್ವಾಮಿ ಜೊತೆಯಲ್ಲಿದ್ದಾಗ ಚನ್ನಪಟ್ಟಣದಲ್ಲಿ ₹4 ಕೋಟಿ ಖರ್ಚು ಮಾಡಿ, 20ಸಾವಿರ ಮತಗಳ ಅಂತರದಿಂದ ಗೆದ್ದಿದ್ದರು. ಈಗ ನಾನು ಅವರೊಂದಿಗಿಲ್ಲ. ₹150 ಕೋಟಿ ಖರ್ಚಾದರೂ ಅವರ ಮಗ ನಿಖಿಲ್ 25 ಸಾವಿರ ಮತಗಳ ಅಂತರದಿಂದ ಸೋತಿದ್ದಾರೆ. ಮುಸ್ಲಿಮರಿಲ್ಲದಿದ್ದರೆ ಪಕ್ಷಕ್ಕೆ ಒಂದು ಸ್ಥಾನವೂ ಬರುವುದಿಲ್ಲವೆಂಬುದು ಖಚಿತವಾಗಿದೆ. ಅವತ್ತು 19 ಜನ ಗೆದ್ದದ್ದು ಮುಸ್ಲಿಮರಿಂದಲೇ ಎಂಬುದೂ ಸಾಬೀತಾಗಿದೆ' ಎಂದರು.

'ಪ್ರಚಾರಕ್ಕೆ ಕರೆದಿದ್ದಾಗಿ ದೇವೇಗೌಡರು ಹೇಳಿದರೆ ರಾಜಕಾರಣವನ್ನೇ ಬಿಡುವೆ'

ಮೈಸೂರು: 'ಚನ್ನಪಟ್ಟಣ ಉಪ ಚುನಾವಣೆ ಪ್ರಚಾರಕ್ಕೆ ಬರುವಂತೆ ಎಚ್.ಡಿ. ದೇವೇಗೌಡರು ಕರೆದಿರಲಿಲ್ಲ. ಕರೆದಿದ್ದೆ ಎಂದು ಅವರು ಹೇಳಿದರೆ, ಅಂದೇ ರಾಜಕಾರಣ ಬಿಡುವೆ' ಎಂದು ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

'ಜಿಟಿಡಿ ಅವರನ್ನು ದೇವೇಗೌಡರೇ ಕರೆದಿದ್ದರು' ಎಂಬ ಮಾಜಿ ಸಚಿವ ಸಾ.ರಾ. ಮಹೇಶ್ ಹೇಳಿಕೆಗೆ ಇಲ್ಲಿ ಸೋಮವಾರ ಪ್ರತಿಕ್ರಿಯಿಸಿ, 'ಸಾ.ರಾ.ಮಹೇಶ್ ಸುಳ್ಳು ಹೇಳುವುದನ್ನು ನಿಲ್ಲಿಸಬೇಕು. ಸುಳ್ಳು ಹೇಳಿಕೊಂಡು ಪ್ರಮಾಣ ಮಾಡುತ್ತೇನೆ ಚಾಮುಂಡಿಬೆಟ್ಟಕ್ಕೆ ಬಾ ಅಂದರೆ ಹೋಗಲಾಗುತ್ತದೆಯೇ? ಈ ಹಿಂದೆ ಎಚ್. ವಿಶ್ವನಾಥ್ ಜೊತೆ ಚಾಮುಂಡಿಬೆಟ್ಟಕ್ಕೆ ಹೋಗಿ ಅವರ ಕಥೆ ಏನಾಯಿತು? ಅದೇ ನನಗೂ ಆಗಬೇಕಾ' ಎಂದು ಕೇಳಿದರು.

'ನಾನು ಹೇಳುತ್ತಿರುವುದೇ ಸತ್ಯ. ತಪ್ಪು ಮಾಡಿದ್ದರೆ ಒಪ್ಪಿಕೊಳ್ಳುತ್ತೇನೆ. ಒಂದು ಬಾರಿ ತಪ್ಪು ಮಾಡಿ, ಅಂದು ಸಂಜೆಯೇ ತಾಯಿ ಬಳಿ ತಪ್ಪೊಪ್ಪಿಕೊಂಡಿದ್ದೆ. ಯಾವುದಕ್ಕೂ ಹೆದರುವುದಿಲ್ಲ; ಸುಳ್ಳು ಹೇಳುವುದಿಲ್ಲ' ಎಂದರು. 'ಒಬ್ಬರ ಹೆಸರಿಟ್ಟುಕೊಂಡು ರಾಜಕಾರಣ ಮಾಡುವ ಅನಿವಾರ್ಯತೆ ನನಗಿಲ್ಲ. ಯಾರಿಲ್ಲದಿದ್ದರೂ ರಾಜಕಾರಣ ಮಾಡಿದ್ದೇನೆ. ನಾನು ಯಾರ ಕತ್ತನ್ನೂ ಕೊಯ್ದಿಲ್ಲ. ನನ್ನನ್ನು ಯಾರೂ ಯಾವ ಪಕ್ಷಕ್ಕೂ ಕರೆದಿಲ್ಲ' ಎಂದರು. 'ಸಿ.ಪಿ. ಯೋಗೇಶ್ವರ್ ಜೊತೆ ಉಪ ಚುನಾವಣೆಗೂ ಮುಂಚೆಯೇ ಮಾತನಾಡಿದ್ದೆ. ಪಕ್ಷದಲ್ಲಿ ನನಗೆ ನೋವು ಹೊಸದೇನಲ್ಲ' ಎಂದರು. ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರೂ ಜಿಟಿಡಿ ಅವರೊಂದಿಗೆ ಚರ್ಚಿಸಿದರು.

ಪ್ರಾದೇಶಿಕ ಪಕ್ಷ ಕಟ್ಟುವ ಬಗ್ಗೆ ಸಿ.ಎಂ. ಇಬ್ರಾಹಿಂ ಹೇಳಿಕೊಂಡಿದ್ದಾರೆ. ಶಾಸಕರನ್ನು ಕಟ್ಟಿಕೊಂಡು ಪಕ್ಷಗಳನ್ನು ಕಟ್ಟಲಾಗದು. ಕಾರ್ಯಕರ್ತರು ಬೇಕು. ನಾನು ಅವರು ಹೇಳಿದ್ದನ್ನು ಕೇಳಿಸಿಕೊಂಡಿದ್ದೇನೆ ಅಷ್ಟೆ

ಜಿ.ಟಿ.ದೇವೇಗೌಡ, ಶಾಸಕ

'ಮುಡಾ' ಕಡತ ನಾಪತ್ತೆಯಾಗಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಡತಗಳು ನಾಪತ್ತೆಯಾಗಿಲ್ಲ. ಕಡತಗಳನ್ನು ಯಾರೂ ಎತ್ತಿಕೊಂಡು ಹೋಗಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಡಿ.ಕೆ. ಶಿವಕುಮಾರ್

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮುಡಾ' ನಿವೇಶನ ಹಂಚಿಕೆ ಪ್ರಕರಣದ 144 ಕಡತಗಳು ಪತ್ತೆಯಾಗಿಲ್ಲ ಎಂಬ ಲೋಕಾಯುಕ್ತ ವರದಿ ಬಗ್ಗೆ ಮಾಹಿತಿ ಇಲ್ಲ. ಕಡತಗಳನ್ನು ಯಾರೂ ಎತ್ತಿಕೊಂಡು ಹೋಗಲು ಸಾಧ್ಯವಿಲ್ಲ, ಕಚೇರಿಯಲ್ಲೇ ಇರುತ್ತವೆ ಅಥವಾ ಯಾರಾದರೂ ಸರ್ಕಾರಕ್ಕೆ ತೋರಿಸಲು ತೆಗೆದುಕೊಂಡು ಹೋಗಿರಬಹುದು ಎಂದರು.

ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಭವಿಷ್ಯವಿದೆ ಎನ್ನುವುದು ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರಿಗೆ ಅರಿವಾಗಿದೆ. ಹಾಗಾಗಿಯೇ, ಬಿಜೆಪಿ, ಜೆಡಿಎಸ್ ಕಾರ್ಯಕರ್ತರು, ನಾಯಕರ ಸಹಕಾರ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಸಿಕ್ಕಿದೆ. ಬಿಜೆಪಿ ಪ್ರಚಾರಕ್ಕಾಗಿ ವಕ್ಫ್ ವಿಚಾರ ಬಳಸಿಕೊಳ್ಳುತ್ತಿದೆ. ಮುಸ್ಲಿಮರ ಮತ ಕೇಳುವ ನೈತಿಕತೆಯನ್ನು ಜೆಡಿಎಸ್ ಕಳೆದುಕೊಂಡಿದೆ. ಅದರ ಫಲ ಈಗಾಗಲೇ ಅವರಿಗೆ ಸಿಕ್ಕಿದೆ ಎಂದರು.

ಭಿನ್ನಮತೀಯರ ಧ್ವನಿ ಅಡಗಿಸಲು ವರಿಷ್ಠರಿಗೆ ವಿಜಯೇಂದ್ರ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸಂಸದೀಯ ಮಂಡಳಿಸದಸ್ಯಬಿ.ಎಸ್.ಯಡಿಯೂರಪ್ಪ ಹಾಗೂ ತಮ್ಮ ವಿರುದ್ಧ ನಿರಂತರವಾಗಿ ಟೀಕೆ ಮಾಡುತ್ತಿರುವ ಪಕ್ಷದ ನಾಯಕರ ವಿರುದ್ಧ ಕ್ರಮಕೈಗೊಳ್ಳುವಂತೆ ವರಿಷ್ಠರ ಮೇಲೆ ಒತ್ತಡ ಹಾಕಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮುಂದಾಗಿದ್ದಾರೆ.

'ಬಿ.ಎಸ್. ಯಡಿಯೂರಪ್ಪ 2019ರಲ್ಲಿ ಮುಖ್ಯಮಂತ್ರಿಯಾದ ದಿನದಿಂದಲೂ ಅವರ ವಿರುದ್ಧ ಹಾಗೂ ತಾವು ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಅಲಂಕರಿಸಿದ ನಂತರವೂ ನಿರಂತರ ವಾಗಿ ವಾಗ್ದಾಳಿ ನಡೆಸುತ್ತಿರುವ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಇಷ್ಟು ವರ್ಷಗಳಾದರೂ ಶಿಸ್ತುಕ್ರಮ ಕೈಗೊಂಡಿಲ್ಲ. ಇದರಿಂದ ಪಕ್ಷಕ್ಕೆ ದೊಡ್ಡ ಹೊಡೆತ ಬೀಳುತ್ತಿದೆ. ಅವರ ಜತೆಗೆ ಇನ್ನೂ ಕೆಲ ಶಾಸಕರು, ಮಾಜಿ ಶಾಸಕರು ಸೇರಿಕೊಂಡು ಬಹಿರಂಗವಾಗಿ ಟೀಕೆ ಮಾಡುತ್ತಿದ್ದಾರೆ. ಅಲ್ಲದೇ, ಪಕ್ಷದ ವೇದಿಕೆ ಹೊರತಾಗಿ ಹೋರಾಟ ರೂಪಿಸುವ ಮೂಲಕ ಪಕ್ಷಕ್ಕೆ ಪೆಟ್ಟು ನೀಡುತ್ತಿದ್ದಾರೆ. ತಕ್ಷಣ ಇಂತಹ ನಡೆಗೆ ತಡೆ ಹಾಕಬೇಕೆಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್‌ಶಾ ಬಳಿ ದೂರು ನೀಡಲು ನಿರ್ಧರಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

ವರಿಷ್ಠರ ಗಮನಕ್ಕೆ ತರುತ್ತೇವೆ: ಪಿ.ರಾಜೀವ್

ಬಸನಗೌಡ ಪಾಟೀಲ ಯತ್ನಾಳ ಅವರು ಪ್ರತ್ಯೇಕವಾಗಿ ಹೋರಾಟ ನಡೆಸುತ್ತಿರುವ ಕುರಿತು ಪಕ್ಷದ ರಾಷ್ಟ್ರೀಯ ನಾಯಕರ ಗಮನಕ್ಕೆ ತರುತ್ತೇವೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಅವರು ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಯತ್ನಾಳ ಅವರು ತಮ್ಮ ಹೋರಾಟಕ್ಕೆ ರಾಷ್ಟ್ರೀಯ ನಾಯಕರ ಅನುಮತಿ ಪಡೆದಿಲ್ಲ. ರಾಜ್ಯ ಮತ್ತು ಜಿಲ್ಲಾ ನಾಯಕರಿಂದ ಅನುಮತಿ ಪಡೆದಿಲ್ಲ. ಅದು ಅಶಿಸ್ತು ಕೂಡ ಆಗುತ್ತದೆ ಎಂದರು. 'ಇಲ್ಲಿಯವರೆಗೆ ರಾಜ್ಯ ಮಟ್ಟದಲ್ಲೇ ಸಮಸ್ಯೆ ಬಗೆಹರಿಸುವ ಪ್ರಯತ್ನ ಮಾಡಿದ್ದೆವು. ಅದನ್ನು ಅವರು ಒಪ್ಪಿಕೊಳ್ಳಲಿಲ್ಲ. ಅನ್ಯ ಮಾರ್ಗವಿಲ್ಲದೇ ರಾಷ್ಟ್ರ ನಾಯಕರ ಗಮನಕ್ಕೆ ತರುತ್ತೇವೆ' ಎಂದು ಹೇಳಿದರು.

'ಅಧಿಕಾರಿಗಳಿಂದಲೇ ಮಾಹಿತಿ ಸೋರಿಕೆ'

ಮೈಸೂರು: 'ಮುಡಾದಲ್ಲಿ ಅಕ್ರಮವಾಗಿ ನಿವೇಶನಗಳ ಹಂಚಿಕೆ ಕುರಿತು ದಾಖಲೆ ಸಂಗ್ರಹಿಸಿದ್ದ ಲೋಕಾಯುಕ್ತ, ಮುಡಾ ಕಚೇರಿ ಮೇಲೆ ದಾಳಿಗೆ ಜೂನ್‌ನಲ್ಲಿ ಸರ್ಚ್ ವಾರಂಟ್ ಹೊರಡಿಸಿತ್ತು. ಆದರೆ ಅಧಿಕಾರಿಗಳಿಂದಲೇ ಮಾಹಿತಿ ಸೋರಿಕೆಯಾಗಿದ್ದರಿಂದ ದಾಳಿ ಕೈಬಿಟ್ಟಿತ್ತು' ಎಂದು ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ.

ಲೋಕಾಯುಕ್ತ ಸರ್ಚ್ ವಾರಂಟ್ ಆದೇಶವನ್ನು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿರುವ ಕೃಷ್ಣ, 'ಜೂನ್ 28ರಂದು ಮೈಸೂರು ಲೋಕಾಯುಕ್ತ ಡಿವೈಎಸ್‌ಪಿ ಮಾಲತೇಶ್ ಹೆಸರಿನಲ್ಲಿ ಹೊರಡಿಸಿದ್ದ ವಾರಂಟ್, 29ರಂದು ಮೈಸೂರು ಎಸ್.ಪಿ.ಗೆ ತಲುಪಿತ್ತು. ನಂತರ ಮಾಹಿತಿ ಸೋರಿಕೆಯಾಗಿ, ಜುಲೈ 1ರಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು ದಿಢೀರನೆ ಎಂದು ಬಂದು ಮುಡಾ ಕಚೇರಿಯಲ್ಲಿದ್ದ ದಾಖಲೆಗಳನ್ನು ಹೊತ್ತೊಯ್ದಿದ್ದರು' ಎಂದು ದೂರಿದ್ದಾರೆ.

ಸಾವಿರಾರು ಎಕರೆ ಹೊಂದಿದ ಭೂಮಾಲೀಕರು ಒಂದೆಡೆ; ಮನೆಯ ತಳಪಾಯವೂ ತಮ್ಮದಲ್ಲದವರು ಮತ್ತೊಂದೆಡೆ

ಆದಿವಾಸಿಗೆ ಅರಣ್ಯ ಹಕ್ಕೂ ಗಗನ ಕುಸುಮ

• ವಿಜಯಕುಮಾರ್ ಎಸ್.ಕೆ.

ಅರಣ್ಯ ವಾಸಿಗಳು

ಚಿಕ್ಕಮಗಳೂರು: ಆದಿವಾಸಿಗಳಿಗೆ ಅರಣ್ಯ ಹಕ್ಕು ಕಾಯ್ದೆ ಗಗನ ಕುಸುಮವಾಗಿದೆ. ಗೋಮಾಳ, ಡೀಮ್ಡ್ (ಪರಿಭಾವಿತ) ಅರಣ್ಯ ಗೊಂದಲದಲ್ಲಿ ಆದಿವಾಸಿಗಳು ಅತಂತ್ರರಾಗಿದ್ದಾರೆ. ಸಾವಿರಾರು ಎಕರೆ ಹೊಂದಿದವರು ಭೂ ಮಾಲೀಕರು ಒಂದೆಡೆಯಿದ್ದರೆ, ತಾವಿರುವ ಮನೆಯ ತಳಪಾಯವೇ ಅವರ ಹೆಸರಿನಲ್ಲಿ ಇಲ್ಲದ ಕುಟುಂಬಗಳು ಮತ್ತೊಂದೆಡೆ ಇವೆ.

ಕಾಫಿ ಬೆಳೆಯನ್ನು ಕಡಿಮೆ ವಿಸ್ತೀರ್ಣದಲ್ಲಿ ಸಾಗುವಳಿ ಮಾಡುವುದು ಆರ್ಥಿಕವಾಗಿ ಲಾಭದಾಯಕವಲ್ಲ ಎಂಬ ಕಾರಣಕ್ಕೆ ಭೂಸುಧಾರಣಾ ಕಾಯ್ದೆಯಿಂದ ಪ್ಲಾಂಟೇಷನ್ ಬೆಳೆಗಳಿಗೆ ವಿನಾಯಿತಿ ನೀಡಲಾಗಿದೆ. ಕಾಫಿ ಕಾಯ್ದೆ ಪ್ರಕಾರ ಕಾಫಿ ತೋಟಗಳನ್ನು ಕೈಗಾರಿಕೆ ಎಂದು ಪರಿಗಣಿಸಲಾಗಿದೆ. ಒಬ್ಬ ವ್ಯಕ್ತಿ (ಎಸ್ಟೇಟ್ ಕಂಪನಿ) 4 ಸಾವಿರ ಎಕರೆ ತನಕ ಭೂಮಿ ಹೊಂದಿದ್ದರೆ, ಉಳಿದ ಮಲೆನಾಡಿನ ಜನ ಭೂರಹಿತರಾಗಿದ್ದಾರೆ.

ನಕ್ಸಲ್ ಚಳವಳಿ ಮಲೆನಾಡಿನಲ್ಲಿ ತೀವ್ರಗೊಳ್ಳಲು ಭೂಮಿಯ ಅಸಮಾನ ಹಂಚಿಕೆಯೂ ಕಾರಣವಾಗಿತ್ತು. ಸಾವಿರಾರು ಎಕರೆ ಜಮೀನು ಹೊಂದಿದವರು ಒಂದೆಡೆಯಾದರೆ, ಒಂದು ಗುಂಟೆ ಜಮೀನು ಕೂಡ ತಮ್ಮ ಹೆಸರಿನಲ್ಲಿ ಇಲ್ಲದ ಲಕ್ಷಾಂತರ ಕುಟುಂಬಗಳಿವೆ. ಸಮಾನವಾಗಿ ಭೂಮಿ ಹಂಚಿಕೆಯಾಗಬೇಕು, ಭೂಸುಧಾರಣೆ ಕಾಯ್ದೆಯನ್ನು ಮಲೆನಾಡಿಗೂ ಅನ್ವಯ ಮಾಡಬೇಕು ಎಂಬುದು ನಕ್ಸಲ್ ಚಳವಳಿಯ ಪ್ರಮುಖ ಬೇಡಿಕೆಯಾಗಿತ್ತು.

ಆ ನಂತರ ಪಾರಂಪರಿಕ ಅರಣ್ಯವಾಸಿಗಳನ್ನು ಕಾಡಿನಲ್ಲೇ ಉಳಿಸಲು 2006ರಲ್ಲಿ ಪರಿಶಿಷ್ಟ ಬುಡಕಟ್ಟುಗಳು ಮತ್ತು ಪಾರಂಪರಿಕ ಅರಣ್ಯವಾಸಿಗಳ ಕಾಯ್ದೆಯನ್ನು ಜಾರಿಗೆ ತರಲಾಯಿತು. ಇದರ ಅಡಿಯಲ್ಲಿ ಅರ್ಜಿ ಸಲ್ಲಿಸಿದ ಆದಿವಾಸಿಗಳಲ್ಲಿ ಶೇ 75ರಷ್ಟು ಜನರಿಗೆ ಹಕ್ಕು ದೊರೆತಿಲ್ಲ.

ಅರಣ್ಯ ಹಕ್ಕು ಕಾಯ್ದೆಯಡಿ 10 ಎಕರೆ ತನಕ ಹಕ್ಕು ಪಡೆಯಲು ಕಾಯ್ದೆಯಲ್ಲಿ ಅವಕಾಶ ಇದೆ. ಆದರೆ, ಬಹುತೇಕರಿಗೆ 5 ಗುಂಟೆಯಿಂದ 10 ಗುಂಟೆಯಷ್ಟೇ ದೊರೆತಿದೆ. ಶ್ರೀಮಂತರಿಗೆ ಸಾವಿರ ಸಾವಿರ ಎಕರೆ ತನಕ ಜಮೀನು ನೀಡುವಾಗ ಇಲ್ಲದ ಕಾನೂನುಗಳು, ಆದಿವಾಸಿಗಳಿಗೆ ಭೂಮಿ ನೀಡುವಾಗ ಬರುತ್ತವೆ ಎಂಬುದು ಅವರ ಅಳಲು.

‘ಕಂದಾಯ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ಆದಿವಾಸಿಗಳು ನಮೂನೆ 53, 57ರಲ್ಲಿ ಅರ್ಜಿ ಸಲ್ಲಿಸಿ ಮಂಜೂರಾತಿ ಕೋರಿದರೆ, ಡೀಮ್ಡ್ ಅರಣ್ಯ, ಅರಣ್ಯ ಇಲಾಖೆ ಸೆಕ್ಷನ್ 4 ಜಾರಿಗೊಳಿಸಿದೆ ಎಂದು ಉತ್ತರ ನೀಡಿ ತಿರಸ್ಕಾರ ಮಾಡುತ್ತಿದ್ದಾರೆ. ಅರಣ್ಯ ಹಕ್ಕು ಕಾಯ್ದೆಯಲ್ಲಿ ಅರ್ಜಿ ಸಲ್ಲಿಸಿದರೆ ಕಂದಾಯ ಇಲಾಖೆಯ ಗೋಮಾಳ ಆಗಿರುವುದರಿಂದ ಮಂಜೂರು ಮಾಡಲಾಗದು ಎಂದು ತಿರಸ್ಕಾರ ಮಾಡಲಾಗುತ್ತಿದೆ. ಈ ಜಾಗ ಸಂಪೂರ್ಣ ಅರಣ್ಯವೂ ಆಗಿಲ್ಲ, ಕಂದಾಯ ಭೂಮಿಯಾಗಿಯೂ ಉಳಿದಿಲ್ಲ. ಅರಣ್ಯ ಹಕ್ಕು ಕಾಯ್ದೆಯ ಲಾಭ ನಮಗೆ ದೊರಕುವುದು ಹೇಗೆ’ ಎಂದು ಆದಿವಾಸಿಗಳ ಪರ ಹೋರಾಟಗಾರ ಮರಿಯಪ್ಪ ಪ್ರಶ್ನಿಸುತ್ತಾರೆ.

‘ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಕೊಪ್ಪ ಮತ್ತು ಕಳಸ ತಾಲ್ಲೂಕಿನಲ್ಲಿ ಅರಣ್ಯ ಹಕ್ಕು ಕೋರಿ ಅರ್ಜಿ ಸಲ್ಲಿಸಿದ 4 ಸಾವಿರಕ್ಕೂ ಹೆಚ್ಚು ಜನ ಭೂಮಿಗಾಗಿ ಕಾದಿದ್ದಾರೆ. ಬಹುತೇಕರಿಗೆ ತಾವಿರುವ ಮನೆಗಳ ಜಾಗದ ಹಕ್ಕುಪತ್ರವೂ ಇಲ್ಲ. ಹಕ್ಕುಪತ್ರ ಪಡೆದವರಿಗೂ ಜಮೀನಿನ ಮೇಲೆ ಸಾಲ ಪಡೆಯುವ, ಅಭಿವೃದ್ಧಿಪಡಿಸುವ ಯಾವ ಹಕ್ಕೂ ಇಲ್ಲ. ಅದು ತಮ್ಮ ನಂತರ ಬೇರೆಯವರಿಗೆ ವರ್ಗಾವಣೆಯೂ ಆಗುವುದಿಲ್ಲ. ದುಡಿದು ತಿನ್ನಲು ಮಾತ್ರ ಅವಕಾಶ ಇದೆ. ಇದು ಅರಣ್ಯ ಹಕ್ಕು ಕಾಯ್ದೆಯಲ್ಲೇ ಇದೆ’ ಎಂದು ಹೇಳಿದರು.

ಇತರ ಜಮೀನಿಗೆ ನೀಡುವಂತೆ ಎಲ್ಲಾ ರೀತಿಯ ಸೌಕರ್ಯ ದೊರಕುವಂತೆ ಸರ್ಕಾರ ಮಾಡಬೇಕು. ಕಿರುಅರಣ್ಯ ಉತ್ಪನ್ನಕ್ಕೆ ಬೆಂಬಲ ಬೆಲೆ ನೀಡಬೇಕು ಎಂಬ ಬೇಡಿಕೆಗಳನ್ನು ಸರ್ಕಾರ ಪರಿಗಣಿಸುತ್ತಿಲ್ಲ ಎಂದರು.

ನಿವೇಶನ ಹಕ್ಕು: ಅರಣ್ಯರೋದನ

ಭೂಮಿ, ವಸತಿ ಮತ್ತು ನಿವೇಶನ ರಹಿತರು ಮಲೆನಾಡಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ನಿವೇಶನ ಕೋರಿ ಅರ್ಜಿ ಸಲ್ಲಿಸಿರುವ 33,936 ಕುಟುಂಬಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿವೆ. ನಿವೇಶನ ಮತ್ತು ವಸತಿಗಾಗಿ ಅವರು ನಡೆಸುತ್ತಿರುವ ಹಲವು ವರ್ಷಗಳ ಹೋರಾಟ ಅರಣ್ಯರೋದನವಾಗಿದೆ.

ಭೂರಹಿತರಲ್ಲಿ ಬಹುತೇಕರು ದಲಿತರು, ಆದಿವಾಸಿಗಳೇ ಆಗಿದ್ದಾರೆ. ಹಕ್ಕುಪತ್ರ ಎಂಬುದು ಗಗನಕುಸುಮವಾಗಿದೆ ಎಂದು ಕರ್ನಾಟಕ ಜನಶಕ್ತಿ ಹೋರಾಟಗಾರ ಕೆ.ಎಲ್.ಅಶೋಕ್ ಹೇಳಿದರು.

ಗೋಪಾಲಕೃಷ್ಣಗೌಡ ಜಿಲ್ಲಾಧಿಕಾರಿಯಾಗಿದ್ದ ಅವಧಿಯಲ್ಲಿ 1.50 ಲಕ್ಷ ಎಕರೆಯಷ್ಟು ಕಂದಾಯ ಜಾಗವನ್ನು ಅರಣ್ಯ ಎಂದು ಘೋಷಣೆ ಮಾಡಿದರು. ಇದು ಕೂಡ ಭೂರಹಿತರ ಸಂಖ್ಯೆಯನ್ನು ಜಿಲ್ಲೆಯಲ್ಲಿ ಹೆಚ್ಚಿಸಿದೆ ಎಂದರು.

ಸುದ್ದಿ 2 ನಿಮಿಷ

‘ಪೇಜಾವರ ಶ್ರೀಗಳಿಂದ ಸಂವಿಧಾನಕ್ಕೆ ಬೆದರಿಕೆ’

ಬೆಂಗಳೂರು: ‘ಸಂವಿಧಾನ ಬದಲಾಯಿಸಬೇಕು ಎಂದು ಪೇಜಾವರ ಶ್ರೀ ಮತ್ತು ಸಂಘ ಪರಿವಾರ ನಿಷ್ಠೆಯ ಸ್ವಾಮೀಜಿಗಳು ರಾಜ್ಯಪಾಲರಿಗೆ ಮನವಿ ಸಲ್ಲಿಸಿರುವುದು ಆತಂಕಕಾರಿ ಹಾಗೂ ಕಳವಳಕಾರಿ ಮಾತ್ರವಲ್ಲ, ಸಂವಿಧಾನಕ್ಕೆ ಬೆದರಿಕೆ’ ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ.

‘ಸಂವಿಧಾನ ವಿರೋಧಿ ಸಂಘಟನೆ ಆರೆಸ್ಸೆಸ್ ನೂರು ವರ್ಷಕ್ಕೆ ಕಾಲಿಡುತ್ತಿರುವುದಕ್ಕೂ ಸಂವಿಧಾನ ಬದಲಾಯಿಸಬೇಕು ಎಂದು ಪರಿವಾರ ನಿಷ್ಠೆಯ ಯತಿಗಳು ಬೀದಿಗಿಳಿದು ಮಾತನಾಡುತ್ತಿರುವುದಕ್ಕೂ ಸಂಬಂಧವಿದೆ. ಇದರಲ್ಲಿ ಸಂಘ ಪರಿವಾರದ ನೂರು ವರ್ಷಗಳ ಸಂಭ್ರಮಾಚರಣೆಯ ಕಾರ್ಯಕ್ರಮದ ಗುಪ್ತಸೂಚಿ ಇರುವುದು ಸ್ಪಷ್ಟ’ ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

‘ಸಮಾಜ ಸುಧಾರಕರ ಆಶಯಗಳು ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಪರಿಶ್ರಮದಿಂದ ರಚಿತವಾಗಿರುವ ‘ಸರ್ವ ಧರ್ಮ, ಸಹಬಾಳ್ವೆ’ಯ ತಿರುಳಿರುವ ಸಂವಿಧಾನದ ಬದಲಾವಣೆಗೆ ಒತ್ತಾಯಿಸಿರುವ ಪೇಜಾವರ ಶ್ರೀಗಳು, ತಮಗೆ ಗೌರವ ನೀಡುವ ಸಂವಿಧಾನ ಯಾವುದು ಎಂದು ಮೊದಲು ಸ್ಪಷ್ಟಪಡಿಸಲಿ. ಪ್ರತಿಯೊಬ್ಬರೂ ಸ್ವಾಭಿಮಾನದಿಂದ ಬದುಕಲು ಸಂವಿಧಾನ ಅವಕಾಶ ನೀಡಿದೆ. ಇದರ ಬದಲಾಗಿ ಪೇಜಾವರ ಅವರು ಯಾವ ವ್ಯವಸ್ಥೆಯನ್ನು ಬಯಸುತ್ತಿದ್ದಾರೆ. ದಲಿತರು-ಶೂದ್ರರು ಶ್ರೇಷ್ಠತೆಯ ವ್ಯಸನಕ್ಕೆ ತಲೆಬಾಗಬೇಕೇ? ಮಹಿಳೆಯರು ಅತ್ಯಾಚಾರಿಗಳನ್ನು ಆರಾಧಿಸಬೇಕೆನ್ನುವ ವ್ಯವಸ್ಥೆ ಇರಬೇಕೇ? ಜೀತದಾರರು, ಶ್ರಮಿಕ ವರ್ಗ ಮಾಲೀಕರ ಅಡಿಯಾಳಾಗಿರಬೇಕೇ’ ಎಂದು ಪ್ರಶ್ನಿಸಿದ್ದಾರೆ.

ಸಂವಿಧಾನಕ್ಕೆ ಅನುಗುಣವಾಗಿ ನಡೆಯಬೇಕು: ಮಹದೇವಪ್ಪ

ಬೆಂಗಳೂರು: ‘ಅಂಬೇಡ್ಕರ್ ಅವರು ನೀಡಿರುವ ಸಂವಿಧಾನವು ಸಮಾನತೆಯ ಸಂಜೀವಿನಿ. ಸಂವಿಧಾನದ ಕುರಿತಂತೆ ಅಸಹನೆ ತೋರುವುದನ್ನು ಬಿಟ್ಟು ಅದರ ಆಶಯಗಳಿಗೆ ಅನುಗುಣವಾಗಿ ನಡೆಯಬೇಕು’ ಎಂದು ಪೇಜಾವರ ಶ್ರೀಗಳಿಗೆ ಸಚಿವ ಡಾ.ಎಚ್.ಸಿ. ಮಹದೇವಪ್ಪ ಮನವಿ ಮಾಡಿದ್ದಾರೆ.

ವಿಶ್ವ ಹಿಂದೂ ಪರಿಷತ್ ಕರ್ನಾಟಕ ಘಟಕ ಭಾನುವಾರ ಆಯೋಜಿಸಿದ್ದ ಸಂತ ಸಮಾವೇಶದಲ್ಲಿ ಮಾತನಾಡಿದ್ದ ಪೇಜಾವರ ಶ್ರೀ, ‘ನಮ್ಮನ್ನು ಗೌರವಿಸುವ ಸಂವಿಧಾನ ಬರಲಿ. 75 ವರ್ಷಗಳಾದರೂ ನಾವು ಸ್ವಾತಂತ್ರ್ಯ ಹೊಂದಿದ್ದೇವೆಯೇ?’ ಎಂದು ಅನುಮಾನ ವ್ಯಕ್ತಪಡಿಸಿ, ಸನಾತನ ಮಂಡಳಿ ರಚಿಸುವಂತೆ ಕರೆ ನೀಡಿದ್ದರು. ಈ ಹೇಳಿಕೆಗೆ ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿದ ಸಚಿವರು, ‘ಸನಾತನ ಧರ್ಮ ಎಷ್ಟರ ಮಟ್ಟಿಗೆ ಪರಿಶಿಷ್ಟರ ಬದುಕನ್ನು ಹೀಯಾಳಿಸಿ ಅವಮಾನಿಸಿದೆ ಎನ್ನುವುದಕ್ಕೆ ಪರಿಶಿಷ್ಟರ ಅನುಭವಕ್ಕಿಂತ ದೊಡ್ಡ ಉದಾಹರಣೆ ಇನ್ನೊಂದಿಲ್ಲ’ ಎಂದಿದ್ದಾರೆ.

ನಿಧನವಾರ್ತೆ

ಕಂಸಾಳೆ ಕುಮಾರಸ್ವಾಮಿ

ಮೈಸೂರು: ಖ್ಯಾತ ಕಂಸಾಳೆ ಕಲಾವಿದ, ಇಲ್ಲಿನ ಬಂಡಿಕೇರಿಯ ನಿವಾಸಿ ಕಂಸಾಳೆ ಕುಮಾರಸ್ವಾಮಿ (74) ಸೋಮವಾರ ನಿಧನರಾದರು.

ಅವರಿಗೆ ಪುತ್ರರಾದ ಕಂಸಾಳೆ ರವಿಚಂದ್ರ, ಕಂಸಾಳೆ ಮಾದೇವ್ ಕುಮಾರ, ಪುತ್ರಿಯರಾದ ರೂಪಾ, ಪಾರ್ವತಿ ಇದ್ದಾರೆ. ಅಂತ್ಯಕ್ರಿಯೆಯು ಮಂಗಳವಾರ (ನ.26) ಬೆಳಿಗ್ಗೆ 11ಕ್ಕೆ ಚಾಮುಂಡಿ ಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ನಡೆಯಲಿದೆ.

ನಟ ಶಿವರಾಜ್ ಕುಮಾರ್ ಅಭಿನಯದ ‘ಜನುಮದ ಜೋಡಿ’ ಚಿತ್ರದ ‘ಕೋಲು ಮಂಡೆ ಜಂಗುಮದೇವ’ ಹಾಡಿಗೆ ಕುಮಾರಸ್ವಾಮಿ ಕಂಸಾಳೆ ಸಂಗೀತದ ನೃತ್ಯ ಸಂಯೋಜಿಸಿದ್ದರು. ಆ ಮೂಲಕ ವರನಟ ರಾಜಕುಮಾರ್ ಅವರ ಮೆಚ್ಚುಗೆಗೆ ಪಾತ್ರವಾಗಿದ್ದರು.

2020ನೇ ಸಾಲಿನ ಜಾನಪದ ಅಕಾಡೆಮಿ ಪ್ರಶಸ್ತಿ ಪಡೆದಿದ್ದ ಅವರು, ಇಟಲಿ, ಟರ್ಕಿ ಸೇರಿದಂತೆ ದೇಶ–ವಿದೇಶಗಳಲ್ಲಿ 600ಕ್ಕೂ ಹೆಚ್ಚಿನ ಪ್ರದರ್ಶನಗಳನ್ನು ನೀಡಿದ್ದರು.

ವರಕೋಡು ಸಮೀಪದ ಬಡಗಲಹುಂಡಿಯಲ್ಲಿ 1951ರಲ್ಲಿ ಜನಿಸಿದ ಅವರು, ತಂದೆ ಕಂಸಾಳೆ ಮಹಾದೇವಯ್ಯ ಅವರಿಂದ ಕಂಸಾಳೆಯನ್ನು ಕಲಿತಿದ್ದರು. 7ನೇ ತರಗತಿಗೆ ವಿದ್ಯಾಭ್ಯಾಸ ಮೊಟಕುಗೊಳಿಸಿ ತಂದೆಯೊಂದಿಗೆ ಪ್ರದರ್ಶನಗಳನ್ನು ನೀಡಲಾರಂಭಿಸಿ, ಅದರಲ್ಲೇ ಮುಂದುವರಿದರು.

ವಿದ್ಯಾರ್ಥಿಗಳಿಗೆ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್ ಭರವಸೆ

18 ವರ್ಷದವರೆಗೆ ಉಚಿತ ಶಿಕ್ಷಣ: ಚರ್ಚೆ

ಪ್ರಜಾವಾಣಿ ವಾರ್ತೆ

ವಿಧಾನಸೌಧದಲ್ಲಿ ಸೋಮವಾರ ಆಯೋಜಿಸಿದ್ದ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಸಂಸತ್‌ನಲ್ಲಿ ಯಾದಗಿರಿಯ ವಿದ್ಯಾರ್ಥಿ ಸಣ್ಣವೀರ ಮಾತನಾಡಿದರು

ಬೆಂಗಳೂರು: ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) ಅಡಿ 14 ವರ್ಷದವರೆಗಿನ ಮಕ್ಕಳಿಗೆ ನೀಡಲಾಗುತ್ತಿರುವ ಉಚಿತ ಶಿಕ್ಷಣವನ್ನು ಅಮೆರಿಕ ಮಾದರಿಯಲ್ಲಿ 18 ವರ್ಷಗಳವರೆಗೂ ವಿಸ್ತರಿಸುವ ಕುರಿತು ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗುವುದು ಎಂದು ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್ ಹೇಳಿದರು.

ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ ವಿಧಾನಸೌಧದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಸಂಸತ್‌ನಲ್ಲಿ ವಿದ್ಯಾರ್ಥಿನಿ ಹಾಸನದ ಪೂರ್ವಿಕಾ ಅವರ ಪ್ರಶ್ನೆಗೆ ಅವರು ಉತ್ತರಿಸಿದರು.

ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗಿದೆ. ವಿದ್ಯಾರ್ಥಿನಿಯರಿಗೆ ಈಗಾಗಲೇ ಪಿಯುವರೆಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ. ಎಲ್ಲರಿಗೂ 18 ವರ್ಷದವರೆಗೆ ವಿಸ್ತರಿಸುವ ಕುರಿತು ಮುಖ್ಯಮಂತ್ರಿ, ಶಿಕ್ಷಣ ಸಚಿವರ ಗಮನಕ್ಕೆ ತರಲಾಗುವುದು ಎಂದರು.

ಶಿಕ್ಷಕರ ಕೊರತೆ ನೀಗಿಸಲು ಸರ್ಕಾರ ಹಂತಹಂತವಾಗಿ ಕ್ರಮ ಕೈಗೊಂಡಿದೆ. ಕಳೆದ ವರ್ಷ 13 ಸಾವಿರ ಶಿಕ್ಷಕರ ನೇಮಕ ಮಾಡಿಕೊಂಡಿದೆ. 50 ಸಾವಿರ ಅತಿಥಿ ಶಿಕ್ಷಕರ ಸೇವೆ ಪಡೆಯಲಾಗುತ್ತಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿನ ಶಿಕ್ಷಕರ ಕೊರತೆ ನೀಗಿಸಲು 5,300 ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಲಾಗಿದೆ. ಯಾದಗಿರಿಯ ವಿದ್ಯಾರ್ಥಿ ಸಣ್ಣವೀರ ಅವರ ಸಲಹೆಯಂತೆ ಗಣಿತ, ವಿಜ್ಞಾನ ಹಾಗೂ ಇಂಗ್ಲಿಷ್ ಭಾಷಾ ಶಿಕ್ಷಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಕ ಮಾಡಿಕೊಳ್ಳಲು ಆದ್ಯತೆ ನೀಡಲಾಗುವುದು ಎಂದು ಭರವಸೆ ನೀಡಿದರು.

ಮಕ್ಕಳ ಮೇಲಿನ ದೌರ್ಜನ್ಯ, ರಕ್ಷಣೆ, ಮೊಬೈಲ್ ಗೀಳು, ಶಾಲಾ ಶೌಚಾಲಯ ಸ್ವಚ್ಛತೆ, ಖಾಸಗಿ ಶಾಲೆಗಳಿಗೂ ಮೊಟ್ಟೆ ವಿತರಣೆ, ಶುದ್ಧ ಕುಡಿಯುವ ನೀರು, ಅಂಗವಿಕಲರ ಬವಣೆ ಮೊದಲಾದ ಸಮಸ್ಯೆ, ಸೌಲಭ್ಯ ಒದಗಿಸುವ ಕುರಿತು ಮಕ್ಕಳು ಬೇಡಿಕೆ ಮಂಡಿಸಿದರು. ಹಲವು ಪ್ರಶ್ನೆಗಳನ್ನು ಕೇಳಿ, ಉತ್ತರ ಪಡೆದರು.

ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಸಂಚಾಲಕ ವಾಸುದೇವ್ ಶರ್ಮಾ ಎನ್.ವಿ ಪ್ರಸ್ತಾವಿಕ ಮಾತನಾಡಿದರು. ಯೂನಿಸೆಫ್‌ನ ಮಕ್ಕಳ ರಕ್ಷಣಾ ತಜ್ಞ ಸೋನಿಕುಟ್ಟಿ ಜಾರ್ಜ್, ವಕೀಲರಾದ ಅಂಜಲಿ ರಾಮಣ್ಣ, ಸಿವಿಕ್ ಬೆಂಗಳೂರು ಸಂಸ್ಥೆಯ ಕಾರ್ಯದರ್ಶಿ ಕಾತ್ಯಾಯಿನಿ ಚಾಮರಾಜ್ ಉಪಸ್ಥಿತರಿದ್ದರು.

ಸಿ.ಎಂ.ಗೆ ಕಾದು ಬೇಸರಗೊಂಡ ಮಕ್ಕಳು

ಮಕ್ಕಳ ಹಕ್ಕುಗಳ ಸಂಸತ್‌ನಲ್ಲಿ ಮುಖ್ಯಮಂತ್ರಿ ಜತೆ ಸಂವಾದ ಕಾರ್ಯಕ್ರಮವನ್ನು ಆಯೋಜಿಸಗಿತ್ತು. ಮಕ್ಕಳು ಒಂದು ಗಂಟೆ ಮೊದಲೇ ಬಂದು ಕಾಯುತ್ತಿದ್ದರು. ಆದರೆ, ಸಿದ್ದರಾಮಯ್ಯ ಬರಲೇ ಇಲ್ಲ. ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಕಾರ್ಯಕ್ರಮ ನಡೆಸಿಕೊಟ್ಟರು. ಮುಖ್ಯಮಂತ್ರಿ ಜತೆ ಸಂವಾದ ಸಾಧ್ಯವಾಗದಕ್ಕೆ ಮಕ್ಕಳು ಬೇಸರ ವ್ಯಕ್ತಪಡಿಸಿದರು.

‘ತಂದೆಯ ಹೆಸರು ನಮೂದು ಐಚ್ಛಿಕವಾಗಲಿ’

ಶಾಲಾ, ಕಾಲೇಜು ಪ್ರವೇಶ, ನೇಮಕಾತಿ ಸೇರಿದಂತೆ ಎಲ್ಲ ಅರ್ಜಿಗಳಲ್ಲೂ ತಾಯಿಯ ಹೆಸರು ನಮೂದಿಸುವುದನ್ನು ಕಡ್ಡಾಯಗೊಳಿಸಿ, ತಂದೆಯ ಹೆಸರು ಐಚ್ಛಿಕ ಮಾಡಬೇಕು. ಇದರಿಂದ ದೇವದಾಸಿಯ ಮಕ್ಕಳೂ ಸೇರಿದಂತೆ ಹಲವರಿಗೆ ಅನುಕೂಲವಾಗುತ್ತದೆ ಎಂದು ವಿಜಯನಗರದ ಇಂದೂ ಮನವಿ ಮಾಡಿದರು. ‘ತಂದೆ ಹೆಸರು ಬರೆಯುವುದು ಕಡ್ಡಾಯವೇನಲ್ಲ, ತಂದೆ ಅಥವಾ ತಾಯಿ ಇಬ್ಬರಲ್ಲಿ ಒಬ್ಬರ ಹೆಸರು ನಮೂದಿಸಿದರೂ ಸಾಕು. ಕೆಲವು ಕಡೆ ಅಂತಹ ಸಮಸ್ಯೆ ಇದ್ದರೆ ಸರ್ಕಾರದ ಗಮನಕ್ಕೆ ತರಲಾಗುವುದು’ ಎಂದು ರಿತೇಶ್ ಕುಮಾರ್ ಭರವಸೆ ನೀಡಿದರು.

ಹೊಸ ನೇಮಕಾತಿಗೆ ತಡೆ

ಬೆಂಗಳೂರು: ರಾಜ್ಯ ಸರ್ಕಾರಿ ಹುದ್ದೆಗಳ ನೇಮಕಾತಿಗೆ ಹೊಸದಾಗಿ ಅಧಿಸೂಚನೆ ಹೊರಡಿಸುವುದಕ್ಕೆ ತಡೆ ನೀಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಸೋಮವಾರ ಸುತ್ತೋಲೆ ಹೊರಡಿಸಿದೆ.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಕುರಿತಂತೆ ತೀರ್ಮಾನ ಕೈಗೊಳ್ಳುವರೆಗೆ, ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಯಾವುದೇ ಅಧಿಸೂಚನೆ ಹೊರಡಿಸಬಾರದು ಎಂದು ಅ. 28ರಂದು ನಡೆದಿದ್ದ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿತ್ತು. ಈ ನಿರ್ಣಯಕ್ಕೆ ಪೂರಕವಾಗಿ ಈ ಆದೇಶ ಹೊರಡಿಸಲಾಗಿದೆ.

ನೇರ ನೇಮಕಾತಿಗೆ ಅ.28ಕ್ಕೂ ಮೊದಲು ಅಧಿಸೂಚನೆ ಹೊರಡಿಸಿದ್ದರೆ ಅಥವಾ ಆಯ್ಕೆ ಪ್ರಕಿಯೆಯನ್ನು ಆರಂಭಿಸಿದ್ದರೆ, ಅಂತಹ ನೇಮಕಾತಿಗಳಿಗೆ ಈ ಸುತ್ತೋಲೆ ಅನ್ವಯಿಸುವುದಿಲ್ಲ ಎಂದೂ ಸುತ್ತೋಲೆಯಲ್ಲಿ ವಿವರಿಸಲಾಗಿದೆ.

‘ಹೆಣ್ಣುಮಕ್ಕಳಿಗೆ ಮನೆಯೂ ಸುರಕ್ಷಿತವಲ್ಲ’

‘ಮಹಿಳೆಯರು ಹಾಗೂ ಹುಡುಗಿಯರಿಗೆ ತಮ್ಮ ಮನೆಗಳೇ ಸುರಕ್ಷಿತವಲ್ಲ. ಅವರ ಮನೆಗಳೇ ಅವರಿಗೆ ಅತ್ಯಂತ ಅಪಾಯಕಾರಿ ಸ್ಥಳಗಳಾಗಿವೆ’ ಎಂದು ‘ವಿಶ್ವಸಂಸ್ಥೆಯ ಮಾದಕವಸ್ತುಗಳು ಹಾಗೂ ಅಪರಾಧ ವಿಭಾಗದ ಕಚೇರಿ’ ಹಾಗೂ ‘ಯುಎನ್ ಮಹಿಳೆ’ ಸಂಸ್ಥೆಗಳು ಹೇಳಿವೆ. ಈ ಸಂಸ್ಥೆಗಳು **‘ಫೆಮಿಸೈಡ್ಸ್ ಇನ್ 2023’** ವರದಿಯನ್ನು ಬಿಡುಗಡೆ ಮಾಡಿವೆ. ನವೆಂಬರ್ 25 ಅನ್ನು **‘ಮಹಿಳೆಯರ ಮೇಲಿನ ಹಿಂಸೆ ತಡೆ ದಿನ’**ವನ್ನಾಗಿ ಆಚರಿಸಲಾಗುತ್ತಿದೆ. 2024ಕ್ಕೆ ಈ ಆಚರಣೆಗೆ 25 ವರ್ಷಗಳು ಸಂದಿದ್ದು, ಇದೇ ದಿನ ಈ ವರದಿಯನ್ನು ಬಿಡುಗಡೆ ಮಾಡಲಾಗಿದೆ. ಹೆಣ್ಣುಮಕ್ಕಳ ಹತ್ಯೆಗಳನ್ನು ಅವರದೇ ಸಂಗಾತಿ ಅಥವಾ ಅವರ ಕುಟುಂಬ ಸದಸ್ಯರೇ ಹೆಚ್ಚಿನ ಸಂಖ್ಯೆಯಲ್ಲಿ ಮಾಡುತ್ತಾರೆ ಎನ್ನುವ ಅಂಶವೂ ಈ ವರದಿ ಮೂಲಕ ಬಹಿರಂಗಗೊಂಡಿದೆ.

‘ಫೆಮಿಸೈಡ್’ ಅಂದರೆ, ಹೆಣ್ಣು ಎನ್ನುವ ಕಾರಣಕ್ಕಾಗಿಯೇ ಮಹಿಳೆಯರನ್ನು ಹಾಗೂ ಹುಡುಗಿಯರನ್ನು ಹತ್ಯೆ ಮಾಡುವುದು. ಇಂಥ ಲಿಂಗ ತಾರತಮ್ಯದ ಮನಃಸ್ಥಿತಿಯ ಕಾರಣಕ್ಕಾಗಿ 2023ರಲ್ಲಿ ಜಗತ್ತಿನಾದ್ಯಂತ ಸುಮಾರು 85,000 ಮಹಿಳೆಯರ ಹತ್ಯೆಯಾಗಿದೆ. ಈ ಸಂಖ್ಯೆಯಲ್ಲಿ ಶೇ 60ರಷ್ಟು ಮಹಿಳೆಯರು ಅಂದರೆ, ಸುಮಾರು 51,100 ಮಹಿಳೆಯರು ಅವರ ಸಂಗಾತಿ/ ಕುಟುಂಬ ಸದಸ್ಯರಿಂದಲೇ ಹತ್ಯೆಯಾಗಿದ್ದಾರೆ.



85,000 2023ರಲ್ಲಿ ಜಗತ್ತಿನಾದ್ಯಂತ ಹತ್ಯೆಯಾದ ಮಹಿಳೆಯರು/ ಹುಡುಗಿಯರ ಸಂಖ್ಯೆ

51,100 2023ರಲ್ಲಿ ತಮ್ಮ ಸಂಗಾತಿ/ಕುಟುಂಬ ಸದಸ್ಯರಿಂದಲೇ ಜಗತ್ತಿನಾದ್ಯಂತ ಹತ್ಯೆಯಾದ ಮಹಿಳೆಯರು/ ಹುಡುಗಿಯರ ಸಂಖ್ಯೆ

33,900 ಇತರೆ ಕಾರಣಗಳಿಗಾಗಿ ಜಗತ್ತಿನಾದ್ಯಂತ ಹತ್ಯೆಯಾದ ಮಹಿಳೆಯರು/ ಹುಡುಗಿಯರ ಸಂಖ್ಯೆ

48,800 2022ರಲ್ಲಿ ತಮ್ಮ ಸಂಗಾತಿ/ಕುಟುಂಬ ಸದಸ್ಯರಿಂದಲೇ ಜಗತ್ತಿನಾದ್ಯಂತ ಹತ್ಯೆಯಾದ ಮಹಿಳೆಯರು/ಹುಡುಗಿಯರ ಸಂಖ್ಯೆ

140 ತಮ್ಮ ಸಂಗಾತಿ/ಕುಟುಂಬ ಸದಸ್ಯರಿಂದಲೇ ಜಗತ್ತಿನಾದ್ಯಂತ ಪ್ರತಿನಿತ್ಯ ಹತ್ಯೆಯಾಗುತ್ತಿರುವ ಮಹಿಳೆಯರು/ಹುಡುಗಿಯರ ಸಂಖ್ಯೆ

1 ಪ್ರತಿ 10 ನಿಮಿಷದಲ್ಲಿ ತಮ್ಮ ಸಂಗಾತಿ/ಕುಟುಂಬ ಸದಸ್ಯರಿಂದಲೇ ಜಗತ್ತಿನಾದ್ಯಂತ ಹತ್ಯೆಯಾಗುತ್ತಿರುವ ಮಹಿಳೆಯರು/ಹುಡುಗಿಯರ ಸಂಖ್ಯೆ

ಯಾವ ಖಂಡದಲ್ಲಿ ಎಷ್ಟೆಷ್ಟು?

ಸಂಗಾತಿಯಿಂದ ಹತ್ಯೆಯಾಗುವ ಮಹಿಳೆ/ ಹುಡುಗಿಯರ ಸಂಖ್ಯೆ ಅಧಿಕವಿರುವ ಖಂಡಗಳು

ಖಂಡ	ಸಂಖ್ಯೆ
ಆಫ್ರಿಕಾ	21,700
ಏಷ್ಯಾ	18,500
ಅಮೆರಿಕ	8,300
ಯೂರೋಪ್	2,300

ಹತ್ಯೆ: ಯಾರದ್ದು ಎಷ್ಟು ಪ್ರಮಾಣ?

55%	45%
ಸಂಗಾತಿಗಳಿಂದ ಹತ್ಯೆಯಾದ ಮಹಿಳೆಯರು/ ಹುಡುಗಿಯರ ಪ್ರಮಾಣ	ಕುಟುಂಬ ಸದಸ್ಯರಿಂದ ಹತ್ಯೆಯಾದ ಮಹಿಳೆಯರು/ಹುಡುಗಿಯರ ಪ್ರಮಾಣ



ಪ್ರತಿ 1ಲಕ್ಷ ಮಹಿಳೆಯರಲ್ಲಿ ಎಷ್ಟು ಮಂದಿಯ ಹತ್ಯೆ?

1.3 ತಮ್ಮ ಸಂಗಾತಿ/ಕುಟುಂಬ ಸದಸ್ಯರಿಂದಲೇ ಜಗತ್ತಿನಾದ್ಯಂತ ಹತ್ಯೆಯಾಗುತ್ತಿರುವ ಮಹಿಳೆ/ ಹುಡುಗಿಯರ ಸಂಖ್ಯೆ

ಖಂಡ	ಸಂಖ್ಯೆ
ಆಫ್ರಿಕಾ	2.9
ಏಷ್ಯಾ	0.8
ಅಮೆರಿಕ	1.6
ಯೂರೋಪ್	0.6

ಹತ್ಯೆ ತಡೆಯುವ ಮಾರ್ಗ ಯಾವುದು?

ಸೂಕ್ತ ಸಮಯದಲ್ಲಿ ಮಧ್ಯಪ್ರವೇಶಿಸಿದ್ದರೆ, ಮಹಿಳೆಯರ ಹಲವು ಹತ್ಯೆ ಪ್ರಕರಣಗಳನ್ನು ತಡೆಯಬಹುದಿತ್ತು ಎಂದು ವರದಿಯಲ್ಲಿ ಹೇಳಲಾಗಿದೆ. ಫ್ರಾನ್ಸ್, ದಕ್ಷಿಣ ಆಫ್ರಿಕಾ ಹಾಗೂ ಕೊಲಂಬಿಯಾದ ದತ್ತಾಂಶಗಳನ್ನು ಇಟ್ಟುಕೊಂಡು ಹೀಗೆ ಹೇಳಲಾಗಿದೆ. ತಮ್ಮ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂದು ಹಲವು ಮಹಿಳೆಯರು ಪೊಲೀಸರಿಗೆ ದೂರು ನೀಡಿದ್ದರು. ಆದರೆ, ಪೊಲೀಸರು ಮಧ್ಯಪ್ರವೇಶಿಸದ ಕಾರಣ ಹತ್ಯೆಗಳು ನಡೆದಿವೆ.

‘ಮಹಿಳೆಯರ ಮೇಲಿನ ಹಿಂಸೆಯನ್ನು ತಡೆಯಬಹುದಾಗಿತ್ತು. ಇದಕ್ಕಾಗಿ ನಾವು ನಮ್ಮ ಕಾನೂನನ್ನು ಶಕ್ತಿಯುತವಾಗಿಸಬೇಕಿದೆ. ದತ್ತಾಂಶ ಸಂಗ್ರಹವನ್ನು ಉತ್ತಮ ಪಡಿಸಿಕೊಳ್ಳಬೇಕು. ಜೊತೆಗೆ ಇಂಥ ಪ್ರಕರಣಗಳಲ್ಲಿ ಸರ್ಕಾರವು ಹೆಚ್ಚಿನ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ಮಹಿಳೆಯರ ಮೇಲಿನ ಹಿಂಸೆಯ ವಿಷಯದಲ್ಲಿ ತುಸುವೂ ಸೈರಣೆ ಇರಕೂಡದು. ಮಹಿಳೆಯ ಹಕ್ಕುಗಳ ಸಂಘ–ಸಂಸ್ಥೆಗಳಿಗೆ ಹೆಚ್ಚಿನ ಅನುದಾನ ನೀಡಬೇಕು’ ಎಂದು ವರದಿಯಲ್ಲಿ ಹೇಳಲಾಗಿದೆ.

ಜಗತ್ತಿನಾದ್ಯಂತ ನಡೆದ ‘ಮೀ ಟೂ’ ಅಭಿಯಾನವು ಮಹಿಳೆಯರ ಮೇಲಿನ ಹಿಂಸೆಯ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ನೆರವಾಯಿತು. ಇದರಿಂದ ಸಾರ್ವಜನಿಕ ಅಭಿಪ್ರಾಯವೂ ರೂಪುಗೊಂಡಿತು ಎಂದು ಹೇಳಲಾಗಿದೆ. ಲಿಂಗ ತಾರತಮ್ಯವನ್ನು ವಿರೋಧಿಸಿ ಜಗತ್ತಿನಾದ್ಯಂತ #ನೋಎಕ್ಸ್‌ಕ್ಯೂಸ್ ಮತ್ತು #16ಡೇಸ್ ಎನ್ನುವ 16 ದಿನಗಳ ಸಾಮಾಜಿಕ ಮಾಧ್ಯಮ ಅಭಿಯಾನವನ್ನು ಆರಂಭಿಸಲಾಗಿದೆ.

ಸಂವಿಧಾನದಲ್ಲಿ ‘ಜಾತ್ಯತೀತ’: ಆಕ್ಷೇಪ ತಳ್ಳಿಹಾಕಿದ ‘ಸುಪ್ರೀಂ’

ಒಂದನೇ ಪುಟದಿಂದ...

ಪ್ರಸ್ತಾವನೆಯಲ್ಲಿ ‘ಸಮಾಜವಾದಿ’ ಮತ್ತು ‘ಜಾತ್ಯತೀತ’ ಪದಗಳನ್ನು ಸೇರಿಸಿರುವುದನ್ನು ಪ್ರಶ್ನಿಸಿ ರಾಜ್ಯಸಭೆಯ ಮಾಜಿ ಸದಸ್ಯ ಸುಬ್ರಮಣ್ಯನ್ ಸ್ವಾಮಿ, ವಕೀಲ ಅಶ್ವಿನಿ ಉಪಾಧ್ಯಾಯ ಮತ್ತು ಬಲರಾಮ್ ಸಿಂಗ್ ಅವರು ಅರ್ಜಿಗಳನ್ನು ಸಲ್ಲಿಸಿದ್ದರು. ಸುಪ್ರೀಂ ಕೋರ್ಟ್ ಪೀಠವು ಈ ಕುರಿತ ತೀರ್ಪನ್ನು ಕಾಯ್ದಿರಿಸಿತ್ತು.

‘ಅರ್ಜಿಗಳಿಗೆ ಸಂಬಂಧಿಸಿದಂತೆ ಹೆಚ್ಚು ಚರ್ಚಿಸುವ ಮತ್ತು ತೀರ್ಪು ನೀಡುವ ಅಗತ್ಯವಿಲ್ಲ. ತಿದ್ದುಪಡಿ ಪ್ರಕ್ರಿಯೆಯನ್ನು ಇಷ್ಟು ವರ್ಷಗಳ ಬಳಿಕ ಅನೂರ್ಜಿತಗೊಳಿಸಲಾಗದು’ ಎಂದು ಪೀಠವು ಸ್ಪಷ್ಟಪಡಿಸಿತು.

ಸಂವಿಧಾನಕ್ಕೆ 1976ರಲ್ಲಿ ತಂದ ತಿದ್ದುಪಡಿಯು ನ್ಯಾಯಾಂಗದ ವಿಮರ್ಶೆಗೆ ಒಳಪಟ್ಟಿದೆ. ಈ ಪದಗಳ ಸೇರ್ಪಡೆಯೂ ಸೇರಿದಂತೆ ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಸಂಸತ್ತು ತೆಗೆದುಕೊಂಡ ಎಲ್ಲ ನಿರ್ಧಾರಗಳನ್ನು ಅನೂರ್ಜಿತ ಎನ್ನಲಾಗದು ಎಂದು ತೀರ್ಪನ್ನು ಕಾಯ್ದಿರಿಸುವಾಗ ಪೀಠವು ಹೇಳಿತ್ತು.

ಸಂವಿಧಾನ ರಚನಾ ಸಭೆಯು ‘ಜಾತ್ಯತೀತ’ ಪದವನ್ನು ಉದ್ದೇಶಪೂರ್ವಕವಾಗಿಯೇ ಬಿಟ್ಟುಬಿಟ್ಟಿತ್ತು. ‘ಸಮಾಜವಾದಿ’ ಪದವು ಚುನಾಯಿತ ಸರ್ಕಾರದ ಆರ್ಥಿಕ ನೀತಿಯ ಆಯ್ಕೆಯನ್ನು ನಿರ್ಬಂಧಿಸುತ್ತದೆ ಮತ್ತು ಅದು ಜನರ ಇಚ್ಛೆಯನ್ನು ಪ್ರತಿನಿಧಿಸುತ್ತದೆ ಎಂಬುದು ಅರ್ಜಿದಾರರ ವಾದ ಆಗಿತ್ತು.

ಪೀಠ ಹೇಳಿದ್ದು...

‘ಜಾತ್ಯತೀತ’: 1949ರಲ್ಲಿ ‘ಸೆಕ್ಯುಲರ್’ ಎಂಬ ಪದವನ್ನು ‘ನಿಖರವಲ್ಲದ್ದು’ ಎಂದು ಪರಿಗಣಿಸಲಾಗಿತ್ತು. ಏಕೆಂದರೆ, ಕೆಲವು ನ್ಯಾಯಶಾಸ್ತ್ರಜ್ಞರು ಈ ಪದವನ್ನು ಧರ್ಮಕ್ಕೆ ವಿರುದ್ಧವಾದುದು ಎಂದು ವ್ಯಾಖ್ಯಾನಿಸಿದ್ದರು.

ಆದರೆ ಕಾಲಾಂತರದಲ್ಲಿ ಭಾರತವು ಜಾತ್ಯತೀತತೆಗೆ ಸಂಬಂಧಿಸಿದಂತೆ ತನ್ನದೇ ಆದ ವ್ಯಾಖ್ಯಾನವನ್ನು ರೂಢಿಸಿಕೊಂಡಿದೆ. ದೇಶವು ಯಾವುದೇ ಧರ್ಮವನ್ನು ಬೆಂಬಲಿಸುವುದಿಲ್ಲ ಅಥವಾ ಯಾವುದೇ ನಂಬಿಕೆಯ ಆಚರಣೆಯನ್ನು ವಿರೋಧಿಸುವುದಿಲ್ಲ. ಸಂವಿಧಾನದ 14, 15 ಮತ್ತು 16ನೇ ವಿಧಿಗಳು ಇದೇ ತತ್ವವನ್ನು ಪ್ರತಿಪಾದಿಸಿವೆ.

ಯಾವುದೇ ಧಾರ್ಮಿಕ ಆಚರಣೆಯು ದೇಶದ ಅಭಿವೃದ್ಧಿ ಮತ್ತು ಸಮಾನತೆಯ ಹಕ್ಕುಗಳಿಗೆ ಅಡ್ಡಿಪಡಿಸಿದರೆ ಸರ್ಕಾರವು ಮಧ್ಯ ಪ್ರವೇಶಿಸಬಹುದು
ಸುಪ್ರೀಂ ಕೋರ್ಟ್ ಪೀಠ

‘ಸಮಾಜವಾದ’: ‘ಸಮಾಜವಾದ’ ಪದವು ಜನರು ಆಯ್ಕೆ ಮಾಡಿದ ಚುನಾಯಿತ ಸರ್ಕಾರದ ಆರ್ಥಿಕ ನೀತಿಗಳನ್ನು ನಿರ್ಬಂಧಿಸುತ್ತದೆ ಎಂದು ವ್ಯಾಖ್ಯಾನಿಸಬಾರದು. ಈ ಪದ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಯ ಗುರಿಯನ್ನು ಪ್ರತಿಬಿಂಬಿಸುತ್ತದೆ. ಖಾಸಗಿ ಉದ್ಯಮಗಳು ಮತ್ತು ವ್ಯಾಪಾರದ ಹಕ್ಕನ್ನು ನಿರ್ಬಂಧಿಸುವುದಿಲ್ಲ.

ರೇಣುಕಸ್ವಾಮಿ ಕೊಲೆ: ನ್ಯಾಯಾಧೀಶರ ಎದುರು ಹೇಳಿಕೆ ದಾಖಲು

ಹೆದರಿಕೆಯಿಂದ ಊರೂರು ಸುತ್ತಿದ್ದ ಸಾಕ್ಷಿ

• ಕೆ.ಎಸ್.ಸುನಿಲ್

ದರ್ಶನ್

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಹತ್ಯೆ ಪ್ರಕರಣದ ಪ್ರತ್ಯಕ್ಷ ಸಾಕ್ಷಿಯೊಬ್ಬರು ಭೀತಿಗೊಳಗಾಗಿ ಹತ್ತು ದಿನ ಊರೂರು ಸುತ್ತಾಡಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿದೆ. ನಂತರ ಪೊಲೀಸರು ಅವರನ್ನು ಸಂಪರ್ಕಿಸಿ, ಘಟನೆ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು, ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಹೇಳಿಕೆ ದಾಖಲಿಸಿದ್ದಾರೆ.

ನಟ ದರ್ಶನ್ ಮತ್ತು ಇತರೆ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ಸಲ್ಲಿಸಿರುವ ಹೆಚ್ಚುವರಿ ದೋಷಾರೋಪ ಪಟ್ಟಿಯಲ್ಲಿ ಡಿಜಿಟಲ್ ಸಾಕ್ಷ್ಯಾಧಾರಗಳು, ಎಫ್‌ಎಸ್‌ಎಲ್ ಹಾಗೂ ಸಿಎಫ್‌ಎಸ್‌ಎಲ್ ಪರೀಕ್ಷಾ ವರದಿಗಳು, ಮೊಬೈಲ್ ಕರೆಗಳ ವಿವರ ಹಾಗೂ ಸಾಕ್ಷಿಗಳ ಹೇಳಿಕೆಯನ್ನು ಒಳಗೊಂಡ ಮಾಹಿತಿಯನ್ನು ಲಗತ್ತಿಸಲಾಗಿದೆ.

ದರ್ಶನ್ ಮತ್ತು ಇತರೆ ಆರೋಪಿಗಳು ರೇಣುಕಸ್ವಾಮಿ ಕೊಲೆ ಮಾಡುವುದನ್ನು ದೂರದಲ್ಲಿ ನಿಂತು ನೋಡಿದ್ದ ಸಾಕ್ಷಿ, ಘಟನೆ ಬಳಿಕ ಭಯಗೊಂಡು ಜೂನ್ 11 ರಂದು ಹುಟ್ಟೂರು ಹಾಸನಕ್ಕೆ ತೆರಳಿದ್ದರು. ಸ್ನೇಹಿತನಿಗೆ ಕೊಲೆ ಕುರಿತು ಮಾಹಿತಿ ನೀಡಿ, ತನ್ನ ಪಾತ್ರವೇನೂ ಇಲ್ಲವೆಂದು ತಿಳಿಸಿದ್ದರು. ಪೊಲೀಸರು ತನ್ನ ವಿರುದ್ಧ ಪ್ರಕರಣ ದಾಖಲಿಸಬಹುದೆಂಬ ಭಯದಿಂದ ಎರಡು ದಿನ ಮನೆಯಲ್ಲಿದ್ದು, ನಂತರ ಸ್ನೇಹಿತರ ಜೊತೆ ಗೋವಾ ಪ್ರವಾಸಕ್ಕೆ ತೆರಳಿದ್ದರು ಎಂಬ ಅಂಶವನ್ನು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

‘ಹತ್ಯೆ ಪ್ರಕರಣದಲ್ಲಿ ದರ್ಶನ್ ಮತ್ತು ಇತರೆ ಆರೋಪಿಗಳು ಬಂಧನವಾದ ವಿಷಯ ಗೋವಾ ಪ್ರವಾಸದಲ್ಲಿದ್ದಾಗಲೇ ಮಾಧ್ಯಮಗಳ ಮೂಲಕ ಗೊತ್ತಾಗಿದೆ. ಅಲ್ಲಿಂದ ಬೆಂಗಳೂರಿಗೆ ಬಂದಿದ್ದ ಸಾಕ್ಷಿ, ಈ ವಿಚಾರವನ್ನು ಯಾರಿಗೆ ತಿಳಿಸಬೇಕು ಎಂಬುದು ತಿಳಿಯದೇ ಭಯದಲ್ಲಿದ್ದರು. ಪುನಃ ಗೋವಾ, ತಿರುಪತಿ ಮತ್ತು ಬೇರೆ ಪ್ರದೇಶಗಳಿಗೆ ತೆರಳಿ ವಾಸ್ತವ್ಯ ಹೂಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಪಟ್ಟಣಗೆರೆ ಶೆಡ್‌ನಲ್ಲಿ ಕೆಲಸ ಮಾಡುತ್ತಿದ್ದವರ ಮೂಲಕ ಮಾಹಿತಿ ಪಡೆದ ಪೊಲೀಸರು ಸಾಕ್ಷಿಯನ್ನು ಸಂಪರ್ಕಿಸಿದರು. ಜೂನ್ 20ರಂದು ತನಿಖಾಧಿಕಾರಿ ಮುಂದೆ ಹಾಜರಾಗಿ ಘಟನೆ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದ್ದರು. ಹಾಗಾಗಿ ಈತನನ್ನು ಕೊಲೆ ಪ್ರಕರಣದಲ್ಲಿ ಪ್ರಮುಖ ಸಾಕ್ಷಿಯಾಗಿ ಪರಿಗಣಿಸಿ, ನ್ಯಾಯಾಧೀಶರ ಮುಂದೆ ಹೇಳಿಕೆ ದಾಖಲಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಕೃತ್ಯ ನಡೆದ ಸ್ಥಳದಲ್ಲಿ ದರ್ಶನ್ ಇದ್ದರು ಎಂಬುದಕ್ಕೆ ಪುರಾವೆಯಾಗಿ ಆರೋಪಿಗಳ ಮೊಬೈಲ್‌ನಲ್ಲಿ ಎಂಟು ಫೋಟೊಗಳನ್ನು ಮರು ಸಂಗ್ರಹಿಸಲಾಗಿದೆ. ರೇಣುಕಸ್ವಾಮಿ ಅವರನ್ನು ಅಪಹರಿಸಿದ್ದ ಜಗದೀಶ್ ಮೊಬೈಲ್‌ನಲ್ಲಿ 4, ಅನುಕುಮಾರ್ ಮೊಬೈಲ್‌ನಲ್ಲಿ 2 ಹಾಗೂ ಚಾಲಕ ರವಿ ಮೊಬೈಲ್‌ನಲ್ಲಿ ಎರಡು ಫೋಟೊಗಳನ್ನು ಎಫ್‌ಎಸ್‌ಎಲ್ ತಜ್ಞರು ಮರು ಸಂಗ್ರಹಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕೃತ್ಯದ ಬಳಿಕ ದರ್ಶನ್ ಹೊರಡುವ ಸಂದರ್ಭದಲ್ಲಿ ಆರೋಪಿಗಳು ಫೋಟೊ ತೆಗೆಸಿಕೊಂಡಿದ್ದರು ಎಂಬುದು ತನಿಖೆಯಲ್ಲಿ ಗೊತ್ತಾಗಿದೆ. ಪಟ್ಟಣಗೆರೆಯ ಶೆಡ್‌ನಲ್ಲಿ ಜೂನ್ 9ರಂದು ರೇಣುಕಸ್ವಾಮಿ ಕೊಲೆ ನಡೆದಿತ್ತು. ಕೊಲೆ ಆರೋಪದಡಿ ನಟ ದರ್ಶನ್, ಅವರ ಆಪ್ತೆ ಪವಿತ್ರಾಗೌಡ ಸೇರಿ 17 ಮಂದಿಯನ್ನು ಪೊಲೀಸರು ಬಂಧಿಸಿದ್ದರು.

ಹಣದ ಮೂಲ ಹುಡುಕಾಟ

ಆರೋಪಿಗಳ ಹಣಕಾಸು ವಹಿವಾಟಿನ ಬಗ್ಗೆಯೂ ಮಾಹಿತಿ ಸಂಗ್ರಹಕ್ಕೆ ತನಿಖಾಧಿಕಾರಿಗಳು ಮುಂದಾಗಿದ್ದಾರೆ.

ಹದಿನಾಲ್ಕು ಆರೋಪಿಗಳ ಬ್ಯಾಂಕ್ ಖಾತೆ ವಿವರ ನೀಡುವಂತೆ ಐಡಿಎಫ್‌ಸಿ ಫಸ್ಟ್ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಐಸಿಐಸಿಐ, ಕೋಟಕ್ ಮಹಿಂದ್ರಾ, ಎಚ್‌ಡಿಎಫ್‌ಸಿ, ಕೆನರಾ ಬ್ಯಾಂಕ್ ವ್ಯವಸ್ಥಾಪಕರನ್ನು ತನಿಖಾ ತಂಡ ಕೋರಿದೆ.

ಕೊಲೆ ಪ್ರಕರಣ ಮುಚ್ಚಿ ಹಾಕಲು ₹ 70 ಲಕ್ಷ ಹಣ ಬಳಕೆ ಮಾಡಿರುವುದನ್ನು ತನಿಖೆ ವೇಳೆ ಪೊಲೀಸರು ಪತ್ತೆ ಮಾಡಿದ್ದರು. ಆರೋಪಿಗಳ ಬ್ಯಾಂಕ್ ಖಾತೆಗಳಿಗೆ ಲಕ್ಷಾಂತರ ರೂಪಾಯಿ ಹಣ ವರ್ಗಾವಣೆ ಆಗಿತ್ತು. ಮತ್ತಷ್ಟು ವಹಿವಾಟು ನಡೆಸಿರುವ ಬಗ್ಗೆ ಶಂಕೆ ವ್ಯಕ್ತವಾಗಿದ್ದು, ಹಾಗಾಗಿ ದಾಖಲೆ ಸಂಗ್ರಹಕ್ಕೆ ಪ್ರಯತ್ನಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಸಣ್ಣ ರಾಜ್ಯಗಳಿಗೂ ಹೆಚ್ಚು ಮೊತ್ತ: ಹಣಕಾಸು ಆಯೋಗ ಸೇರಿ ವಿವಿಧ ಯೋಜನೆಗಳ ಹಣ

ಕರ್ನಾಟಕಕ್ಕೆ ಕಡಿಮೆ ಅನುದಾನ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕಳೆದ ಮೂರು ವರ್ಷಗಳಲ್ಲಿ ಹಣಕಾಸು ಆಯೋಗದ ಅನುದಾನದ ರೂಪದಲ್ಲಿ ಸಣ್ಣ ರಾಜ್ಯಗಳಾದ ಹಿಮಾಚಲ ಪ್ರದೇಶಕ್ಕೆ ₹31,272 ಕೋಟಿ, ಉತ್ತರಾಖಂಡಕ್ಕೆ ₹25,975 ಕೋಟಿ ಹಾಗೂ ಅಸ್ಸಾಂಗೆ ₹22,120 ಕೋಟಿ ಹರಿದು ಬಂದಿದ್ದರೆ, ಕರ್ನಾಟಕಕ್ಕೆ ಬಿಡುಗಡೆಯಾಗಿದ್ದು ₹16,066 ಕೋಟಿ ಮಾತ್ರ!

ಅಭಿವೃದ್ಧಿ ಕಾಮಗಾರಿಗಳಿಗಾಗಿ ವಿವಿಧ ಮೂಲಗಳಿಂದ ರಾಜ್ಯಗಳಿಗೆ ಬಿಡುಗಡೆ ಮಾಡಿರುವ ಅನುದಾನಗಳ ವಿವರವನ್ನು ಕೇಂದ್ರ ಸರ್ಕಾರ ನೀಡಿದೆ. ಈ ಸಂಬಂಧ ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಲೋಕಸಭೆಯಲ್ಲಿ ಸೋಮವಾರ ಲಿಖಿತ ಉತ್ತರ ನೀಡಿದ್ದಾರೆ.

ರಾಜ್ಯಗಳಿಗೆ ಹಣಕಾಸು ಆಯೋಗದ ಅನುದಾನ (₹ಕೋಟಿಗಳಲ್ಲಿ)

ರಾಜ್ಯ	2021-22	2022-23	2023-24	ಒಟ್ಟು
ಆಂಧ್ರ ಪ್ರದೇಶ	21342	13174	9640	44,156
ಅರುಣಾಚಲ ಪ್ರದೇಶ	439	212	220	871
ಅಸ್ಸಾಂ	8916	7605	5599	22,120
ಬಿಹಾರ	8116	6732	7662	22,510
ಛತ್ತೀಸಗಢ	2379	1772	1770	5,921
ಗೋವಾ	119	54	11	184
ಗುಜರಾತ್	5002	5304	5257	15,563
ಹರಿಯಾಣ	1493	1620	1973	5,086
ಹಿಮಾಚಲ ಪ್ರದೇಶ	11044	10703	9525	31,272
ಜಾರ್ಖಂಡ್	2318	1826	2378	6,522
ಕರ್ನಾಟಕ	7863	4435	3768	16,066
ಕೇರಳ	22171	15382	7245	44,798
ಮಧ್ಯ ಪ್ರದೇಶ	5946	5494	7,028	18,468
ಮಹಾರಾಷ್ಟ್ರ	8748	9968	8815	27,531
ಮಣಿಪುರ	2674	2387	2122	7,273
ಮೇಘಾಲಯ	1494	1144	775	3,413
ಮಿಜೊರಾಂ	1910	1685	1635	5,230
ನಾಗಾಲ್ಯಾಂಡ್	4763	4737	4534	14,034
ಒಡಿಶಾ	5056	4220	4867	14,143
ಪಂಜಾಬ್	12435	10258	7388	30,081
ರಾಜಸ್ಥಾನ	17210	10521	5590	33,321
ಸಿಕ್ಕಿಂ	852	528	323	1,703
ತಮಿಳುನಾಡು	10116	5791	6250	22,157
ತೆಲಂಗಾಣ	1850	3359	2924	8,133
ತ್ರಿಪುರ	4911	4654	4577	14,142
ಉತ್ತರ ಪ್ರದೇಶ	12306	12383	14837	39,526
ಉತ್ತರಾಖಂಡ	9424	8501	8050	25,975
ಪಶ್ಚಿಮ ಬಂಗಾಳ	23867	19824	14614	58,305
ಒಟ್ಟು	2,14,777	1,74,284	1,49,391	5,38,452

ಹಣಕಾಸು ಆಯೋಗದ ಅನುದಾನದಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ (ಎನ್‌ಡಿಆರ್‌ಎಫ್) ಹಾಗೂ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಎಂಎಫ್) ಸೇರಿವೆ. ಪಂಜಾಬ್, ರಾಜಸ್ಥಾನದಂತಹ ರಾಜ್ಯಗಳಿಗೆ ದೊಡ್ಡ ಮೊತ್ತ ದೊರಕಿದೆ.

ಕೇಂದ್ರದ ತೆರಿಗೆ ಪಾಲು ಹಾಗೂ ಅನುದಾನ ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ಸರ್ಕಾರವು ಕೇಂದ್ರದ ಜತೆಗೆ ಸಂಘರ್ಷಕ್ಕೆ ಇಳಿದಿದೆ.

ದಕ್ಷಿಣದ ರಾಜ್ಯಗಳ ಪೈಕಿ ತಮಿಳುನಾಡು, ಆಂಧ್ರ ಪ್ರದೇಶ ಹಾಗೂ ಕೇರಳಕ್ಕಿಂತ ಕಡಿಮೆ ಅನುದಾನ ಕರ್ನಾಟಕಕ್ಕೆ ಸಿಕ್ಕಿದೆ.

ಆರ್ಥಿಕ ಸಂಕಷ್ಟದಿಂದ ಬಸವಳಿದಿರುವ ಕೇರಳಕ್ಕೆ ₹44,798 ಕೋಟಿ ಬಂದಿದೆ.

ಕೇಂದ್ರದ ಎಲ್ಲ ಅನುದಾನಗಳಲ್ಲಿ ಸಿಂಹಪಾಲು ಪಡೆಯುವ ಪಶ್ಚಿಮ ಬಂಗಾಳ, ಉತ್ತರ ಪ್ರದೇಶ ರಾಜ್ಯಗಳಿಗೆ ಇಲ್ಲೂ ಗರಿಷ್ಠ ಅನುದಾನ ಬಿಡುಗಡೆಯಾಗಿದೆ.

ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕೇಂದ್ರ ಪ್ರಾಯೋಜಿತ ಯೋಜನೆಗಳಲ್ಲೂ ರಾಜ್ಯಕ್ಕೆ ಸಿಕ್ಕಿರುವ ಪಾಲು ಕಡಿಮೆ. ರಾಜ್ಯಕ್ಕೆ ಮೂರು ವರ್ಷಗಳಲ್ಲಿ ₹56,909 ಕೋಟಿ ಬಿಡುಗಡೆಯಾಗಿದೆ. ಅಸ್ಸಾಂಗೆ ₹71,021 ಕೋಟಿ, ರಾಜಸ್ಥಾನಕ್ಕೆ ₹74,067 ಕೋಟಿ, ಉತ್ತರ ಪ್ರದೇಶಕ್ಕೆ ₹1,59,629 ಕೋಟಿ ಕೊಡಲಾಗಿದೆ. ತಮಿಳುನಾಡು, ಆಂಧ್ರ, ಮಹಾರಾಷ್ಟ್ರ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಬಿಹಾರ ಮತ್ತಿತರ ರಾಜ್ಯಗಳಿಗೆ ಭರಪೂರ ಅನುದಾನ ನೀಡಲಾಗಿದೆ.

ಕೇಂದ್ರ ವಲಯದ ಯೋಜನೆಗಳಲ್ಲೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಬಾಹ್ಯ ನೆರವಿನ ಯೋಜನೆಗಳಿಗೆ ಸಹಾಯಧನದ ರೂಪದಲ್ಲಿ ಮೂರು ವರ್ಷಗಳಲ್ಲಿ ರಾಜ್ಯಕ್ಕೆ ಬಂದಿದ್ದು ₹19.50 ಕೋಟಿಯಷ್ಟೇ. ಆಂಧ್ರ ಪ್ರದೇಶ, ಗುಜರಾತ್, ಗೋವಾ, ಬಿಹಾರ, ತಮಿಳುನಾಡು, ಸಿಕ್ಕಿಂ, ಮಹಾರಾಷ್ಟ್ರ ರಾಜ್ಯಗಳಿಗೆ ಮಾತ್ರ ವಿಶೇಷ ಅನುದಾನ ಕೊಡಲಾಗಿದೆ.

ಪ್ರತಿಭಟನೆ ಸಶಸ್ತ್ರ ಪಡೆಗಳ (ವಿಶೇಷಾಧಿಕಾರ) ಕಾಯ್ದೆ ಹಿಂಪಡೆಯಬೇಕು ಎಂದು ಒತ್ತಾಯಿಸಿ ಮೈತೇಯಿ ಸಮುದಾಯದ 'ಮೀರಾ ಪೈಬಿ' ಸಂಘಟನೆಯ ಸದಸ್ಯರು ಮಣಿಪುರದ ಪೂರ್ವ ಇಂಫಾಲ್‌ನಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

'ಜೈಶ್ರೀರಾಮ್ ಜಪಿಸಲು ಒತ್ತಾಯ'

ಮೀರತ್ (ಉತ್ತರ ಪ್ರದೇಶ), (ಪಿಟಿಐ): ಯುವಕನೊಬ್ಬನನ್ನು ಬೆತ್ತಲೆಗೊಳಿಸಿ ಥಳಿಸಿದ ಗುಂಪೊಂದು, ಜೈಶ್ರೀರಾಮ್ ಜಪಿಸುವಂತೆ ಒತ್ತಾಯಿಸಿದೆ ಎಂದು ಆತನ ಕುಟುಂಬವು ಆರೋಪಿಸಿದೆ.

ಪಲ್ಲವ್‌ಪುರಂನ ಸೋಫಿಪುರದ ನಿವಾಸಿ ಗುಲ್ಫಾಮ್ ಅವರು ಮಂಗಲ್ ಪಾಂಡೆ ನಗರದಲ್ಲಿರುವ ಖಾಸಗಿ ಶೂಟಿಂಗ್ ರೇಂಜ್‌ನಲ್ಲಿ ತಾಲೀಮು ನಡೆಸಿ, ಶನಿವಾರ ರಾತ್ರಿ 8 ಗಂಟೆ ಸುಮಾರಿನಲ್ಲಿ ಮನೆಗೆ ಮರಳುತ್ತಿದ್ದಾಗ ಈ ಘಟನೆ ನಡೆದಿದೆ ಎಂದು ಆತನ ತಂದೆ ಅಫ್ತಾಬ್ ಹೇಳಿದ್ದಾರೆ.

'ಅದಾನಿ ದೇಣಿಗೆ ಸ್ವೀಕರಿಸುವುದಿಲ್ಲ'

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ಸ್ಥಾಪನೆಯಾಗಲಿರುವ ಯಂಗ್ ಇಂಡಿಯಾ ಸ್ಕಿಲ್ ಯೂನಿವರ್ಸಿಟಿಗೆ ಉದ್ಯಮಿ ಗೌತಮ್ ಅದಾನಿ ಘೋಷಿಸಿರುವ ₹ 100 ಕೋಟಿ ದೇಣಿಗೆಯನ್ನು ರಾಜ್ಯ ಸರ್ಕಾರ ಸ್ವೀಕರಿಸುವುದಿಲ್ಲ ಎಂದು ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ ರೆಡ್ಡಿ ಸೋಮವಾರ ಹೇಳಿದ್ದಾರೆ.

ದೇಣಿಗೆಯನ್ನು ಸ್ವೀಕರಿಸಿದರೆ ರಾಜ್ಯ ಸರ್ಕಾರ ಅಥವಾ ಮುಖ್ಯಮಂತ್ರಿ ಅವರು ಅದಾನಿ ಪರವಾಗಿ ಇದ್ದಾರೆ ಎಂಬ 'ಅನಗತ್ಯ ಚರ್ಚೆ' ಹುಟ್ಟುಹಾಕಬಹುದು ಎಂಬ ಕಾರಣದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ನಾನು ಮತ್ತು ಸಚಿವ ಸಂಪುಟದ ಸಹೋದ್ಯೋಗಿಗಳು ಅನಗತ್ಯ ಸನ್ನಿವೇಶದಲ್ಲಿ ಸಿಲುಕಲು ಬಯಸುವುದಿಲ್ಲ. ಅದು ರಾಜ್ಯ ಸರ್ಕಾರಕ್ಕೆ ಅಥವಾ ನನ್ನ ಗೌರವಕ್ಕೆ ಧಕ್ಕೆ ತರುತ್ತದೆ. ನೀವು ಉದಾರವಾಗಿ ನೀಡಿರುವ ₹100 ಕೋಟಿ ದೇಣಿಗೆಯನ್ನು ಈಗಿನ ಪರಿಸ್ಥಿತಿಯಲ್ಲಿ ಸ್ವೀಕರಿಸಲು ಸಿದ್ಧವಿಲ್ಲ ಎಂದು ಅದಾನಿ ಸಮೂಹಕ್ಕೆ ತಿಳಿಸಿದ್ದೇವೆ. ಘೋಷಣೆ ಮಾಡಿರುವ ಮೊತ್ತವನ್ನು ವಿಶ್ವವಿದ್ಯಾಲಯಕ್ಕೆ ನೀಡದಂತೆ ಅದಾನಿ ಫೌಂಡೇಷನ್‌ಗೆ ಪತ್ರದ ಮೂಲಕ ವಿನಂತಿಸಲಾಗಿದೆ' ಎಂದು ಹೇಳಿದರು.

ವೈದ್ಯಕೀಯ ಸೀಟು ಕೊಡಿಸುವುದಾಗಿ ವಂಚಿಸಿದ ಪ್ರಕರಣ

ಕೇರಳದಲ್ಲಿ ಆರೋಪಿಗಾಗಿ ಶೋಧ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕರ್ನಾಟಕದ ವಿದ್ಯಾರ್ಥಿಗಳಿಗೆ ವೈದ್ಯಕೀಯ ಸೀಟು ಕೊಡಿಸುವುದಾಗಿ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ತಿರುವನಂತಪುರ ಹೊರವಲಯದಲ್ಲಿರುವ ಕಾರಕೋಣಂನ ಡಾ. ಸೊಮರ್‌ವೆಲ್ ಮೆಮೊರಿಯಲ್ ಸಿಎಸ್ಐ ವೈದ್ಯಕೀಯ ಕಾಲೇಜಿನ ನಿರ್ದೇಶಕ ಡಾ. ಬೆನೆಟ್ ಅಬ್ರಹಾಂಗಾಗಿ ಕರ್ನಾಟಕ ಪೊಲೀಸರು ಸೋಮವಾರ ಶೋಧ ನಡೆಸಿದರು.

ರಾಜ್ಯದ ವಿದ್ಯಾರ್ಥಿಗಳಿಗೆ ಅಬ್ರಹಾಂ ₹7.25 ಕೋಟಿ ವಂಚಿಸಿದ್ದು, ಬೆಂಗಳೂರಿನ ಮಲ್ಲೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಪ್ರಕರಣದಲ್ಲಿ ಅಬ್ರಹಾಂ ಕೂಡ ಆರೋಪಿಯಾಗಿದ್ದು, ಎರಡನೇ ಬಾರಿ ಕೇರಳದಲ್ಲಿ ಕರ್ನಾಟಕ ಪೊಲೀಸರು ಹುಡುಕಾಟ ನಡೆಸಿದ್ದಾರೆ. ಬಂಧನದ ಭೀತಿಯಿಂದ ಅಬ್ರಹಾಂ ತಲೆಮರೆಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕದ ಪೊಲೀಸರಿಗೆ ಕೇರಳದ ಪೊಲೀಸರು ನೆರವು ನೀಡಿದರು ಎಂದು ವೆಳ್ಳರಡ ಪೊಲೀಸ್ ಠಾಣೆಯ ಮೂಲಗಳು ತಿಳಿಸಿವೆ.

ಡಾ. ಅಬ್ರಹಾಂ ವಿರುದ್ಧ ಪೊಲೀಸರು ಕ್ರಮಕ್ಕೆ ಮುಂದಾಗಿರುವುದು ಆಡಳಿತಾರೂಢ ಸಿಪಿಐ ಪಕ್ಷಕ್ಕೆ ತೀವ್ರ ಮುಜುಗರ ಉಂಟುಮಾಡಿದೆ. 2014ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ತಿರುವನಂತಪುರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಶಶಿ ತರೂರ್ ವಿರುದ್ಧ ಸಿಪಿಐ ಅಭ್ಯರ್ಥಿಯಾಗಿ ಡಾ. ಅಬ್ರಹಾಂ ಕಣಕ್ಕಿಳಿದಿದ್ದರು. ತರೂರ್ ವಿರುದ್ಧ ಸೋಲು ಅನುಭವಿಸಿ, ಮೂರನೇ ಸ್ಥಾನ ಪಡೆದಿದ್ದರು.

ಹಣಕಾಸು ಅಕ್ರಮ ವ್ಯವಹಾರ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ತನಿಖೆ ಕೈಗೊಂಡಿದೆ. ಕಾಲೇಜಿನ ಆಡಳಿತ ಮಂಡಳಿ ನಿರ್ದೇಶಕ ಡಾ. ಅಬ್ರಹಾಂ ಹಾಗೂ ಕೇರಳ ಸಿಎಸ್‌ಐನ ದಕ್ಷಿಣ ಧರ್ಮಪ್ರಾಂತದ ಬಿಷಪ್ ಧರ್ಮರಾಜ್ ಸೇರಿದಂತೆ, ಕಾಲೇಜಿನ ಆಡಳಿತ ಮಂಡಳಿಯ ಹಲವು ಮಂದಿ ತನಿಖೆ ಎದುರಿಸುತ್ತಿದ್ದಾರೆ.

ಆದಿತ್ಯ ಠಾಕ್ರೆ ಆಯ್ಕೆ

ಮುಂಬೈ (ಪಿಟಿಐ): ಶಿವಸೇನಾದ (ಉದ್ಧವ್ ಬಣ) ಶಾಸಕಾಂಗ ಪಕ್ಷದ ನಾಯಕರಾಗಿ ಮಹಾರಾಷ್ಟ್ರದ ಮಾಜಿ ಸಚಿವ ಆದಿತ್ಯ ಠಾಕ್ರೆ ಅವರು ಸೋಮವಾರ ಆಯ್ಕೆಯಾಗಿದ್ದಾರೆ.

ಮುಂಬೈನಲ್ಲಿ ನಡೆದ ಪಕ್ಷದ ಶಾಸಕರ ಸಭೆಯಲ್ಲಿ ಶಾಸಕಾಂಗ ಪಕ್ಷದ ನಾಯಕನನ್ನು ಆಯ್ಕೆ ಮಾಡಲಾಯಿತು.

ಮಾಜಿ ಸಚಿವ ಭಾಸ್ಕರ್ ಜಾಧವ್ ಅವರನ್ನು ವಿಧಾನಸಭೆಯಲ್ಲಿ ಪಕ್ಷದ ನಾಯಕನನ್ನಾಗಿ ಮತ್ತು ಸುನೀಲ್ ಪ್ರಭು ಅವರನ್ನು ಪಕ್ಷದ ಮುಖ್ಯಸಚೇತಕರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಶಿವಸೇನಾದ(ಉದ್ಧವ್ ಬಣ) ಹಿರಿಯ ನಾಯಕ ಅಂಬಾದಾಸ್ ದಾನ್ವೆ ಅವರು ಸುದ್ದಿಗಾರರಿಗೆ ತಿಳಿಸಿದರು.

ಎಂಎನ್‌ಎಸ್ ಮಾನ್ಯತೆಗೆ ಕುತ್ತು?

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಒಂದು ಸ್ಥಾನ ಸಹ ಪಡೆಯದ ಮಹಾರಾಷ್ಟ್ರ ನವನಿರ್ಮಾಣ ಸೇನೆಯು (ಎಂಎನ್‌ಎಸ್) ರಾಜಕೀಯ ಪಕ್ಷದ ಮಾನ್ಯತೆ ಮತ್ತು ಚಿಹ್ನೆಯನ್ನು (ರೈಲ್ವೆ ಎಂಜಿನ್) ಕಳೆದುಕೊಳ್ಳುವ ಸಾಧ್ಯತೆ ಇದೆ.

ಈ ಬಾರಿ 125 ಕ್ಷೇತ್ರಗಳಲ್ಲಿ ಎಂಎನ್‌ಎಸ್ ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಆದರೆ, ರಾಜ್ ಠಾಕ್ರೆ ಅವರ ಪುತ್ರ ಅಮಿತ್ ಠಾಕ್ರೆ ಸೇರಿದಂತೆ ಯಾವೊಬ್ಬ ಅಭ್ಯರ್ಥಿಯು ಗೆಲುವು ಸಾಧಿಸಿಲ್ಲ.

ಹೊಸ ಸರ್ಕಾರ ರಚನೆ ವಿಳಂಬ; ಇಂದು ಅಂತಿಮ ನಿರ್ಧಾರ

ಮಹಾರಾಷ್ಟ್ರ: ಮುಂದುವರಿದ ಕಗ್ಗಂಟು

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿ ಆಯ್ಕೆ ಸಂಬಂಧ 'ಮಹಾಯುತಿ' ಮೈತ್ರಿಕೂಟದಲ್ಲಿ ಸೋಮವಾರವೂ ಒಮ್ಮತ ಮೂಡಿ ಬರದ ಕಾರಣ ಹೊಸ ಸರ್ಕಾರ ರಚನೆ ವಿಳಂಬವಾಗಿದೆ.

ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಗೆಲುವು ಪಡೆದ 'ಮಹಾಯುತಿ' ಮೈತ್ರಿಕೂಟದ ನಾಯಕರು ಇಡೀ ದಿನ ಚರ್ಚಿಸಿದರೂ, ಮುಖ್ಯಮಂತ್ರಿಯ ಹೆಸರು ಘೋಷಣೆಯಾಗಲಿಲ್ಲ. ಹಾಲಿ ವಿಧಾನಸಭೆಯ ಅವಧಿ ಮಂಗಳವಾರ ಕೊನೆಗೊಳ್ಳಲಿದೆ. ಆದರೆ, ರಾಷ್ಟ್ರಪತಿ ಆಳ್ವಿಕೆಯ ಸಾಧ್ಯತೆಯನ್ನು ತಳ್ಳಿಹಾಕಲಾಗಿದೆ.

'ಈಗ ಇರುವ ಸೂತ್ರವೇ ಮುಂದುವರಿಯಲಿದೆ. ಒಬ್ಬರು ಮುಖ್ಯಮಂತ್ರಿ ಹಾಗೂ ಇಬ್ಬರು ಉಪ ಮುಖ್ಯಮಂತ್ರಿಗಳು ಇರಲಿದ್ದಾರೆ. 12 ಸಚಿವ ಸ್ಥಾನಗಳು ಬಿಜೆಪಿಗೆ ಸಿಗಲಿದೆ. ಶಿವಸೇನೆ (ಶಿಂದೆ ಬಣ) ಮತ್ತು ಎನ್‌ಸಿಪಿಗೆ (ಅಜಿತ್ ಪವಾರ್ ಬಣ) ತಲಾ 12 ಹಾಗೂ 10 ಸ್ಥಾನಗಳು ಸಿಗಲಿವೆ' ಎಂದು ಮೂಲಗಳು ತಿಳಿಸಿವೆ.

ಆದರೆ, ಮುಖ್ಯಮಂತ್ರಿ ಆಯ್ಕೆ ಕಗ್ಗಂಟಾಗಿ ಪರಿಣಮಿಸಿದೆ. ಬಿಜೆಪಿ ಅಧಿಕ ಸ್ಥಾನಗಳನ್ನು ಗೆದ್ದಿರುವುದರಿಂದ ದೇವೇಂದ್ರ ಫಡಣವೀಸ್ ಅವರೇ ಮುಖ್ಯಮಂತ್ರಿಯಾಗಬೇಕು ಎಂದು ಕಮಲ ಪಡೆ ಪಟ್ಟುಹಿಡಿದಿದೆ. ಆರ್‌ಎಸ್‌ಎಸ್ ಕೂಡಾ ಫಡಣವೀಸ್ ಅವರನ್ನು ಬೆಂಬಲಿಸಿದೆ. ಆದರೆ ಶಿವಸೇನೆ (ಶಿಂದೆ ಬಣ), 'ಹಾಲಿ ಇರುವ ಅಧಿಕಾರ ಹಂಚಿಕೆ ಸೂತ್ರದಂತೆ ಏಕನಾಥ ಶಿಂದೆ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು' ಎಂದು ಹೇಳಿದೆ.

ಶಿಂದೆ ಅವರನ್ನು ಮೊದಲ ಎರಡೂವರೆ ವರ್ಷಗಳ ಅವಧಿಗೆ ಮುಖ್ಯಮಂತ್ರಿಯಾಗಿ ಮಾಡುವುದಕ್ಕೂ ತಮ್ಮ ಒಪ್ಪಿಗೆಯಿದೆ ಎಂದು ಶಿವಸೇನೆ ಹೇಳಿದೆ. ಆದರೆ, ಬಿಜೆಪಿಯ ಹಿರಿಯ ನಾಯಕರಾದ ಕೇಂದ್ರದ ಮಾಜಿ ಸಚಿವ ರಾವ್‌ಸಾಹೇಬ್ ದಾನ್ವೆ ಮತ್ತು ಪ್ರವೀಣ್ ದರೇಕರ್ ಅವರು ಇದನ್ನು ತಿರಸ್ಕರಿಸಿದ್ದಾರೆ.

'ಮತದಾರರು ಫಡಣವೀಸ್ ಅವರಿಗೆ ಜನಾದೇಶ ನೀಡಿದ್ದಾರೆ. ಮಹಾರಾಷ್ಟ್ರದ ಜನರು ಪ್ರಧಾನಿ ಮೋದಿ ಅವರ ಪರ ನಿಂತಿದ್ದಾರೆ' ಎಂದು ದರೇಕರ್ ಹೇಳಿದ್ದಾರೆ.

ಮಹಾರಾಷ್ಟ್ರ ವಿಧಾನಸಭೆಯ ಚಳಿಗಾಲದ ಅಧಿವೇಶನಕ್ಕೆ ನಾಗ್ಪುರದ ವಿಧಾನ ಭವನದಲ್ಲಿ ಸಿಬ್ಬಂದಿ ತಯಾರಿ ನಡೆಸಿದರು ಪಿಟಿಐ ಚಿತ್ರ

ಮುಖ್ಯಾಂಶಗಳು

- ದಿನವಿಡೀ ನಡೆದ ಮೈತ್ರಿ ನಾಯಕರ ಚರ್ಚೆ
- ಪಟ್ಟು ಬಿಡದ ಶಿವಸೇನೆ

'ಬಿಹಾರ ಮಾದರಿ ಅನುಸರಿಸಿ'

ಬಿಹಾರದಲ್ಲಿ ಮಾಡಿರುವ ಅಧಿಕಾರ ಹಂಚಿಕೆ ಸೂತ್ರವನ್ನು ಇಲ್ಲೂ ಅನುಸರಿಸಬೇಕು ಎಂದು ಶಿವಸೇನೆ (ಶಿಂದೆ ಬಣ) ಮುಖಂಡರು ಬಿಜೆಪಿಯನ್ನು ಒತ್ತಾಯಿಸಿದ್ದಾರೆ.

ಏಕನಾಥ ಶಿಂದೆ ಅವರ ಆಪ್ತ, ಠಾಣೆಯ ಸಂಸದ ನರೇಶ್ ಮಸ್ಕೆ ಅವರು, 'ಬಿಜೆಪಿಯು ಬಿಹಾರ ಮಾದರಿಯನ್ನು ಅನುಸರಿಸಬೇಕು. ಶಿಂದೆ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು. ಬಿಹಾರದಲ್ಲಿ ಬಿಜೆಪಿಯು ಯಾರು, ಎಷ್ಟು ಸ್ಥಾನಗಳನ್ನು ಗೆದ್ದಿದ್ದಾರೆ ಎಂಬುದನ್ನು ನೋಡದೆಯೇ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರನ್ನು ಮುಖ್ಯಮಂತ್ರಿಯಾಗಿ ಮಾಡಿತು' ಎಂದು ಹೇಳಿದ್ದಾರೆ.

ಉದಯ್ ಸಾಮಂತ್, ದಾದಾ ಭುಸೆ, ದೀಪಕ್ ಕೇಸರ್‌ಕರ್ ಮತ್ತು ಡಾ.ನೀಲಮ್ ಗೋರೆ ಒಳಗೊಂಡಂತೆ ಶಿವಸೇನೆಯ ಹಲವು ಮುಖಂಡರು ಸೋಮವಾರ ಫಡಣವೀಸ್ ಅವರನ್ನು ಭೇಟಿಯಾದರು.

ನೈಸರ್ಗಿಕ ಕೃಷಿ ಯೋಜನೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ದೇಶದಾದ್ಯಂತ ಒಂದು ಕೋಟಿ ರೈತರು 'ನೈಸರ್ಗಿಕ ಕೃಷಿ' ಕೈಗೊಳ್ಳುವಂತೆ ಉತ್ತೇಜಿಸಲು ₹2,481 ಕೋಟಿ ಮೊತ್ತದ ರಾಷ್ಟ್ರೀಯ ಯೋಜನೆಗೆ ಕೇಂದ್ರ ಸರ್ಕಾರ ಸೋಮವಾರ ಒಪ್ಪಿಗೆ ನೀಡಿದೆ.

ಸುಸ್ಥಿರ ಕೃಷಿಗಾಗಿ ಪರಿಸರ ವ್ಯವಸ್ಥೆ ರೂಪಿಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

'ಮಣ್ಣಿನ ಗುಣಮಟ್ಟದ ಸುಧಾರಣೆ– ರಾಸಾಯನಿಕ ಮುಕ್ತ ಆಹಾರ ಉತ್ಪಾದಿಸುವ ಮೂಲಕ ಜನರ ಆರೋಗ್ಯ ಕಾಪಾಡುವುದು ತುರ್ತು ಅಗತ್ಯ. ಈ ನಿಟ್ಟಿನಲ್ಲಿ ನೈಸರ್ಗಿಕ ಕೃಷಿ– ರಾಷ್ಟ್ರೀಯ ಯೋಜನೆಯು ಮೈಲಿಗಲ್ಲು ಆಗಲಿದೆ' ಎಂದು ಕೇಂದ್ರ ಮಾಹಿತಿ ಹಾಗೂ ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'₹2,481 ಕೋಟಿ ಬಜೆಟ್ ನಿಗದಿಪಡಿಸಲಾಗಿದ್ದು, ದೇಶದಾದ್ಯಂತ 1 ಕೋಟಿ ರೈತರನ್ನು ಇದರಲ್ಲಿ ಸೇರ್ಪಡೆಗೊಳಿಸುವ ಗುರಿ ಹೊಂದಲಾಗಿದೆ' ಎಂದರು.

ಸದನದಲ್ಲಿ 'ಅದಾನಿ ಲಂಚ' ಗದ್ದಲ

ಒಂದನೇ ಪುಟದಿಂದ..

ಸದನ ಪುನರಾರಂಭಗೊಂಡಾಗ, ವಿಪಕ್ಷ ಸದಸ್ಯರು ದೇಶದ ಪ್ರಮುಖ ಉದ್ಯಮಿಯ ವಿರುದ್ಧ ಅಮೆರಿಕದ ನ್ಯಾಯಾಲಯದಲ್ಲಿ ವಿಧಿಸಲಾಗಿರುವ ಆರೋಪಗಳ ಕುರಿತ ಚರ್ಚೆಗೆ ಪಟ್ಟು ಹಿಡಿದರು. ಉತ್ತರ ಪ್ರದೇಶದ ಸಂಭಾಲ್ ಪ್ರಕರಣದ ಕುರಿತು ಪ್ರಸ್ತಾಪಿಸಿದರು.

ಕಾಂಗ್ರೆಸ್‌ನ ಕೆ.ಸಿ.ವೇಣುಗೋಪಾಲ್, ಮಾಣಿಕಂ ಟ್ಯಾಗೋರ್ ಮತ್ತಿತರ ಸಂಸದರು ಅದಾನಿ ವಿಚಾರದ ಚರ್ಚೆಗೆ ಒತ್ತಾಯಿಸಿ ನೋಟಿಸ್ ನೀಡಿದರು. ಲೋಕಸಭಾಧ್ಯಕ್ಷರ ಪೀಠದಲ್ಲಿದ್ದ ಬಿಜೆಪಿ ಸಂಸದೆ ಸಂಧ್ಯಾ ರೇ, 'ಸದನದ ಕಲಾಪಕ್ಕೆ ಅವಕಾಶ ನೀಡಲು ಸದಸ್ಯರು ಉತ್ಸುಕರಾಗಿಲ್ಲವೇ' ಎಂದು ಪ್ರಶ್ನಿಸಿ ಕಲಾಪವನ್ನು ಮುಂದೂಡಿದರು.

ರಾಜ್ಯಸಭೆಯಲ್ಲಿ ಕೂಡ ಖರ್ಗೆ ನೇತೃತ್ವದಲ್ಲಿ ವಿಪಕ್ಷಗಳು ಅದಾನಿ ಕುರಿತು ಚರ್ಚೆಗೆ ಬೇಡಿಕೆ ಇಟ್ಟವು. ಮೊದಲಿಗೆ ಸದನವನ್ನು 15 ನಿಮಿಷಗಳ ಕಾಲ ಮುಂದೂಡಲಾಯಿತು. 11.30ಕ್ಕೆ ಕಲಾಪ ಪುನರಾರಂಭಗೊಂಡಾಗ, ಮತ್ತೆ ಅದೇ ವಿಷಯವನ್ನು ಪ್ರಸ್ತಾಪಿಸಿ ವಿಪಕ್ಷ ಸದಸ್ಯರು ಚರ್ಚೆಗೆ ಪಟ್ಟು ಹಿಡಿದರು. ಆಗ ಸಭಾಪತಿ ಜಗದೀಪ ಧನಕರ್ ಅವರು ಕಲಾಪವನ್ನು ಮುಂದೂಡಿದರು.

ಈ ವೇಳೆ ಧನಕರ್, 'ಕಲಾಪದ ಇತರ ಚಟುವಟಿಕೆಗಳನ್ನು ರದ್ದುಗೊಳಿಸಿ ಅದಾನಿ ಹಗರಣ ಚರ್ಚೆ ನಡೆಸಬೇಕೆಂದು ನಿಯಮ 267ರ ಅಡಿಯಲ್ಲಿ ಸಲ್ಲಿಕೆಯಾಗಿದ್ದ 13 ನೋಟಿಸ್‌ಗಳಿಗೆ ಅನುಮತಿ ನಿರಾಕರಿಸಲಾಗಿದೆ' ಎಂದರು.

ಆರಂಭದಲ್ಲಿ ಖರ್ಗೆ ಅವರಿಗೆ ಮಾತನಾಡಲು ಧನಕರ್ ಅವಕಾಶ ನೀಡಿದರು. ಆದರೆ, 'ಅದಾನಿ ವಿಷಯವನ್ನು ಎತ್ತಿದ್ದರಿಂದ ಅವರ ಮಾತುಗಳು ಕಡತಗಳಿಗೆ ಹೋಗುವುದಿಲ್ಲ' ಎಂದು ಧನಕರ್ ಸ್ಪಷ್ಟಪಡಿಸಿದರು.

ರಾಜ್ಯಸಭೆಯ ಕಲಾಪದಲ್ಲಿ ಜಗದೀಪ್ ಧನಕರ್, ಜೈರಾಮ್ ರಮೇಶ್ ಹಾಗೂ ಮಲ್ಲಿಕಾರ್ಜುನ ಖರ್ಗೆ

ಅದಾನಿ ಪ್ರಕರಣದ ಚರ್ಚೆಗೆ ಅನುಮತಿ ನೀಡಬೇಕು ಎಂದು ಆಗ್ರಹಿಸಿ ಖರ್ಗೆ ಹಾಗೂ ಕಾಂಗ್ರೆಸ್ ಪಕ್ಷದ ಸಹೋದ್ಯೋಗಿಗಳಾದ ನೀರಜ್ ಡಾಂಗಿ, ಪ್ರಮೋದ್ ತಿವಾರಿ, ಅಖಿಲೇಶ್ ಪ್ರಸಾದ್ ಸಿಂಗ್ ಮತ್ತು ಸಯ್ಯದ್ ನಾಸೀರ್ ಹುಸೇನ್, ಸಿಪಿಐ(ಎಂ)ನ ಜಾನ್ ಬ್ರಿಟ್ಟಾಸ್ ಮತ್ತು ಎಎಪಿಯ ಸಂಜಯ್ ಸಿಂಗ್ ನೋಟಿಸ್ ನೀಡಿದರು.

ಮಣಿಪುರ ಹಿಂಸಾಚಾರದ ಕುರಿತು ಸಿಪಿಐನ ಪಿ. ಸಂತೋಷ್ ಕುಮಾರ್ ಮತ್ತು ಎಎಪಿಯ ರಾಘವ್ ಚಡ್ಡಾ ನೋಟಿಸ್ ಸಲ್ಲಿಸಿದ್ದರೆ, ಸಂಭಲ್ ವಿಷಯಕ್ಕೆ ಸಂಬಂಧಿಸಿದಂತೆ ಸಮಾಜವಾದಿ ಪಕ್ಷದ ಜಾವೇದ್ ಅಲಿ ಖಾನ್, ಕಾಂಗ್ರೆಸ್‌ನ ಹುಸೇನ್ ಮತ್ತು ಮುಸ್ಲಿಂ ಲೀಗ್‌ನ ಹ್ಯಾರಿಸ್ ಬೀರನ್ ನೋಟಿಸ್ ಸಲ್ಲಿಸಿದರು. ಕೇರಳದ ಪ್ರವಾಹ ಪೀಡಿತ ವಯನಾಡ್ ಜಿಲ್ಲೆಗೆ ವಿಶೇಷ ನೆರವು ನೀಡುವ ವಿಷಯದ ಕುರಿತು ಸಿಪಿಐ(ಎಂ) ಸದಸ್ಯ ಪಿ. ಶಿವದಾಸನ್ ಚರ್ಚೆಗೆ ಕೋರಿದರು.

90 ಬಾರಿ ಜನರಿಂದ ತಿರಸ್ಕಾರಕ್ಕೆ ಒಳಗಾದ ವಿಪಕ್ಷಗಳು; ಮೋದಿ ವಾಗ್ದಾಳಿ

'ಗೂಂಡಾಗಿರಿ ಮೂಲಕ ಸಂಸತ್ ನಿಯಂತ್ರಿಸಲು ಯತ್ನ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ ಅಧಿವೇಶನಕ್ಕೆ ಮುನ್ನ 'ಇಂಡಿಯಾ' ಮೈತ್ರಿಕೂಟದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪ್ರಧಾನಿ ನರೇಂದ್ರ ಮೋದಿ, '80, 90 ಬಾರಿ ಜನರಿಂದ ತಿರಸ್ಕಾರಕ್ಕೆ ಒಳಗಾದವರು ರಾಜಕೀಯ ಲಾಭಕ್ಕಾಗಿ ಗೂಂಡಾಗಿರಿ ಮೂಲಕ ಸಂಸತ್ತನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಟೀಕಿಸಿದರು.

ಅಧಿವೇಶನಕ್ಕೆ ಮುನ್ನ ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಅಡ್ಡಿಪಡಿಸುವವರನ್ನು ಸಮಯ ಬಂದಾಗ ಮತದಾರರೇ ಶಿಕ್ಷಿಸುತ್ತಾರೆ. ಹೊಸ ಮುಖಗಳು ಸೇರಿದಂತೆ ಸದಸ್ಯರು ಸಂಸತ್‌ನಲ್ಲಿ ಆರೋಗ್ಯಕರ ಚರ್ಚೆಗಳಲ್ಲಿ ತೊಡಗಿಸಿಕೊಳ್ಳುವುದು ಅತ್ಯಗತ್ಯ' ಎಂದು ಹೇಳಿದರು.

ಮಹಾರಾಷ್ಟ್ರದಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟ ಜಯಗಳಿಸಿದ ಬಳಿಕ ಮೋದಿ ಅವರು ವಿಪಕ್ಷಗಳ ವಿರುದ್ಧ ಟೀಕಾ ಪ್ರಹಾರವನ್ನು ತೀವ್ರಗೊಳಿಸಿದ್ದಾರೆ. ಆದರೆ, ಜಾರ್ಖಂಡ್‌ನಲ್ಲಿ ಗದ್ದುಗೆ ದಕ್ಕಿಲ್ಲ.

'ದುರದೃಷ್ಟವಶಾತ್, ಜನರಿಂದ ತಿರಸ್ಕರಿಸಲಾದ ಕೆಲವು ವ್ಯಕ್ತಿಗಳು ತಮ್ಮ ರಾಜಕೀಯ ಲಾಭಕ್ಕಾಗಿ ವಿಚ್ಛಿದ್ರಕಾರಕ ತಂತ್ರಗಳ ಮೂಲಕ ಸಂಸತ್ತನ್ನು ನಿಯಂತ್ರಿಸಲು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ. ಸಂಸತ್ತಿನ ಕಲಾಪಗಳನ್ನು ಸ್ಥಗಿತಗೊಳಿಸುವ ಅವರ ಪ್ರಾಥಮಿಕ ಗುರಿ ಅಪರೂಪಕ್ಕೊಮ್ಮೆ ಯಶಸ್ವಿಯಾಗುತ್ತದೆ. ಜನರು ಅವರ ಕಾರ್ಯಗಳನ್ನು ಗಮನಿಸುತ್ತಿದ್ದಾರೆ. ಸಮಯ ಬಂದಾಗ ಅವರನ್ನು ಶಿಕ್ಷಿಸುತ್ತಾರೆ' ಎಂದು ಮೋದಿ ಹೇಳಿದರು.

'ಅತ್ಯಂತ ನೋವಿನ ಸಂಗತಿ ಎಂದರೆ, ವಿಪಕ್ಷಗಳ ಇಂತಹ ಕಾರ್ಯಗಳು, ಹೊಸ ಆಲೋಚನೆಗಳನ್ನು ಹೊಂದಿರುವ ಎಲ್ಲ ಪಕ್ಷಗಳ ಹೊಸ ಸಂಸದರ ಹಕ್ಕುಗಳನ್ನು ಮೊಟಕುಗೊಳಿಸುತ್ತದೆ. ಈ ಸಂಸದರಿಗೆ ಸದನದಲ್ಲಿ ಮಾತನಾಡಲು ಅವಕಾಶ ಲಭ್ಯವಾಗುತ್ತಿಲ್ಲ' ಎಂದೂ ಬೇಸರ ವ್ಯಕ್ತಪಡಿಸಿದರು.

'ವಿಪಕ್ಷಗಳ ಕೆಲವೊಂದು ನಾಯಕರು ಸಂಸತ್ತಿನಲ್ಲಿ ಚರ್ಚೆಗಳಿಗೆ ಅವಕಾಶ ನೀಡುವುದಿಲ್ಲ ಅಥವಾ ಪ್ರಜಾಪ್ರಭುತ್ವದ ತತ್ವಗಳು ಅಥವಾ ಜನರ ಆಶೋತ್ತರಗಳನ್ನು ಗೌರವಿಸುವುದಿಲ್ಲ. ಅವರು ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳುವುದಿಲ್ಲ. ಪರಿಣಾಮವಾಗಿ, ಅವರು ಸಾರ್ವಜನಿಕರ ನಿರೀಕ್ಷೆಗಳನ್ನು ಈಡೇರಿಸುವಲ್ಲಿ ವಿಫಲರಾಗುತ್ತಿದ್ದಾರೆ. ಹೀಗಾಗಿ, ಚುನಾವಣೆಗಳಲ್ಲಿ ಪದೇ ಪದೇ ಜನರಿಂದ ತಿರಸ್ಕಾರಕ್ಕೆ ಒಳಗಾಗುತ್ತಿದ್ದಾರೆ' ಎಂದು ಟೀಕಿಸಿದರು.

ಪ್ರಜಾಪ್ರಭುತ್ವದಲ್ಲಿ ಜನರ ಭಾವನೆಗಳನ್ನು ಗೌರವಿಸುವುದು ಮತ್ತು ಅವರ ನಿರೀಕ್ಷೆಗಳನ್ನು ಈಡೇರಿಸಲು ಅವಿರತವಾಗಿ ಶ್ರಮಿಸುವುದು ಅನಿವಾರ್ಯ. ಹೀಗಾಗಿ, ಪ್ರತಿಪಕ್ಷಗಳು ಅತ್ಯಂತ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕೆಂದು ಅವರು ಒತ್ತಾಯಿಸಿದರು.

6 ಟನ್ ಮಾದಕ ವಸ್ತು ವಶ

ಪೋರ್ಟ್‌ಬ್ಲೇರ್ (ಪಿಟಿಐ): ಅಂಡಮಾನ್ ಮತ್ತು ನಿಕೋಬಾರ್ ದ್ವೀಪದ ಬಳಿ 6 ಟನ್ ನಿಷೇಧಿತ ಮಾದಕ ವಸ್ತು 'ಮೆಟಾಂಫೆಟಮೈನ್' ಅನ್ನು ಸಾಗಿಸುತ್ತಿದ್ದ ಮ್ಯಾನ್ಮಾರ್‌ನ ಹಡಗೊಂದನ್ನು ವಶಪಡಿಸಿಕೊಂಡಿರುವ ಭಾರತೀಯ ಕರಾವಳಿ ಪಡೆ (ಐಸಿಜಿ) ಅಧಿಕಾರಿಗಳು 6 ಜನರನ್ನು ಬಂಧಿಸಿದ್ದಾರೆ.

ಹಡಗಿನಲ್ಲಿದ್ದ ತಲಾ 2 ಕೆ.ಜಿ 'ಮೆಟಾಂಫೆಟಮೈನ್' ತುಂಬಿದ್ದ ಒಟ್ಟು 3,000 ಪ್ಯಾಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮೆಟಾಂಫೆಟಮೈನ್ ಅನ್ನು ಭಾರತ ಮತ್ತು ಇತರ ನೆರೆ ದೇಶಗಳಿಗೆ ಸಾಗಿಸಲು ಉದ್ದೇಶಿಸಲಾಗಿತ್ತು ಎಂದು ತಿಳಿದುಬಂದಿದ್ದು, ಬಂಧಿತರೆಲ್ಲರೂ ಮ್ಯಾನ್ಮಾರ್ ಪ್ರಜೆಗಳಾಗಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಸಂಸದ ಮತ್ತು ಶಾಸಕನ ಪುತ್ರನ ವಿರುದ್ಧ ಪ್ರಕರಣ • ಮೃತರ ಸಂಖ್ಯೆ ನಾಲ್ಕಕ್ಕೆ ಏರಿಕೆ

ಸಂಭಲ್ ಹಿಂಸಾಚಾರ: 7 ಎಫ್‌ಐಆರ್, 25 ಜನರ ಬಂಧನ

ಪ್ರಜಾವಾಣಿ ವಾರ್ತೆ/ ಪಿಟಿಐ

ಲಖನೌ: ಉತ್ತರ ಪ್ರದೇಶದ ಸಂಭಲ್ ನಗರದ ಶಾಹಿ ಜಾಮಾ ಮಸೀದಿ ಸಮೀಕ್ಷೆಯನ್ನು ವಿರೋಧಿಸಿ ಭಾನುವಾರ ನಡೆದ ಪ್ರತಿಭಟನೆ ವೇಳೆ ಸಂಭವಿಸಿದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಒಟ್ಟು ಏಳು ಎಫ್‌ಐಆರ್ ದಾಖಲಿಸಲಾಗಿದ್ದು, 25 ಜನರನ್ನು ಬಂಧಿಸಲಾಗಿದೆ.

ಸಮಾಜವಾದಿ ಪಕ್ಷದ ಲೋಕಸಭಾ ಸದಸ್ಯ (ಸಂಭಲ್ ಕ್ಷೇತ್ರ) ಜಿಯಾ–ಉರ್–ರೆಹಮಾನ್ ಬುರ್ಕ್, ಸ್ಥಳೀಯ ಶಾಸಕ ಇಕ್ಬಾಲ್ ಮೆಹಮೂದ್ ಅವರ ಪುತ್ರ ಸೊಹೈಲ್ ಇಕ್ಬಾಲ್ ಸೇರಿದಂತೆ ಆರು ಜನರನ್ನು ಎಫ್‌ಐಆರ್‌ನಲ್ಲಿ ಹೆಸರಿಸಲಾಗಿದೆ. ಅಲ್ಲದೆ ಇತರ 2,750 ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಅವರನ್ನು ಗುರುತಿಸುವ ಕೆಲಸ ನಡೆಯುತ್ತಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಕ್ರಿಶನ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮಸೀದಿಯ ಸಮೀಕ್ಷೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದವರನ್ನು ಪ್ರಚೋದಿಸಿದ ಆರೋಪವನ್ನು ಬುರ್ಕ್ ಮತ್ತು ಸೊಹೈಲ್ ಅವರ ಮೇಲೆ ಹೊರಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಸಂಭಲ್ ನಗರದ ಶಾಹಿ ಜಾಮಾ ಮಸೀದಿ ಮುಂಭಾಗ ಭದ್ರತೆಗೆ ನಿಯೋಜನೆಗೊಂಡಿದ್ದ ಪೊಲೀಸರು ಎಎಫ್‌ಪಿ ಚಿತ್ರ

ಅಗತ್ಯವಿದ್ದರೆ ಹಿಂಸಾಚಾರದಲ್ಲಿ ತೊಡಗಿದ್ದ ಆರೋಪಿಗಳ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆ (ಎನ್‌ಎಸ್‌ಎ) ಅಡಿ ಪ್ರಕರಣ ದಾಖಲಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೃತರ ಸಂಖ್ಯೆ ನಾಲ್ಕಕ್ಕೇರಿಕೆ: ಹಿಂಸಾಚಾರದಲ್ಲಿ ಬುಲೆಟ್ ತಗುಲಿ ಗಾಯಗೊಂಡಿದ್ದ ನಾಲ್ಕನೇ ವ್ಯಕ್ತಿ ಸೋಮವಾರ ಮೃತಪಟ್ಟಿದ್ದಾರೆ. ಇದರಿಂದ ಹಿಂಸಾಚಾರದಲ್ಲಿ ಮೃತಪಟ್ಟವರ ಸಂಖ್ಯೆ ನಾಲ್ಕಕ್ಕೆ ಏರಿದೆ.

ಹಿಂಸಾಚಾರದ ವೇಳೆ ಉದ್ರಿಕ್ತರ ಗುಂಪಿನ ಜನರತ್ತ ಗುಂಡು ಹಾರಿಸಿರುವುದನ್ನು ಪೊಲೀಸರು ನಿರಾಕರಿಸಿದ್ದಾರೆ. ಪ್ರತಿಭಟನಕಾರರು ನಡೆಸಿದ ಗುಂಡಿನ ದಾಳಿಯಲ್ಲಿ ಅವರು ಮೃತಪಟ್ಟಿರಬಹುದು ಎಂದು ಪೊಲೀಸರು ಹೇಳಿದ್ದಾರೆ. ಭಾನುವಾರದ ಘರ್ಷಣೆ ವೇಳೆ ಮೃತಪಟ್ಟಿದ್ದ ನಯೀಮ್, ಬಿಲಾಲ್ ಹಾಗೂ ನೌಮಾನ್ (ಎಲ್ಲರೂ 25 ವಯೋಮಾನದವರು) ಅವರ ಅಂತ್ಯಕ್ರಿಯೆ ನೆರವೇರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಿಗಿ ಬಂದೋಬಸ್ತ್: ನಗರದಲ್ಲಿ ಹೆಚ್ಚಿನ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿ ಬಿಗಿ ಬಂದೋಬಸ್ತ್ ಕಲ್ಪಿಸಲಾಗಿದ್ದು, ಜಿಲ್ಲೆಯಾದ್ಯಂತ ಇಂಟರ್‌ನೆಟ್ ಸೇವೆ ಸ್ಥಗಿತಗೊಳಿಸಲಾಗಿದೆ. ಅಲ್ಲದೆ ಹೊರಗಿನವರ ಪ್ರವೇಶದ ಮೇಲೆ ಇದೇ 30ರವರೆಗೆ ನಿರ್ಬಂಧ ವಿಧಿಸಲಾಗಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಜಿಲ್ಲಾಡಳಿತವು ಸೋಮವಾರ ಎಲ್ಲ ಶಾಲೆಗಳಿಗೆ ರಜೆ ಘೋಷಿಸಿತ್ತು. ಭಾನುವಾರ ಹಿಂಸಾಚಾರ ನಡೆದಿದ್ದ ಸೂಕ್ಷ್ಮ ಪ್ರದೇಶಗಳಲ್ಲಿ ಭದ್ರತಾ ಸಿಬ್ಬಂದಿ 'ಫ್ಲ್ಯಾಗ್ ಮಾರ್ಚ್' ನಡೆಸಿದರು.

'ಸದ್ಯ ಪರಿಸ್ಥಿತಿ ಶಾಂತಿಯುತವಾಗಿದ್ದು, ತನಿಖೆ ಮುಂದುವರಿದಿದೆ' ಎಂದು ಮೊರಾದಾಬಾದ್‌ನ ವಿಭಾಗೀಯ ಆಯುಕ್ತ ಅಂಜನೇಯ ಕುಮಾರ್ ಸಿಂಗ್ ಪ್ರತಿಕ್ರಿಯಿಸಿದ್ದಾರೆ.

ಹಿನ್ನೆಲೆ: ಶಾಹಿ ಜಾಮಾ ಮಸೀದಿಯ ಸಮೀಕ್ಷೆಯನ್ನು ವಿರೋಧಿಸಿ ಭಾನುವಾರ ಪ್ರತಿಭಟನೆ ನಡೆಸುತ್ತಿದ್ದವರು ಭದ್ರತಾ ಸಿಬ್ಬಂದಿ ಜೊತೆ ಘರ್ಷಣೆಗಿಳಿದಿದ್ದರಿಂದ ಹಿಂಸಾಚಾರ ಭುಗಿಲೆದ್ದಿತ್ತು. ಪ್ರತಿಭಟನಕಾರರು ಪೊಲೀಸರತ್ತ ಕಲ್ಲು ತೂರಾಟ ನಡೆಸಿದ್ದಲ್ಲದೇ, ವಾಹನಗಳಿಗೆ ಬೆಂಕಿ ಹಚ್ಚಿದ್ದರು. ಉದ್ರಿಕ್ತರ ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿ, ಅಶ್ರುವಾಯು ಷೆಲ್‌ಗಳನ್ನು ಸಿಡಿಸಿದ್ದರು.

ಹಿಂಸಾಚಾರಕ್ಕೆ ಎಸ್‌ಡಿಎಂ, ಸಿ.ಒ ಕಾರಣ: ಸಮಿತಿ ಆರೋಪ

ಸಂಭಲ್ (ಪಿಟಿಐ): ನಾಲ್ವರ ಸಾವಿಗೆ ಕಾರಣವಾದ ಹಿಂಸಾಚಾರಕ್ಕೆ ಸ್ಥಳೀಯ ಅಧಿಕಾರಿಗಳು ಮತ್ತು ಪೊಲೀಸರೇ ಕಾರಣ ಎಂದು ಸಂಭಲ್‌ನ ಜಾಮಾ ಮಸೀದಿ ಆಡಳಿತ ಸಮಿತಿ ದೂರಿದೆ.

'ಇತ್ತೀಚಿನ ಸಮೀಕ್ಷೆಯು ನ್ಯಾಯಾಲಯದ ಆದೇಶದ ಅಡಿಯಲ್ಲಿ ನಡೆದದ್ದಲ್ಲ. ಜಿಲ್ಲಾ ಮ್ಯಾಜಿಸ್ಟ್ರೇಟ್ ನಿರ್ದೇಶನದ ಮೇರೆಗೆ ನಡೆಸಲಾಗಿದೆ' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ದೂರಿದ ಸಮಿತಿ ಅಧ್ಯಕ್ಷ ಜಾಫರ್ ಅಲಿ, 'ಕಾನೂನು ಬಾಹಿರವಾಗಿ ಈ ಸಮೀಕ್ಷೆಯನ್ನು ನಡೆಸಲಾಗಿದೆ' ಎಂದು ಆರೋಪಿಸಿದರು.

ಈ ಘಟನೆಯಲ್ಲಿ ಸಂಭಲ್‌ನ ಉಪ ವಿಭಾಗಾಧಿಕಾರಿ (ಎಸ್‌ಡಿಎಂ) ವಂದನಾ ಮಿಶ್ರಾ ಮತ್ತು ಸರ್ಕಲ್ ಆಫೀಸರ್ (ಸಿಒ) ಅನುಜ್ ಕುಮಾರ್ ತಪ್ಪಿತಸ್ಥರಾಗಿದ್ದಾರೆ ಎಂದು ಅವರು ಆರೋಪ ಮಾಡಿದರು. ಸುದ್ದಿಗೋಷ್ಠಿ ಮುಗಿಯುತ್ತಿದ್ದಂತೆ ಪೊಲೀಸರು ಅಲಿ ಅವರನ್ನು ಬಂಧಿಸಿದರು.

ಆರೋಪಗಳೇನು: ಮಸೀದಿಯ 'ವಾಜುಖಾನಾ' ತೊಟ್ಟಿಯ ಆಳವನ್ನು ಕೋಲಿನ ಸಹಾಯದಿಂದ ಅಳೆಯುವಂತೆ ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿ ಸೂಚಿಸಿದ್ದರೂ, ವಂದನಾ ಮಿಶ್ರಾ ಅವರು ತೊಟ್ಟಿಯ ನೀರನ್ನು ಖಾಲಿ ಮಾಡುವಂತೆ ಒತ್ತಾಯಿಸಿದರು. ನೀರು ಹರಿಸಿದ್ದರಿಂದ ಹೊರಗೆ ನೆರೆದಿದ್ದ ಜನರಲ್ಲಿ ಗೊಂದಲ ಉಂಟಾಯಿತು. ಉತ್ಖನನ ನಡೆಯುತ್ತಿದೆ ಎಂದು ಭಾವಿಸಿದ ಜನರ ಗುಂಪು ಕೆರಳಿತು ಎಂದು ಅಲಿ ವಿವರಿಸಿದರು.

'ನೆರೆದಿದ್ದ ಜನರನ್ನು ಅನುಜ್ ಕುಮಾರ್ ಪ್ರಚೋದಿಸಿದರು. ಅಲ್ಲದೆ ಲಾಠಿ ಚಾರ್ಜ್‌ಗೆ ಆದೇಶಿಸಿದರು ಎಂದು ಅವರು ದೂರಿದರು. ಜನರ ಗುಂಪಿನ ಮೇಲೆ ಪೊಲೀಸರು ಗುಂಡು ಹಾರಿಸಿದ್ದನ್ನು ನಾನೇ ಖುದ್ದಾಗಿ ನೋಡಿದ್ದೇನೆ ಎಂದು ಅವರು ತಿಳಿಸಿದರು.

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

SENIOR MANAGER / AGM- SALES

The candidates should be work in open for advertisement sales. Fluency in English & Kannada.
Experience: Preferred 10+ years experience in ad sales field.
Qualification: Any Degree
Primary prerequisites:
- Good Knowledge of local market and connects within the media industry.
- Needs to have experience in handling ad agency / agent.
- Outdoor advertising and Product launch. Revenue generation through Event & Activations.
- To maximize ad revenue and achieve monthly/ yearly sales targets
- To develop new clients /potential advertisers for all our group of publications.
- Collection Receivables to be taken care of.

Job Location: Mysore
Salary will be commensurate with qualification and experience.
Please send your application for the above position mentioning the job applied for (subject of the e-mail) and along with updated resume to:

The Manager-Recruitment
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್: editpage@prajavani.co.in

ಅಭಿಮತ

❦ ಸುಭಾಷಿತ ❦
ಸರಿಯಾದುದು ಗೊತ್ತಿದ್ದರೂ ಅದನ್ನು ಪಾಲಿಸದೇ ಇರುವುದು ಜೀವನದಲ್ಲಿ ನಾವು ಮಾಡುವ ಮಹಾಪಾಪ.
-ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್

ಸಂವಿಧಾನ ದಿನ: ದೇಶ ಕ್ರಮಿಸಿದ ಹಾದಿಯ ಪರಾಮರ್ಶೆಗೆ ಸಕಾಲ

ಭಾರತದ ಸಂವಿಧಾನ ರಚನಾ ಸಭೆಯು 1949ರ ನವೆಂಬರ್ 26ರಂದು ದೇಶದ ಸಂವಿಧಾನವನ್ನು ಅಂಗೀಕರಿಸುವ ಮೂಲಕ ಸ್ವತಂತ್ರ ಭಾರತವು ತನ್ನ ಎಲ್ಲ ಪ್ರಜೆಗಳ ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ರಕ್ಷಿಸುವ ಹಾಗೂ ಅವರಲ್ಲಿ ಭ್ರಾತೃತ್ವವನ್ನು ಪ್ರೇರೇಪಿಸುವ ಒಂದು ಸಾರ್ವಭೌಮ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಬೆಳೆಯುವ ಪ್ರಕ್ರಿಯೆಗೆ ನಾಂದಿಹಾಡಿತು. ಸಂವಿಧಾನದ ತತ್ವ ಮತ್ತು ಆಶಯಗಳನ್ನು ಸಾಕಾರಗೊಳಿಸುವಲ್ಲಿ ದೇಶವು ಈವರೆಗೆ ಕ್ರಮಿಸಿರುವ ಹಾದಿಯ ಕುರಿತು ಪರಾಮರ್ಶೆ ನಡೆಸಲು ಮತ್ತು ಆ ಉದ್ದೇಶಕ್ಕೆ ತನ್ನನ್ನು ತಾನು ಮರು ಸಮರ್ಪಿಸಿಕೊಳ್ಳುವ ನಿರ್ಧಾರ ಕೈಗೊಳ್ಳಲು ಸಂವಿಧಾನ ದಿನವು ಒಂದು ಸೂಕ್ತ ಸಂದರ್ಭ. ಜಗತ್ತಿನ ಹಲವು ರಾಷ್ಟ್ರಗಳ ಸಂವಿಧಾನಗಳಲ್ಲಿರುವ ಅತ್ಯುತ್ತಮ ವಿಚಾರಗಳು ಮತ್ತು ಮಾದರಿಗಳನ್ನು ನಮ್ಮ ಸಂವಿಧಾನವು ಒಳಗೊಂಡಿದೆ. ಆದರೆ, ನಮ್ಮ ಸಂವಿಧಾನವು ದೇಶದ ಇತಿಹಾಸ, ಪರಂಪರೆ ಮತ್ತು ಮೌಲ್ಯಗಳೊಂದಿಗೆ ಆಳವಾದ ನಂಟು ಹೊಂದಿದ್ದು, ಭವಿಷ್ಯದ ಭಾರತಕ್ಕೆ ಆಕಾಂಕ್ಷೆಯ ದೂರದೃಷ್ಟಿಯೂ ಅದರಲ್ಲಿ ಅಡಕವಾಗಿದೆ. ಭಾರತ ಸರ್ಕಾರದ ಕಾಯ್ದೆ-1935ರಲ್ಲಿ ಮಾತ್ರವಲ್ಲ, ತಿಲಕ್ ಅವರ 1895ರ ಸ್ವರಾಜ್ ಮಸೂದೆ, 1918ರ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಮಂಡಿಸಿದ ಹಕ್ಕುಗಳಿಗೆ ಸಂಬಂಧಿಸಿದ ಘೋಷಣೆ ಹಾಗೂ 1931ರಲ್ಲಿ ಕರಾಚಿಯಲ್ಲಿ ನಡೆದ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಮೂಲಭೂತ ಹಕ್ಕುಗಳು ಮತ್ತು ಆರ್ಥಿಕ ಬದಲಾವಣೆಗೆ ಸಂಬಂಧಿಸಿದಂತೆ ಮಾಡಿದ ಘೋಷಣೆಗಳಲ್ಲೂ ಅಂತಹ ಪ್ರಸ್ತಾವಗಳಿದ್ದವು. ದೇಶದ ನಾಗರಿಕರಿಗೆ ನೀಡಿರುವ ಮೂಲಭೂತ ಹಕ್ಕುಗಳು ಸಂವಿಧಾನದ ಹೃದಯದಂತಿದ್ದರೆ, ಅವುಗಳ ಮೂಲವು ಸಂವಿಧಾನದ ನಿರ್ದೇಶಕ ತತ್ವಗಳು.



'ಸಂವಿಧಾನವು ರಚನಾ ಸಭೆಯು ಅನುಮೋದಿಸಿರುವ ಒಂದು ದಾಖಲೆ ಮಾತ್ರ ಅಲ್ಲ; ಅದು ಯಾರನ್ನು ಪ್ರತಿನಿಧಿಸುತ್ತದೆಯೋ ಅವರ ಮೂಲದಿಂದಲೇ ಬಂದ ಸನ್ನದು' ಎಂದು ಸಂವಿಧಾನಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರು ಹೇಳಿದ್ದರು. ನಾಗರಿಕರ ಎಲ್ಲ ಹಕ್ಕುಗಳ ಮೂಲವಾದ ಸಂವಿಧಾನವು ಒಂದು ರಾಜಕೀಯ, ಸಾಮಾಜಿಕ ಮತ್ತು ಕಾನೂನುಬದ್ಧ ಸನ್ನದು, ಅದು ದೇಶದಲ್ಲಿ ಪ್ರಜಾತಾಂತ್ರಿಕ ಮತ್ತು ಗಣರಾಜ್ಯ ಮಾದರಿಯ ಆಡಳಿತವನ್ನು ಸೃಷ್ಟಿಸಿತು. ಪ್ರಭುತ್ವದ ವಿವಿಧ ಅಂಗಗಳ ಕುರಿತು ಸ್ಪಷ್ಟವಾದ ಕಲ್ಪನೆ, ಅವುಗಳ ಮಧ್ಯೆ ಅಧಿಕಾರ ಹಂಚಿಕೆಯ ನಿಖರ ವ್ಯಾಖ್ಯಾನ, ಪ್ರಜಾತಾಂತ್ರಿಕ ಚುನಾವಣಾ ಪ್ರಕ್ರಿಯೆಯ ಸ್ಪಷ್ಟ ನಿರೂಪಣೆ ಮತ್ತು ಒಕ್ಕೂಟ ವ್ಯವಸ್ಥೆಯನ್ನು ರಕ್ಷಿಸಿಕೊಂಡು ಸಾಮಾಜಿಕ ವೈವಿಧ್ಯವನ್ನು ಕಾಪಾಡಿಕೊಳ್ಳುವ ಬಹುಮುಖವಾದ ಅಂಶಗಳನ್ನು ನಮ್ಮ ಸಂವಿಧಾನವು ಹೊಂದಿದೆ. ಸಂವಿಧಾನದ ಮೂಲ ಸ್ವರೂಪವು ಅದರ ಎಲ್ಲ ಗುಣಲಕ್ಷಣಗಳೊಂದಿಗೆ ಮುಂದುವರಿಯುತ್ತಿದ್ದು, ಹಲವು ತಿದ್ದುಪಡಿ, ವ್ಯಾಖ್ಯಾನಗಳ ನಂತರವೂ ಅದು ದೃಢವಾಗಿ ಉಳಿದಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

> ಸ್ವಾತಂತ್ರ್ಯದ ರಕ್ಷಣೆಯ ವಿಚಾರದಲ್ಲಿ ನಾಗರಿಕರು ಸದಾ ಜಾಗರೂಕರಾಗಿರಬೇಕು. ಪ್ರತಿ ಸಂವಿಧಾನ ದಿನವೂ ಅದನ್ನು ನೆನಪಿಸುವ ಸಂದರ್ಭವಾಗಬೇಕು

ಈ 75 ವರ್ಷಗಳಲ್ಲಿ ಭಾರತದ ಸಂವಿಧಾನಕ್ಕೆ 100ಕ್ಕೂ ಹೆಚ್ಚು ತಿದ್ದುಪಡಿಗಳನ್ನು ಅಂಗೀಕರಿಸಲಾಗಿದೆ. ನಮ್ಮ ಸಂವಿಧಾನವು ಬದಲಾದ ಕಾಲಘಟ್ಟಕ್ಕೆ ಅನುಗುಣವಾಗಿ ಒಗ್ಗಿಕೊಳ್ಳುವ ಮತ್ತು ಕ್ರಿಯಾಶೀಲ ಗುಣವನ್ನು ಹೊಂದಿದೆ ಎಂಬುದು ಇದರಿಂದ ಸಾಬೀತಾಗಿದೆ. ಬದಲಾವಣೆಯ ಅಗತ್ಯಗಳು ಹಾಗೂ ಸಮಾಜದ ಆಲೋಚನೆಗಳು ಈ ತಿದ್ದುಪಡಿಗಳಲ್ಲಿ ಅಭಿವ್ಯಕ್ತವಾಗಿವೆ. ತುರ್ತು ಪರಿಸ್ಥಿತಿ ಕಾಲದಲ್ಲಿ ಸಂವಿಧಾನವು ಬೆದರಿಕೆಯನ್ನು ಎದುರಿಸಿತು, ಅದರ ಪ್ರಮುಖ ಭಾಗಗಳನ್ನು ಅಮಾನತಿನಲ್ಲಿ ಇರಿಸಲಾಗಿತ್ತು. ಇದರಿಂದ ಸಂವಿಧಾನದ ಮೂಲ ಚೈತನ್ಯವೇ ಅಪಾಯಕ್ಕೆ ಸಿಲುಕಿತ್ತು. ಸಂವಿಧಾನವು ದೇಶದ ಪ್ರಜೆ ಮತ್ತು ಪ್ರಭುತ್ವದ ನಡುವಣ ಒಪ್ಪಂದ. ಅದನ್ನು ಮೀರಿ ತನ್ನ ಅನುಕೂಲಕ್ಕೆ ಬೇಕಾದಂತೆ ನಿಬಂಧನೆಗಳನ್ನು ಬದಲಿಸುವ ಪ್ರವೃತ್ತಿಯನ್ನು ಸರ್ಕಾರ ಹೊಂದಿರುತ್ತದೆ. ಸಂವಿಧಾನವು ತಮ್ಮ ರಾಜಕೀಯ ಅನುಕೂಲಕ್ಕೆ ಬಳಕೆಯಾಗಬೇಕು ಎಂದು ಸರ್ಕಾರದ ನೇತೃತ್ವ ವಹಿಸಿರುವವರು ಬಯಸುತ್ತಾರೆ. ಅದೇ ಉದ್ದೇಶದಿಂದ ಅವರ ಆಸಕ್ತಿ ಮತ್ತು ಸಿದ್ಧಾಂತಗಳಿಗೆ ಹೊಂದಾಣಿಕೆಯಾಗುವಂತೆ ಸಂವಿಧಾನವನ್ನು ವ್ಯಾಖ್ಯಾನಿಸುತ್ತಿರುತ್ತಾರೆ. ಮೂಲತಃ ಮತ್ತು ಅತಿಮುಖ್ಯವಾಗಿ ಸಂವಿಧಾನವು ನಾಗರಿಕರ ಸ್ವಾತಂತ್ರ್ಯದ ಅಭಿವ್ಯಕ್ತಿ ಮತ್ತು ಸ್ವಾತಂತ್ರ್ಯ ರಕ್ಷಣೆಯ ಸಾಧನ. ಸ್ವಾತಂತ್ರ್ಯದ ರಕ್ಷಣೆಯ ವಿಚಾರದಲ್ಲಿ ನಾಗರಿಕರು ಸದಾ ಜಾಗರೂಕರಾಗಿರಬೇಕು. ಪ್ರತಿ ಸಂವಿಧಾನ ದಿನವೂ ಅದನ್ನು ನೆನಪಿಸುವ ಸಂದರ್ಭವಾಗಬೇಕು.

ಕನ್ನಡಪರ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲು ಸರ್ಕಾರಕ್ಕೆ ಹಿಂಜರಿಕೆ ಸಲ್ಲದು

ಅನ್ನದ ಭಾಷೆ: ಬೇಕಿದೆ ಆತ್ಮವಿಮರ್ಶೆ

ವಿಶ್ಲೇಷಣೆ
ಜ್ಯೋತಿ

ಕನ್ನಡಿಗರಾದ ನಾವು ವಿಶೇಷವಾಗಿ ನವೆಂಬರ್ ತಿಂಗಳಲ್ಲಿ ನಮ್ಮ ತಾಯ್ನುಡಿಯಾದ ಕನ್ನಡದ ಆರೋಗ್ಯ ಸ್ಥಿತಿಗತಿಯನ್ನು ಸ್ವಲ್ಪಮಟ್ಟಿಗೆ ವಿಚಾರಿಸುತ್ತೇವೆ. ವರ್ಷದಿಂದ ವರ್ಷಕ್ಕೆ ಕನ್ನಡ ಶಾಲೆಗಳು ಮುಚ್ಚುತ್ತಿರುವುದು ಹೆಚ್ಚಾಗುತ್ತಿದೆ. ಕಾಯಿಲೆಪೀಡಿತವಾಗಿರುವ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳು ಕೂಡ ಬಹುತೇಕ 'ತುರ್ತು ನಿಗಾ ಘಟಕ'ದಲ್ಲಿ ಇರುವಂತಹ ಸ್ಥಿತಿ ಎದುರಾಗಿದೆ. ಇಂತಹ ಸಂದರ್ಭದಲ್ಲಿ ಪರಿಸ್ಥಿತಿಯ ಗಾಂಭೀರ್ಯವನ್ನು ಅರಿತು, ಪರಿಹಾರಕ್ಕೆ ಕೂಡಲೇ ಮಾರ್ಗೋಪಾಯ, ಕಾರ್ಯತಂತ್ರ ರೂಪಿಸಿ ಕಾರ್ಯಗತಗೊಳಿಸುವ ಜರೂರು ಇದೆ. ಆದರೆ ಈ ದಿಸೆಯಲ್ಲಿ ಸರ್ಕಾರದ ಪ್ರಯತ್ನ ಕಾಣುತ್ತಿಲ್ಲ.

ಪ್ರಾದೇಶಿಕ ಭಾಷಾ ಮಾಧ್ಯಮದ ಶಾಲೆಗಳು ಮೂಲೆಗುಂಪಾಗುತ್ತಿರುವುದು ನಿರಾಶಾದಾಯಕ ವಿದ್ಯಮಾನ. ಅಧಿಕಾರಸ್ಥರಿಗೆ ಈ ಸಮಸ್ಯೆಯ ಮೂಲ ಗೊತ್ತಿದೆ, ಅದಕ್ಕೆ ಪರಿಹಾರವೂ ಗೊತ್ತಿದೆ. ಆದರೆ, ಈ ಪ್ರಕ್ರಿಯೆಯು ಬದಲಾಗುತ್ತಿರುವ ಜಗತ್ತಿನ ಒಂದು ಸಹಜ ಬೆಳವಣಿಗೆ ಎನ್ನುವಂತೆ ಜಾಣಮೌನ ಪ್ರದರ್ಶಿಸುತ್ತಿರುವುದರಲ್ಲಿ ಸ್ವಹಿತಾಸಕ್ತಿ ಇದೆ.

ನಾಡಿನ ಮಕ್ಕಳು ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯದಿದ್ದಲ್ಲಿ, ಅವರು ಆ ಭಾಷೆ, ಅದು ರೂಪಿಸಿರುವ ಸಂಸ್ಕೃತಿ ಮತ್ತು ಇತಿಹಾಸದಿಂದ ದೂರ ಉಳಿಯುತ್ತಾರೆ. ಅವರಲ್ಲಿ ಪರಕೀಯ ಭಾವ ಮೂಡುತ್ತದೆ. ಅವರು ಕನ್ನಡದಿಂದ ಅಂತರ ಕಾಯ್ದುಕೊಳ್ಳುವ ಸಾಧ್ಯತೆ ಹೆಚ್ಚಾಗುತ್ತದೆ. ಇದಕ್ಕಿಂತ ಮುಖ್ಯವಾಗಿ, ಮಕ್ಕಳಿಗೆ ಅವರ ಪ್ರಾಥಮಿಕ ಶಿಕ್ಷಣವು ಮಾತೃಭಾಷೆಯಲ್ಲಿಯೇ ಸಿಗುವುದು ಅವರ ಜ್ಞಾನಾರ್ಜನೆಯ ಮಾರ್ಗವನ್ನು ಸುಲಭಗೊಳಿಸುತ್ತದೆ ಮತ್ತು ಆತ್ಮೀಯವಾಗಿಸುತ್ತದೆ ಎನ್ನುವುದನ್ನು ಶಿಕ್ಷಣ ತಜ್ಞರು ಪದೇ ಪದೇ ಹೇಳುತ್ತಲೇ ಬಂದಿದ್ದಾರೆ. ಇದಕ್ಕೆ ಕಿವಿಗೊಡುವ ಸದ್ಬುದ್ಧಿ ನೀತಿನಿರೂಪಕರಲ್ಲಿ ಮೂಡಬೇಕು.

ಪರಿಸರ ಭಾಷೆಯನ್ನು ಪ್ರಾಥಮಿಕ ಶಿಕ್ಷಣದ ಮಾಧ್ಯಮವಾಗಿಸದ ವಿನಾ ಅದು ಮುಂದಿನ ಪೀಳಿಗೆಗಳಿಂದ ನಿಸ್ಸಂಶಯವಾಗಿ ದೂರವಾಗುತ್ತದೆ ಎನ್ನುವ ಸತ್ಯ ಗೊತ್ತಿದ್ದರೂ ಮತ್ತು ಈ ಕುರಿತಂತೆ ಬಹಳಷ್ಟು ವರದಿಗಳು ನಮ್ಮ ಮುಂದಿದ್ದರೂ ಈ ದಿಸೆಯಲ್ಲಿ ಸೂಕ್ತ ಕ್ರಮಗಳನ್ನು ನಾಡಿನ ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳಲು ನಮ್ಮ ಸರ್ಕಾರಗಳಿಗೆ ಇಚ್ಛಾಶಕ್ತಿ ಇಲ್ಲವಾಗಿದೆ. ಬಾಯಿಮಾತಿನಲ್ಲಿ ಕನ್ನಡದ ಭವ್ಯ ಇತಿಹಾಸವನ್ನು ಹೆಮ್ಮೆಯಿಂದ ಹೊಗಳಿದ ಮಾತ್ರಕ್ಕೆ ಭಾಷೆಯ ಬೆಳವಣಿಗೆ ಆಗುವುದಿಲ್ಲ. ಅದರ ಭವಿಷ್ಯದ ಬಗ್ಗೆ ಕೃತಿಯಲ್ಲಿ ಕಾಳಜಿ ಪ್ರಕಟಗೊಳ್ಳಬೇಕು. ಕನ್ನಡದ ಇಂದಿನ ದುರ್ಗತಿಗೆ ಜನಪ್ರತಿನಿಧಿಗಳ ನಿರುತ್ಸಾಹವೇ ಮುಖ್ಯ ಕಾರಣ. ಅಧಿಕಾರದಲ್ಲಿ ಇರುವವರು ಈ ಕುರಿತು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ.

ಹಾಗಿದ್ದಲ್ಲಿ, ಇದಕ್ಕೆ ಪರಿಹಾರಗಳೇನು? ಇದನ್ನು, ಸಾಮಾಜಿಕ ಹೊಣೆಗಾರಿಕೆಯ ಆಧಾರದಲ್ಲಿ ಮೂರು ಆಯಾಮಗಳಿಂದ ಚರ್ಚಿಸಬಹುದು. ಮೊದಲನೆಯದು, ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಪಾತ್ರ. ಶಿಕ್ಷಣ ಸಂಸ್ಥೆಗಳಿಗೆ ಇಂಗ್ಲಿಷ್ ಮಾಧ್ಯಮ ಶಾಲೆಗಳ ಸ್ಥಾಪನೆಗೆ ಸರ್ಕಾರವು ಪರವಾನಗಿ ನೀಡುವಾಗ, ಅವು ಪ್ರಾರಂಭಿಸುವ ಪ್ರತಿ ಶಾಲೆಯ ಸಂಖ್ಯಾವಾರು ಅನುಪಾತದಲ್ಲಿ ಕನ್ನಡ ಮಾಧ್ಯಮ ಶಾಲೆಗಳನ್ನು ದತ್ತು ತೆಗೆದುಕೊಂಡು, ಅವುಗಳನ್ನು ಕೂಡ ಸಮಾನವಾಗಿ ಪೋಷಿಸಬೇಕು ಎನ್ನುವುದನ್ನು ಕಡ್ಡಾಯಗೊಳಿಸಬೇಕು. ಹಾಗೆಯೇ, ಇನ್ನಿತರ ಕ್ಷೇತ್ರಗಳಲ್ಲಿ ಉದ್ಯಮಗಳನ್ನು ನಡೆಸುತ್ತಿರುವವರೂ ತಮ್ಮ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ನಿಧಿಯ ಸ್ವಲ್ಪ ಹಣವನ್ನು ಕನ್ನಡ ಮಾಧ್ಯಮ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗಾಗಿ ವಿನಿಯೋಗಿಸಬೇಕು ಎನ್ನುವ ನಿಯಮ ರೂಪಿಸಬೇಕು. ಸೊರಗುತ್ತಿರುವ ಸರ್ಕಾರಿ ಶಾಲೆಗಳ ಬಲವರ್ಧನೆಗೆ ಇದರಿಂದ ನೆರವಾಗಲಿದೆ.

ಕನ್ನಡ ಮಾಧ್ಯಮ ಶಿಕ್ಷಣ ಸಂಸ್ಥೆಗಳಿಗೆ ಇಂದು ಬೇಕಾಗಿರುವುದು ಸದೃಢವಾದ ಕಟ್ಟಡಗಳು, ಸುಸಜ್ಜಿತ ತರಗತಿ ಕೋಣೆಗಳು, ಪ್ರಯೋಗಾಲಯಗಳು, ಗ್ರಂಥಾಲಯಗಳು, ವಿಷಯ ಪರಿಣತಿ ಹೊಂದಿದ ಮತ್ತು ಮಾನವೀಯ ಮೌಲ್ಯಗಳನ್ನು ಕಲಿಸುವ ಶಿಕ್ಷಕರು. ಇಂತಹ ಕನ್ನಡಪರ ಕಾರ್ಯಕ್ರಮಗಳನ್ನು ತಮ್ಮ ಗ್ಯಾರಂಟಿಗಳಲ್ಲಿ ಅಳವಡಿಸಿಕೊಳ್ಳಲು ಯಾವುದೇ ಸರ್ಕಾರಕ್ಕೆ ಹಿಂಜರಿಕೆ ಇರಕೂಡದು. ಇದಕ್ಕೆ ವಿಶ್ವದರ್ಜೆಯ ಶಿಕ್ಷಣ ನೀಡುವ ಭರವಸೆ ಕೊಡುವ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಇನ್ನಿತರ ಉದ್ಯಮಗಳು ಕೂಡ ಕೈಜೋಡಿಸಬೇಕು.

ಎರಡನೆಯದು, ಜನಪ್ರತಿನಿಧಿಗಳ ಜವಾಬ್ದಾರಿ. ಒಂದುವೇಳೆ ಕನ್ನಡ ಮಾಧ್ಯಮ ಶಾಲೆಗಳ ಗುಣಮಟ್ಟ ಸುಧಾರಿಸಿದಲ್ಲಿ, ಅಲ್ಲಿಗೆ ತಮ್ಮ ಮಕ್ಕಳನ್ನು ದಾಖಲಿಸಲು ಸಿದ್ಧರಿರುವ ಅಸಂಖ್ಯಾತ ಕನ್ನಡಪ್ರೇಮಿ ಹೆತ್ತವರು ಇಂದಿಗೂ ನಮ್ಮ ನಾಡಿನಲ್ಲಿ ಇದ್ದಾರೆ. ಶಿಕ್ಷಣವು ತಮ್ಮ ಮಕ್ಕಳ ಭವಿಷ್ಯದ ಅಡಿಪಾಯ ಆಗಿರುವುದರಿಂದ, ಗುಣಮಟ್ಟದ ಶಿಕ್ಷಣವನ್ನು ಸಹಜವಾಗಿ ಹೆತ್ತವರು ನಿರೀಕ್ಷಿಸುತ್ತಾರೆ ಮತ್ತು ಅದಕ್ಕಾಗಿ ಹಣ ಖರ್ಚು ಮಾಡಲು ಸಿದ್ಧರಿರುತ್ತಾರೆ. ಹಾಗಾಗಿ, ಕನ್ನಡ ಮಾಧ್ಯಮ ಶಾಲೆಗಳನ್ನು ಮೇಲ್ದರ್ಜೆಗೆ ಕೊಂಡೊಯ್ಯುವ ಹೊಣೆಗಾರಿಕೆ ನಮ್ಮ ಜನಪ್ರತಿನಿಧಿಗಳಿಗಿದೆ. ಹಾಗಾಗಿ, ಗ್ರಾಮ ಪಂಚಾಯಿತಿಯಿಂದ ಹಿಡಿದು ಲೋಕಸಭೆಯವರೆಗೆ ಜನಪ್ರತಿನಿಧಿಗಳು ತಮ್ಮ ಕ್ಷೇತ್ರದ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅವನ್ನು ಪೋಷಿಸಬೇಕು. ಇದೊಂದು ಕಡ್ಡಾಯ ಕಾರ್ಯಕ್ರಮ ಆಗಬೇಕಿದೆ. ಅವರು ಈ ನಾಡಿನ ಭಾಷೆಗೆ ಮತ್ತು ತಮ್ಮ ಕ್ಷೇತ್ರದ ಜನರಿಗೆ ಮಾಡಬೇಕಾದ ಅನಿವಾರ್ಯ ಜನಸೇವೆ ಇದು. ಇಲ್ಲವಾದಲ್ಲಿ, ಮುಂದಿನ ದಿನಗಳಲ್ಲಿ ಕನ್ನಡದಲ್ಲಿ ಓದಲು, ಬರೆಯಲು ಬಾರದ 'ಕನ್ನಡಿಗ'ರನ್ನು ಅವರು ಪ್ರತಿನಿಧಿಸಲಿದ್ದಾರೆ.

ಮೂರನೆಯದು, ವಿವಿಧ ಕೆಲಸಗಳಲ್ಲಿ ದುಡಿದು ನಿವೃತ್ತರಾಗಿರುವ ಕನ್ನಡಿಗರ ಸಮಾಜಸೇವೆ. ನಾವು ನಮ್ಮ ಸುತ್ತಮುತ್ತ ಬಹಳಷ್ಟು ಸಂಖ್ಯೆಯಲ್ಲಿ ನಿವೃತ್ತರು ಗುಂಪು ಗುಂಪಾಗಿ ಸೇರಿ ತಮ್ಮ ಗತಕಾಲದ ದಿನಗಳನ್ನು ಮೆಲುಕು ಹಾಕುತ್ತಾ, ವರ್ತಮಾನವನ್ನು ನಿರಾಶೆಯಿಂದ ನೋಡುವುದನ್ನು ಕಾಣುತ್ತೇವೆ. ಇವರಲ್ಲಿ ಬಹುತೇಕರು ಶ್ರೇಷ್ಠ ಮಟ್ಟದ ಜೀವನಾನುಭವ ಮತ್ತು ವಿಷಯ ತಜ್ಞತೆ ಹೊಂದಿದವರಾಗಿರುತ್ತಾರೆ. ಅವರಿಗೂ ಕನ್ನಡದ ಭವಿಷ್ಯದ ಬಗ್ಗೆ ಬಹಳಷ್ಟು ಆತಂಕವಿದೆ. ಹಾಗಾಗಿ, ಅವರು ಬಿಡುವಿನ ವೇಳೆಯಲ್ಲಿ ತಮ್ಮ ಸುತ್ತಮುತ್ತಲಿನ ಪರಿಸರದ ಕನ್ನಡ ಮಾಧ್ಯಮ ಶಾಲೆಗಳನ್ನು ಸಶಕ್ತಗೊಳಿಸಲು ಅಳಿಲುಸೇವೆ ಸಲ್ಲಿಸಬೇಕು. ಶಿಕ್ಷಕರಾಗಿ ನಿವೃತ್ತಿ ಹೊಂದಿದ್ದರೆ ಉಚಿತ ಬೋಧನೆಯಂತಹ ಕಾರ್ಯನಿರ್ವಹಣೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಹುದು.

ಮಕ್ಕಳೊಂದಿಗೆ ಸಮಯ ಕಳೆಯುವ ಇಂತಹ ಸುಂದರ ಕ್ಷಣಗಳು ಆತ್ಮತೃಪ್ತಿ ಕೊಡುತ್ತವೆ. ಇಳಿವಯಸ್ಸಿನಲ್ಲಿ ಚೈತನ್ಯ ಉಳಿಸಿಕೊಳ್ಳಲು ನೆರವಾಗುತ್ತವೆ. ಇದೊಂದು ಅಮೋಘ ಸಮಾಜಸೇವೆಯೂ ಹೌದು. ಇದು, ಅವರನ್ನು ಕಾಡುವ ವಯೋಸಹಜ ಒಂಟಿತನವನ್ನು ದೂರ ಮಾಡುತ್ತದೆ. ಇದರಿಂದ, ಅವರಲ್ಲಿರುವ ವಿದ್ವತ್ತು, ಕೌಶಲ, ಜೀವನಾನುಭವವು ಮುಂದಿನ ಪೀಳಿಗೆಗಳಿಗೆ ರವಾನೆ ಆಗುತ್ತದೆ. ಜೊತೆಗೆ, ಗೊಂದಲದಲ್ಲಿರುವ ಇಂದಿನ ಮಕ್ಕಳಿಗೆ ಜ್ಞಾನವೃದ್ಧರ ಮಾರ್ಗದರ್ಶನ ಅತ್ಯಗತ್ಯ. ಇದನ್ನು ಕೆಲವು ಹಿರಿಯ ನಾಗರಿಕರು ಈಗಾಗಲೇ ಎಲೆಮರೆಯ ಕಾಯಿಯಂತೆ ಮಾಡುತ್ತಿದ್ದಾರೆ. ಉದಾಹರಣೆಗೆ, ಪ್ರಮೀಳಾ ಶಿವಣ್ಣ. ಇವರು ತಮ್ಮ ಅಧ್ಯಾಪನ ವೃತ್ತಿಯನ್ನು ದೆಹಲಿಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಮಾಡಿ, ನಿವೃತ್ತಿಯ ನಂತರ ತಮ್ಮ ಊರಾದ ತುಮಕೂರು ಜಿಲ್ಲೆಯ ನಂದಿಹಳ್ಳಿ ಗ್ರಾಮದಲ್ಲಿ ನೆಲಸಿ, ಅಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹದಿನೇಳು ವರ್ಷಗಳಿಂದ ಉಚಿತ ಸೇವೆ ಸಲ್ಲಿಸುತ್ತಿದ್ದಾರೆ. ಆ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಮೂಲ ಸೌಕರ್ಯಕ್ಕೆ ಅಪಾರ ಕೊಡುಗೆ ನೀಡಿ, ಶಾಲೆಯ ಗಮನಾರ್ಹ ಬದಲಾವಣೆಗಳಿಗೆ ಕಾರಣರಾಗಿ, ಗ್ರಾಮಸ್ಥರ ವಿಶೇಷ ಗೌರವಕ್ಕೆ ಪಾತ್ರರಾಗಿದ್ದಾರೆ.

ಇಂತಹ ಉತ್ತಮ ಉದಾಹರಣೆಗಳು ಸಾಮುದಾಯಿಕ ಆಂದೋಲನ ಆಗಬೇಕಾಗಿದೆ. ಹಾಗಾಗಿ, ಪ್ರಮೀಳಾ ಅವರಂತೆ ನಾಡಿನ ಹಿರಿಯ ನಾಗರಿಕರು ಮನಸ್ಸು ಮಾಡಿದಲ್ಲಿ, ನಮ್ಮ ಕನ್ನಡ ಶಾಲೆಗಳು ಮತ್ತೊಮ್ಮೆ ತಮ್ಮ ವೈಭವದ ದಿನಗಳಿಗೆ ಮರಳಬಹುದು ಮತ್ತು ಈ ಮೂಲಕ ಕನ್ನಡ ಭಾಷೆಯೂ ತನ್ನ ಭವಿಷ್ಯದ ದಿನಗಳನ್ನು ನೋಡಬಹುದು. ಕನ್ನಡ ಮಾಧ್ಯಮವು ಅಲ್ಲಿ ಕಲಿಯುವ ಮಕ್ಕಳಲ್ಲಿ ಯಾವುದೇ ಬಗೆಯಲ್ಲಿ ಕೀಳರಿಮೆ ತರಿಸಬಾರದು. ಬದಲಾಗಿ, ಉಳ್ಳವರ ಮಕ್ಕಳು ಕೂಡ ಕನ್ನಡ ಶಾಲೆಗಳಿಗೆ ಬರುವಂತೆ ಅವುಗಳ ಗುಣಮಟ್ಟ ಹೆಚ್ಚಿಸಬೇಕು. ಕನ್ನಡದ ಉಜ್ವಲ ಭವಿಷ್ಯಕ್ಕೆ ಬರೀ ಘೋಷಣೆಗಳು ಸಾಕಾಗುವುದಿಲ್ಲ, ಪ್ರಾಮಾಣಿಕ ಪ್ರಾಯೋಗಿಕ ಕಾರ್ಯಕ್ರಮಗಳು ಬೇಕಾಗಿವೆ.

ಚುರುಮುರಿ

ಕಾಯಕವೇ ಕೈಸಾಲ

• ಡಿ.ಎಸ್.ಲಿಂಗರಾಜು

'ಮನ್ನೆ ಇನ್ಫೊಸಿಸ್ ನಾರಾಣಣ್ಣ 'ಎಲ್ಲಾರೂ ವಾರಕ್ಕೆ 70 ಗಂಟೆ ಕೆಲಸ ಮಾಡಬಕು' ಅಂದವ್ರೆ. ಅಮೇರಿಕದ ಮಸ್ಕಣ್ಣ '100 ಗಂಟೆ ಕೆಲಸ ಮಾಡ್ರಿ' ಅಂದದ್ದೆ ಚರ್ಚೆಗೆ ನಾಂದಿ ಹಾಕಿದೆ.

'ದಿಟ ಕಯ್ಯಾ, ಯವಾರ ಅವರದ್ದಲ್ವಾ ಅದಕ್ಕೇ ದಿನಕ್ಕೆ 12 ಗಂಟೆ ಯಾಕೆ 24 ಗಂಟೆನೂ ದುಡೀರಿ ಅಂತರೆ. ಕಾಯಕ ದುಡಿಯೋರದ್ದು, ಕಾಸು ಅವರದ್ದು. ಕೈಸಾಲ ಮಾಡಿಕ್ಯಂದು ರೈತರು ಹೊಲ-ಮನೆ ಅಂತ ಹಗಲು-ರಾತ್ರಿ ದುಡಿಯಕುಲ್ವಾ' ತುರೇಮಣೆ ಕೆತ್ತೆಬಜೆ ಮಾಡಿದರು.

'ಹೋದವಾರ ನಕ್ಸಲರನ್ನ ಕಾಡಲ್ಲಿ ಅಟ್ಟಾಡಿಸಿ ಕೊಂದಾಕಿದರಂತೆ. ಶೋಷಿತರ ಪರವಾಗಿ ಕೆಲಸ ಮಾಡ್ತಾ ತಲೆ ತಪ್ಪಿಸಿಕ್ಯಂದು ತಿರುಗೋ ಪಾಪದವು ಕನಣ್ಣೆ ಅವು. ಅವರಿಗಿಂತಾ ಊರಲ್ಲಿ ಸೇರಿಕ್ಯಂದು ಶೋಷಣೆ ಮಾಡ್ತಿರೋ ನಕ್ಸಲರ ಕಾಟ ಜಾಸ್ತಿಯಾಗ್ಯದೆ' ಅಂತ ನಿಟ್ಟುಸಿರುಬುಟ್ಟೆ.

'ಅದ್ಯಾರಲಾ ನಾನು ಕಾಣದೋವು?' ತುರೇಮಣೆ ಬೆರಗಾದರು.

'ಬಿಳಿ ಬಟ್ಟೆ ಇಕ್ಯಂದು ಸರ್ಕಾರಿ ಭಯೋತ್ಪಾದನೆ ಮಾಡ್ತಿರೋ ರಾಜಕೀಯ ನಕ್ಸಲರು ದೇಶದ ಆರೋಗ್ಯಕ್ಕೆ ಹಾನಿಕರವಾಗ್ಯವರೆ. ಜನದ ಇತ-ಪರ ನೋಡದೇ ಇರೋವ್ರುನ್ನ ಮಾರಿಬುಡದು ಒಳ್ಳೇದು' ಅಂತಂದೆ.

'ಇವುನ್ನ ಯಾರು ತಕ್ಕಂದಾರ್ಲಾ?'

'ಕ್ರಿಕೆಟ್ ಆಡೋರು ಅವರನ್ನ ಅವರೇ ಮಾರಿಕ್ಯತ್ತಿಲ್ವಾ. ಹಂಗೇ ಇವುನ್ನೂ ಇಂಡಿಯನ್ ಪೊಲಿಟಿಕಲ್ ಲೀಗ್ ಅಂತ ಮಾಡಿ, ಎಷ್ಟಕ್ಕೆ ಹೋತವೋ ಅಷ್ಟಕ್ಕೆ ಹರಾಜಲ್ಲಿ ಸೀದುಬುಟ್ರೆ ಜನಕ್ಕೆ ನೆಮ್ದಿ ಆಯ್ತದೆ'.

'ಆದ್ರೆ ಇವು ಯಾವುದಾದರೊಂದು ಪಕ್ಷಕ್ಕೆ ಹೋಗಿ ಹಿಂದ್ಲಿಂದ, ಮುಂದ್ಲಿಂದ, ಅತ್ಲಿಂದ, ಇತ್ಲಿಂದ ಬಂದು 'ಎಲ್ಲಿ ಕಳಕೊಂಡಿದ್ದೀನೊ ಅಲ್ಲೇ ಹುಡುಕ್ತೀನಿ' ಅಂತ್ಲೋ ಇಲ್ಲ ನಿಷ್ಠ-ಅನಿಷ್ಠ ಅಂತ್ಲೋ ಗುಂಪು ಕಟ್ಟಿಗ್ಯಂದು ರೋಸ್ತವಲ್ಲಪ್ಪಾ? ಇವುಕ್ಕೆ ರೇಟು ಯಂಗೆ ಪಿಕ್ಸ್ ಮಾಡದು?'

'ರಾಜಕೀಯ ನಕ್ಸಲರಿಗೋಸ್ಕರ ಮಾರ್ಸೀಬಿ ವೆಬ್‌ಸೈಟು ಮಾಡಿ, ಅದರಲ್ಲಿ ಎಲೆಕ್ಟ್ರಾನಿಕ್ಸ್ ರೇಟಿಂಗ್ ಮೆಶೀನ್ ಮಡಗಿ, ಬಿಡ್ ಜಾಸ್ತಿ ಕೂಗಿದೋರಿಗೆ ಕೊಟ್ಟುಬುಡಬಕು' ನನ್ನ ವಿಚಾರ ಮಂಡಿಸಿದೆ.

ದಿನದ ಟ್ವೀಟ್

ತಕ್ಕ ಪಾಠ ಕಲಿಸಬೇಕಿದೆ

ಸೈಬರ್ ವಂಚಕರು ಈಗ ಪೊಲೀಸರಂತೆ ಸೋಗು ಹಾಕುವ ಹುಚ್ಚು ಸಾಹಸಕ್ಕೆ ಇಳಿದಿದ್ದಾರೆ. ನನಗೂ ಅಂತಹವರಿಂದ ಕರೆ ಬಂದಿತ್ತು ಮತ್ತು ನನಗೆ ಈ ವ್ಯವಸ್ಥೆ ಬಗ್ಗೆ ಗೊತ್ತಿರುವುದರಿಂದ ಅದನ್ನು ಸರಿಯಾಗಿ ನಿಭಾಯಿಸಿದೆ... ಈಗ ವಂಚಕರು ಬಿಬಿಎಂಪಿ, ಬೆಸ್ಕಾಂ, ಆದಾಯ ತೆರಿಗೆ ಮತ್ತು ಇತರ ಸರ್ಕಾರಿ ಸಂಸ್ಥೆಗಳ ಸೋಗಿನಲ್ಲಿ ಭಯ ಹುಟ್ಟಿಸಿ ಸುಲಿಗೆ ಮಾಡಲು ಈ ತಂತ್ರಜ್ಞಾನವನ್ನು ಬಳಸುತ್ತಿದ್ದಾರೆ... ಈ ಅಪರಾಧಿಗಳನ್ನು ಬಂಧಿಸಿ, ಅವರ ವಿವರವನ್ನು ಬಹಿರಂಗಪಡಿಸುವ ಮೂಲಕ ಪೊಲೀಸರು ಅವರಿಗಿಂತ ಸಮರ್ಥರು ಎಂಬ ವಿಶ್ವಾಸ ಮೂಡಿಸಬೇಕಾಗಿದೆ.

ಭಾಸ್ಕರ್ ರಾವ್, ಬಿಜೆಪಿ ಮುಖಂಡ

ಕಿಡಿನುಡಿ

ನಾಲ್ಕು ವರ್ಷಗಳು ಕಳೆದರೂ ಬಿಬಿಎಂಪಿ ಚುನಾವಣೆ ನಡೆದಿಲ್ಲ. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರು ಅಧಿಕಾರಕ್ಕೆ ಬಂದು ಒಂದೂವರೆ ವರ್ಷ ಕಳೆದರೂ ಚುನಾವಣೆ ನಡೆಸಲು ಕ್ರಮ ಕೈಗೊಳ್ಳದಿರುವುದು, ಇವರಿಗೆ ಪ್ರಜಾಪ್ರಭುತ್ವದ ಮೇಲೆ ಎಷ್ಟರಮಟ್ಟಿಗೆ ನಂಬಿಕೆ ಇದೆ ಎಂಬುದನ್ನು ತೋರಿಸುತ್ತದೆ.

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 26-11-1999

• ಮುಂಬೈಗೆ ನೇರ ವಿಮಾನ ಮುಖ್ಯಮಂತ್ರಿ ಕೃಷ್ಣ ಭರವಸೆ

ಬೆಂಗಳೂರು, ನ. 25– ಮೈಸೂರು, ಹುಬ್ಬಳ್ಳಿ ಮತ್ತು ಬೆಳಗಾವಿಯಿಂದ ಮುಂಬೈಗೆ ನೇರವಾಗಿ ವಿಮಾನಯಾನ ಪ್ರಾರಂಭಿಸಲು ರಾಜ್ಯ ಸರ್ಕಾರ ಪ್ರಯತ್ನಿಸುವುದೆಂದು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಇಂದು ಇಲ್ಲಿ ಭರವಸೆ ನೀಡಿದರು.

ದಿ ಗ್ರೇಟರ್ ಮೈಸೂರು ಚೇಂಬರ್ ಆಫ್ ಇಂಡಸ್ಟ್ರಿ ಸಂಸ್ಥೆಯು ಏರ್ಪಡಿಸಿದ್ದ 'ಸಂವಾದ'ದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪಿಸುವುದಕ್ಕೆ ಕೇಂದ್ರವು ತಾತ್ವಿಕವಾಗಿ ಒಪ್ಪಿದೆ. ಜತೆಗೆ ಬೆಂಗಳೂರಿನಲ್ಲಿ ಇರುವ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸುವಂತೆಯೂ ತಾವು ಕೇಂದ್ರದ ನಾಗರಿಕ ವಿಮಾನಯಾನ ಖಾತೆಯ ಸಚಿವರಲ್ಲಿ ಮನವಿ ಮಾಡಿರುವುದಾಗಿ ಕೃಷ್ಣ ಹೇಳಿದರು.

• ಅಬ್ದುಲ್ ಕಲಾಂ ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ

ನವದೆಹಲಿ, ನ. 25– ಭಾರತದ ಅಣ್ವಸ್ತ್ರ ಮತ್ತು ಕ್ಷಿಪಣಿ ಕಾರ್ಯಕ್ರಮಗಳ ಪಿತಾಮಹ ಎಂದೇ ಖ್ಯಾತರಾಗಿರುವ, ಕಳೆದ ವರ್ಷ 'ಭಾರತ ರತ್ನ' ಪ್ರಶಸ್ತಿಗೆ ಪಾತ್ರರಾಗಿರುವ ಎ.ಪಿ.ಜೆ. ಅಬ್ದುಲ್ ಕಲಾಂ (60) ಅವರನ್ನು ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರರೆಂದು ನೇಮಕ ಮಾಡಲಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 26-11-1974

• ವಿವಾಹ ವಯೋಮಿತಿ ಏರಿಸಲು ವಿನೋಬಾ ಸಲಹೆ

ನಾಗಪುರ, ನ. 25– ಜನಸಂಖ್ಯೆ ಏರಿಕೆ ತಡೆಗಟ್ಟುವ ಸಲುವಾಗಿ ಪುರುಷರ ವಿವಾಹ ವಯೋಮಿತಿಯನ್ನು ಇಪ್ಪತ್ತೊಂದರಿಂದ ಇಪ್ಪತ್ತೈದಕ್ಕೆ ಏರಿಸಲು ಹಾಗೂ ಸ್ತ್ರೀಯರ ವಿವಾಹ ವಯೋಮಿತಿಯನ್ನು ಹದಿನೆಂಟರಿಂದ ಇಪ್ಪತ್ತಕ್ಕೆ ಏರಿಸಲು ಸರ್ವೋದಯ ನಾಯಕ ಆಚಾರ್ಯ ವಿನೋಬಾ ಭಾವೆಯವರು ಇಂದು ಇಲ್ಲಿ ಸಲಹೆ ನೀಡಿದರು.

ಕೇಂದ್ರ ಆರೋಗ್ಯ ಸಚಿವ ಡಾ. ಕರಣ್ ಸಿಂಗ್ ಅವರು ಭಾನುವಾರ ಪೌನಾರ್ ಆಶ್ರಮದಲ್ಲಿ ವಿನೋಬಾ ಭಾವೆಯವರನ್ನು ಭೇಟಿ ಮಾಡಿದಾಗ ವಿನೋಬಾಜಿಯವರು ಈ ಸಲಹೆ ಮಾಡಿದರೆಂದು ವರದಿಯಾಗಿದೆ.

• ಚುನಾವಣೆ ವೆಚ್ಚ ಮಿತಿ ಏರಿಕೆ ಪರಿಶೀಲನೆ

ನವದೆಹಲಿ, ನ. 25– ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ಮಾಡುವ ವೆಚ್ಚದ ಮಿತಿಯನ್ನು ಹೆಚ್ಚಿಸುವ ಪ್ರಶ್ನೆಯನ್ನು ಸರ್ಕಾರ ಪರಿಶೀಲಿಸುತ್ತಿದೆಯೆಂದು ಕಾನೂನು ಖಾತೆ ಸಚಿವ ಎಚ್.ಆರ್.ಗೋಖಲೆಯವರು ಇಂದು ರಾಜ್ಯಸಭೆಯಲ್ಲಿ ತಿಳಿಸಿದರು.

ಜೆ.ಪಿ.ಮಾಥುರ್ ಮತ್ತಿತರರ ಪ್ರಶ್ನೆಗಳಿಗೆ ಉತ್ತರ ಕೊಟ್ಟ ಅವರು, ಅಭ್ಯರ್ಥಿಗಳು ಚುನಾವಣೆ ಸಂಬಂಧದಲ್ಲಿ ಮಾಡುವ ವೆಚ್ಚಕ್ಕೆ ಒಂದು ಮಿತಿ ಇರಬೇಕೆಂಬುದು ಚುನಾವಣೆ ಕಾನೂನು ಕುರಿತ ಸಂಯುಕ್ತ ಸಮಿತಿಯ ಬಹುಮತ ಅಭಿಪ್ರಾಯವಾಗಿದೆಯೆಂದು ಹೇಳಿದರು.

ಸಂಗತ

ಭಾಷೆ ಹಲವು, ಭಾವ ಒಂದು

ನಮ್ಮ ಮಾತೃಭಾಷೆಯಲ್ಲದ ಇತರ ಭಾಷೆಯನ್ನು ಅನ್ಯವೆನ್ನದೆ ಅತಿಥಿಯೆನ್ನೋಣ

• ಯೋಗಾನಂದ

ಬೆಂಗಳೂರಿನ ಹೊರವಲಯದ ಅಪಾರ್ಟ್‌ಮೆಂಟ್‌ಗೆ ನೆಂಟರೊಬ್ಬರನ್ನು ಭೇಟಿಯಾಗಲು ಇತ್ತೀಚೆಗೆ ಹೋಗಿದ್ದೆ. ಅಲ್ಲಿನ ಇಕ್ಕಟ್ಟಾದ ನೆಲಹರವನ್ನೇ ಮೈದಾನವಾಗಿಸಿಕೊಂಡಿದ್ದ ಮಕ್ಕಳು ಕನ್ನಡವನ್ನಲ್ಲದೆ ತೆಲುಗು, ತಮಿಳು, ಇಂಗ್ಲಿಷ್, ಹಿಂದಿಯಲ್ಲೂ ಮಾತನಾಡುತ್ತ ಆಡಿಕೊಳ್ಳುತ್ತಿದ್ದರು. ಅರೆ! ಹೀಗೂ ಉಂಟೆ ಎಂಬ ನನ್ನ ಅಚ್ಚರಿಯನ್ನು ನೆಂಟರು ಭೇದಿಸಿದ್ದರು.

ಹೇಗೂ ಮಕ್ಕಳಿಗೆ ತಮ್ಮ ತಮ್ಮ ಮನೆಭಾಷೆ ಗೊತ್ತಿರುತ್ತದೆ. ಕುತೂಹಲದಿಂದ ಅವರು ಪರಸ್ಪರ ಆಲಿಸುವುದರಿಂದ ಸರಿಯಾದ ಅರ್ಥ ಮತ್ತು ಉಚ್ಚಾರಣೆಯೊಂದಿಗೆ ಪರಭಾಷೆಯ ಪದಗಳು ಹತ್ತಿರವಾಗುತ್ತವೆ. '... ಮಕ್ಕಳಿಗೆ ಅನ್ಯಭಾಷಾ ಮಾಧ್ಯಮ ಉರುಳಾಗಿ ಪರಿಣಮಿಸುತ್ತಿದೆ' ಎಂದು ಲೇಖಕಿ ಮಧುರಾ ಅಶೋಕ್ ಕುಮಾರ್ ಕಳವಳ ವ್ಯಕ್ತಪಡಿಸಿದ್ದಾರೆ (ಪ್ರ.ವಾ., ನ. 22).

ಮಕ್ಕಳ ಶಿಕ್ಷಣಕ್ಕೆ ಮಾತೃಭಾಷೆಯೇ ಯುಕ್ತ ಮಾಧ್ಯಮ ಎನ್ನುವುದರಲ್ಲಿ ಎರಡು ಮಾತಿಲ್ಲ. ಶಾಲಾಪೂರ್ವ ಅವಧಿಯಲ್ಲೇ ದ್ವಿತೀಯ ಭಾಷೆಯನ್ನು ಅವರಿಗೆ ಪರಿಚಯಿಸುವುದು ಉತ್ತಮವೇ. ಮಾತೃಭಾಷೆಯೊಂದಿಗೆ ಮಕ್ಕಳು ಇನ್ನೊಂದು ಭಾಷೆ ಕಲಿತರೆ ಅರಿವಿನ ಬೆಳವಣಿಗೆ ವರ್ಧಿಸುತ್ತದೆ. ಸರಿ-ತಪ್ಪು ವಿಚಾರ ಕೌಶಲಗಳನ್ನು ಅವರು ರೂಢಿಸಿಕೊಳ್ಳುತ್ತಾರೆ, ಅನ್ಯ ಸಂಸ್ಕೃತಿಗಳನ್ನು ಗೌರವಯುತವಾಗಿ ಕಾಣುವ ತೆರೆದ ಮನಸ್ಸಿನವರಾಗುತ್ತಾರೆ. ಮಾತೃಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುವುದೇ ಮಕ್ಕಳಿಗೆ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಒಂದೇನು, ಅದಕ್ಕೂ ಹೆಚ್ಚಿನ ಭಾಷೆಗಳನ್ನು ಏಕಕಾಲದಲ್ಲಿ ಕಲಿಯಲು ಆಕರವಾಗುತ್ತದೆ. ದಣಿವು, ತಬ್ಬಿಬ್ಬಿಲ್ಲದೆ ಅವರು ಭಾಷಾ ವೈವಿಧ್ಯಕ್ಕೆ ತೆರೆದುಕೊಳ್ಳುತ್ತಾರೆ, ಬಹುಭಾಷಿಕರಾಗಲು ತಯಾರಾಗುತ್ತಾರೆ. ದ್ವಿತೀಯ ಭಾಷೆ ಕಲಿತರೆ ಅದೇ ಶ್ರದ್ಧೆ ಇನ್ನಷ್ಟು ಭಾಷೆಗಳ ಪರಿಚಯಕ್ಕೆ ಸೋಪಾನವಾಗುತ್ತದೆ. ಎರಡು ಅಥವಾ ಮೂರು ಭಾಷೆಗಳನ್ನು ತಿಳಿದವರು ಶೈಕ್ಷಣಿಕವಾಗಿಯೂ ಯಶಸ್ವಿಯಾಗಬಲ್ಲರು.

ಮಕ್ಕಳು ಪರಭಾಷೆಗಳಿಗೆ ಒಡ್ಡಿಕೊಳ್ಳುವ ಕಾಲ ಪ್ರಮಾಣಕ್ಕಿಂತ ಆ ಸಾಮಗ್ರಿಯ ಸಾಂಸ್ಕೃತಿಕ ಮತ್ತು ಭಾಷಿಕ ದ್ರವ್ಯದ ಗುಣಮಟ್ಟವೇ ಮುಖ್ಯವಾಗುತ್ತದೆ. ಮನುಷ್ಯನ ಮೆದುಳು ಅಗಾಧಕ್ಕಿಂತ ತಾಜಾತನಕ್ಕೆ ಮಹತ್ವ ನೀಡುತ್ತದೆ. ಎಂದಮೇಲೆ, ತರಗತಿಯಲ್ಲಿನ ತನ್ಮಯತೆಗೂ ಮೀರಿ ಅದರಾಚೆಗಿನ ಗ್ರಹಣಶೀಲತೆ ಮೆರೆಯಬೇಕಿದೆ. 'ಅನ್ಯಭಾಷೆ' ಎಂದು ಹೇಳುವಾಗಲೇ ನಮಗರಿವಿಲ್ಲದಂತೆ ಮಾತೃಭಾಷೆಗೆ ಹೊರತಾದ ಭಾಷೆಯೊಂದರ ಆವಾಹನೆಯತ್ತ ಹೊರಟಿರುತ್ತೇವೆ. ಹಾಗಾಗಿ, ಅನ್ಯಭಾಷೆ ಬೇರೆ ಯಾವುದೂ ಅಲ್ಲ, ನಮ್ಮ ಮನೆಯ ಅಂಗಳದಲ್ಲಿ ಆಡುವ, ನಾವು ಮುದ್ದಿಸಬಹುದಾದ ನೆರೆಮನೆಯ ಕೂಸು.

ಮಕ್ಕಳು ಒಂದೇ ಒಂದು ಭಾಷೆಯನ್ನು ಕಲಿಯುವಂತೆ ಅವರ ಮೆದುಳಿನ ರಚನೆಯಾಗಿಲ್ಲ. ಪ್ರಕೃತಿಯು ಬಹುಭಾಷಿಕರಾಗಲು ಉತ್ತೇಜಿಸುತ್ತದೆ. ಇಟಲಿಯ ಸರ್ಬಿಯಾ ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕಿ ಅಲೆಸ್ಸಾಂಡ್ರಾ ವಿಸೆಂಟ್ನಿ 'ಮಕ್ಕಳು ಕನಿಷ್ಠ ಪರಿಶ್ರಮದಿಂದ ಗರಿಷ್ಠ ಫಲ ಪಡೆಯಲು ಹವಣಿಸುತ್ತಾರೆ. ಭಾಷೆ ಕಲಿಯುವಲ್ಲಿ ಮಕ್ಕಳು ಮಿತವ್ಯಯಿಗಳು. ಏಕೆಂದರೆ ನಿರಾಯಾಸವಾಗಿ ಅವರು ಗರಿಷ್ಠ ಫಲ ಬಯಸುತ್ತಾರೆ' ಎನ್ನುತ್ತಾರೆ. ಇನ್ನು ನಮ್ಮ ಇತಿಮಿತಿಯಲ್ಲಿ ಅಷ್ಟೊ ಇಷ್ಟೊ ವಿದೇಶಿ ಭಾಷೆಗಳನ್ನು ತಿಳಿದರಂತೂ ನಮ್ಮ ಪಾಲಿಗೆ ವಿಶ್ವದ ನೋಟವೇ ಬದಲಾಗುತ್ತದೆ. ಔದಾರ್ಯ, ಹೊಂದಾಣಿಕೆ ಮತ್ತು ಸಹಿಷ್ಣುತೆಗೆ ಮಾರ್ಗವಾಗುತ್ತದೆ. ಅಪನಂಬಿಕೆಯಿಲ್ಲದೆ ನಿರ್ಭಯವಾಗಿ ಉಲ್ಲಸಿತ ಪ್ರವಾಸ ಕೈಗೆಟಕುತ್ತದೆ.

ಶತಮಾನಗಳ ಹಿಂದೆ ಭಾರತಕ್ಕೆ ಬಂದ ವಿದೇಶಿಯರ ಉದ್ದೇಶವು ಪ್ರವಾಸವೊ, ವ್ಯಾಪಾರವೊ, ಆಕ್ರಮಣವೊ ಹೇಗೂ ಇರಲಿ. ಅವರಿಗೆಲ್ಲ ಭಾರತೀಯ ಭಾಷೆಗಳು ಅಡ್ಡಿಯಾಗಲಿಲ್ಲ. ಅವರು ತಮ್ಮ ದೇಶದಲ್ಲೇ ತರಬೇತಿ ಪಡೆದ ಬಹುಭಾಷಾ ದೂತರಾಗಿದ್ದರು ಎನ್ನೋಣವೇ? ಈಸ್ಟ್ ಇಂಡಿಯಾ ಕಂಪನಿಯಲ್ಲಿ, ಸ್ಥಳೀಯ ಭಾಷೆ ತಕ್ಕಮಟ್ಟಿಗೆ ತಿಳಿದವರೇ ಉದ್ಯೋಗಿಗಳಾಗಿದ್ದರು.

ಜರ್ಮನಿ ಸಂಜಾತರಾದರೂ ಭಾರತಕ್ಕೆ ಬಂದ ಮೊದಲ ಇಪ್ಪತ್ತು ವರ್ಷಗಳಲ್ಲಿ ಕನ್ನಡ, ಸಂಸ್ಕೃತ, ಮರಾಠಿ, ತಮಿಳು ಕಲಿತ ಧೀಮಂತ ಫರ್ಡಿನಾಂಡ್ ಕಿಟೆಲ್. ಕರ್ನಾಟಕದಾದ್ಯಂತ ಸಂಚರಿಸಿ ಮೊದಲ 'ಕನ್ನಡ- ಇಂಗ್ಲಿಷ್' ನಿಘಂಟನ್ನು ಕನ್ನಡಿಗರ ಕೈಗಿತ್ತ ಅವರದು ಸಾಧನೆಯೊ? ಪವಾಡವೊ? ಅವರು ಧಾರವಾಡ, ಹುಬ್ಬಳ್ಳಿ, ಮಂಗಳೂರು, ಮಡಿಕೇರಿಯನ್ನು ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡರು. ಈ ಶಬ್ದಸಂತ ಕುದುರೆಯೇರಿ ಸಂತೆಗೆ ಹೊರಡುತ್ತಿದ್ದರು. ಅಲ್ಲಿನ ವರ್ತಕರಿಗೆ ಕನ್ನಡದ ಪದಗಳಿಗೆ ಇಂಗ್ಲಿಷಿನಲ್ಲಿ, ಇಂಗ್ಲಿಷಿನ ಪದಗಳಿಗೆ ಕನ್ನಡದಲ್ಲಿ ಸಮಾನ ಪದಗಳನ್ನು ಹೇಳುವಂತೆ ಕಾಡಿಬೇಡುತ್ತಿದ್ದರು. ಇಂಗ್ಲಿಷ್ ತನ್ನ ಭಾಷೆಯೂ ಅಲ್ಲ, ಅದು ಕನ್ನಡಿಗರದೂ ಅಲ್ಲ. ಅದನ್ನು ಕಟ್ಟಿಕೊಂಡು ತನಗೇನಾಗಬೇಕೆಂದು ಅವರು ತೆಪ್ಪಗಿದ್ದಿದ್ದರೆ ನಮ್ಮ ಗ್ರಂಥಾಲಯಗಳಿಗೆ ಅನಾಥಪ್ರಜ್ಞೆ ಕಾಡುತ್ತಿತ್ತು. ಅಲ್ಲದೆ ಕೇಶಿರಾಜನ 'ಶಬ್ದಮಣಿ ದರ್ಪಣ' ವ್ಯಾಕರಣ ಕೃತಿಯನ್ನು ಇಂಗ್ಲಿಷ್ ವ್ಯಾಖ್ಯಾನ ಸಮೇತ ಕಿಟೆಲ್ ಸಂಪಾದಿಸಿದರು. ಅಂದಿನ ಮದ್ರಾಸು ಸರ್ಕಾರದ ಕೋರಿಕೆಯಂತೆ ಅವರು ಕನ್ನಡ ಪದ್ಯಗಳು, ಕರ್ನಾಟಕ ಸಂಗೀತ ಕುರಿತ ಕಿರುಹೊತ್ತಿಗೆಗಳು ಹಾಗೂ ಶಾಲಾ ಪಠ್ಯಪುಸ್ತಕಗಳನ್ನು ಬರೆದುಕೊಟ್ಟರು. ಬ್ರಿಟನ್ನಿನಿಂದ ಬಂದ ಎಡ್ವರ್ಡ್ ಪಿ. ರೈಸ್ ಬೆಂಗಳೂರು ಮತ್ತು ಚಿಕ್ಕಬಳ್ಳಾಪುರದ ಮಿಷನರಿಗಳಲ್ಲಿ ಕ್ರೈಸ್ತ ಧರ್ಮಪ್ರಚಾರಕರಾಗಿದ್ದರು. 1921ರಲ್ಲಿ 'ಎ ಹಿಸ್ಟರಿ ಆಫ್ ಕೆನರೀಸ್ ಲಿಟ್ರೇಚರ್' ಎಂಬ ಕೃತಿ ರಚಿಸಿದರು. ಇದು ಡಿಜಿಟಲೀಕರಣಗೊಂಡಿದ್ದು, ಉಪಯುಕ್ತ ಪರಾಮರ್ಶನ ಗ್ರಂಥವಾಗಿದೆ.

ವಾಚಕರ ವಾಣಿ

ಸರ್ಕಾರಿ ಶಾಲೆ: ಆದ್ಯತೆಯ ಕೆಲಸ ಬೇರೆ ಇದೆ

ಮಕ್ಕಳನ್ನು ವಿಮಾನದ ಮೂಲಕ ಶೈಕ್ಷಣಿಕ ಪ್ರವಾಸಕ್ಕೆ ಕರೆದೊಯ್ಯುವ ವಿದ್ಯಮಾನ ರಾಜ್ಯದ ಒಂದೆರಡು ಸರ್ಕಾರಿ ಶಾಲೆಗಳಲ್ಲಿ ಇತ್ತೀಚೆಗೆ ನಡೆದಿದೆ. ಹೆಚ್ಚಿನ ಸರ್ಕಾರಿ ಶಾಲೆಗಳು ಕಟ್ಟಡ, ಶೌಚಾಲಯ, ನೀರಿನ ಸೌಲಭ್ಯ, ಪಾಠೋಪಕರಣ, ಪೀಠೋಪಕರಣ, ಕ್ರೀಡಾ ಸಾಮಗ್ರಿ, ಕಂಪ್ಯೂಟರ್, ಸಭಾಭವನದಂತಹ ಸೌಲಭ್ಯಗಳನ್ನು ಹೊಂದಿರುವುದಿಲ್ಲ. ಅಲ್ಲಿ 'ಇಲ್ಲ'ಗಳ ಒಂದು ದೊಡ್ಡ ಪಟ್ಟಿಯೇ ಇರುತ್ತದೆ. ಎಲ್ಲದಕ್ಕೂ ಸರ್ಕಾರವನ್ನೇ ಅವಲಂಬಿಸದೆ, ದಾನಿಗಳಿಂದ ದೇಣಿಗೆ ಸಂಗ್ರಹಿಸಿ ಇಂತಹ ಕೊರತೆಗಳನ್ನು ಪೂರೈಸಿಕೊಳ್ಳುವುದರ ಕಡೆ ಹೆಚ್ಚು ಗಮನ ನೀಡುವುದು ಸೂಕ್ತವೆನಿಸುತ್ತದೆ. ಹಾಗೆಯೇ ಒಬ್ಬ ನುರಿತ ಇಂಗ್ಲಿಷ್ ಶಿಕ್ಷಕನನ್ನು ಖಾಸಗಿಯಾಗಿ ನೇಮಿಸಿಕೊಂಡು ಮಕ್ಕಳಿಗೆ ಉತ್ತಮ ಇಂಗ್ಲಿಷ್ ಕಲಿಸಿದರೆ, ಜೊತೆಗೆ ಒಬ್ಬ ಕಂಪ್ಯೂಟರ್ ಆಪರೇಟರನ್ನು ಖಾಸಗಿಯಾಗಿ ನೇಮಕ ಮಾಡಿಕೊಂಡು ಕಂಪ್ಯೂಟರ್ ತರಬೇತಿ ನೀಡಿದರೆ, ಈ ಮಕ್ಕಳೂ ಖಾಸಗಿ ಶಾಲೆಯ ಮಕ್ಕಳಿಗೆ ಸರಿಸಮನಾಗಿ ನಿಲ್ಲುತ್ತಾರೆ. ಶಿಕ್ಷಕರು ಈ ದಿಸೆಯಲ್ಲಿ ಕಾರ್ಯೋನ್ಮುಖರಾಗಬೇಕಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಲಕ್ಷ್ಮಿ... ಕಟಾಕ್ಷ!

ಮಹಾರಾಷ್ಟ್ರದಲ್ಲಿ ಬಿಜೆಪಿ
ಗೃಹಲಕ್ಷ್ಮಿ ನಕಲು ಮಾಡಿ
ಗೆಲುವು ಪಡೆಯಿತು ಎಂಬುದು
ಕಾಂಗ್ರೆಸ್‌ನ ಅಭಿಮತ,
ಕರ್ನಾಟಕದಲ್ಲಿ ಕಾಂಗ್ರೆಸ್ ಮೂರಕ್ಕೆ
ಮೂರೂ ಗೆದ್ದಿರುವುದಕ್ಕೆ
ಬಿಜೆಪಿ ನೀಡುವ ಕಾರಣ
ಎಲ್ಲಾ ಆ ಲಕ್ಷ್ಮಿ ಕಟಾಕ್ಷ!

ಮ.ಗು.ಬಸವಣ್ಣ, ಮೈಸೂರು

ಚಿಂತನೆಗೆ ಹಚ್ಚಿದ 'ಹೊಸ ಶಿಕ್ಷಣ'

'ಗಾಂಧೀಜಿ ಮತ್ತು ಸುಸಂಗತ ಶಿಕ್ಷಣ' ಎಂಬ ನಿರಂಜನಾರಾಧ್ಯ ಅವರ ಲೇಖನವು (ಪ್ರ.ವಾ., ನ. 25) ಪ್ರಸ್ತುತ ಸಂದರ್ಭಕ್ಕೆ ಹೆಚ್ಚು ಸಕಾಲಿಕ ಹಾಗೂ ಔಚಿತ್ಯಪೂರ್ಣ. ಇಂದು ನೀಡುತ್ತಿರುವ ಶಿಕ್ಷಣದಲ್ಲಿ ಸ್ವಂತಿಕೆಯೂ ಇಲ್ಲ, ಸಹಜತೆಯೂ ಇಲ್ಲ ಎಂಬ ಗಾಂಧೀಜಿಯ ತಾತ್ವಿಕ ಚಿಂತನೆಯ ವಿಶ್ಲೇಷಣೆಯು ಓದುಗರ ಮನಮುಟ್ಟುವಂತಿದೆ. ಗಾಂಧೀಜಿಯು ಹೃದಯಶಿಕ್ಷಣ ಅಥವಾ ಚಾರಿತ್ರ್ಯದ ವಿಕಾಸಕ್ಕೆ ಆದ್ಯತೆ ಕೊಟ್ಟಿದ್ದರು. ಪುಸ್ತಕಜ್ಞಾನದ ಶಿಕ್ಷಣದ ಜೊತೆಜೊತೆಗೆ ಶಾರೀರಿಕ ಶಿಕ್ಷಣ ಹಾಗೂ ಔದ್ಯೋಗಿಕ ಶಿಕ್ಷಣಕ್ಕೂ ಹೆಚ್ಚು ಒತ್ತು ನೀಡಿದ್ದರು. ಕಲಿಯುವ ಹಂತದಲ್ಲಿಯೇ ಪ್ರತಿ ವಿದ್ಯಾರ್ಥಿಯೂ ಯಾವುದಾದರೂ ಉಪಯುಕ್ತವಾದ ಒಂದು ದೈಹಿಕ ಶ್ರಮದ ಕಸುಬನ್ನು ಕಲಿಯಬೇಕೆಂಬುದು ಅವರ ಉದ್ದೇಶವಾಗಿತ್ತು. ಶಿಕ್ಷಣವು ಆತ್ಮಗೌರವದಿಂದ, ಸ್ವಾವಲಂಬನೆಯಿಂದ ಬದುಕುವುದನ್ನು ಕಲಿಸಬೇಕು. ಯುವಜನ ಶಿಕ್ಷಣ ಮುಗಿಸಿದ ನಂತರ ಉದ್ಯೋಗಕ್ಕಾಗಿ ಅಲೆಯದೆ, ಸ್ವಯಂ ಉದ್ಯೋಗಗಳನ್ನು ಸೃಷ್ಟಿಸಿಕೊಂಡು ಸ್ವಾವಲಂಬನೆಯ ಬದುಕು ನಡೆಸಲು ಶಿಕ್ಷಣ ಸಹಾಯಕವಾಗಬೇಕು. ಈ ದಿಸೆಯಲ್ಲಿ ಲೇಖನದಲ್ಲಿ ಪ್ರಸ್ತಾಪಿಸಿರುವ ಗಾಂಧೀಜಿಯ 'ಹೊಸ ಶಿಕ್ಷಣ'ದ ವಿಚಾರಗಳು ಚಿಂತನೆಗೆ ಹಚ್ಚುತ್ತವೆ.

ಲೋಕೇಶ ಬೆಕ್ಕಳಲೆ, ಬಸರಾಳು, ಮಂಡ್ಯ

ಆತಂಕ ನೀಗಲು ಅಭಿವೃದ್ಧಿ ಮಂತ್ರ

ಡೊನಾಲ್ಡ್ ಟ್ರಂಪ್ ಅವರು ಎರಡನೆಯ ಬಾರಿಗೆ ಅಮೆರಿಕದ ಅಧ್ಯಕ್ಷರಾದ ಬಳಿಕ ಭಾರತದ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳಿಗೆ ಅನುಕೂಲವಾಗುವುದೋ ಇಲ್ಲವೋ, ನಮ್ಮ ಯುವಜನರ ಎಚ್1ಬಿ ವೀಸಾಗೆ ಸಂಬಂಧಿಸಿದಂತೆ ಅವರು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡುಬಿಡಬಹುದು ಎಂಬಂತಹ ಆತಂಕಗಳು ಸೃಷ್ಟಿಯಾಗಿರಬಹುದು. ನಾವು ಹೇಗೆ ಆತ್ಮನಿರ್ಭರ, ಮೇಕ್ ಇನ್ ಇಂಡಿಯಾ ಎಂದೆಲ್ಲ ನಮ್ಮ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುತ್ತೇವೆಯೋ ಪ್ರತಿ ದೇಶವೂ ತನ್ನ ಸಂಸ್ಥೆಗಳ, ನಾಗರಿಕರ ಪರವಾಗಿ ಇರುವುದು ಸಹಜವಲ್ಲವೇ?

ಆದರೆ ಅದರಿಂದ ನಮಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಉಪಾಯವೆಂದರೆ, ನಮ್ಮಲ್ಲಿ ಶುದ್ಧ ನೀರು, ಗಾಳಿ, ಸಮತಟ್ಟಾದ ರಸ್ತೆ, ಹಸಿರು ಕವಚ, ಸುಸಜ್ಜಿತ ಆಸ್ಪತ್ರೆಯಂತಹ ಮೂಲ ಸೌಕರ್ಯಗಳನ್ನು ಇನ್ನಷ್ಟು ಅಭಿವೃದ್ಧಿಗೊಳಿಸುವುದು, ದೇಶಿ ತಾಂತ್ರಿಕ ನೈಪುಣ್ಯಗಳನ್ನು ಉತ್ತಮಗೊಳಿಸಲು ಸಂಶೋಧನೆಗಳಲ್ಲಿ ತೊಡಗುವುದು, ನಮ್ಮ ಎಲ್ಲ ಸಾರ್ವಜನಿಕ ವ್ಯವಸ್ಥೆಗಳನ್ನು ಸುಧಾರಿಸುವುದು, ಉದ್ಯೋಗ ಅವಕಾಶಗಳನ್ನು ಹೆಚ್ಚಿಸುವುದು ಅವಶ್ಯ. ನಮ್ಮಲ್ಲಿ ಮಾನವ ಸಂಪನ್ಮೂಲಕ್ಕೆ, ಪ್ರತಿಭೆಗಳಿಗೆ ಯಾವುದೇ ಕೊರತೆ ಇರದ ಕಾರಣ, ಹೊಸ ಹೊಸ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಯಾವುದೇ ತೊಡಕು ಉಂಟಾಗದು. ಆಗ ನಮ್ಮ ದೇಶವು ಅಭಿವೃದ್ಧಿ ಪಥದಲ್ಲಿ ಇನ್ನಷ್ಟು ಮುಂದೆ ಸಾಗೀತು. ಪ್ರತಿಭಾ ಪಲಾಯನದಂತಹ ಬೆಳವಣಿಗೆ ತಗ್ಗೀತು.

ಬಿ.ಎನ್.ಭರತ್, ಬೆಂಗಳೂರು

ಸದನದ ಸಮಯ ವ್ಯರ್ಥವಾಗದಿರಲಿ

ಸಂಸತ್ತಿನ ಚಳಿಗಾಲದ ಅಧಿವೇಶನ ಸೋಮವಾರದಿಂದ ಆರಂಭವಾಗಿದೆ. ಈ ಅಧಿವೇಶನದಲ್ಲಿ ಹಲವಾರು ವಿಚಾರಗಳು ಚರ್ಚೆಯಾಗಿ ಹದಿನೈದಕ್ಕೂ ಹೆಚ್ಚು ಮಸೂದೆಗಳು ಮಂಡನೆಯಾಗುವ ಸಾಧ್ಯತೆ ಇದೆ ಎಂದು ವರದಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಸಂಸತ್ತಿನ ಅಧಿವೇಶನ ಎಂದರೆ ಆಡಳಿತ ಹಾಗೂ ಪ್ರತಿಪಕ್ಷಗಳ ನಡುವಿನ ಜಟಾಪಟಿ, ಜಂಗಿಕುಸ್ತಿಗೆ ವೇದಿಕೆ ಎಂದೇ ಬಿಂಬಿತವಾಗುತ್ತಿದೆ. ಬರೀ ಸದ್ದುಗದ್ದಲ, ಪ್ರತಿಪಕ್ಷಗಳ ಸಭಾತ್ಯಾಗಗಳಿಗಷ್ಟೇ ಸದನದ ಸಮಯ ವ್ಯರ್ಥವಾಗದಿರಲಿ.

ಈ ಬಾರಿಯ ಅಧಿವೇಶನವು ಹಲವು ರೀತಿಯಲ್ಲಿ ಮಹತ್ವದ್ದು. ಜಂಟಿ ಸದನ ಸಮಿತಿಯ ಪರಾಮರ್ಶೆಗೆ ಒಳಗಾಗಿರುವ ವಕ್ಫ್ ಮಸೂದೆಯ ಸಾಧಕ– ಬಾಧಕಗಳ ಬಗ್ಗೆ ಚರ್ಚೆ ನಡೆಸಿ, ಅದಕ್ಕೊಂದು ಮುಕ್ತಿ ಕಾಣಿಸಬೇಕಿದೆ. ಉದ್ಯಮಿ ಗೌತಮ್ ಅದಾನಿ ವಿರುದ್ಧದ ಆರೋಪ, ಮಣಿಪುರ ಜನಾಂಗೀಯ ಸಂಘರ್ಷ, ದೆಹಲಿಯ ವಿಷಗಾಳಿ ಬಿಕ್ಕಟ್ಟು ಸೇರಿದಂತೆ ಹಲವು ವಿಷಯಗಳು ಅಧಿವೇಶನದಲ್ಲಿ ಪ್ರಮುಖವಾಗಿ ಚರ್ಚೆಗೆ ಒಳಪಡುವ ಸಾಧ್ಯತೆ ಇದೆ. ಈ ದಿಸೆಯಲ್ಲಿ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡ ಹತ್ತಾರು ವಿಷಯಗಳ ವಿಸ್ತೃತವಾದ ಚರ್ಚೆಗೆ ಸದನದಲ್ಲಿ ಸಮಯ ಮತ್ತು ಅವಕಾಶ ದೊರೆತರೆ ಒಳ್ಳೆಯದು. ಆಡಳಿತ ಮತ್ತು ವಿರೋಧಿ ಪಾಳಯದ ಎರಡೂ ಕಡೆಯ ಸದಸ್ಯರು ಪರಸ್ಪರ ಆರೋಪ, ಪ್ರತ್ಯಾರೋಪ, ಏರುದನಿ, ನಿಂದನೆಯ ಮಾತುಗಳಿಗೆ ಸೀಮಿತರಾಗದೇ ದಾಖಲೆಗಳನ್ನು ಆಧರಿಸಿ ತಮ್ಮ ವಾದ ಮಂಡಿಸಲಿ. ಸರ್ಕಾರ ಕೂಡ ಸೂಕ್ತ ದಾಖಲೆಗಳೊಂದಿಗೆ ಉತ್ತರಿಸಿದರೆ ಸದನದ ಸಮಯ ಸದ್ವಿನಿಯೋಗವಾದಂತೆಯೇ ಸರಿ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಸಂವಿಧಾನ ರಚನೆ ಪ್ರಮುಖ ಘಟ್ಟಗಳು

- **ಡಿಸೆಂಬರ್ 6, 1946:** ಸಂವಿಧಾನ ರಚನಾ ಸಭೆಯ ರಚನೆ
- **ಡಿಸೆಂಬರ್ 9, 1946:** ಸಂವಿಧಾನ ರಚನಾ ಸಭೆಯ ಮೊದಲ ಅಧಿವೇಶನ
- **ಡಿಸೆಂಬರ್ 11, 1946:** ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿ ರಾಜೇಂದ್ರ ಪ್ರಸಾದ್ ನೇಮಕ. ನಂತರದಲ್ಲಿ ಉಪಾಧ್ಯಕ್ಷರಾಗಿ ಎಚ್.ಸಿ.ಮುಖರ್ಜಿ, ವಿ.ಟಿ.ಕೃಷ್ಣಮಾಚಾರಿ, ಸಂವಿಧಾನಾತ್ಮಕ ಸಲಹೆಗಾರರಾಗಿ ಬಿ.ಎನ್.ರಾವ್ ನೇಮಕ
- **ಡಿಸೆಂಬರ್ 13, 1946:** ಜವಾಹರಲಾಲ್ ನೆಹರೂ ಅವರಿಂದ ಸಂವಿಧಾನದ ಧ್ಯೇಯಗಳ ನಿರ್ಣಯ ಮಂಡನೆ; ಮುಂದೆ ಅದು ಸಂವಿಧಾನದ ಪೀಠಿಕೆ ಆಯಿತು.
- **ಜನವರಿ 22, 1947:** ಸಂವಿಧಾನ ರಚನಾ ಸಭೆಯಿಂದ ಧ್ಯೇಯಗಳ ನಿರ್ಣಯ ಅಂಗೀಕಾರ
- **ಜುಲೈ 22, 1947:** ಭಾರತದ ರಾಷ್ಟ್ರೀಯ ಧ್ವಜ ಅಂಗೀಕಾರ
- **ಆಗಸ್ಟ್ 29, 1947:** ಡಾ.ಬಿ.ಆರ್.ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಸಂವಿಧಾನ ಕರಡು ರಚನಾ ಸಮಿತಿ ರಚನೆ
- **ನವೆಂಬರ್ 4, 1948:** ಡಾ.ಬಿ.ಆರ್.ಅಂಬೇಡ್ಕರ್ ಅವರಿಂದ ಸಂವಿಧಾನ ರಚನಾ ಸಭೆಯಲ್ಲಿ ಅಂತಿಮ ಕರಡು ಮಂಡನೆ
- **ನವೆಂಬರ್ 26, 1949:** ಸಂವಿಧಾನದ ಕರಡಿಗೆ ಅಂಗೀಕಾರ; ಸಂವಿಧಾನ ದಿನ ಎಂದು ಹೆಸರು
- **ಜನವರಿ 24, 1950:** ಸಂವಿಧಾನ ರಚನಾ ಸಭೆಯ ಕೊನೆಯ ಅಧಿವೇಶನ; 'ಭಾರತದ ಸಂವಿಧಾನ'ಕ್ಕೆ ಸಂವಿಧಾನ ರಚನಾ ಸಭೆಯ ಸದಸ್ಯರು ಮತ್ತು ಅಧ್ಯಕ್ಷರ ಸಹಿ
- **ಜನವರಿ 26, 1950:** ಸಂವಿಧಾನ ಜಾರಿ

75ರ ಸಂವಿಧಾನ ಅನುಸಂಧಾನ

ಡಾ.ಬಿ.ಆರ್.ಅಂಬೇಡ್ಕರ್ ಅವರ ನೇತೃತ್ವದಲ್ಲಿ ನಡೆದ ಸಂವಿಧಾನ ಕರಡು ರಚನಾ ಸಭೆಯ ಸಂಗ್ರಹ ಚಿತ್ರ

ಅಧಿಕಾರಸ್ಥರ ಶೋಷಣೆ, ಪ್ರಭುತ್ವದ ನಿರಂಕುಶ ಆಡಳಿತ ಮತ್ತು ದಬ್ಬಾಳಿಕೆ ತಡೆಯಲು ದೇಶಕ್ಕೆ ಸಂವಿಧಾನ ಅಗತ್ಯ ಎಂದು ಡಾ. ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯಲ್ಲಿ ಹೇಳಿದ್ದರು. ಇಂದಿನ ರಾಜಕೀಯ–ಸಾಮಾಜಿಕ ಸಂದರ್ಭದಲ್ಲಿ ಅಂಬೇಡ್ಕರ್ ಅವರ ಮಾತುಗಳಿಗೆ ಮತ್ತು ಅವರು ರೂಪಿಸಿದ ಸಂವಿಧಾನಕ್ಕೆ ಹೆಚ್ಚು ಮಹತ್ವ ಬಂದೊದಗಿದೆ. 'ಸಂವಿಧಾನ ದಿನ'ದ (ನವೆಂಬರ್ 26) ಅಂಗವಾಗಿ ಈ ಕುರಿತು ಚಿಂತಿಸುವ ವಿಶೇಷ ಲೇಖನ...

• ಮ್ಯಾಥ್ಯೂ ಇಡಿಕ್ಕುಳ

ಭಾರತವು 1949ರ ನವೆಂಬರ್ 26ರಂದು ಸಂವಿಧಾನವನ್ನು ವಿಧ್ಯುಕ್ತವಾಗಿ ಅಳವಡಿಸಿಕೊಂಡಿದ್ದೇ ಒಂದು ದಿಟ್ಟ ಪಯಣದ ಆರಂಭ. ಭಾರತದಲ್ಲಿ ಆಗ ಬಡತನ ವ್ಯಾಪಕವಾಗಿತ್ತು. ಅನಕ್ಷರಸ್ಥರೇ ಬಹುಸಂಖ್ಯೆಯಲ್ಲಿದ್ದರು. ಮೇಲಾಗಿ ಭಾರತವು ವಿವಿಧ ನಂಬಿಕೆಗಳ, ಭಾಷೆಗಳ ನೆಲವೀಡಾಗಿತ್ತು. ಯಾವ ದೃಷ್ಟಿಯಿಂದ ನೋಡಿದರೂ ಸಾಂವಿಧಾನಿಕ ಪ್ರಜಾಪ್ರಭುತ್ವ ಸ್ಥಾಪನೆಗೆ ನೆಲ ಹದಗೊಂಡಿರಲಿಲ್ಲ. ಹಾಗಾಗಿ, ಇದು ಜಗತ್ತಿನಲ್ಲೇ ಆ ಹಿಂದೆ ಕಂಡುಕೇಳರಿಯದಂತಹ ಪ್ರಯೋಗವಾಗಿತ್ತು.

ಸಾಂವಿಧಾನಿಕ ಪ್ರಜಾಪ್ರಭುತ್ವವಾಗುವ ಭಾರತದ ಪ್ರಯತ್ನವು ವಿಫಲವಾಗಲಿದೆ ಎಂಬುದು ಹಲವರ ಊಹೆಯಾಗಿತ್ತು. ಅಷ್ಟಕ್ಕೂ ಜಗತ್ತಿನ ವಿವಿಧ ದೇಶಗಳಲ್ಲಿನ ಲಿಖಿತ ಸಂವಿಧಾನದ ಸರಾಸರಿ ಬಾಳಿಕೆ ಅವಧಿಯು ಬರೀ 18 ವರ್ಷಗಳು. ಈ ಹಿನ್ನೆಲೆಯಲ್ಲಿ, ಭಾರತದ ಸಂವಿಧಾನವು 75 ವರ್ಷಗಳನ್ನು ತಲುಪಿರುವುದೇ ಒಂದು ದೊಡ್ಡ ಸಾಧನೆ. ಈ ಕಾರಣಕ್ಕಾಗಿ, ಭಾರತದ ಸಂವಿಧಾನದ ಕ್ಷಮತೆಯನ್ನು ಸಂಭ್ರಮಿಸುತ್ತಿರುವ ಸಂದರ್ಭದಲ್ಲೇ, ಸಾಂವಿಧಾನಿಕ ಪ್ರಜಾಪ್ರಭುತ್ವವಾಗಿ ಇರುವುದರ ನಿಜವಾದ ಅರ್ಥವೇನು ಎಂಬುದನ್ನು ಅವಲೋಕಿಸುವ ಅಗತ್ಯವಿದೆ.

ಇತ್ತೀಚಿನ ದಿನಗಳಲ್ಲಿ ಭಾರತದ ರಾಜಕಾರಣದಲ್ಲಿ ಸಂವಿಧಾನದ ಪ್ರಸ್ತಾಪವು ಹೆಚ್ಚೆಚ್ಚು ಕೇಳಿಬರುತ್ತಿದೆ. ವಿವಿಧ ರಾಜಕೀಯ ಪಕ್ಷಗಳು, ಅದರಲ್ಲೂ ಪ್ರತಿಪಕ್ಷಗಳು 2024ರ ಚುನಾವಣೆ ವೇಳೆ ಸಂವಿಧಾನವನ್ನು ಪರಮಪವಿತ್ರವೆಂದು ಆರಾಧಿಸಿ, ಚುನಾವಣೆಯು 'ಸಂವಿಧಾನ ರಕ್ಷಣೆ'ಗಾಗಿನ ಸಮರವಾಗಿದೆ ಎಂದು ಪ್ರಚಾರ ಮಾಡಿದ್ದವು. ಜೇಬಲ್ಲಿ ಇರಿಸಿಕೊಳ್ಳಬಹುದಾದ ಪುಟಾಣಿ ಗಾತ್ರದ ಸಂವಿಧಾನದ ಪ್ರತಿಯನ್ನು ರಾಹುಲ್ ಗಾಂಧಿ ಅವರು ಹೋದೆಡೆಗಳಲ್ಲಿ ಪ್ರದರ್ಶಿಸುವುದಿರಬಹುದು ಅಥವಾ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಮಾಣವಚನ ಸ್ವೀಕರಿಸುವ ಮುನ್ನ ಸಂಸತ್ತಿನಲ್ಲಿ ಅದಕ್ಕೆ ಶಿರಬಾಗಿ ನಮಸ್ಕರಿಸಿದ್ದಿರಬಹುದು, ಸಂವಿಧಾನದ ಸಾಂಕೇತಿಕ ಬಳಕೆಯು ಎಲ್ಲ ರಾಜಕೀಯ ಪಕ್ಷಗಳಲ್ಲೂ ಕಂಡುಬರುತ್ತಿದೆ; ಇಂತಹ ಸಾಂಕೇತಿಕ ನಡೆಗಳು ರಾಜಕೀಯ ಸ್ವಾರ್ಥದ ಉದ್ದೇಶ ಹೊಂದಿದ ಪ್ರದರ್ಶನಗಳಾಗಿ ಇರಬಹುದಾದರೂ ರಾಜಕೀಯ ಪಕ್ಷಗಳು ಸಂವಿಧಾನದ ಬಗ್ಗೆ ಈ ಮಟ್ಟಿಗಿನ ಆಸ್ಥೆ ತೋರುತ್ತಿರುವುದು ಒಂದು ಹೊಸ ಬೆಳವಣಿಗೆ.

ಈ ಬೆಳವಣಿಗೆಗಳು ಸ್ವಾಗತಾರ್ಹವೇ. ಆದರೆ ಇವುಗಳಾಚೆಗೆ ಸಂವಿಧಾನದ ನಿಜ ಪರಿಕಲ್ಪನೆಯನ್ನು ಇಂದಿನ ಸಾಮಾಜಿಕ–ರಾಜಕೀಯ ಸಂದರ್ಭದಲ್ಲಿ ಅರ್ಥಮಾಡಿಕೊಳ್ಳುವುದು ಮುಖ್ಯವಾಗುತ್ತದೆ. ಅಂದರೆ, ಸಂವಿಧಾನದಲ್ಲಿ ಅಂತರ್ಗತವಾಗಿರುವ ಮೌಲ್ಯಗಳನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ. ಸಂವಿಧಾನದ ಪ್ರಸ್ತಾವನೆಯಲ್ಲಿ ಅಡಕವಾಗಿರುವ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವ ಇವೇ ಆ ಮೌಲ್ಯಗಳಾಗಿವೆ. ಈ ಮೌಲ್ಯಗಳ ಬಗ್ಗೆ ಯಾರಿಗೂ ತಕರಾರು ಇರಲು ಸಾಧ್ಯವಿಲ್ಲ. ಆದರೆ, ಅವುಗಳ ವ್ಯಾಖ್ಯಾನ ಹಾಗೂ ಅನುಸರಣೆಗೆ ಸಂಬಂಧಿಸಿದಂತೆ ವಾದ–ವಿವಾದ, ಭಿನ್ನಾಭಿಪ್ರಾಯಗಳು ಕಾಣಿಸಿಕೊಳ್ಳುತ್ತಲೇ ಇವೆ. ಮುಖ್ಯವಾಗಿ ಭಾರತವು ಇಂತಹ ಮೌಲ್ಯಗಳುಳ್ಳ ಸಂವಿಧಾನವನ್ನು ಅಳವಡಿಸಿಕೊಳ್ಳುವ ಅಗತ್ಯವೇನಿತ್ತು ಎಂಬುದನ್ನು ಮೊದಲಿಗೆ ಅರ್ಥ ಮಾಡಿಕೊಳ್ಳಬೇಕು.

ಬಿ.ಆರ್.ಅಂಬೇಡ್ಕರ್ ಅವರು 1949ರ ಸೆ. 17ರಂದು ಸಂವಿಧಾನ ರಚನಾ ಸಭೆಯಲ್ಲಿ ಮಾತನಾಡಿ, 'ಪ್ರಭುತ್ವದ ಅಂಗಗಳನ್ನು ಸೃಷ್ಟಿಸುವುದಷ್ಟೇ ಸಂವಿಧಾನದ ಉದ್ದೇಶವಲ್ಲ. ಬದಲಿಗೆ, ಸಂವಿಧಾನ ನಮಗೆ ಬೇಕಾಗಿರುವುದು ಅಧಿಕಾರಸ್ಥರು ತಮ್ಮ ವ್ಯಾಪ್ತಿಯನ್ನು ಮೀರಿ ಶೋಷಣೆ ಮತ್ತು ದಬ್ಬಾಳಿಕೆಯಲ್ಲಿ ತೊಡಗುವುದನ್ನು ತಡೆಯುವುದಕ್ಕಾಗಿ. ಪ್ರಭುತ್ವದ ಅಧಿಕಾರಕ್ಕೆ ಪರಿಮಿತಿ ನಿಗದಿಗೊಳಿಸದಿದ್ದರೆ ಸಂಪೂರ್ಣ ನಿರಂಕುಶ ಆಡಳಿತ ಮತ್ತು ದಬ್ಬಾಳಿಕೆ ಉಂಟಾಗುತ್ತದೆ' ಎಂದಿದ್ದರು. ಇದು, ಸಾಂವಿಧಾನಿಕತೆ (Constitutionalism) ಎಂಬ ಪರಿಕಲ್ಪನೆ.

ಸಾಂವಿಧಾನಿಕತೆ ಎಂಬುದು, ಅದರ ಶಾಸ್ತ್ರೀಯ ದೃಷ್ಟಿಕೋನದಲ್ಲಿ, ಅಧಿಕಾರಗಳನ್ನು ಚಲಾಯಿಸುವುದಕ್ಕೆ ಸಂಬಂಧಿಸಿದಂತೆ ಪ್ರಭುತ್ವಕ್ಕೆ ಕಾನೂನಾತ್ಮಕವಾಗಿ ಕಡಿವಾಣ ಹಾಕಬೇಕು ಎಂಬ ತತ್ವವನ್ನು ಉಲ್ಲೇಖಿಸುತ್ತದೆ. ಜೊತೆಗೆ, ಪ್ರಭುತ್ವವು ಈ ಪರಿಮಿತಿಗಳನ್ನು ಗೌರವಿಸುವುದರಿಂದ ಪ್ರಜೆಗಳಿಂದ ಸ್ವೀಕಾರಾರ್ಹತೆಯನ್ನು ಪಡೆದುಕೊಳ್ಳುತ್ತದೆ. ಹಾಗಾಗಿ, ಸಂವಿಧಾನ ಬೇಕಾಗಿರುವುದು ಜನರನ್ನು ಅಧಿಕಾರಸ್ಥರ ಬೇಕಾಬಿಟ್ಟಿ ಪ್ರವೃತ್ತಿಗಳಿಂದ ರಕ್ಷಿಸುವ ಸಲುವಾಗಿ ಹಾಗೂ ಚುನಾಯಿತ ಸರ್ಕಾರಗಳನ್ನು ಕಾನೂನಿನ ಪರಿಮಿತಿಯಲ್ಲಿ ಇರಿಸಿಕೊಳ್ಳುವುದಕ್ಕಾಗಿ. ಸಂವಿಧಾನವು ಜನರಿಗೆ ನೀಡಿರುವ ಮೂಲಭೂತ ಹಕ್ಕುಗಳನ್ನು ಈ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಿದೆ. ಮೂಲಭೂತ ಹಕ್ಕುಗಳೆಂದರೆ ಜನರಿಗೆ ಪ್ರಭುತ್ವದ ದಾಳಿಯಿಂದ ರಕ್ಷಿಸಿಕೊಳ್ಳಲು ಇರುವ ಅಸ್ತ್ರಗಳು.ಪ್ರಭುತ್ವದ ಅಧಿಕಾರವನ್ನು ಈ ರೀತಿ ಪ್ರತಿಬಂಧಿಸುವುದು ಅಷ್ಟೇ ಸಂವಿಧಾನದ ಉದ್ದೇಶವಲ್ಲ. ಇದರಾಚೆಗೆ ಸಂವಿಧಾನಕ್ಕೆ ಒಂದು 'ಸಕಾರಾತ್ಮಕ' ಉದ್ದೇಶವೂ ಇದೆ. ಭಾರತದಂತಹ ಅಭಿವೃದ್ಧಿಶೀಲ ದೇಶದಲ್ಲಿ ಸಾಮಾಜಿಕ ಪರಿವರ್ತನೆಯು ಕಾನೂನಿನ ಮೂಲಕವೇ ಆಗಬೇಕಿರುವುದರಿಂದ ಸಂವಿಧಾನವು ಅಂತಹದ್ದೊಂದು ಸಾಧನವಾಗಿಯೂ ಪರಿಣಮಿಸಿದೆ. ಭಾರತೀಯ ಸಮಾಜವು ಇಂದು ಸಾಧಿಸಿದಷ್ಟಾದರೂ ಸಮಾನತೆಯನ್ನು ಈ ಸಂವಿಧಾನ ಇಲ್ಲದೇ ಹೋಗಿದ್ದರೆ ನಾವು ಊಹಿಸಿಕೊಳ್ಳಲು ಕೂಡ ಸಾಧ್ಯವಾಗುತ್ತಿರಲಿಲ್ಲ.

ಮೂರನೆಯದಾಗಿ, ಸಂವಿಧಾನವು ಒಂದು ಒಡಂಬಡಿಕೆ. ಈ ಒಡಂಬಡಿಕೆಯಿಂದಾಗಿಯೇ ಭಾರತದ ವಿವಿಧ ಸಮುದಾಯಗಳು, ವಿವಿಧ ಧರ್ಮಗಳು, ವಿವಿಧ ಭಾಷೆಗಳನ್ನು ಆಡುವ ಜನರು, ವಿವಿಧ ಜನಾಂಗಗಳು, ಜಾತಿಗಳು ಪರಸ್ಪರ ಭೇದವನ್ನು ಮರೆತು ಭಾರತೀಯರಾಗಿ 75 ವರ್ಷಗಳ ಕಾಲ ತಮ್ಮನ್ನು ತಾವು ಗುರುತಿಸಿಕೊಳ್ಳಲು ಸಾಧ್ಯವಾಗಿದ್ದು ಮತ್ತು ಭಾರತದ ಪ್ರಭುತ್ವದೊಂದಿಗೆ ಒಂದು ಅವಿನಾಭಾವ ಸಂಬಂಧವನ್ನು ಉಳಿಸಿಕೊಂಡಿದ್ದು. ಸಂವಿಧಾನ ಎತ್ತಿ ಹಿಡಿಯುವ ಒಕ್ಕೂಟ ತತ್ವ ಕೂಡ ಈ ಒಡಂಬಡಿಕೆಯ ಮಹತ್ವದ ಅಂಶ. ಈ ತತ್ವದ ಮೂಲಕವೇ ವಿವಿಧ ರಾಜ್ಯಗಳನ್ನು ಬೆಸೆದು ಸಂವಿಧಾನವು ಭಾರತ ಎಂಬ ದೇಶವನ್ನು ರೂಪಿಸಿದ್ದು.

ರಾಜಕೀಯ ನಾಯಕರು ಇಂದು ಸಂವಿಧಾನದ ಬಗ್ಗೆ ಉದಾತ್ತ ಮಾತುಗಳನ್ನು ಆಡುವಾಗ ಜನ ಅವುಗಳನ್ನು ಕೇಳಿ ಬೆರಗಾಗುವುದರ ಬದಲು, ಸಂವಿಧಾನವು ಮೇಲಿನ ಮೂರು ಉದ್ದೇಶಗಳನ್ನು ಈಡೇರಿಸುವಲ್ಲಿ ಇಂದಿನ ಸಂದರ್ಭದಲ್ಲಿ ಎಷ್ಟರಮಟ್ಟಿಗೆ ಸಫಲವಾಗುತ್ತಿದೆ ಎಂಬುದರ ಬಗ್ಗೆ ಯೋಚಿಸಬೇಕಿದೆ. ಸಂವಿಧಾನದ ಮೂರು ಮೂಲ ಉದ್ದೇಶಗಳು ಅಂದರೆ ಪ್ರಭುತ್ವದ ಅಧಿಕಾರದ ಮೇಲೆ ನಿಯಂತ್ರಣ ಸಾಧಿಸುವುದು, ಸಾಮಾಜಿಕ ಪರಿವರ್ತನೆಯನ್ನು ಆಗುಮಾಡುವುದು ಮತ್ತು ವಿವಿಧ ಸಮುದಾಯಗಳ ನಡುವೆ ಸಾಮರಸ್ಯವನ್ನು ಕಾಯ್ದುಕೊಳ್ಳುವುದು – ಇವು ಇಂದು ಸವಾಲುಗಳನ್ನು ಎದುರಿಸುತ್ತಿವೆ. ಸಾಂವಿಧಾನಿಕ ಪ್ರಜಾತಂತ್ರದ ಎಲ್ಲ ಸಾಂಸ್ಥಿಕ ಪರಿಕರಗಳು ದುರ್ಬಲಗೊಳ್ಳುತ್ತಿವೆ. ನ್ಯಾಯಾಂಗ, ಚುನಾವಣಾ ಆಯೋಗ ಮತ್ತು ಮಹಾಲೇಖಪಾಲ ವ್ಯವಸ್ಥೆ (ಸಿಎಜಿ) ಕೂಡ ಇದಕ್ಕೆ ಹೊರತಾಗಿಲ್ಲ. ಹೀಗಿರುವಾಗ ಸಂವಿಧಾನಕ್ಕೆ ಪ್ರಭುತ್ವದ ನಿರಂಕುಶ ಪ್ರವೃತ್ತಿಗಳ ಮೇಲೆ ಹಿಡಿತ ಸಾಧಿಸುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯ ಎಂಬುದು ನಮ್ಮ ಮುಂದಿರುವ ಪ್ರಶ್ನೆ. ದೇಶದಲ್ಲಿ ಕಾಣಿಸುತ್ತಿರುವ ಅಧಿಕಾರ ಕೇಂದ್ರೀಕರಣ ಪ್ರವೃತ್ತಿಯು ಇದೇ ರೀತಿ ಮುಂದುವರಿದರೆ ಸಂವಿಧಾನವು ವಿವಿಧ ಸಮುದಾಯಗಳನ್ನು ಬೆಸೆಯುವ ಒಂದು ಒಡಂಬಡಿಕೆಯಾಗಿ ಉಳಿಯುವುದಾದರೂ ಹೇಗೆ? ದೇಶದಲ್ಲಿ ಹೆಚ್ಚುತ್ತಿರುವ ಅಸಮಾನತೆಯನ್ನು ಪೋಷಿಸುವ ಬೆಳವಣಿಗೆಗಳನ್ನು ನೋಡಿದರೆ ಸಂವಿಧಾನವು ಸಾಮಾಜಿಕ ಪರಿವರ್ತನೆಯ ಅಸ್ತ್ರವಾಗಿ ಪರಿಣಾಮಕಾರಿ ಆಗಿ ಹೇಗೆ ಉಳಿಯುತ್ತದೆ ಎಂಬ ಪ್ರಶ್ನೆಯೂ ಮೂಡುತ್ತದೆ. ಸಂವಿಧಾನಕ್ಕೆ 75 ವರ್ಷಗಳು ತುಂಬುತ್ತಿರುವ ಈ ಸಂದರ್ಭದಲ್ಲಿ ನಮ್ಮನ್ನು ಗಾಢವಾಗಿ ಕಾಡಬೇಕಿರುವ ಪ್ರಶ್ನೆಗಳಿವು.

ಲೇಖಕ: ಕಾನೂನು ಸಲಹೆಗಾರ ಹಾಗೂ ಸಂವಿಧಾನ ತಜ್ಞ

ಸಂವಿಧಾನ ಏನು, ಎತ್ತ?

- ಸಂವಿಧಾನ ರಚನಾ ಸಭೆಗೆ ಪರೋಕ್ಷ ಚುನಾವಣೆಯ ಮೂಲಕ ಮತ್ತು ನಾಮಕರಣದ ಮೂಲಕ ಸದಸ್ಯರ ನೇಮಕ
- ಸಂವಿಧಾನ ರಚನಾ ಸಭೆಯಲ್ಲಿ ಹಿಂದೂ ಧರ್ಮದವರ ಪಾಲು ಶೇ **94.6**. ಉಳಿದಂತೆ ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ, ಸಿಖ್ ಧರ್ಮಗಳಿಗೂ ಅವಕಾಶ
- ಸಮಿತಿಯಲ್ಲಿ ಮೊದಲು **389** ಸದಸ್ಯರಿದ್ದು, ದೇಶ ವಿಭಜನೆಯ ನಂತರ ಅವರ ಸಂಖ್ಯೆ **299**ಕ್ಕೆ ಇಳಿದಿತ್ತು. ಸಂವಿಧಾನ ರಚನಾ ಸಭೆಯಲ್ಲಿ **15** ಮಂದಿ ಮಾತ್ರ ಮಹಿಳಾ ಸದಸ್ಯರು; ದಾಕ್ಷಾಯಣಿ ವೇಲಾಯುಧನ್ ಸಮಿತಿಯಲ್ಲಿದ್ದ ಏಕೈಕ ದಲಿತ ಮಹಿಳೆ
- ಸಂವಿಧಾನ ರಚನಾ ಸಭೆಯ ಅಡಿಯಲ್ಲಿ **22** ಸಮಿತಿಗಳು, **5** ಉಪಸಮಿತಿಗಳ ರಚನೆ
- ಪ್ರತಿ ಸಮಿತಿಗೂ ನಿರ್ದಿಷ್ಟವಾದ ಜವಾಬ್ದಾರಿ; ನಂತರ ಅದರ ಬಗ್ಗೆ ಸಂವಿಧಾನ ರಚನಾ ಸಭೆಯ ಎಲ್ಲ ಸದಸ್ಯರಿಂದ ಚರ್ಚೆ
- **2** ವರ್ಷ, **11** ತಿಂಗಳು, **17** ದಿನ: ಸಂವಿಧಾನ ರಚನೆಗೆ ತೆಗೆದುಕೊಂಡ ಅವಧಿ
- **11**: ಸಂವಿಧಾನ ರಚನಾ ಸಭೆ ನಡೆಸಿದ ಅಧಿವೇಶನಗಳು
- **2,473**: ಸಂವಿಧಾನ ಕರಡು ಅಂತಿಮಗೊಳಿಸಲು ಮಾಡಲಾದ ತಿದ್ದುಪಡಿಗಳು
- **1,45,000** ಪದಗಳಿಂದ ಕೂಡಿದ್ದ ಸಂವಿಧಾನವು ಜಗತ್ತಿನಲ್ಲಿಯೇ ಅತಿ ದೊಡ್ಡ ಲಿಖಿತ ಸಂವಿಧಾನ ಎಂದು ಹೆಸರು ಪಡೆದಿತ್ತು. ಈಗಲೂ ಅದೇ ಹೆಗ್ಗಳಿಕೆಯನ್ನು ಹೊಂದಿದೆ
- **1950**ರಲ್ಲಿ ಜಾರಿಗೊಂಡ ಮೂಲ ಸಂವಿಧಾನವು **395** ವಿಧಿಗಳು, **22** ಭಾಗಗಳು ಹಾಗೂ **8** ಅನುಸೂಚಿಗಳನ್ನು ಒಳಗೊಂಡಿತ್ತು
- ಕಾಲದಿಂದ ಕಾಲಕ್ಕೆ ತರಲಾದ **106** ತಿದ್ದುಪಡಿಗಳಿಂದಾಗಿ ಪ್ರಸ್ತುತ ಭಾರತ ಸಂವಿಧಾನವು **460**ಕ್ಕೂ ಹೆಚ್ಚು ವಿಧಿಗಳು, **25** ಭಾಗಗಳು ಮತ್ತು **12** ಅನುಸೂಚಿಗಳನ್ನು ಹೊಂದಿದೆ

ಪಿವಿ ಫ್ಯಾಕ್ಟ್ ಚೆಕ್

✗ **ಕರ್ನಾಟಕ ಪ್ರದೇಶ** ಕಾಂಗ್ರೆಸ್‌ನ ಸದಸ್ಯೆ ಅನುಷಾ ಪುಲ್ಲಯ್ಯ ಅವರು ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಇರುವ ಚಿತ್ರವನ್ನು 'ಎಕ್ಸ್'ನಲ್ಲಿ ಹಂಚಿಕೊಳ್ಳಲಾಗಿದ್ದು, ಅನುಷಾ ಅವರು ಅಮೆರಿಕದ ಕ್ರಿಶ್ಚಿಯನ್ ಧರ್ಮ ಬೋಧಕ ಡೇನಿಯಲ್ ಸ್ಟೀಫನ್ ಕೌರ್ನಿ ಪತ್ನಿ ಎಂದು ಪೋಸ್ಟ್‌ನಲ್ಲಿ ಹೇಳಲಾಗಿದೆ. 'ರಾಹುಲ್ ಗಾಂಧಿ ಅವರು ಡೇನಿಯಲ್ ಅವರನ್ನು ಭೇಟಿ ಮಾಡಿದ್ದಾರೆ. ಹಿಂದೂಗಳನ್ನು ಮತಾಂತರ ಮಾಡುತ್ತಿರುವ ಕ್ರಿಶ್ಚಿಯನ್ ಧರ್ಮಬೋಧಕ ಗುಂಪುಗಳೊಂದಿಗೆ ಕಾಂಗ್ರೆಸ್ ಸಂಬಂಧ ಹೊಂದಿದೆ' ಎಂದೂ ಪೋಸ್ಟ್‌ನಲ್ಲಿ ಬರೆಯಲಾಗಿದೆ. ಸಲಾಹ್ ಉದ್ದೀನ್ ಶೋಯೇಬ್ ಚೌಧುರಿ ಎನ್ನುವವರು ಈ ಪೋಸ್ಟ್ ಮಾಡಿದ್ದರು. ಇದನ್ನು ಹಲವರು ಹಂಚಿಕೊಂಡಿದ್ದಾರೆ. ಆದರೆ, ಇದು ಸುಳ್ಳು.

✓ **ರಾಹುಲ್ ಗಾಂಧಿ** ಅವರೊಂದಿಗೆ ಚಿತ್ರದಲ್ಲಿ ಕಾಣಿಸಿಕೊಂಡಿರುವ ಅನುಷಾ ಅವರು ಡೇನಿಯಲ್ ಅವರ ಪತ್ನಿ ಅಲ್ಲ. ಕರ್ನಾಟಕದ ಕಾಂಗ್ರೆಸ್‌ನ ಸಕ್ರಿಯ ಸದಸ್ಯೆ ಆಗಿರುವ ಅವರು ಈ ಬಗ್ಗೆ 'ಎಕ್ಸ್'ನಲ್ಲಿ ನ.22ರಂದು ಸ್ಪಷ್ಟನೆಯನ್ನೂ ನೀಡಿದ್ದಾರೆ. ಅವರನ್ನು ಸಂಪರ್ಕಿಸಿದಾಗ ಪೋಸ್ಟ್‌ನಲ್ಲಿರುವ ಅಂಶಗಳನ್ನು ತಳ್ಳಿಹಾಕಿದ್ದಾರೆ. 'ನನಗಿನ್ನೂ ಮದುವೆಯಾಗಿಲ್ಲ, ಧರ್ಮಬೋಧಕ ಡೇನಿಯಲ್‌ಗೂ ನನಗೂ ಸಂಬಂಧ ಇಲ್ಲ. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಎಐಸಿಸಿ ಪರವಾಗಿ ಕೆಲಸ ಮಾಡುತ್ತಿರುವಾಗ ಜೂನ್ 2ರಂದು ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿದ್ದೆ. ಅಂದು ತೆಗೆದ ಫೋಟೊ ಅದು. ಪೋಸ್ಟ್‌ನಲ್ಲಿ ಕಾಣಿಸುತ್ತಿರುವ ಮತ್ತೊಂದು ಫೋಟೊ ಲಕ್ಷದ್ವೀಪದಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ತರಬೇತಿ ನೀಡುವ ಕಾರ್ಯಕ್ರಮದ್ದು. ಮಾನಹಾನಿ ಮಾಡುವಂತಹ ಪೋಸ್ಟ್ ಮಾಡಿರುವ ಸಲಾಹ್ ಶೊಯೇಬ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದೇನೆ' ಎಂದು ಅವರು ಹೇಳಿರುವುದಾಗಿ ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ | 74

ಮನುಷ್ಯನ ಹುಡುಕಾಟ ಯಾವುದಕ್ಕೆ?

ಈ ಭೂಮಿಯ ಮೇಲಿನ ಪ್ರತಿಯೊಂದು ಜೀವಿಗಳು ಒಂದು ಅನ್ವೇಷಣೆಯಲ್ಲಿವೆ. ಒಂದು ಸಣ್ಣ ಇರುವೆ ತನ್ನ ಮಣ್ಣಿನ ಮನೆಯಿಂದ ಹೊರಕ್ಕೆ ಬರಬೇಕಾದರೆ ಅದಕ್ಕೆ ಯಾರಾದರೂ ಲಗ್ನ ಪತ್ರ ಕೊಟ್ಟು ಕರೆದಾರೇನು? ಪಕ್ಷಿಗಳು ಒಂದು ಪಕ್ಷಿಧಾಮದಿಂದ ಇನ್ನೊಂದು ಪಕ್ಷಿಧಾಮದತ್ತ ಹಾರುತ್ತವೆ. ಗಾಡವಿಟ್ ಅಂತ ಒಂದು ಪಕ್ಷಿ. ಅದು ಅಲೆಕ್ಸಾದಿಂದ ನ್ಯೂಜಿಲೆಂಡ್ ವರೆಗೆ 11 ಸಾವಿರ ಕಿಮೀ ಎಲ್ಲೂ ನಿಲ್ಲದೆ ಹಾರುತ್ತದೆ. 11 ಸಾವಿರ ಕಿಮೀ ದೂರ ಸಾಗಬೇಕಾದರೆ ಅದಕ್ಕೆ ಯಾರಾದರೂ ಕರೆದಿದ್ದರೇನು?

ಮನುಷ್ಯನೂ ಅನ್ವೇಷಣೆ ಮಾಡುತ್ತಿದ್ದಾನೆ. ಆಕಾಶದಲ್ಲಿ, ಭೂಮಿಯ ಆಳದಲ್ಲಿ, ದ್ರವ್ಯಗಳಲ್ಲಿ ಅನ್ವೇಷಣೆ ಮಾಡುತ್ತಿದ್ದಾನೆ. ಈ ಅನ್ವೇಷಣೆ ಯಾವುದಕ್ಕಾಗಿ? ಯಾವ ಕಾರಣಕ್ಕಾಗಿ ಮನುಷ್ಯನ ಹುಡುಕಾಟ? ಮನುಷ್ಯನ ಅನ್ವೇಷಣೆಗೆ ಕಾರಣ ಇಷ್ಟೆ; ಅವನಿಗೆ ಸುಖ ಬೇಕು ಅಷ್ಟೆ. ಎಲ್ಲ ಜೀವಿಗಳ ಇಚ್ಛೆ ಇಷ್ಟೆ, 'ನಮಗೆ ದುಃಖ ಬರಬಾರದು, ಸಂತೋಷ ಇರಬೇಕು' ಅಂತ. ಮನುಷ್ಯ ಹಾಸಿಗೆಯಿಂದ ಎದ್ದು ಇಡುವ ಮೊದಲ ಹೆಜ್ಜೆ ಯಾವುದಕ್ಕೆ ಅಂದರ ಸಂತೋಷದ ಹುಡುಕಾಟಕ್ಕಾಗಿ. ಸುಖವ ಅರಸಿ ಮನೆಯಿಂದ ಹೊರಗೆ ಹೋಗುವ ಮನುಷ್ಯ ದಿನವಿಡೀ ದುಡಿದು ಸಂಜೆ ಬಂದಾಗ ಹಾಸಿಗೆ ಸಿಕ್ಕರೆ ಸಾಕು ಅಂತಾನ. ಹೆಜ್ಜೆಯಲ್ಲಿ ಸುಖ ಇತ್ತು ಅಂದರ ಮತ್ತೆ ಹಾಸಿಗೆಗೆ ಯಾಕ ಬಂದ? ಹಾಸಿಗೆಯಲ್ಲೇ ಸುಖ ಇತ್ತು ಅಂದರ ಮತ್ತೆ ಎದ್ದು ಹೆಜ್ಜೆ ಯಾಕಿಟ್ಟ?

ಮನುಷ್ಯ ಸುಖದ ಹುಡಕಾಟಕ್ಕೆ ಹೊಂಟ. ಆದರೆ ಅವನಿಗೆ ಸಿಕ್ಕಿದ್ದು ದುಃಖ. ಸುಖದ ಹುಡುಕಾಟದಲ್ಲಿ ಇದ್ದಾನೆ ಮನುಷ್ಯ. ಆದರೆ ಸಿಕ್ಕಿಲ್ಲ ಅವಂಗೆ. ಕೋಟಿ ಕೋಟಿ ದುಡ್ಡು ಐತಿ. ಉಂಡು ತಿಂದು ಮಜಾ ಮಾಡಬೇಕು ಅಂತಾನೆ ಮನುಷ್ಯ. ಸುಖ ಅಂದರ ರೊಕ್ಕದಲ್ಲಿ ಐತಿ ಅಂತ ತಿಳಕೊಂಡಾನ. ಮುಪ್ಪಾದಾಗ ಸಾವಿನಲ್ಲಿ ಸುಖ ಐತಿ ಅನ್ನೋದು ಗೊತ್ತಾಗತೈತಿ. ದುಡ್ಡಿದ್ದಾಗ ಜೀವನ ಸುಖ ಅಂದುಕೊಂಡ ಮನುಷ್ಯ ರೋಗಗಳಿಂದ ಪೀಡಿತನಾದಾಗ ಸಾವೇ ಸುಖ ಅನಸತೈತಿ. ಅಂದರ ಸುಖ ಸಾವಿನಲ್ಲೋ ಜೀವನದಲ್ಲೋ ಅನ್ನೋದು ಗೊತ್ತಾಗೋದಿಲ್ಲ. ಇದೇ ಜೀವನದ ವಿಪರ್ಯಾಸ.

ಮತ್ತೆ ಸುಖ ಎಲ್ಲೈತಿ?

ಉಣ್ಣುವುದರೊಳಗೋ ವಿಸರ್ಜನೆಯೊಳಗೋ? ಸುಖ ಅನ್ನೋದು ನೆರಳು ಅಷ್ಟೆ. ಸುಖ ದುಃಖ, ಹುಟ್ಟು ಸಾವು ಒಂದಕ್ಕೊಂದು ಅಂಟಿಕೊಂಡೇ ಇದಾವೆ. ಜೀವನ ಕಾಣತೈತಿ. ಅದು ಕಾಣೋದಕ್ಕಷ್ಟೆ. ವಾಸ್ತವದಲ್ಲಿ ಇರೋದು ಸಾವು ಮಾತ್ರ. ಜೀವನ ಅನ್ನೋದು ವ್ಯಾವಹಾರಿಕ. ನಿಜಗುಣರು ಹೇಳುತ್ತಾರೆ, 'ಜೀವನದಲ್ಲಿ ಸಾವಿರ ಕೋಟಿ ದುಃಖಗಳಿವೆ' ಅಂತ. ಬಸವಣ್ಣನವರು 'ಕಾಲಲಿ ಕಟ್ಟಿದ ಗುಂಡು, ಕೊರಳಲಿ ಕಟ್ಟಿದ ಬೆಂಡು, ತೇಲಲೀಯದು ಗುಂಡು, ಮುಳುಗಲೀಯದು ಬೆಂಡು, ಇಂತಪ್ಪ ಸಂಸಾರಶರಧಿಯ ದಾಂಟಿಸಿ ಕಾಲಾಂತಕನೇ ಕಾಯೋ ಕೂಡಲ ಸಂಗಯ್ಯ' ಅಂತ.

ಬುದ್ಧ ಸಾಮ್ರಾಟನಾಗಿದ್ದ. ರಥದಲ್ಲಿ ಹೊರಟ ಬುದ್ಧನಿಗೆ ಒಬ್ಬ ರೋಗಿ, ಮುದುಕ ಮತ್ತು ಒಂದು ಶವ ಕಣ್ಣಿಗೆ ಬಿತ್ತು. ರೋಗ, ಮುಪ್ಪು ಮತ್ತು ಸಾವು ದುಃಖ ಕೊಡತೈತಿ. ದುಃಖ ಐತಿ ಅಂದಮೇಲೆ ಅದಕ್ಕೊಂದು ಕಾರಣವೂ ಇರಬೇಕು. ಕಾರಣ ಐತಿ ಅಂದ ಮೇಲೆ ಅದಕ್ಕೆ ಪರಿಹಾರನೂ ಇರಬೇಕಲ್ಲ ಅಂತ ಸಂಶೋಧನೆಗೆ ತೊಡಗಿದ. ದುಃಖಕ್ಕೆ ಕಾರಣ ಗೊತ್ತಿದ್ದರೆ ದುಃಖವೇ ಇರೋದಿಲ್ಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ನವೆಂಬರ್ 26, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಏಕಾದಶಿ ಗಂ. 27-48 ನಕ್ಷತ್ರ: ಹಸ್ತ ಗಂ. 28-35 ಯೋಗ: ಪ್ರೀತಿ ಗಂ. 14-13 ಕರಣ: ಬವ ಗಂ. 14-26 ನಂತರ ಬಾಲವ ಗಂ. 27-48, ವೃಶ್ಚಿಕ ಮಾಸದ 10 ನೇ ದಿನ, ಮಳೆನಕ್ಷತ್ರ: ಅನುರಾಧ 3.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-39 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 23 ಜುಮಾದುಲ್ಲಾವಲ್
ದಿನ ವಿಶೇಷ : ಉತ್ಪನ್ನ ಏಕಾದಶಿ, ಅದೃಷ್ಟ ಸಂಖ್ಯೆ : 10, 3

ಮೇಷ: ಹೂವಿನ ಬೆಳೆಗಾರರಿಗೆ ವಾತಾವರಣದಲ್ಲಿನ ಬದಲಾವಣೆಯಿಂದ ಸಣ್ಣಪುಟ್ಟ ತೊಂದರೆಗಳು ಸಂಭವಿಸಬಹುದು. ಶುಭ ಕಾರ್ಯಗಳ ಚಿಂತನೆಗೆ ಇಂದು ಸಕಾಲ. ಶೀತ ಬಾಧೆ ಉಂಟಾಗುವುದು.

ವೃಷಭ: ಹೊಸ ರೀತಿಯ ಚಿಂತನೆಗಳು ಫಲಕಾರಿಯಾಗಲು ಸಮಯ ಹಿಡಿದರೂ ಫಲ ನಿಶ್ಚಿತ ಎಂಬುದು ಮನದಟ್ಟಾಗಿದೆ. ಕೈಮಗ್ಗ ವಸ್ತ್ರದ ರಫ್ತು ಮಾರಾಟಗಾರರಿಗೆ ಲಾಭ . ಚರ್ಮ ರೋಗಗಳು ಎದುರಾಗಬಹುದು.

ಮಿಥುನ: ಬ್ಯಾಂಕಿಂಗ್ ಉದ್ಯೋಗಸ್ಥರಿಗೆ ವರ್ಗಾವಣೆಯಿಂದ ದೂರದೂರಿನಲ್ಲಿ ಅಥವಾ ಕುಟುಂಬ ಸದಸ್ಯರಿಂದ ದೂರ ವಾಸಿಸುವ ಸಂದರ್ಭ ಬರಲಿದೆ. ವಾಣಿಜ್ಯ ಬೆಳೆಗಳ ಮಾರಾಟಗಳಿಂದ ಅಧಿಕ ಲಾಭ.

ಕರ್ಕಾಟಕ: ಅಕ್ಕಪಕ್ಕದಲ್ಲಿನ ಭಿನ್ನಾಭಿಪ್ರಾಯಗಳಿಗೆ ಹೆಚ್ಚು ಪ್ರತಿಕ್ರಿಯಿಸು-ವುದು ಸಮಂಜಸವಲ್ಲ. ಹವಾ ಬದಲಾವಣೆಗೆ ಕಿರುಪ್ರವಾಸ ಕೈಗೊಳ್ಳುವ ಮನಸ್ಸಾಗಲಿದೆ. ಉದ್ಯೋಗದಲ್ಲಿ ಎದುರಾಗಿದ್ದ ಚಿಂತೆ ದೂರಾಗುವುದು.

ಸಿಂಹ: ಎಂಥ ಅನಿವಾರ್ಯ ಪರಿಸ್ಥಿತಿಗೂ ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮ ವಿಚಾರ. ಆಲಸ್ಯ ಮನೋಭಾವವು ಹೆಚ್ಚಾಗಿ ಉತ್ಸಾಹ ಕಳೆದುಕೊಳ್ಳುವಂತೆ ಆಗಬಹುದು.

ಕನ್ಯಾ: ಕುಟುಂಬದ ಗಣ್ಯರಿಂದ ಬದುಕಿನ ದಾರಿಯ ಬಗ್ಗೆ ಮಾರ್ಗದರ್ಶನ ಸಿಗಲಿದೆ. ಸಮಸ್ಯೆಯನ್ನು ನಾಜೂಕಾಗಿ ಬಗೆಹರಿಸಿಕೊಳ್ಳುವ ಬಗ್ಗೆ ಗಮನ ನೀಡಿ. ಮೆಕ್ಯಾನಿಕ್ ಕೆಲಸಗಾರರಿಗೆ ಅಧಿಕ ವರಮಾನ ಸಿಗಲಿದೆ.

ತುಲಾ: ಒಡಹುಟ್ಟಿದವರ ಮಾತುಗಳು ಅಥವಾ ಅವರ ಹಾವಭಾವವು ಮನಸ್ಸನ್ನು ಹಾಳುಮಾಡಬಹುದು. ಎಲ್ಲಾ ವಿಚಾರಗಳಲ್ಲಿಯೂ ಸಾವಧಾನವಾಗಿ ಮುಂದುವರಿಯುವುದು ಉತ್ತಮ. ಆದಾಯ ಪ್ರಾಪ್ತಿ.

ವೃಶ್ಚಿಕ: ಸಂಶೋಧನಾ ವಿದ್ಯಾರ್ಥಿಗಳಿಗೆ ಗುಪ್ತವಾದ ಮಾಹಿತಿಯು ತಿಳಿದು ಅಧ್ಯಯನಕ್ಕೆ ಉಪಯೋಗವಾಗಲಿದೆ. ಚಿನ್ನ ,ಬೆಳ್ಳಿ ವ್ಯಾಪಾರಸ್ಥರಿಗೆ ಉತ್ತಮ ಆದಾಯವಿರುವುದು. ದುಃಖಗಳ ತೀವ್ರತೆಯು ಕಡಿಮೆಯಾಗುವುದು.

ಧನು: ಆಹಾರ ಪದಾರ್ಥದ ವ್ಯಾಪಾರ ಮಾಡುವವರು ಶುದ್ಧತೆಯ ಬಗ್ಗೆ ಗಮನ ನೀಡಿದರೆ ಒಳ್ಳೆಯದು. ಕಂದಾಯ ಅಧಿಕಾರಿಗಳಿಗೆ ಅಲೆದಾಟ ಹೆಚ್ಚುವುದು. ಯೋಗಾಭ್ಯಾಸ, ಧ್ಯಾನದಿಂದ ಆರೋಗ್ಯ ಉತ್ತಮ.

ಮಕರ: ಕಾರ್ಯನಿಮಿತ್ತ ಅತ್ತೆ-ಸೊಸೆಯಲ್ಲಿ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆ, ಸಮಾಧಾನವನ್ನು ಇಬ್ಬರೂ ಪರಸ್ಪರ ಕಾಪಾಡಿಕೊಳ್ಳಿ. ಪದವೀಧರರಿಗೆ ವಿದೇಶದಲ್ಲಿ ಉದ್ಯೋಗ ದೊರೆಯುವ ಸಂಭವವಿದೆ.

ಕುಂಭ: ಧೈರ್ಯ, ಸಾಹಸ, ಎದೆಗಾರಿಕೆಯ ಬಗ್ಗೆ ಮಿತ್ರರು, ಬಂಧುಗಳು ಟೀಕಿಸುವವರಿದ್ದಾರೆ, ಲೆಕ್ಕಿಸದೆ ಮುನ್ನುಗ್ಗಿ. ಶ್ರೀರಾಮನ ಭಜನೆಯ ಫಲವಾಗಿ ಆರೋಗ್ಯ ಮತ್ತು ಆರ್ಥಿಕ ಪರಿಸ್ಥಿತಿಗಳು ತೃಪ್ತಿಕರವಾಗಿರುವುದು.

ಮೀನ: ಮುಖ್ಯವಾಗಿ ಹೆಣ್ಣುಮಕ್ಕಳಿಗೆ ವಾಹನ ಅಥವಾ ವಸ್ತ್ರಾಭರಣ ಪ್ರಾಪ್ತಿ-ಯಾಗಲಿದೆ. ಆಮದು ಆಹಾರ ಪದಾರ್ಥಗಳಿಂದ ಲಾಭ ಸಿಗಲಿದೆ. ಸಾಕಷ್ಟು ಆದಾಯ ಮತ್ತು ಹೆಸರು ಬರಲಿದೆ.

ಪದಬಂಧ 5873

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಯೋಗವಿದ್ದರೆ ಮಾತ್ರ ಇದು ಪ್ರಯೋಜನ! (4)
3.ಓಲಗದ ಸದ್ದಿರುವ ರಾಜ ದರ್ಬಾರು! (4)
5.ಒಲುಮೆಯಿಂದ ಮಾಡಿರುವ ಒತ್ತಾಯ (3)
6.ಹೆಬ್ಬೆರಳಿನ ಪಕ್ಕದ ಬೆರಳು (3)
8.ಮರಳ ಹತ್ತಿರವಿರುವವ ನೀಚ! (3)
9.ಒಂದು ಗಂಟೆಯ ಅರವತ್ತನೆ ಒಂದು ಭಾಗದಷ್ಟು ಕಾಲ (3)
10.ನಗ ಖರೀದಿಗಾಗಿ ಕೈಯ್ಯಲ್ಲಿರುವ ದುಡ್ಡು (3)
12.ನಾಲಿಗೆಯು ತಾಲುವಿಗೆ ತಗಲಿಉಚ್ಚರಿಸಲ್ಪಡುವ ವರ್ಣ (3)
14.ಈತ ಯುದ್ಧಕ್ಕೆ ಅಂಜುವವನು (4))
15.ಅದೃಷ್ಟವೇ ಇಲ್ಲದವನೀತ (4)

ಮೇಲಿಂದ ಕೆಳಕ್ಕೆ
1.ಇದು ಉದ್ಘೋಷಕನ ಪೀಠಿಕೆ! (4)
2.ಛೇ!ಜಗಲಿಯ ಆಜುಬಾಜು ಎಲ್ಲಾ ಕೊಳೆಕಸ! (3)
3.ಜುಲುಮೆಯಿಂದ ಮೂಡಬಲ್ಲುದೇ ಪ್ರೀತಿ?(3)
4.ಕುಳ್ಳನಲ್ಲ! ಭಾರೀ ಶ್ರೀಮಂತ! (4)
7.ಒರೆಗಲ್ಲು ಇಲ್ಲಿದೆ (3)
8.ಸನ್ಮಾನ ಮಾಡಿದರೂ ಸಹ ಈ ದುಗುಡವೇ? (3)
9.ಉತ್ತರವೇ ಇಲ್ಲದ ಮೌನ (4)
11.ಕೆಟ್ಟ ಅದೃಷ್ಟವಿದು (4)
12.ಮಾತಾಡಿ ಎಂದಾಗ ಹೊರಹೊಮ್ಮಿದ ಮಾತೃಭಾಷೆ (3)
13.ವ್ಯವಸಾಯಗಾರ ತೋಡಿಕೊಂಡಿರುವ ದುಃಖ (3)



5872ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಉಪವಾಸ 5.ಪ್ರಾದುರ್ಭಾವ
7.ಮಲಯಜ 8.ಸಂದರ್ಶನ
9.ಸುಹಿಗ್ರ 10.ರಕಾಳಿಧಾ
11.ಹಾಲೋಗರ 13.ಜಾಗರಣೆ
15.ಯಮದೂತ

ಮೇಲಿಂದ ಕೆಳಕ್ಕೆ
1.ಗ್ಮಿವಾ 2.ಬದು 3.ಉಗಮ
4.ಸಮಾಜಸುಧಾರಣೆ
5.ಪ್ರಾಣಿಸಂಗ್ರಹಾಲಯ
6.ವಸನ 10.ರಗಜಾ
12.ರಕುತ 14.ರಚ್ಚೆ
16.ಮದ್ದು

ಸುಡೊಕು 6258

	3		4			2		7
7		4		3			5	
	9		1			8		3
				4				
3		2	9		1			
				6				2
1		8	3		4		2	
	2					9		8
6		9		2			3	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6257 ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ ₹12000-14000

ಷೇರುಪೇಟೆ ವಹಿವಾಟು 992



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,907
ಇಂದಿನ ಅಂತ್ಯ	24,221
▲	314
ದಿನದ ಗರಿಷ್ಠ	24,351

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹610
12 ಕ್ಕೆ	₹80
ಮೈಸೂರು	
100ಕ್ಕೆ	₹612

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹375-640

ದ್ವಿತಳಿ (ಬಿ.ವಿ) ₹401-738

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹183

ಆರ್‌ಎಸ್‌ಎಸ್-5 ₹177

ಗುಡ್ ಲಾಟ್ ₹172

(ಪ್ರತಿ ಕೆ.ಜಿಗೆ)

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

21ನೇ ವರ್ಷದ ಪುಣ್ಯ ಸ್ಮರಣೆ



ಎ.ಆರ್. ವೆಂಕಟರಮಣರೆಡ್ಡಿ
ಜನನ: 5.11.1940 ಮರಣ: 26.11.2003
ನಿಮ್ಮ ಮಾರ್ಗದರ್ಶನ ನಮಗೆ ಸದಾ ಸ್ಫೂರ್ತಿ
ಇಂತಿ
ಮಕ್ಕಳಾದ ವಿ.ರಘು, ವಿ.ಸುಂದರ್‌ರಾಮ್ ರೆಡ್ಡಿ, ವಿ. ವಿಜಯಶಂಕರ್ ರೆಡ್ಡಿ ಮತ್ತು ಸೊಸೆಯಂದಿರು ಹಾಗೂ ಮೊಮ್ಮಕ್ಕಳು, ಕೈಕೊಂಡ್ರಹಳ್ಳಿ.

5ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಡಿ.ಎಂ. ನಂಜುಂಡಯ್ಯನವರು
ಜನನ: 15.05.1950 – ನಿಧನ: 26.11.2019
ನಿಮ್ಮ ನೆನಪು ಸದಾ ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ಮಗ: ಉದಯ್ ಎನ್, ಸರಳಶ್ರೀ ಎನ್.
ಮಗಳು: ಉಷಾ ಎನ್, ರಮೇಶ್‌ಬಾಬು ಆರ್.
ಮೊಮ್ಮಕ್ಕಳು: ಮನಸ್ವಿ, ಹಿಮಶ್ರೀ, ಹಿತಶ್ರೀ

ಆರು ವರ್ಷದಲ್ಲಿ 5 ಪಟ್ಟು ಏರಿಕೆ • ಈ ಖಾತೆಗಳಲ್ಲಿನ ಒಟ್ಟು ಮೊತ್ತ ₹8,505 ಕೋಟಿ

ಇಪಿಎಫ್: 21 ಲಕ್ಷ ಖಾತೆ ನಿಷ್ಕ್ರಿಯ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿಯಲ್ಲಿರುವ (ಇಪಿಎಫ್) ನಿಷ್ಕ್ರಿಯ ಖಾತೆಗಳಲ್ಲಿನ ಒಟ್ಟು ಮೊತ್ತವು ಕಳೆದ ಆರು ಹಣಕಾಸು ವರ್ಷಗಳಲ್ಲಿ 5 ಪಟ್ಟು ಏರಿಕೆಯಾಗಿದೆ ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ಸೋಮವಾರ ತಿಳಿಸಿದೆ.

2018-19ರ ಹಣಕಾಸು ವರ್ಷದಲ್ಲಿ ಈ ನಿಷ್ಕ್ರಿಯ ಖಾತೆಗಳ ಸಂಖ್ಯೆ 6.91 ಲಕ್ಷವಾಗಿದ್ದು, ಇದರಲ್ಲಿನ ಮೊತ್ತವು ₹1,638 ಕೋಟಿಯಷ್ಟಿತ್ತು. 2023-24ರಲ್ಲಿ ಖಾತೆಗಳ ಸಂಖ್ಯೆ 21.55 ಲಕ್ಷಕ್ಕೆ ಏರಿಕೆಯಾಗಿದ್ದು, ಒಟ್ಟು ಮೊತ್ತವು ₹8,505 ಕೋಟಿ ಆಗಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಲೋಕಸಭೆಗೆ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ನೌಕರರ ಭವಿಷ್ಯ ನಿಧಿ (ಇಪಿಎಫ್) ಯೋಜನೆ 1952ರ ಪ್ರಕಾರ ಕೆಲ ಖಾತೆಗಳನ್ನು ನಿಷ್ಕ್ರಿಯ ಖಾತೆಗಳೆಂದು ವರ್ಗೀಕರಿಸಲಾಗಿದೆ. ಈ ನಿಷ್ಕ್ರಿಯ ಖಾತೆಗಳಲ್ಲಿ ಇರುವ ಮೊತ್ತವನ್ನು ಇಪಿಎಫ್‌ಒ ಸಂಬಂಧಪಟ್ಟ ಫಲಾನುಭವಿಗಳಿಗೆ ಹಿಂದಿರುಗಿಸುತ್ತದೆ. ಸದಸ್ಯರು ಕ್ಲೇಮು ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಶೈಕ್ಷಣಿಕ ವಿಡಿಯೊಗಳು, ವೆಬಿನಾರ್‌ಗಳು, ಸಾಮಾಜಿಕ ಮತ್ತು ಮುದ್ರಣ ಮಾಧ್ಯಮಗಳ ಮೂಲಕ ಉದ್ಯೋಗಿಗಳಿಗೆ ಇಪಿಎಫ್‌ಒ ನಿಧಿಯನ್ನು ಬಳಕೆ ಮಾಡಿಕೊಳ್ಳುವಂತೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದ್ದಾರೆ.

10 ವರ್ಷದಲ್ಲಿ 853 ಐಆರ್‌ಎಸ್ ಅಧಿಕಾರಿಗಳಿಂದ ವಿಆರ್‌ಎಸ್

ನವದೆಹಲಿ (ಪಿಟಿಐ): ಕಳೆದ 10 ವರ್ಷಗಳಲ್ಲಿ ಒಟ್ಟು 853 ಭಾರತೀಯ ಕಂದಾಯ ಸೇವೆಯ (ಐಆರ್‌ಎಸ್) ಅಧಿಕಾರಿಗಳು ಸ್ವಯಂ ನಿವೃತ್ತಿ ಯೋಜನೆ (ವಿಆರ್‌ಎಸ್) ತೆಗೆದುಕೊಂಡಿದ್ದಾರೆ ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ಸೋಮವಾರ ತಿಳಿಸಿದೆ.

ಇದರಲ್ಲಿ 383 ಐಆರ್‌ಎಸ್ ಅಧಿಕಾರಿಗಳು (ಆದಾಯ ತೆರಿಗೆ) ಮತ್ತು 470 ಐಆರ್‌ಎಸ್ ಅಧಿಕಾರಿಗಳು (ಕಸ್ಟಮ್ಸ್ ಮತ್ತು ಪರೋಕ್ಷ ತೆರಿಗೆ) 2014 ರಿಂದ 2024ರ ಅವಧಿಯಲ್ಲಿ ವಿಆರ್‌ಎಸ್ ತೆಗೆದುಕೊಂಡಿದ್ದಾರೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಲಿಖಿತ ಉತ್ತರದಲ್ಲಿ ಲೋಕಸಭೆಗೆ ತಿಳಿಸಿದ್ದಾರೆ.

2,746 ಕೆ.ಜಿ ಚಿನ್ನ ಸ್ವಾಧೀನ: 2019-20ರಿಂದ 2024-25ರ ಅಕ್ಟೋಬರ್ 31ರ ವರೆಗೆ ಕಳ್ಳಸಾಗಣೆ ಮಾಡುತ್ತಿದ್ದ 2,746 ಕೆ.ಜಿ ಚಿನ್ನವನ್ನು ಕೇರಳದ ವಿಮಾನ ನಿಲ್ದಾಣಗಳಲ್ಲಿ ಕಸ್ಟಮ್ಸ್ ಇಲಾಖೆ ಮತ್ತು ಕಂದಾಯ ಗುಪ್ತಚರ ನಿರ್ದೇಶನಾಲಯವು (ಡಿಆರ್‌ಐ) ಜಪ್ತಿ ಮಾಡಿದೆ. ವಿದೇಶಿ ಪ್ರಜೆಗಳಿಂದ ಇದೇ ಅವಧಿಯಲ್ಲಿ 112 ಕೆ.ಜಿ ಚಿನ್ನ ವಶಪಡಿಸಿಕೊಳ್ಳಲಾಗಿದೆ. ಜಪ್ತಿ ಮಾಡಲಾದ ಚಿನ್ನವನ್ನು ನಿಯಮಾವಳಿ ಪ್ರಕಾರ, ವಿಲೇವಾರಿ ಮಾಡಲಾಗುತ್ತದೆ ಎಂದು ಸಚಿವರು ಪ್ರತ್ಯೇಕ ಉತ್ತರದಲ್ಲಿ ತಿಳಿಸಿದ್ದಾರೆ.

‘ಶಿಫಾರಸು ಸ್ವೀಕರಿಸಿದ ಬಳಿಕ ಚರ್ಚೆ’

ನವದೆಹಲಿ (ಪಿಟಿಐ): ಜೀವ ಮತ್ತು ಆರೋಗ್ಯ ವಿಮೆಯ ಕಂತುಗಳ ಮೇಲೆ ವಿಧಿಸುತ್ತಿರುವ ಜಿಎಸ್‌ಟಿಗೆ ಸಂಬಂಧಿಸಿದಂತೆ ಸಚಿವರ ಸಮಿತಿಯ ಶಿಫಾರಸುಗಳನ್ನು ಸ್ವೀಕರಿಸಲಾಗುವುದು. ಬಳಿಕ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿ, ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಿದೆ ಎಂದು ಸಂಸತ್ತಿಗೆ ಸರ್ಕಾರ ತಿಳಿಸಿದೆ.

ಪ್ರಸಕ್ತ ವರ್ಷದ ಸೆಪ್ಟೆಂಬರ್ 9ರಂದು ನಡೆದ ಜಿಎಸ್‌ಟಿ ಮಂಡಳಿಯ 54ನೇ ಸಭೆಯಲ್ಲಿ ಜೀವ ಮತ್ತು ಆರೋಗ್ಯ ವಿಮೆಯ ಕಂತುಗಳ ಮೇಲಿನ ಜಿಎಸ್‌ಟಿ ವಿನಾಯಿತಿ/ ಕಡಿಮೆ ಮಾಡುವ ವಿಷಯವನ್ನು ಜಿಎಸ್‌ಟಿ ಮಂಡಳಿ ಮುಂದೆ ಇರಿಸಲಾಯಿತು. ಸಭೆಯು ಜಿಎಸ್‌ಟಿಗೆ ಸಂಬಂಧಿಸಿದಂತೆ ಸಮಗ್ರವಾಗಿ ಪರಿಶೀಲಿಸಲು ಸಚಿವರ ಸಮಿತಿಯನ್ನು ರಚಿಸಲು ಮಂಡಳಿ ಶಿಫಾರಸು ಮಾಡಿತ್ತು. ಅದರಂತೆ, ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. ಸಚಿವರ ಮೊದಲ ಸಭೆಯು ಅಕ್ಟೋಬರ್ 19ರಂದು ನವದೆಹಲಿಯಲ್ಲಿ ನಡೆಯಿತು. ಅಲ್ಲಿ ಆರೋಗ್ಯ ಮತ್ತು ಜೀವ ವಿಮಾ ಕಂತುಗಳ ಮೇಲಿನ ಜಿಎಸ್‌ಟಿ ದರದ ವಿಷಯಗಳ ಕುರಿತು ಚರ್ಚಿಸಲಾಯಿತು ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಲೋಕಸಭೆಗೆ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

854 ಟನ್ ಚಿನ್ನ: 2024ರ ಸೆಪ್ಟೆಂಬರ್ ವೇಳೆಗೆ ಭಾರತೀಯ ರಿಸರ್ವ್ ಬ್ಯಾಂಕ್ 854 ಟನ್ ಚಿನ್ನವನ್ನು ಹೊಂದಿದ್ದು, ಅದರಲ್ಲಿ 510 ಟನ್ ದೇಶೀಯವಾಗಿ ಹೊಂದಿದೆ ಎಂದು ಚೌಧರಿ, ವಿದೇಶೀ ವಿನಿಮಯ ಮೀಸಲು ಕುರಿತ ಪ್ರಶ್ನೆಗೆ ಉತ್ತರಿಸಿದರು.

ಐಎಂಎಫ್ ವೆಬ್‌ಸೈಟ್‌ನಲ್ಲಿನ ಮಾಹಿತಿಯ ಪ್ರಕಾರ, ಸೆಪ್ಟೆಂಬರ್ ವೇಳೆಗೆ ಭಾರತವು ಚೀನಾ, ಜಪಾನ್ ಮತ್ತು ಸ್ವಿಟ್ಜರ್ಲೆಂಡ್ ನಂತರ 4ನೇ ಅತಿದೊಡ್ಡ ವಿದೇಶೀ ವಿನಿಮಯ ಮೀಸಲು ಹೊಂದಿದೆ.

ಚಿನ್ನ, ಬೆಳ್ಳಿ ಧಾರಣೆ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹1,000 ಇಳಿಕೆಯಾಗಿದ್ದು, ₹79,400 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ದರವು ಇಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿ, ₹79 ಸಾವಿರ ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹1,600 ಇಳಿದು, ₹91,700ರಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಹಳದಿ ಲೋಹದ ದರ ಇಳಿಕೆಯಾಗಿದೆ. ಹೀಗಾಗಿ, ದೇಶೀಯ ಮಾರುಕಟ್ಟೆಯಲ್ಲೂ ದರ ಕಡಿಮೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸೆನ್ಸೆಕ್ಸ್ 992 ಅಂಶ ಏರಿಕೆ

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ‘ಮಹಾಯುತಿ’ ಮೈತ್ರಿಕೂಟ ದಿಗ್ವಿಜಯ ಸಾಧಿಸಿದೆ. ಇದರಿಂದ ಸೋಮವಾರ ನಡೆದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಶೇ 1ಕ್ಕೂ ಹೆಚ್ಚು ಏರಿಕೆಯಾಗಿವೆ.

ಇಂಧನ, ಬ್ಯಾಂಕಿಂಗ್ ಷೇರುಗಳ ಖರೀದಿಯ ಹೆಚ್ಚಳವು ಸಹ ಷೇರು ಸೂಚ್ಯಂಕಗಳ ಏರಿಕೆಗೆ ಸಹಕಾರಿಯಾದವು.

ಕಳೆದ ಎರಡು ದಿನದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳ ಏರಿಕೆಯಿಂದ ಹೂಡಿಕೆದಾರರ ಸಂಪತ್ತು ₹14 ಲಕ್ಷ ಕೋಟಿ ವೃದ್ಧಿಸಿದೆ. ಬಿಎಸ್‌ಇ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯ ₹439 ಲಕ್ಷ ಕೋಟಿ (5.22 ಟ್ರಿಲಿಯನ್ ಡಾಲರ್) ಆಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 992 ಅಂಶ ಏರಿಕೆಯಾಗಿ, 80,109ಕ್ಕೆ ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 314 ಅಂಶ ಹೆಚ್ಚಳವಾಗಿ 24,221ಕ್ಕೆ ಸ್ಥಿರಗೊಂಡಿತು.

ಲಾರ್ಸೆನ್ ಆ್ಯಂಡ್ ಟೊಬ್ರೊ, ಎಸ್‌ಬಿಐ, ರಿಲಯನ್ಸ್ ಇಂಡಸ್ಟ್ರೀಸ್, ಪವರ್ ಗ್ರಿಡ್, ಐಸಿಐಸಿಐ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಟಿಸಿಎಸ್, ಕೋಟಕ್ ಮಹೀಂದ್ರ ಬ್ಯಾಂಕ್ ಮತ್ತು ಎಕ್ಸಿಸ್ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಜೆಎಸ್‌ಡಬ್ಲ್ಯು ಸ್ಟೀಲ್, ಟೆಕ್ ಮಹೀಂದ್ರ, ಇನ್ಫೊಸಿಸ್, ಏಷ್ಯನ್ ಪೇಂಟ್ಸ್ ಮತ್ತು ಎಚ್‌ಸಿಎಲ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ರೂಪಾಯಿ ಮೌಲ್ಯ 12 ಪೈಸೆ ಏರಿಕೆ: ದೇಶದ ಷೇರು ಸೂಚ್ಯಂಕಗಳ ಏರಿಕೆಯಿಂದ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಸೋಮವಾರದ ವಹಿವಾಟಿನಲ್ಲಿ ಏರಿಕೆಯಾಗಿದೆ.

ರೂಪಾಯಿ ಮೌಲ್ಯ 12 ಪೈಸೆ ಏರಿಕೆಯಾಗಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಹಿವಾಟಿನ ಅಂತ್ಯದ ವೇಳೆಗೆ 84.29 ಆಗಿದೆ.

ಅದಾನಿ ಗ್ರೀನ್ ಎನರ್ಜಿ ಷೇರಿನ ಮೌಲ್ಯ ಇಳಿಕೆ

ಮುಂಬೈ (ಪಿಟಿಐ): ಅದಾನಿ ಸಮೂಹದ ಕಂಪನಿಗಳ ಪೈಕಿ 5 ಕಂಪನಿಗಳ ಷೇರಿನ ಮೌಲ್ಯ ಸೋಮವಾರ ಇಳಿಕೆಯಾಗಿದೆ. ಅದಾನಿ ಗ್ರೀನ್ ಎನರ್ಜಿಯ ಷೇರಿನ ಮೌಲ್ಯ ಶೇ 8ರಷ್ಟು ಕಡಿಮೆಯಾಗಿದೆ.

ಅದಾನಿ ಎನರ್ಜಿ ಸಲ್ಯೂಷನ್ಸ್, ಅದಾನಿ ಪವರ್, ಎನ್‌ಡಿಟಿವಿ, ಅದಾನಿ ಟೋಟಲ್ ಗ್ಯಾಸ್ ಷೇರಿನ ಮೌಲ್ಯ ಇಳಿದಿದೆ. ಅದಾನಿ ಪೋರ್ಟ್ಸ್, ಎಸಿಸಿ, ಅದಾನಿ ಎಂಟರ್‌ಪ್ರೈಸಸ್, ಅದಾನಿ ವಿಲ್ಮರ್, ಅಂಬುಜಾ ಸಿಮೆಂಟ್ಸ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಸಿಎನ್‌ಜಿ ದರ ಹೆಚ್ಚಳ

ನವದೆಹಲಿ (ಪಿಟಿಐ): ಮುಂಬೈ ಸೇರಿದಂತೆ ದೇಶದ ಹಲವು ನಗರಗಳಲ್ಲಿ ಸಾಂದ್ರೀಕೃತ ನೈಸರ್ಗಿಕ ಅನಿಲದ (ಸಿಎನ್‌ಜಿ) ದರವನ್ನು ಅನಿಲ ಸಂಸ್ಥೆಗಳು ಪ್ರತಿ ಕೆ.ಜಿಗೆ ₹2 ಹೆಚ್ಚಿಸಿವೆ.

ಆದರೆ, ಶೀಘ್ರದಲ್ಲೇ ದೆಹಲಿಯಲ್ಲಿ ಚುನಾವಣೆ ನಡೆಯುತ್ತಿರುವುದರಿಂದ ಇಲ್ಲಿ ಬೆಲೆ ಏರಿಕೆ ಮಾಡಿಲ್ಲ. ಚುನಾವಣೆ ನಂತರ ದರ ಪರಿಷ್ಕರಣೆ ಮಾಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್, ಮಹಾನಗರ ಗ್ಯಾಸ್ ಲಿಮಿಟೆಡ್ (ಎಂಜಿಎಲ್) ಸೇರಿ ಹಲವು ಕಂಪನಿಗಳು ಸಿಎನ್‌ಜಿ ದರ ₹2 ಏರಿಕೆ ಮಾಡಿವೆ. ಬೆಲೆ ಹೆಚ್ಚಳದಿಂದ ಮುಂಬೈನಲ್ಲಿ ಪ್ರತಿ ಕೆ.ಜಿ ಸಿಎನ್‌ಜಿ ದರ ₹77 ಆಗಿದೆ. ದೆಹಲಿಯಲ್ಲಿ ₹75.09 ಇದೆ.

ಮಹಾನಗರ ಗ್ಯಾಸ್ ಲಿಮಿಟೆಡ್, ಅದಾನಿ ಟೋಟಲ್ ಗ್ಯಾಸ್ ಲಿಮಿಟೆಡ್ ಸೇರಿ ಹಲವು ಕಂಪನಿಗಳ ತಯಾರಿಕಾ ವೆಚ್ಚ ಶೇ 20ರಷ್ಟು ಏರಿಕೆಯಾಗಿದ್ದರೂ, ಎರಡು ತಿಂಗಳಿಂದ ಬೆಲೆ ಏರಿಕೆ ಮಾಡಿದ್ದಿಲ್ಲ. ಇದೀಗ ಮಹಾರಾಷ್ಟ್ರದಲ್ಲಿ ಚುನಾವಣೆ ಮುಗಿಯುತ್ತಿದ್ದಂತೆಯೇ ಕಂಪನಿಗಳು ದರ ಏರಿಕೆ ಮಾಡಿವೆ.

ಸಿಎನ್‌ಜಿ ದರ, ರಾಜ್ಯದಿಂದ ರಾಜ್ಯಕ್ಕೆ ಸ್ಥಳೀಯ ತೆರಿಗೆಗಳ ಮೇಲೆ ಅವಲಂಬಿಸಿರುತ್ತದೆ.

ಇಂಡೋನೇಷ್ಯಾದಲ್ಲಿ ಪ್ರವಾಹ: 16 ಮಂದಿ ಸಾವು

ಕರೊ (ಇಂಡೋನೇಷ್ಯಾ): ಇಂಡೋನೇಷ್ಯಾದ ಸುಮತ್ರಾ ದ್ವೀಪದಲ್ಲಿ ವಾರಾಂತ್ಯದಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, 16 ಮಂದಿ ಮೃತಪಟ್ಟಿದ್ದಾರೆ.

ಉತ್ತರ ಸುಮತ್ರಾ ಪ್ರದೇಶದಲ್ಲಿ ಭಾರಿ ಮಳೆಯಿಂದಾಗಿ ನದಿಗಳಲ್ಲಿ ನೀರಿನ ಪ್ರಮಾಣವು ತೀವ್ರ ಹೆಚ್ಚಾಗಿದ್ದರಿಂದ ಸುಮತ್ರಾದ ನಾಲ್ಕು ಜಿಲ್ಲೆಗಳಲ್ಲಿ ಪ್ರವಾಹ ಉಂಟಾಗಿದೆ. ಇದರಿಂದಾಗಿ ಹಲವು ಮನೆಗಳು ಕೊಚ್ಚಿ ಹೋಗಿದ್ದು, ಒಟ್ಟು 321 ಎಕರೆ ಕೃಷಿ ಭೂಮಿ ನಾಶವಾಗಿದೆ.

ಪ್ರವಾಹ ಪೀಡಿತ ಪ್ರದೇಶದಲ್ಲಿ ರಕ್ಷಣಾ ಕಾರ್ಯಾಚರಣೆ ಕೈಗೊಂಡಿದ್ದು, ಇದುವರೆಗೆ 16 ಮೃತದೇಹಗಳನ್ನು ಹೊರತೆಗೆಯಲಾಗಿದೆ. ನಾಪತ್ತೆಯಾಗಿರುವ 6 ಜನರಿಗಾಗಿ ಶೋಧ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಮ್ರಾನ್ ಬೆಂಬಲಿಗರ ಪ್ರತಿಭಟನೆ ಇಸ್ಲಾಮಾಬಾದ್ ಪ್ರಕ್ಷುಬ್ಧ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಬಿಡುಗಡೆಗೆ ಆಗ್ರಹಿಸಿ, ಇಮ್ರಾನ್ ಅವರ ಬೆಂಬಲಿಗರು ಕೈಗೊಂಡಿರುವ ಪ್ರತಿಭಟನಾ ಮೆರವಣಿಗೆ ಸೋಮವಾರವೂ ಮುಂದುವರಿದಿದೆ.

ಮೆರವಣಿಗೆ ವೇಳೆ ನಡೆದ ಹಿಂಸಾಚಾರದಲ್ಲಿ ಪೊಲೀಸರೊಬ್ಬರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

ಬೆಲಾರಸ್‌ನ ಉನ್ನತ ಮಟ್ಟದ ನಿಯೋಗವು ಇಸ್ಲಾಮಾಬಾದ್‌ಗೆ ರಾಜತಾಂತ್ರಿಕ ಭೇಟಿ ನೀಡಿದ್ದು, ಪ್ರತಿಭಟನೆಯನ್ನು ಹತ್ತಿಕ್ಕಲು ಸರ್ಕಾರವು ನಿಷೇಧಾಜ್ಞೆ ಜಾರಿಗೊಳಿಸಿದೆ. ಹೆಚ್ಚುವರಿ ಭದ್ರತಾ ಪಡೆಗಳು ಸ್ಥಳದಲ್ಲಿ ಬೀಡುಬಿಟ್ಟಿವೆ. ಮೊಬೈಲ್ ಮತ್ತು ಇಂಟರ್‌ನೆಟ್ ಸೇವೆಗಳನ್ನು ಆಯ್ದ ಪ್ರದೇಶಗಳಲ್ಲಿ ಸಂಪೂರ್ಣವಾಗಿ ತಡೆಹಿಡಿಯಲಾಗಿದೆ.

ಇಸ್ಲಾಮಾಬಾದ್‌ನತ್ತ ಹೊರಟಿದ್ದ ಇಮ್ರಾನ್ ಖಾನ್ ಬೆಂಬಲಿಗರನ್ನು ಪೊಲೀಸರು ಪಂಜಾಬ್‌ನ ಹಾರೊ ಬಳಿ ಭಾನುವಾರ ತಡರಾತ್ರಿ ತಡೆದಿದ್ದರು. ಬಳಿಕ, ಮೆರವಣಿಗೆಯನ್ನು ಸೋಮವಾರ ಬೆಳಿಗ್ಗೆ ಪುನರಾರಂಭ ಮಾಡಿರುವ ಪ್ರತಿಭಟನಕಾರರು, ಇಸ್ಲಾಮಾಬಾದ್‌ನತ್ತ ಪಯಣ ಬೆಳೆಸಿದ್ದಾರೆ.

ಪ್ರತಿಭಟನಕಾರರು ಇಸ್ಲಾಮಾಬಾದ್ ಪ್ರವೇಶಿಸದಂತೆ ಪೊಲೀಸರು ಲಾಹೋರ್ ಬಳಿ ಹೆದ್ದಾರಿಗಳಿಗೆ ಕಂಟೈನರ್‌ಗಳನ್ನು ಅಡ್ಡಲಾಗಿ ನಿಲ್ಲಿಸಿ, ರಸ್ತೆ ಬಂದ್ ಮಾಡಿದ್ದರು. ಆದರೆ, ಕ್ರೇನ್‌ನೊಂದಿಗೆ ಬಂದಿದ್ದ ಪ್ರತಿಭಟನಕಾರರು, ಕಂಟೈನರ್‌ಗಳನ್ನು ತೆರವುಗೊಳಿಸಿ ಮುನ್ನುಗ್ಗಿದ್ದಾರೆ.

ಇಮ್ರಾನ್ ಖಾನ್ ಅವರ ಪತ್ನಿ ಬುಶ್ರಾ ಬೀಬಿ ಹಾಗೂ ಖೈಬರ್ ಪಖ್ತುಂಖ್ವಾ ಮುಖ್ಯಮಂತ್ರಿ ಅಲಿ ಅಮೀನ್ ಗಂಡಾಪುರ್ ನೇತೃತ್ವದಲ್ಲಿ ಪಿಟಿಐ ಪಕ್ಷದ ಕಾರ್ಯಕರ್ತರು ಪೇಶಾವರದಿಂದ ಇಸ್ಲಾಮಾಬಾದ್‌ವರೆಗೆ ಪ್ರತಿಭಟನಾ ಮೆರವಣಿಗೆ ಕೈಗೊಂಡಿದ್ದಾರೆ. ದೇಶದಾದ್ಯಂತ ನವೆಂಬರ್ 24ರಿಂದ ದೊಡ್ಡ-ಮಟ್ಟದಲ್ಲಿ ಪ್ರತಿಭಟನೆ ನಡೆಸುವಂತೆ ಇಮ್ರಾನ್‌ಖಾನ್ ಅವರು ನ.13ರಂದು ತಮ್ಮ ಬೆಂಬಲಿಗರಿಗೆ ಕರೆ ನೀಡಿದ್ದರು.

ಜೈಲಿನಲ್ಲಿರುವ ಇಮ್ರಾನ್ ಖಾನ್ ಬಿಡುಗಡೆಗೆ ಆಗ್ರಹಿಸಿ, ಬೆಂಬಲಿಗರು ಖೈಬರ್ ಪಖ್ತುಂಖ್ವಾದ ಸ್ವಾಬಿಯಲ್ಲಿ ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು —ಎಎಫ್‌ಪಿ ಚಿತ್ರ

‘ಎಲೆಕ್ಟ್ರಿಕ್ ಮೊಬಿಲಿಟಿ: ಭಾರತದ ನಾಯಕತ್ವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಿಕ್ ಮೊಬಿಲಿಟಿ ಕ್ಷೇತ್ರದಲ್ಲಿ ಭಾರತ ಸಾಧಿಸಿದ ಪ್ರಗತಿಯು ಅಜರ್‌ಬೈಜಾನ್‌ನ ಬಾಕುವಿನಲ್ಲಿ ನಡೆದ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ತಡೆ ಸಮಾವೇಶದಲ್ಲಿ (ಸಿಒಪಿ29) ಅನಾವರಣಗೊಂಡಿದೆ.

ಸಮಾವೇಶದ ಅಂಗವಾಗಿ ‘ಎಲೆಕ್ಟ್ರಿಕ್ ಮೊಬಿಲಿಟಿ ಕ್ಷೇತ್ರದಲ್ಲಿ ಭಾರತದ ನಾಯಕತ್ವ’ ವಿಷಯದಲ್ಲಿ ಅಧಿವೇಶನ ನಡೆಯಿತು. ಸಸ್ಟೇನಬಲ್ ಮೊಬಿಲಿಟಿ ನೆಟ್‌ವರ್ಕ್ (ಎಸ್‌ಎಂಎನ್) ಸಂಸ್ಥೆಯು, ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಭಾರತದಲ್ಲಿ ಆಗಿರುವ ಕ್ರಾಂತಿಕಾರಿ ಬೆಳವಣಿಗೆಗಳನ್ನು ಇತರ ರಾಷ್ಟ್ರಗಳ ಪ್ರತಿನಿಧಿಗಳಿಗೆ ಮನವರಿಕೆ ಮಾಡಿಕೊಟ್ಟಿತು.

ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳು ಎಲೆಕ್ಟ್ರಿಕ್ ಮೊಬಿಲಿಟಿ ಉತ್ತೇಜನಕ್ಕೆ ಕೈಗೊಂಡಿರುವ ಕ್ರಮಗಳ ಬಗ್ಗೆಯೂ ಅಧಿವೇಶನದಲ್ಲಿ ವಿವರಿಸಲಾಯಿತು ಎಂದು ಎಸ್‌ಎಂಎನ್ ಪ್ರಕಟಣೆ ತಿಳಿಸಿದೆ.

‘ಭಾರತದಲ್ಲಿ ಆಗಿರುವ ಎಲೆಕ್ಟ್ರಿಕ್ ಮೊಬಿಲಿಟಿ ಕ್ರಾಂತಿಯಲ್ಲಿ ಮುಂಚೂಣಿಯಲ್ಲಿರುವ ರಾಜ್ಯ ಕರ್ನಾಟಕ ಆಗಿದೆ. ಸುಸ್ಥಿರ ಮತ್ತು ಎಲ್ಲರನ್ನೂ ಒಳಗೊಂಡಿರುವ ಯೋಜನೆಗಳನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ’ ಎಂದು ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್.ವಿ.ಪ್ರಸಾದ್ ಹೇಳಿದ್ದಾರೆ.

ಸುದ್ದಿ 2 ನಿಮಿಷ

‘ಆರ್ಥಿಕ ಪ್ರಗತಿ ಹೆಚ್ಚಳ ನಿರೀಕ್ಷೆ’

ನವದೆಹಲಿ (ಪಿಟಿಐ): ಮುಂಬರುವ ತಿಂಗಳುಗಳಲ್ಲಿ ದೇಶದ ಆರ್ಥಿಕ ಬೆಳವಣಿಗೆಯು ಹೆಚ್ಚಳವಾಗುವ ನಿರೀಕ್ಷೆಯಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ವರದಿ ಸೋಮವಾರ ತಿಳಿಸಿದೆ.

ಉತ್ತಮ ಮುಂಗಾರಿನಿಂದ ಕೃಷಿ ಚಟುವಟಿಕೆಗಳು ಹೆಚ್ಚಳವಾಗಿವೆ. ಕನಿಷ್ಠ ಬೆಂಬಲ ದರವು ಏರಿಕೆಯಾಗಿದೆ. ಜಲಾಶಯಗಳಲ್ಲಿ ನೀರಿನ ಸಂಗ್ರಹವು ಹೆಚ್ಚಳವಾಗಿದ್ದು, ಕೃಷಿ ಉತ್ಪನ್ನಗಳ ಅಧಿಕ ಉತ್ಪಾದನೆಯಿಂದಾಗಿ ಬೆಲೆ ಕಡಿಮೆಯಾಗಲಿದೆ. ಇದರಿಂದ ಹಣದುಬ್ಬರವು ಇಳಿಕೆ ಆಗಬಹುದು ಎಂದು ಅಕ್ಟೋಬರ್ ತಿಂಗಳ ಮಾಸಿಕ ವರದಿ ತಿಳಿಸಿದೆ.

ನವೆಂಬರ್ ಆರಂಭದಲ್ಲಿ ಪ್ರಮುಖ ಆಹಾರ ವಸ್ತುಗಳ ಬೆಲೆಯು ಇಳಿಕೆಯಾಗಿರುವುದನ್ನು ತೋರಿಸುತ್ತಿದೆ. ಆದರೂ, ಜಾಗತಿಕ ಅಂಶಗಳು ದೇಶೀಯ ಹಣದುಬ್ಬರ ಮತ್ತು ಪೂರೈಕೆಯ ಮೇಲೆ ಪರಿಣಾಮ ಬೀರಬಹುದು ಎಂದು ತಿಳಿಸಿದೆ.

ವಿದೇಶಿ ನೇರ ಹೂಡಿಕೆಯ ಒಳಹರಿವು ಪ್ರಸಕ್ತ ಹಣಕಾಸು ವರ್ಷದ ಮೊದಲ ಐದು ತಿಂಗಳಲ್ಲಿ ಉತ್ತಮ ಬೆಳವಣಿಗೆ ದಾಖಲಿಸಿದ್ದು, ₹5.46 ಲಕ್ಷ ಕೋಟಿ ವಿದೇಶಿ ವಿನಿಮಯ ಮೀಸಲು ಸಂಗ್ರಹ ಹೆಚ್ಚಳವಾಗಿದೆ. ತಯಾರಿಕಾ ವಲಯದಲ್ಲಿ ಉದ್ಯೋಗಗಳ ಹೆಚ್ಚಳ ಮತ್ತು ಸಂಘಟಿತ ವಲಯಗಳಿಗೆ ಯುವಜನರ ಸೇರ್ಪಡೆ ಏರಿಕೆಯಾಗಲಿದೆ. ಸೇವಾ ವಲಯವು ತನ್ನ ವೇಗವನ್ನು ಉಳಿಸಿಕೊಳ್ಳುತ್ತಿದೆ ಎಂದು ಹೇಳಿದೆ.

ಜಿಡಿಪಿ ಪ್ರಗತಿ: ಪರಿಷ್ಕರಣೆ

ನವದೆಹಲಿ (ಪಿಟಿಐ): ಮುಂದಿನ ಎರಡು ಹಣಕಾಸು ವರ್ಷದ ದೇಶದ ಜಿಡಿಪಿ ಬೆಳವಣಿಗೆಯ ಅಂದಾಜನ್ನು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆ ಸೋಮವಾರ ಪರಿಷ್ಕರಿಸಿದೆ.

2025-26ರ ಹಣಕಾಸು ವರ್ಷದಲ್ಲಿ ಶೇ 6.7 ಮತ್ತು 2026-27ರಲ್ಲಿ ಶೇ 6.8ರಷ್ಟಾಗಲಿದೆ ಎಂದು ಹೇಳಿದೆ. ಈ ಮೊದಲು ಕ್ರಮವಾಗಿ ಶೇ 6.9 ಮತ್ತು ಶೇ 7ರಷ್ಟು ಎಂದು ಹೇಳಿತ್ತು. ಮೊದಲ ಅಂದಾಜಿನ ಪ್ರಮಾಣಕ್ಕಿಂತ ಈಗ ಕಡಿಮೆಯಾಗಿದೆ. ಆದರೆ, 2027-28ರಲ್ಲಿ ಶೇ 7ರಷ್ಟು ಆರ್ಥಿಕ ಬೆಳವಣಿಗೆ ಆಗಲಿದೆ ಎಂದು ಅಂದಾಜಿಸಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 6.8ರಷ್ಟು ಬೆಳವಣಿಗೆ ನಿರೀಕ್ಷೆ ಇದೆ. ಬಡ್ಡಿ ದರ ಹೆಚ್ಚಿರುವುದು ಮತ್ತು ನಗರ ಪ್ರದೇಶದಲ್ಲಿ ಬೇಡಿಕೆ ಪ್ರಮಾಣ ಕಡಿಮೆಯಾಗಿರುವುದರಿಂದ ಪರಿಷ್ಕರಣೆ ಮಾಡಲಾಗಿದೆ. ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ವಿಸ್ತರಣೆಯ ವಲಯದಲ್ಲಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ತಯಾರಿಕಾ ವಲಯದ ಚಟುವಟಿಕೆ ಕಡಿಮೆಯಾಗಿರುವುದರಿಂದ ಪರಿಷ್ಕರಣೆ ಮಾಡಲಾಗಿದೆ ಎಂದು ಹೇಳಿದೆ.

ಚೀನಾದ ಬೆಳವಣಿಗೆ 2024ರಲ್ಲಿ ಶೇ 4.8, 2025ರಲ್ಲಿ ಶೇ 4.1 ಮತ್ತು 2026ರಲ್ಲಿ ಶೇ 3.8ರಷ್ಟಾಗಲಿದೆ ಎಂದು ನಿರೀಕ್ಷಿಸಿರುವುದಾಗಿ ಹೇಳಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-33500
ಹಳತು	43000-50000
ಕುಮಟ	
ಚಾಲಿ	31869-36699
ಚಿಪ್ಪು	22089-26899
ಕೋಕ	6099-23019
ಫ್ಯಾಕ್ಟರಿ	3569-19529
ಹಳೆಚಾಲಿ	36109-39099
ಹೊಸಚಾಲಿ	21569-26099
ಪುತ್ತೂರು	
ಹೊಸತು	25000-33500
ಹಳತು	36000-50000
ಸಾಗರ	
ಬಿಳಿಗೋಟು	13214-24599
ಚಾಲಿ	26599-33599
ಕೋಕ	7719-25599
ಕೆಂಪುಗೋಟು	16989-31200
ರಾಶಿ	30089-50279
ಸಿಪ್ಪೆಗೋಟು	8888-16666
ಶಿವಮೊಗ್ಗ	
ಬೆಟ್ಟೆ	48599-53400
ಗೊರಬಲು	17000-32269
ಹೊಸತು	46569-50399
ರಾಶಿ	29699-50011
ಸರಕು	50400-88296
ಸಿದ್ದಾಪುರ	
ಬಿಳಿಗೋಟು	24419-28209
ಚಾಲಿ	31909-36409
ಕೋಕ	19319-23909
ಕೆಂಪುಗೋಟು	20119-27209
ರಾಶಿ	40989-46649
ತಟ್ಟಿಬೆಟ್ಟೆ	32289-32289
ಶಿರಸಿ	
ಬೆಟ್ಟೆ	28599-34699
ಬಿಳಿಗೋಟು	21309-30499
ಚಾಲಿ	33539-37699
ಕೆಂಪುಗೋಟು	12899-21110
ರಾಶಿ	42499-46899
ಯಲ್ಲಾಪುರ	
ಅಪಿ	58699-60899
ಬಿಳಿಗೋಟು	14899-28399
ಚಾಲಿ	31220-37299
ಕೋಕ	6109-18899
ಕೆಂಪುಗೋಟು	16506-26109
ರಾಶಿ	41309-56899
ತಟ್ಟಿಬೆಟ್ಟೆ	28099-35880

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹20000
ಎಸಿ	₹11200
ಆರ್‌ಪಿ	₹19000
ಆರ್‌ಸಿ	₹11300

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1470 (1465)
ಸೋಯಾ (ರಿಫೈನ್ಡ್)	₹1330 (1320)
ಸೂರ್ಯಕಾಂತಿ (ರಿಫೈನ್ಡ್)	₹1400 (1400)
ಪಾಮೋಲಿನ್	₹1345 (1335)

ಮುಂಬೈ ಧಾರಣೆ (ಶೇಂಗಾ)

25-11-2024

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ(ಹೊಸ)	9000-9100
ದಪ್ಪ ಗುಜರಾತ್(ಹೊಸ)	9800-9900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1475)
ಒಂದು ವಾರದ ಡೆಲಿವರಿ	1475 (1470)
ಪಾಮ್ ವಾರದ ಡೆಲಿವರಿ	1343 (1333)
ಸೂರ್ಯಕಾಂತಿ ಎಣ್ಣೆ ಕಚ್ಚಾ	1345 (1345)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹76,800 (77,850)

ಬೆಳ್ಳಿ ಕೆ.ಜಿ ₹89,500 (90,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸಂಕ್ಷಿಪ್ತ ಸುದ್ದಿ

‘ಕದನ ವಿರಾಮಕ್ಕೆ ಭಾರತದ ಬೆಂಬಲ’

ರೋಮ್ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ತಕ್ಷಣವೇ ಕದನ ವಿರಾಮ ಘೋಷಿಸುವುದನ್ನು ಭಾರತವು ಬೆಂಬಲಿಸುತ್ತದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದರು.



ಎಸ್. ಜೈಶಂಕರ್

ರೋಮ್‌ನಲ್ಲಿ ಮಾತನಾಡಿದ ಅವರು, ‘ಅಂತರರಾಷ್ಟ್ರೀಯ ಮಾನವೀಯ ಕಾನೂನನ್ನು ಕಡೆಗಣಿಸಲಾಗುವುದಿಲ್ಲ. ಮಿಲಿಟರಿ ಕಾರ್ಯಾಚರಣೆಯಲ್ಲಿ ಸಂಭವಿಸಿದ ಹೆಚ್ಚಿನ ನಾಗರಿಕರ ಸಾವು-ನೋವು, ಭಯೋತ್ಪಾದನೆ ಮತ್ತು ಒತ್ತೆಯಾಗಿಟ್ಟುಕೊಳ್ಳುವುದು ಸ್ವೀಕಾರಾರ್ಹವಲ್ಲ ಎಂದು ಭಾರತ ಪರಿಗಣಿಸುತ್ತದೆ’ ಎಂದು ಹೇಳಿದರು.

‘ಈಗಿರುವ ಪರಿಸ್ಥಿತಿಯಲ್ಲಿ ನಾವೆಲ್ಲರೂ ಕದನ ವಿರಾಮವನ್ನು ಬೆಂಬಲಿಸಬೇಕು. ಪ್ಯಾಲೆಸ್ಟೀನ್ ಜನರ ಭವಿಷ್ಯವನ್ನು ಗಮನದಲ್ಲಿರಿಸಿಕೊಂಡು ‘ಎರಡೂ ರಾಷ್ಟ್ರಗಳಿಗೆ ಪರಿಹಾರ’ ಸಿಗುವುದರ ಪರವಾಗಿ ಭಾರತ ಇದೆ ಎಂದರು. ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ವಿಸ್ತರಣೆಯಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ಜೈಶಂಕರ್, ‘ತಾಳ್ಮೆಯನ್ನು ಕಾಯ್ದುಕೊಳ್ಳುವಂತೆ ಭಾರತವು ಇಸ್ರೇಲ್, ಇರಾನ್‌ಗೆ ಹೇಳುತ್ತ ಬಂದಿದೆ. ಎರಡೂ ದೇಶಗಳೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದೆ’ ಎಂದರು.

‘ಲೆಬನಾನ್ ಜತೆ ಒಪ್ಪಂದ ದೊಡ್ಡ ತಪ್ಪು’

ಜೆರುಸಲೇಂ (ಎಎಫ್‌ಪಿ): ಲೆಬನಾನ್ ಜೊತೆಗೆ ಕದನ ವಿರಾಮ ಒಪ್ಪಂದಕ್ಕೆ ಬರುವುದು ‘ಅತಿ ದೊಡ್ಡ ತಪ್ಪು’ ಎಂದು ಇಸ್ರೇಲ್‌ನ ರಾಷ್ಟ್ರೀಯ ಭದ್ರತಾ ಸಚಿವ ಇಟಮಾನ್ ಬೆನ್ ಗಿವಿಯರ್ ಸೋಮವಾರ ಹೇಳಿದ್ದಾರೆ.

‘ಲೆಬನಾನ್ ಜೊತೆಗೆ ಒಪ್ಪಂದ ಮಾಡಿಕೊಂಡು ಯುದ್ಧ ನಿಲ್ಲಿಸಿದರೆ ಹಿಜ್ಬುಲ್ಲಾ ಉಗ್ರರ ಸದೆಬಡಿಯಲು ಇರುವ ಅವಕಾಶವನ್ನು ಬಿಟ್ಟುಕೊಟ್ಟಂತಾಗುತ್ತದೆ’ ಎಂದು ಅವರು ಹೇಳಿದ್ದಾರೆ.

‘ಸಂಪೂರ್ಣ ಜಯ ಸಾಧಿಸುವವರೆಗೂ ಯುದ್ಧ ಮುಂದುವರಿಸಿ’ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಮನವಿ ಮಾಡಿದ್ದಾರೆ.

ಇಸ್ರೇಲ್ ಮತ್ತು ಲೆಬನಾನ್ ನಡುವಣ ಸಂಘರ್ಷ ನಿಲ್ಲಿಸಲು ಅಮೆರಿಕ ನೇತೃತ್ವದಲ್ಲಿ ರಾಜತಾಂತ್ರಿಕ ಪ್ರಯತ್ನಗಳು ನಡೆಯುತ್ತಿವೆ.

ಸಿಲಿಕಾನ್ ವ್ಯಾಲಿಯಲ್ಲಿ ಒಗ್ಗಟ್ಟಿನ ರ್‍ಯಾಲಿ

ವಾಷಿಂಗ್ಟನ್ (ಪಿಟಿಐ): ಕೆನಡಾ ಹಾಗೂ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಹಿಂಸಾಚಾರವನ್ನು ಖಂಡಿಸಿ, ಸಿಲಿಕಾನ್ ವ್ಯಾಲಿಯಲ್ಲಿ ಭಾರತೀಯ ಅಮೆರಿಕನ್ನರು ಒಗ್ಗಟ್ಟಿನ ರ್‍ಯಾಲಿ ನಡೆಸಿದರು.

‘ಖಾಲಿಸ್ತಾನಿ ಭಯೋತ್ಪಾದನೆಯನ್ನು ನಿಲ್ಲಿಸಿ, ಕೆನಡಾದಲ್ಲಿನ ಹಿಂದೂಗಳನ್ನು ರಕ್ಷಿಸಿ’, ‘ಇಸ್ಲಾಂ ಭಯೋತ್ಪಾದನೆಯನ್ನು ನಿಲ್ಲಿಸಿ, ಬಾಂಗ್ಲಾದೇಶದಲ್ಲಿನ ಹಿಂದೂಗಳನ್ನು ರಕ್ಷಿಸಿ’ ಎಂಬ ಘೋಷಣೆಗಳು ಮಿಲ್ಪಿಟಾಸ್ ಸಿಟಿ ಹಾಲ್‌ನಲ್ಲಿ ನಡೆದ ಸಭೆಯಲ್ಲಿ ಮೊಳಗಿದವು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Wanted

ಲಾರಿ ಬಾಡಿಗೆಗೆ ಬೇಕಾಗಿದೆ
ಮೆಕ್ಕೆಜೋಳ ದಾಸ್ತಾನನ್ನು ಹುಬ್ಬಳ್ಳಿಯಿಂದ ಚೆನ್ನೈಗೆ ನಿಯಮಿತವಾಗಿ ಸಾಗಿಸಲು ಲಾರಿ ಬೇಕಾಗಿದೆ.
ಆಸಕ್ತರು ಬಾಡಿಗೆಯ ವಿವರಗಳೊಂದಿಗೆ ಸಂಪರ್ಕಿಸಿ
77600-51446

ಪುರುಷ ಸಹಾಯಕರು ತಕ್ಷಣ ಬೇಕಾಗಿದ್ದಾರೆ. ರಾಮನಗರ ಬಳಿಯಿರುವ ರೆಸಾರ್ಟ್‌ಗೆ ಊಟ, ವಸತಿಯೊಂದಿಗೆ ಉತ್ತಮ ಸಂಬಳ, ಸಂಪರ್ಕಿಸಿ: 9663497356/ 8884811114

ಬೇಕಾಗಿದ್ದಾರೆ: ಹೋಂನರ್ಸ್ ಹಾಗೂ ಮನೆಕೆಲಸಕ್ಕೆ ಹೆಂಗಸರು (ನಿಲ್ಲುವವರು), ಸಂಬಳ: 32,000/– ತನಕ. ಸಂಪರ್ಕಿಸಿರಿ: 8073941828/ 9916856577

Part-Time Jobs

ಮನೆಯಲ್ಲೇ ಕುಳಿತು ಪುಸ್ತಕ ಬರೆಯುವ ಹಾಗು ಫಾರಂ ತುಂಬುವ ಮೂಲಕ ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಇದೆ. 9611874742, 9611574742.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಭವಿಷ್ಯ

Astrology

★ಭಾರತದ★ ಪ್ರಖ್ಯಾತ ಬುಡಬುಡಕಿ ಜನಾಂಗದ ಲಕ್ಷಾಂತರ ಸಂತುಷ್ಟಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀ.ದೇವಾನಂದರವರಿಂದ ನಿಮ್ಮೆಲ್ಲಾ ಸಂಕಷ್ಟಗಳಿಗೆ ಮುಕ್ತಿ,ಮನ್ಮೋಹಿನಿ ಮೂಡಿ ವಶೀಕರಣಗಳಿಗೆ.9353143216

ಒಂದೇ ಕರೆಯಲ್ಲಿ 100% ಶಾಶ್ವತ ಪರಿಹಾರ ಕೆಲವೇ ಗಂಟೆಗಳಲ್ಲಿ ಅಸಾಧ್ಯವಾದದ್ದು ಇಲ್ಲಿ ಸಾಧ್ಯ ಸಮಸ್ಯೆ ನಿಮ್ಮದು ಪರಿಹಾರ ನಮ್ಮದು: 9741637382

ಪ್ರವಾಸ

Travel

ಭಾರತಪರಂಪರ ದರ್ಶನ: 23.12.2024 5ದಿನ ಅಹೋಬಿಲಂ ಶ್ರೀಶೈಲಂ, ಮಂತ್ರಾಲಯ. 18.1.2025 11ದಿನ 4 ಜ್ಯೋತಿರ್ಲಿಂಗ ಗುಜರಾತ್,ಮಧ್ಯಪ್ರದೇಶ. ಪ್ರಕಾಶ್ ಹೆಬ್ಬಾರ್ 9448792891.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ
BOOK YOUR JOB ADS IN PRAJAVANI ALL KARNATAKA ON WEDNESDAY + SUNDAY
www.dhclassifieds.com
BOOK NOW
@ 500/-* PER SQCM
SINGLE / DOUBLE / MULTIPLE COLUMN
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9845114560 | +91 9900428036

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

(₹ ಕೋಟಿಗಳಲ್ಲಿ)

ಚೆನ್ನೈ ಸೂಪರ್ ಕಿಂಗ್ಸ್

ಆಟಗಾರರು: ನೂರ್ ಅಹಮ್ಮದ್ (10.0), ರವಿಚಂದ್ರನ್ ಅಶ್ವಿನ್ (9.75), ಡೆವೊನ್ ಕಾನ್ವೆ (6.0), ಸಯ್ಯದ್ ಖಲೀಲ್ ಅಹಮ್ಮದ್ (4.80), ರಚಿನ್ ರವೀಂದ್ರ (4.0– ಆರ್‌ಟಿಎಂ), ಅಂಶುಲ್ ಕಾಂಬೋಜ್ (3.40), ರಾಹುಲ್ ತ್ರಿಪಾಠಿ (3.40), ಸ್ಯಾಮ್ ಕರನ್ (2.40), ಗುರ್ಜಪ್‌ನೀತ್ ಸಿಂಗ್ (2.20), ನೇಥನ್ ಎಲೀಸ್ (2.0), ದೀಪಕ್ ಹೂಡಾ (1.70), ಜೆಮ್ಮಿ ಓವರ್‌ಟನ್ (1.50), ವಿಜಯ್ ಶಂಕರ್ (1.20), ರಾಮಕೃಷ್ಣ ಘೋಷ್, ಕಮಲೇಶ್ ನಾಗರಕೋಟಿ, ಮುಕೇಶ್ ಚೌಧರಿ, ಶೇಕ್ ರಶೀದ್ (ತಲಾ 0.30)
ರಿಟೇನ್ ಆಟಗಾರರು: ಋತುರಾಜ್ ಗಾಯಕವಾಡ್ (18.0), ರವೀಂದ್ರ ಜಡೇಜ (18.0), ಮಥೀಶ ಪಥಿರಾಣ (13.0), ಶಿವಂ ದುಬೆ (12.0), ಮಹೇಂದ್ರ ಸಿಂಗ್ ಧೋನಿ (4.0)

ಪಂಜಾಬ್ ಕಿಂಗ್ಸ್

ಆಟಗಾರರು: ಶ್ರೇಯಸ್ ಅಯ್ಯರ್ (26.75), ಯಜುವೇಂದ್ರ ಚಾಹಲ್ (18.0), ಅರ್ಷದೀಪ್ ಸಿಂಗ್ (18.0– ಆರ್‌ಟಿಎಂ), ಮಾರ್ಕಸ್ ಸ್ಟೊಯಿನಿಸ್ (11.0), ಮಾರ್ಕೊ ಯಾನ್ಸನ್ (7.0), ನೇಹಲ್ ವಧೇರಾ (4.20), ಗ್ಲೆನ್ ಮ್ಯಾಕ್ಸ್‌ವೆಲ್ (4.20), ಪ್ರಿಯಾಂಶ್ ಆರ್ಯ (3.80), ಜೋಶ್ ಇಂಗ್ಲಿಸ್ (2.60), ಅಜ್ಮತ್‌ವುಲ್ಲಾ ಒಮರ್‌ಝೈ (2.40), ಲಾಕಿ ಫರ್ಗ್ಯುಸನ್ (2.0), ವೈಶಾಖ ವಿಜಯಕುಮಾರ್ (1.80), ಯಶ್ ಠಾಕೂರ್ (1.60), ಹರ್ಮೀತ್ ಬ್ರಾರ್ (1.50), ವಿಷ್ಣು ವಿನೋದ್ (0.95), ಕುಲದೀಪ್ ಸೇನ್ (0.80), ಕ್ಸೇವಿಯರ್ ಬಾರ್ಟ್ಲೆಟ್ (0.80), ಪೈಲ ಅವಿನಾಶ್, ಸೂರ್ಯಾಂಶ್ ಶೆಡ್ಗೆ, ಮುಷೀರ್ ಖಾನ್, ಹರ್ನೂರ್ ಪನ್ನು (ತಲಾ 0.30)
ರಿಟೇನ್ ಆಟಗಾರರು: ಶಶಾಂಕ್ ಸಿಂಗ್ (5.5), ಪ್ರಭಸಿಮ್ರಾನ್ ಸಿಂಗ್ (4.0)

ಅನುಭವಿ ವೇಗಿ ಭುವನೇಶ್ವರ್ ಕುಮಾರ್, ಆಲ್‌ರೌಂಡರ್ ಕೃನಾಲ್‌ಗೆ ಮಣೆ ಹಾಕಿದ ಬೆಂಗಳೂರು

ಆರ್‌ಸಿಬಿಗೆ ಮರಳಿದ ದೇವದತ್ತ, ಮನೋಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಬ್ಯಾಟರ್ ದೇವದತ್ತ ಪಡಿಕ್ಕಲ್ ಮತ್ತು ಆಲ್‌ರೌಂಡರ್ ಮನೋಜ್ ಭಾಂಡಗೆ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಮರಳಿದರು.

ಸೌದಿ ಅರೇಬಿಯಾದ ಜೆದ್ದಾನಲ್ಲಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮೆಗಾ ಬಿಡ್ ಪ್ರಕ್ರಿಯೆಯ ಎರಡನೇ ದಿನವಾದ ಸೋಮವಾರ ಆರ್‌ಸಿಬಿ ತಂಡವು ದೇವದತ್ತ ಅವರನ್ನು (ಮೂಲಬೆಲೆ; ₹2 ಕೋಟಿ) ಖರೀದಿಸಿತು. ಮನೋಜ್ ಅವರನ್ನೂ ಮೂಲಬೆಲೆ ₹ 30 ಲಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿತು. ಹರಾಜು ಪ್ರಕ್ರಿಯೆಯ ಮೊದಲ ದಿನವಾದ ಭಾನುವಾರ ಯಾವುದೇ ಕನ್ನಡಿಗ ಆಟಗಾರನನ್ನು ಆರ್‌ಸಿಬಿ ತೆಗೆದುಕೊಂಡಿರಲಿಲ್ಲ. ಆದ್ದರಿಂದ ಸಾಮಾಜಿಕ ಜಾಲತಾಣದಲ್ಲಿ ಕರ್ನಾಟಕದ ಕ್ರಿಕೆಟ್ ಅಭಿಮಾನಿಗಳಿಂದ ಟೀಕೆಗಳಿಗೆ ಗುರಿಯಾಗಿತ್ತು.

ಪ್ರಮುಖ ಆಟಗಾರರಾದ ಕೆ.ಎಲ್. ರಾಹುಲ್, ಪ್ರಸಿದ್ಧ ಕೃಷ್ಣ, ಕರುಣ್ ನಾಯರ್ ಅವರನ್ನು ಬೇರೆ ಬೇರೆ ತಂಡಗಳು ಖರೀದಿಸಿದ್ದವು. ಆದರೆ ಆರ್‌ಸಿಬಿ ಬಿಡ್ ಮಾಡಿರಲಿಲ್ಲ. ಮೊದಲ ದಿನದಂದು ದೇವದತ್ತ ಅವರು 'ಅನ್‌ಸೋಲ್ಡ್' ಆಗಿದ್ದರು. ಸೋಮವಾರ ರಾತ್ರಿ ಎರಡನೇ ಸುತ್ತಿನಲ್ಲಿ ಅವರ ಹೆಸರನ್ನು ಕರೆಯಲಾಯಿತು. ಆಗ ಆರ್‌ಸಿಬಿಯು ಖರೀದಿಸಿತು.

182 ತಂಡಗಳ ಪಾಲಾದ ಒಟ್ಟು ಆಟಗಾರರು

62 ತಂಡ ಸೇರಿದ ಒಟ್ಟು ವಿದೇಶಿ ಆಟಗಾರರು

₹639 ಕೋಟಿ ಆಟಗಾರರ ಹರಾಜಿಗೆ ಬಳಸಿದ ಮೊತ್ತ

ಬೆಂಗಳೂರಿನ ದೇವದತ್ತ ಅವರು ಐಪಿಎಲ್‌ಗೆ ಆರ್‌ಸಿಬಿ ಮೂಲಕವೇ 2020ರಲ್ಲಿ ಪದಾರ್ಪಣೆ ಮಾಡಿದ್ದರು. ಎಡಗೈ ಬ್ಯಾಟರ್ ಮೊದಲ ಆವೃತ್ತಿಯಲ್ಲಿಯೇ 470 ರನ್ ಪೇರಿಸಿದ್ದರು. ಉದಯೋನ್ಮುಖ ಆಟಗಾರ ಪ್ರಶಸ್ತಿ ಗಳಿಸಿದ್ದರು. 2021ರ ಆವೃತ್ತಿಯಲ್ಲಿಯಲ್ಲಿಯೂ 52 ಎಸೆತಗಳಲ್ಲಿ ಶತಕ ದಾಖಲಿಸಿದ್ದರು. ಒಟ್ಟು 411 ರನ್ ಕಲೆಹಾಕಿದ್ದರು. ನಂತರದ ವರ್ಷದಲ್ಲಿ ಆರ್‌ಸಿಬಿಯು ಅವರನ್ನು ಬಿಡುಗಡೆ ಮಾಡಿತ್ತು. 2022ರ ಮೆಗಾ ಬಿಡ್‌ನಲ್ಲಿ ರಾಜಸ್ಥಾನ ರಾಯಲ್ಸ್ ತಂಡವು ಪಡಿಕ್ಕಲ್ ಅವರನ್ನು ಖರೀದಿಸಿತ್ತು. ಕಳೆದ ಆವೃತ್ತಿಯವರೆಗೂ ಅವರು ಅದೇ ತಂಡದಲ್ಲಿದ್ದರು. ಇದೀಗ ಮತ್ತೆ 'ತವರು' ತಂಡಕ್ಕೆ ಮರಳಿದ್ದಾರೆ.



ಭುವನೇಶ್ವರ ಕುಮಾರ್

ದೇವದತ್ತ ಐಪಿಎಲ್ ಸಾಧನೆ	
ಪಂದ್ಯಗಳು	64
ರನ್	1559
ಅರ್ಧಶತಕ	9
ಶತಕ	1
ಶ್ರೇಷ್ಠ	101*

ದೇವದತ್ತ ಪಡಿಕ್ಕಲ್

ಕಳೆದ ತಿಂಗಳು ಅವರು ಆಸ್ಟ್ರೇಲಿಯಾ ಎ ತಂಡದ ಎದುರು ಆಡಿದ ಭಾರತ ಎ ತಂಡದಲ್ಲಿದ್ದರು. ಸೋಮವಾರ ಮುಕ್ತಾಯವಾದ ಆಸ್ಟ್ರೇಲಿಯಾ ಎದುರಿನ ಪರ್ತ್ ಟೆಸ್ಟ್‌ನಲ್ಲಿಯೂ ಆಡಿದ್ದರು. 24 ವರ್ಷದ ಎಡಗೈ ಬ್ಯಾಟರ್ ದೇವದತ್ತ ಮೂರು ಮಾದರಿಗಳಲ್ಲಿಯೂ ಉತ್ತಮ ದಾಖಲೆ ಹೊಂದಿದ್ದಾರೆ.

ರಾಯಚೂರಿನ 26 ವರ್ಷ ವಯಸ್ಸಿನ ಮನೋಜ್ ಅವರು ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ ಛಾಪು ಮೂಡಿಸಿದ್ದಾರೆ. ಕಳೆದ ಎರಡು ಆವೃತ್ತಿಗಳಲ್ಲಿಯೂ ಅವರು ಆರ್‌ಸಿಬಿ ತಂಡದಲ್ಲಿದ್ದರು. ಆದರೆ ಯಾವುದೇ ಪಂದ್ಯದಲ್ಲಿಯೂ ಅವರಿಗೆ 11ರ ಬಳಗದಲ್ಲಿ ಆಡುವ ಅವಕಾಶ ಲಭಿಸಿರಲಿಲ್ಲ.

ಬೆಂಗಳೂರಿಗೆ ಭುವಿ: ಸುಮಾರು ಎರಡು ವರ್ಷಗಳಿಂದ ಭಾರತ ತಂಡದಲ್ಲಿ ಸ್ಥಾನ ಪಡೆಯದ ಮಧ್ಯಮವೇಗಿ ಭುವನೇಶ್ವರ್ ಕುಮಾರ್ ಅವರಿಗೆ ಮೆಗಾ ಹರಾಜಿನಲ್ಲಿ ಅದೃಷ್ಟ ಖುಲಾಯಿಸಿತು. ಉತ್ತರಪ್ರದೇಶದ ಭುವನೇಶ್ವರ್ ಅವರನ್ನು ಆರ್‌ಸಿಬಿಯು ₹ 10.75 ಕೋಟಿ ನೀಡಿ ಖರೀದಿಸಿತು. ಈ ಹಿಂದೆ ಅವರು ಸನ್‌ರೈಸರ್ಸ್ ಹೈದರಾಬಾದ್ ತಂಡದಲ್ಲಿದ್ದರು.

ಆರ್‌ಸಿಬಿ ತಂಡವು ಈಗಾಗಲೇ ಆಸ್ಟ್ರೇಲಿಯಾದ ವೇಗಿ ಜೋಷ್ ಹ್ಯಾಜಲ್‌ವುಡ್, ಶ್ರೀಲಂಕಾದ ಮಧ್ಯಮವೇಗಿ ನುವಾನ್ ತುಷಾರ ಹಾಗೂ ವಿಂಡೀಸ್ ವೇಗಿ ರೊಮಾರಿಯೊ ಶೆಫರ್ಡ್ ಅವರನ್ನೂ ಸೇರ್ಪಡೆ ಮಾಡಿಕೊಂಡಿದೆ. ಎಡಗೈ ವೇಗಿ ಯಶ್ ದಯಾಳ್ ಈಗಾಗಲೇ ತಂಡದಲ್ಲಿ ರಿಟೇನ್ ಆಗಿದ್ದಾರೆ. ಇದೀಗ ಭುವಿ ಸೇರ್ಪಡೆಯಿಂದ ವೇಗದ ಬೌಲಿಂಗ್ ವಿಭಾಗಕ್ಕೆ ಬಲ ಬಂದಂತಾಗಿದೆ. ಸ್ಪಿನ್ ಆಲ್‌ರೌಂಡರ್ ಕೃನಾಲ್ ಪಾಂಡ್ಯ ಅವರೂ ಆರ್‌ಸಿಬಿ ಸೇರಿದ್ದಾರೆ. ಇಂಗ್ಲೆಂಡ್‌ನ 21 ವರ್ಷದ ಎಡಗೈ ಬ್ಯಾಟರ್ ಜೇಕಬ್ ಬೇಥಲ್ ಅವರನ್ನು ಆಯ್ಕೆ ಮಾಡಲಾಗಿದೆ. ಅವರು ಇಂಗ್ಲೆಂಡ್ ತಂಡದಲ್ಲಿ 7 ಅಂತರರಾಷ್ಟ್ರೀಯ ಟಿ20 ಮತ್ತು 8 ಏಕದಿನ ಪಂದ್ಯ ಆಡಿದ್ದಾರೆ.

ಹರಾಜು ಪ್ರಕ್ರಿಯೆಯನ್ನು ಮುಂಬೈನ ಮಲ್ಲಿಕಾ ಸಾಗರ್ ನಡೆಸಿಕೊಟ್ಟರು.

ರಾಯಲ್ಸ್ ತೆಕ್ಕೆಗೆ ವೈಭವ್

ಬಿಹಾರದ 13 ವರ್ಷ ವಯಸ್ಸಿನ ಬ್ಯಾಟರ್ ವೈಭವ್ ಸೂರ್ಯವಂಶಿ ಅವರನ್ನು ರಾಜಸ್ಥಾನ ರಾಯಲ್ಸ್ ತಂಡವು ₹ 1.1 ಕೋಟಿಗೆ ಖರೀದಿಸಿದೆ. ಈ ಪೋರನಿಗಾಗಿ ರಾಯಲ್ಸ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ನಡುವೆ ಪೈಪೋಟಿ ಏರ್ಪಟ್ಟಿತ್ತು.

ಈ ಮೂಲಕ ವೈಭವ್, ಐಪಿಎಲ್ ತಂಡಕ್ಕೆ ಆಯ್ಕೆಯಾದ ಅತಿ ಕಿರಿಯ ವಯಸ್ಸಿನ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರವಾದರು.

ಕಳೆದ ಸೆಪ್ಟೆಂಬರ್‌ನಲ್ಲಿ ಆಸ್ಟ್ರೇಲಿಯಾ ತಂಡದ (19 ವರ್ಷದೊಳಗಿನವರ) ವಿರುದ್ಧ ಟೆಸ್ಟ್ ಪಂದ್ಯದಲ್ಲಿ ಭಾರತದ ಪರ ವೈಭವ್ ಕೇವಲ 62 ಎಸೆತಗಳಲ್ಲಿ 104 ರನ್ ಗಳಿಸಿ ಗಮನ ಸೆಳೆದಿದ್ದರು.

ಮುಂಬೈ ಇಂಡಿಯನ್ಸ್

ಆಟಗಾರರು: ಟ್ರೆಂಟ್ ಬೌಲ್ಟ್ (12.50, ದೀಪಕ್ ಚಾಹರ್ (9.25), ವಿಲ್ ಜಾಕ್ಸ್ (5.25), ನಮನ್ ಧೀರ್ (5.25–ಆರ್‌ಟಿಎಂ), ಎ.ಎಂ. ಗಜನ್ಫರ್ (4.80), ಮಿಚೆಲ್ ಸ್ಯಾಂಟನರ್ (2.0), ರೆಯಾನ್ ರಿಕೆಲ್ಟನ್ (1.0), ರೀಸ್ ಟಾಪ್ಲಿ (0.75), ರಾಬಿನ್ ಮಿಂಜ್ (0.65), ಕರ್ಣ್ ಶರ್ಮಾ (0.50), ವೆಂಕಟ ಸತ್ಯನಾರಾಯಣ, ರಾಜ್ ಅಂಗದ್ ಬಾವಾ, ಕೆ. ಎಲ್. ಶ್ರೀಜಿತ್, ಅಶ್ವಿನಿ ಕುಮಾರ್, ಅರ್ಜುನ್ ತೆಂಡೂಲ್ಕರ್ (ತಲಾ 0.30)
ರಿಟೇನ್ ಆಟಗಾರರು: ಜಸ್‌ಪ್ರೀತ್ ಬೂಮ್ರಾ (18.0), ಸೂರ್ಯಕುಮಾರ್ ಯಾದವ್ (16.35), ಹಾರ್ದಿಕ್ ಪಾಂಡ್ಯ (16.35), ರೋಹಿತ್ ಶರ್ಮಾ (16.30), ತಿಲಕ್ ವರ್ಮಾ (8.0)

ರಾಯಲ್ ಚಾಲೆಂಜರ್ಸ್ ಬೆಂಗಳೂರು

ಆಟಗಾರರು: ಜೋಶ್ ಹ್ಯಾಜಲ್‌ವುಡ್ (12.50), ಫಿಲ್ ಸಾಲ್ಟ್ (11.50), ಜಿತೇಶ್ ಶರ್ಮಾ (11.0), ಭುವನೇಶ್ವರ ಕುಮಾರ್ (10.75), ಲಿಯಾಮ್ ಲಿವಿಂಗ್‌ಸ್ಟೋನ್ (8.75), ರಾಸಿಖ್ ಧಾರ್ (6.0), ಕೃಣಾಲ್ ಪಾಂಡ್ಯ (5.75), ಟಿಮ್ ಡೇವಿಡ್ (3.0), ಜೇಕಬ್ ಬೆಥೆಲ್ (2.60), ಸುಯಾಶ್ ಶರ್ಮಾ (2.60), ದೇವದತ್ತ ಪಡಿಕ್ಕಲ್ (2.0)ನುವಾನ್ ತುಷಾರ (1.60), ರೊಮಾರಿಯೊ ಶೆಫರ್ಡ್ (1.50), ಸ್ವಪ್ನಿಲ್ ಸಿಂಗ್ (0.50–ಆರ್‌ಟಿಎಂ), ಮನೋಜ್ ಭಾಂಡಗೆ (0.30)
ರಿಟೇನ್ ಆಟಗಾರರು: ವಿರಾಟ್ ಕೊಹ್ಲಿ (21.0), ರಜತ್ ಪಾಟೀದಾರ್ (11.0), ಯಶ್ ದಯಾಳ್ (5.0)

ರಾಜಸ್ಥಾನ ರಾಯಲ್ಸ್

ಆಟಗಾರರು: ಜೋಫ್ರಾ ಅರ್ಚರ್ (12.50), ತುಷಾರ್ ದೇಶಪಾಂಡೆ (6.50), ವನಿಂದು ಹಸರಂಗ (5.25), ಮಹೀಷ ತೀಕ್ಷಣ (4.40), ನಿತೀಶ್ ರಾಣಾ (4.20), ಫಜಲ್‌ಹಕ್ ಫರೂಕಿ (2.0), ಆಕಾಶ್ ಮಧ್ವಾಲ್ (1.20), ವೈಭವ್ ಸೂರ್ಯವಂಶಿ (1.10), ಶುಭಂ ದುಬೆ (0.80), ಯುದ್ಧವೀರ್ ಚರಕ್ (0.35), ಕುಮಾರ್ ಕಾರ್ತಿಕೇಯ ಸಿಂಗ್ (0.30)
ರಿಟೇನ್ ಆಟಗಾರರು: ಸಂಜು ಸ್ಯಾಮ್ಸನ್ (18.0), ಯಶಸ್ವಿ ಜೈಸ್ವಾಲ್ (18.0), ರಿಯಾನ್ ಪರಾಗ್ (14.0), ಧ್ರುವ್ ಜುರೇಲ್ (14.0), ಶಿಮ್ರಾನ್ ಹೆಟ್ಮೆಯರ್ (11.0), ಸಂದೀಪ್ ಶರ್ಮಾ (4.0)

ಡೆಲ್ಲಿ ಕ್ಯಾಪಿಟಲ್ಸ್

ಆಟಗಾರರು: ಕೆ.ಎಲ್. ರಾಹುಲ್ (14.0), ಮಿಚೆಲ್ ಸ್ಟಾರ್ಕ್ (11.75), ಎನ್.ನಟರಾಜನ್ (10.75), ಜೇಕ್ ಫ್ರೇಸರ್ ಮೆಕ್‌ಗುರ್ಕ್ (9.0– ಆರ್‌ಟಿಎಂ), ಮುಕೇಶ್ ಕುಮಾರ್ (8.0– ಆರ್‌ಟಿಎಂ), ಹ್ಯಾರಿ ಬ್ರೂಕ್ (6.25), ಅಶುತೋಷ್ ಶರ್ಮಾ (3.80), ಮೋಹಿತ್ ಶರ್ಮಾ (2.20), ಫಫ್ ಡುಪ್ಲೆಸ್ (2.0), ಸಮೀರ್ ರಿಜ್ವಿ (0.95), ದುಷ್ಮಂತ ಚಮೀರ (0.75), ವಿಪ್ರಜ್ ನಿಗಮ್, (0.50), ಕರುಣ್ ನಾಯರ್ (0.50), ದರ್ಶನ್ ನಲ್ಕಂಡೆ (0.30)
ರಿಟೇನ್ ಆಟಗಾರರು: ಅಕ್ಷರ್ ಪಟೇಲ್ (16.50), ಕುಲದೀಪ್ ಯಾದವ್ (13.25), ಟ್ರಿಸ್ಟನ್ ಸ್ಟಬ್ಸ್ (10.0), ಅಭಿಷೇಕ್ ಪೊರೆಲ್ (4.0)

ಗುಜರಾತ್ ಟೈಟನ್ಸ್

ಆಟಗಾರರು: ಜೋಸ್ ಬಟ್ಲರ್ (15.75), ಮೊಹಮ್ಮದ್ ಸಿರಾಜ್ (12.25), ಕಗಿಸೊ ರಬಾಡ (10.75, ಪ್ರಸಿದ್ಧ ಕೃಷ್ಣ (9.50), ವಾಷಿಂಗ್ಟನ್ ಸುಂದರ್ (3.20), ಶೆರ್ಫನ್ ರುದರ್‌ಫೋರ್ಡ್ (2.60), ಜೆರಾಲ್ಡ್ ಕೋಟ್ಜಿಯ (2.40), ಆರ್.ಸಾಯಿ ಕಿಶೋರ್ (2.0– ಆರ್‌ಟಿಎಂ), ಮಹಿಪಾಲ್ ಲೋಮ್ರೋರ್ (1.70), ಗುರ್ನೂರ್ ಸಿಂಗ್ ಬ್ರಾರ್ (1.30), ಮೊಹಮ್ಮದ್ ಅರ್ಷದ್ ಖಾನ್ (1.30), ಜಯಂತ್ ಯಾದವ್ (0.75), ಇಶಾಂತ್ ಶರ್ಮಾ (0.75), ಕುಮಾರ್ ಕುಶಾಗ್ರ (0.65), ಮಾನವ್ ಸುತಾರ್, ಅನುಜ್ ರಾವತ್, ನಿಶಾಂತ್ ಸಿಂಧು (ತಲಾ 0.30)
ರಿಟೇನ್ ಆಟಗಾರರು: ರಶೀದ್ ಖಾನ್ (18.0), ಶುಭಮನ್ ಗಿಲ್ (16.50), ಸಾಯಿ ಸುದರ್ಶನ್ (8.50), ರಾಹುಲ್ ತೆವಾಟಿಯಾ (4.0), ಶಾರೂಕ್ ಖಾನ್ (4.0)

ಕೋಲ್ಕತ್ತ ನೈಟ್ ರೈಡರ್ಸ್

ಆಟಗಾರರು: ವೆಂಕಟೇಶ್ ಅಯ್ಯರ್ (23.75), ಆ್ಯನ್ರಿಚ್ ನಾಕಿಯಾ (6.50), ಕ್ವಿಂಟನ್ ಡಿಕಾಕ್ (3.60), ಅಂಗಕ್ರಿಷ್ ರಘುವಂಶಿ (3.0), ಸ್ಪೆನ್ಸರ್ ಜಾನ್ಸನ್ (2.80), ರಹಮಾನುಲ್ಲಾ ಗುರ್ಬಾಜ್ (2.0), ವೈಭವ್ ಅರೋರಾ (1.80), ರೋವ್ಮನ್ ಪೊವೆಲ್ (1.50), ಮನೀಷ್ ಪಾಂಡೆ (0.75), ಮಯಾಂಕ್ ಮಾರ್ಕಂಡೆ (0.30)
ರಿಟೇನ್ ಆಟಗಾರರು: ರಿಂಕು ಸಿಂಗ್ (13.0), ವರುಣ್ ಚಕ್ರವರ್ತಿ (12.0), ಸುನಿಲ್ ನಾರಾಯಣ್ (12.0), ಆ್ಯಂಡ್ರೆ ರಸೆಲ್ (12.0), ಹರ್ಷಿತ್ ರಾಣಾ (4.0), ರಮಣದೀಪ್ ಸಿಂಗ್ (4.0)

ಲಖನೌ ಸೂಪರ್ ಜೈಂಟ್ಸ್

ಆಟಗಾರರು: ರಿಷಭ್ ಪಂತ್ (27.0), ಆವೇಶ್ ಖಾನ್ (9.75), ಆಕಾಶ್ ದೀಪ್ (8.0), ಡೇವಿಡ್ ಮಿಲ್ಲರ್ (7.5), ಅಬ್ದುಲ್ ಸಮದ್ (4.20), ಮಿಚೆಲ್ ಮಾರ್ಷ್ (3.40), ಶಹಬಾಜ್ ಅಹಮದ್ (2.40), ಏಡನ್ ಮರ್ಕರಂ (2.0), ಎಂ.ಸಿದ್ಧಾರ್ಥ್ (0.75), ಶಮರ್ ಜೋಸೆಫ್ (0.75), ಪ್ರಿನ್ಸ್ ಯಾದವ್, ಆಕಾಶ್ ಸಿಂಗ್, ದಿಗ್ವೇಶ್ ಸಿಂಗ್, ಹಿಮ್ಮತ್ ಸಿಂಗ್, ಆರ್ಯನ್ ಜುಯಲ್ (ತಲಾ 0.30)
ರಿಟೇನ್ ಆಟಗಾರರು: ನಿಕೋಲಸ್ ಪೂರನ್ (21.0), ರವಿ ಬಿಷ್ಣೋಯಿ (11.0), ಮಯಂಕ್ ಯಾದವ್ (11.0), ಮೊಹಸಿನ್ ಖಾನ್ (4.0), ಆಯುಷ್ ಬಡೋನಿ (4.0)

ಸನ್‌ರೈಸರ್ಸ್ ಹೈದರಾಬಾದ್

ಆಟಗಾರರು: ಇಶಾನ್ ಕಿಶನ್ (11.25), ಮೊಹಮ್ಮದ್ ಶಮಿ (10.0), ಹರ್ಷಲ್ ಪಟೇಲ್ (8.0), ಅಭಿನವ್ ಮನೋಹರ್ (3.20), ರಾಹುಲ್ ಚಾಹರ್ (3.20), ಆ್ಯಡಂ ಜಂಪಾ (2.40), ಸಿಮರ್ಜೀತ್ ಸಿಂಗ್ (1.50), ಇಶಾನ್ ಮಾಲಿಂಗ (1.20), ಬ್ರೈಡನ್ ಕಾರ್ಸೆ (1.0), ಜಯದೇವ್ ಉನದ್ಕತ್ (1.0), ಕಮಿಂದು ಮೆಂಡೀಸ್ (0.75), ಜೀಶನ್ ಅನ್ಸಾರಿ (0.40), ಅನಿಕೇತ್ ವರ್ಮಾ, ಅಥರ್ವ ತೈಡೆ (ತಲಾ 0.30)
ರಿಟೇನ್ ಆಟಗಾರರು: ಹೆನ್ರಿಚ್ ಕ್ಲಾಸೆನ್ (23.0), ಪ್ಯಾಟ್ ಕಮಿನ್ಸ್ (18.0), ಅಭಿಷೇಕ್ ಶರ್ಮಾ (14.0), ಟ್ರಾವಿಸ್ ಹೆಡ್ (14.0), ನಿತೀಶ್ ಕುಮಾರ್ ರೆಡ್ಡಿ (6.0)

ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್: ಭಾರತದ ಆಟಗಾರನಿಗೆ ನಿರಾಸೆ

ಗುಕೇಶ್‌ಗೆ ಕೈಕೊಟ್ಟ ಪ್ರಯೋಗ, ಲಿರೆನ್‌ಗೆ ಜಯ

ಸಿಂಗಪುರ (ಪಿಟಿಐ): ಮಧ್ಯಮಹಂತದ (ಮಿಡ್ಲ್‌ಗೇಮ್) ಆಟವನ್ನು ಸಂಕೀರ್ಣ ಗೊಳಿಸಲು ಹೋಗಿದ್ದು, ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರ ಪಾಲಿಗೆ ದುಬಾರಿಯಾಯಿತು. ಸೋಮವಾರ ನಡೆದ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಫೈನಲ್‌ನ ಮೊದಲ ಆಟದಲ್ಲಿ ಚೀನಾದ ಡಿಂಗ್ ಲಿರೆನ್, ಭಾರತದ ಆಟಗಾರನ ಮೇಲೆ ಜಯಗಳಿಸಿದರು.

ಲಿರೆನ್ ಈ ಗೆಲುವಿನಿಂದ 14 ಆಟಗಳಿರುವ ಫೈನಲ್‌ನಲ್ಲಿ 1–0 ಮುನ್ನಡೆ ಪಡೆದರು. ಡಿಸೆಂಬರ್ 13ರವರೆಗೆ ಈ ಚಾಂಪಿಯನ್‌ಷಿಪ್ ನಡೆಯಲಿದೆ. ಇಬ್ಬರಲ್ಲಿ ಮೊದಲು 7.5 ಪಾಯಿಂಟ್ಸ್ ಗಳಿಸುವ ಆಟಗಾರ ವಿಶ್ವ ಚಾಂಪಿಯನ್ ಕಿರೀಟ ಧರಿಸಲಿದ್ದಾರೆ.

'ಆರಂಭದಲ್ಲಿ ಹೀಗೆ ಆಗುತ್ತದೆ. ಇದು ದೀರ್ಘ ಅವಧಿಯ ಫೈನಲ್. ನನ್ನ ಎದುರಾಳಿಯ ಫಾರ್ಮ್ ಬಗ್ಗೆ ನಾನೇನೂ ನಿರೀಕ್ಷೆ ಹೊಂದಿರಲಿಲ್ಲ. ಅವರು ಉತ್ತಮ ಆಟ ಆಡುವರೆಂದಷ್ಟೇ ಯೋಚಿಸಿದ್ದೆ. ನಮ್ಮ ಮುಂದೆ ದೀರ್ಘ ಹಾದಿಯಿದೆ' ಎಂದು 18 ವರ್ಷ ವಯಸ್ಸಿನ ಗುಕೇಶ್ ಆಟದ ನಂತರ ಪ್ರತಿಕ್ರಿಯಿಸಿದರು.

ಕಪ್ಪುಕಾಯಿಗಳಲ್ಲಿ ಆಡಿ ಸಾಧಿಸಿದ ಗೆಲುವು, 32 ವರ್ಷ ವಯಸ್ಸಿನ ಲಿರೆನ್‌ಗೆ ಪೂರ್ಣ ಪಾಯಿಂಟ್ ಜೊತೆಗೆ ಹೆಚ್ಚಿನ ಮನೋಸ್ಥೈರ್ಯ ತಂದುಕೊಟ್ಟಿತು. ಈ ಚಾಂಪಿಯನ್‌ಷಿಪ್‌ನಲ್ಲಿ ಆಡಲು ಬರುವಾಗ ಅವರು ಅಂಥ ಫಾರ್ಮಿನಲ್ಲೇನೂ ಇರಲಿಲ್ಲ. ಸಾಲದ್ದಕ್ಕೆ ಈ ವರ್ಷ ಒಂದೂ ಶಾಸ್ತ್ರೀಯ (ದೀರ್ಘ ಅವಧಿಯ) ಆಟ ಗೆದ್ದಿರಲಿಲ್ಲ.

ಅತ್ಯಂತ ಕಿರಿಯ ಚಾಲೆಂಜರ್ ಎನಿಸಿರುವ ಗುಕೇಶ್ ರಾಜನೆದುರಿನ ಕಾಲಾಳನ್ನು ಮುನ್ನಡೆಸಿ ಆಟ ಆರಂಭಿಸಿದರು. ಇದು ಆಕ್ರಮಣದ ಇರಾದೆ ಸೂಚಿಸುವಂತಿತ್ತು. ಇದನ್ನು ತಡೆಯಲು ಲಿರೆನ್ ಅನುಸರಿಸಿದ್ದು ಫ್ರೆಂಚ್ ಡಿಫೆನ್ಸ್ ಮಾದರಿಯನ್ನು. ಗುಕೇಶ್ ಅನುಸರಿಸಿದ ಮೊದಲ ಕೆಲವು ನಡೆಗಳು, ವಿಶ್ವನಾಥನ್ ಆನಂದ್ ಅವರು ತಮ್ಮ ಮೊದಲ (2001ರ) ವಿಶ್ವಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಅಲೆಕ್ಸಿ ಶಿರೋವ್ ವಿರುದ್ಧ ಆಡಿದ ರೀತಿಯಲ್ಲೇ ಇದ್ದವು.

ಗುಕೇಶ್ (ಎಡಗಡೆ) ಮತ್ತು ಡಿಂಗ್ ಲಿರೆನ್ — ಫಿಡೆ ವೆಬ್‌ಸೈಟ್ ಚಿತ್ರ

10ನೇ ನಡೆಯಲ್ಲಿ ಗುಕೇಶ್ ಸಿದ್ಧಸೂತ್ರ ಬದಲಿಸಿ ಹೊಸ (ಪಾನ್ ಜಿ4) ನಡೆಯನ್ನಿರಿಸಿದರು. 12ನೇ ನಡೆಯವರೆಗೆ ಗುಕೇಶ್ ಪರಿಸ್ಥಿತಿ ಉತ್ತಮವಾಗೇ ಇತ್ತು. ಅವರು ಬೇಗ ಬೇಗ ನಡೆಗಳನ್ನಿರಿಸಿದರು. ಆದರೆ ನಿಧಾನವಾಗಿ ಲಿರೆನ್ ಕೂಡ ಆಕ್ರಮಣಕ್ಕೆ ತಂತ್ರ ಹೆಣೆದರು. ಎಂಟು ನಡೆಗಳ ನಂತರ– ಅವರ 20 ಮತ್ತು 21ನೇ ನಡೆ (qc4, d3) ಅತ್ಯುತ್ತಮವೆನಿಸಿದವು. ಈ ನಡೆಗಳು ಅವರಲ್ಲಿ ವಿಶ್ವಾಸ ಹೆಚ್ಚಿಸಿದವು.

ಈ ಹಂತದಲ್ಲಿ ಚೀನಾ ಆಟಗಾರ ಉತ್ತಮ ನಡೆಗಳನ್ನು ಇರಿಸತೊಡಗಿದರು. ಹೀಗಾಗಿ ಒತ್ತಡಕ್ಕೆ ಸಿಲುಕಿ ಗುಕೇಶ್ ಮಧ್ಯಮ ಹಂತದ ಆಟದಲ್ಲಿ ಎಡವಿ 42ನೇ ನಡೆಯಲ್ಲಿ ಆಟ ಬಿಟ್ಟುಕೊಟ್ಟರು.

'ನಾನು ದೀರ್ಘ ಕಾಲದಿಂದ ಒಂದೂ ದೀರ್ಘ ಅವಧಿಯ ಆಟ ಗೆದ್ದಿರಲಿಲ್ಲ. ಈಗ ಅದು ಸಾಧ್ಯವಾಗಿದೆ. ಆದರೆ ನ್ಯಾಯೋಚಿತವಾಗಿ ಹೇಳಬೇಕಾದರೆ ನಾನು ಅದೃಷ್ಟಶಾಲಿ. ಎರಡು ಬಾರಿ ತಂತ್ರ ರೂಪಿಸುವಲ್ಲಿ ನಾನು ತಪ್ಪು ಮಾಡಿದ್ದೆ' ಎಂದು ಲಿರೆನ್ ವಿಶ್ಲೇಷಿಸಿದರು.

'ಇದು ಮೊದಲ ಪಂದ್ಯವಾಗಿದ್ದರಿಂದ ಆತ ಸ್ವಲ್ಪ ನರ್ವಸ್ ಆಗಿರುವ ಸಾಧ್ಯತೆಯಿತ್ತು. ಹೀಗಾಗಿ ಎಂದಿನ ಶೈಲಿಯಲ್ಲಿ ಆಡದೇ, ದೀರ್ಘ ಕಾಲದ ಬಳಿಕ ಸ್ವಲ್ಪ ಬೇರೆ ರೀತಿಯ ಆಟ ಆಡಿದ್ದೆ. ಅದು ಫಲ ನೀಡಿತು' ಎಂದರು.

ಕ್ವೀನ್‌ಸೈಡ್‌ನಲ್ಲಿ ಕಾಲಾಳನ್ನು ಕಳೆದು ಕೊಂಡ ಬಳಿಕ ಗುಕೇಶ್ ಅವರಿಗೆ ತಮ್ಮಲ್ಲಿರುವ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಳ್ಳಲು ಆಗಲಿಲ್ಲ.

₹21 ಕೋಟಿ ಬಹುಮಾನದ ಫೈನಲ್‌ನ ಎರಡನೇ ಆಟ ಮಂಗಳವಾರ ನಡೆಯಲಿದ್ದು, ಲಿರೆನ್ ಬಿಳಿಕಾಯಿಗಳಲ್ಲಿ ಆಡಲಿದ್ದಾರೆ.

ಹೋರಾಡಿ ಸೋತ ಬೆಂಗಳೂರು ಬುಲ್ಸ್

ನೊಯ್ಡಾ (ಪಿಟಿಐ): ಕೊನೆಗಳಿಗೆಯಲ್ಲಿ ಒತ್ತಡ ಅನುಭವಿಸಿದರೂ ಯು– ಮುಂಬಾ ತಂಡ, ರೋಚಕವಾದ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಸೋಮವಾರ ಬೆಂಗಳೂರು ಬುಲ್ಸ್ ಮೇಲೆ 34–32 ಪಾಯಿಂಟ್‌ಗಳಿಂದ ಜಯಗಳಿಸಿತು. ವಿರಾಮದ ವೇಳೆ ವಿಜೇತರು 10 (18–10) ಪಾಯಿಂಟ್‌ಗಳಿಂದ ಮುಂದಿದ್ದರು.

'ರೇಡ್ ಮಷೀನ್' ಖ್ಯಾತಿ ಹೊಂದಿರುವ ಅರ್ಜುನ್ ದೇಸ್ವಾಲ್ ಅವರ 16 ಅಂಕಗಳ ನೆರವಿನಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡ, ಇನ್ನೊಂದು ಪಂದ್ಯದಲ್ಲಿ ಹಾಲಿ ಚಾಂಪಿಯನ್ ಪುಣೇರಿ ಪಲ್ಟನ್ ಮೇಲೆ 37–23 ಅಂಕಗಳ ಸುಲಭ ಜಯ ಸಾಧಿಸಿತು.

ಜೈಪುರ ತಂಡ ಸೀಸನ್ 11ರಲ್ಲಿ ಎರಡನೇ ಬಾರಿ ಪುಣೇರಿ ಪಲ್ಟನ್ ತಂಡವನ್ನು ಮಣಿಸಿದಂತಾಯಿತು.

ಆಯ್ಕೆಯಾಗದ ಆಟಗಾರರು

ಡೇವಿಡ್ ವಾರ್ನರ್, ಜಾನಿ ಬೆಸ್ಟೊ, ಕೇನ್ ವಿಲಿಯಮ್ಸನ್, ಡೇರಿಲ್ ಮಿಚೆಲ್, ಶಾರ್ದೂಲ್ ಠಾಕೂರ್, ಆದಿಲ್ ರಶೀದ್, ಉಮೇಶ್ ಯಾದವ್, ಸ್ಟೀವ್ ಸ್ಮಿತ್, ಮೊಹಮ್ಮದ್ ನಬಿ, ಟಾಮ್ ಲೇಥಮ್, ಟಿಮ್ ಸೌಥಿ, ಶೇಯ್ ಹೋಪ್, ವಿಲ್ ಯಂಗ್, ಜೇಮ್ಸ್ ಆಂಡರ್ಸನ್, ಮಯಂಕ್ ಅಗರವಾಲ್, ಕೆ.ಗೌತಮ್, ಕೆ.ಎಸ್. ಭರತ್, ಕೇಶವ ಮಹಾರಾಜ, ಕುಶಾಲ್ ಮೆಂಡೀಸ್, ಸರ್ಫರಾಜ್ ಖಾನ್, ಪಿಯೂಷ್ ಚಾವ್ಲಾ, ಯಶ್ ಧುಲ್, ವಿದ್ವತ್ ಕಾವೇರಪ್ಪ, ತನುಷ್ ಕೋಟ್ಯಾನ್, ಕೆ.ಸಿ.ಕಾರಿಯಪ್ಪ, ವಿದ್ಯಾಧರ ಪಾಟೀಲ.

ಸ್ಮರಣ್, ಮಯಂಕ್ ಆಟಕ್ಕೆ ಒಲಿದ ಜಯ

ಇಂದೋರ್: ನಾಯಕ ಮಯಂಕ್ ಅಗರವಾಲ್ ಮತ್ತು ಸ್ಮರಣ್ ರವಿಚಂದ್ರನ್ ಅವರ ಜೊತೆಯಾಟದ ಬಲದಿಂದ ಕರ್ನಾಟಕ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ತ್ರಿಪುರ ವಿರುದ್ಧ ಜಯಿಸಿತು.

ಎಮೆರಾಲ್ಡ್ ಪ್ರೌಢಶಾಲೆ ಮೈದಾನದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಬಿ ಗುಂಪಿನ ಪಂದ್ಯದಲ್ಲಿ ಕರ್ನಾಟಕದ ಬೌಲರ್‌ಗಳು ಮತ್ತೊಮ್ಮೆ ದುಬಾರಿಯಾದರು. ಅದರಿಂದಾಗಿ ತ್ರಿಪುರ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 185 ರನ್‌ಗಳಿಸಿ ಮಯಂಕ್ ಬಳಗಕ್ಕೆ ಕಠಿಣ ಸವಾಲೊಡ್ಡಿತು.

ಅದಕ್ಕುತ್ತರವಾಗಿ ಕರ್ನಾಟಕವು ಇನಿಂಗ್ಸ್‌ನಲ್ಲಿ ಇನ್ನೂ 3 ಎಸೆತಗಳು ಬಾಕಿಯಿರುವಾಗಲೇ 5 ವಿಕೆಟ್‌ಗಳಿಗೆ 191 ರನ್ ಗಳಿಸಿತು. 5 ವಿಕೆಟ್‌ಗಳಿಂದ ಜಯಿಸಿತು. ಮಯಂಕ್ (51; 31ಎ,) ಮತ್ತು ಸ್ಮರಣ್ (57; 31ಎ) ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಅಭಿನವ್ ಮನೋಹರ್ (ಅಜೇಯ 34; 16ಎ) ಮತ್ತು ಶುಭಾಂಗ್ ಹೆಗ್ಡೆ (ಔಟಾಗದೇ 20; 9) ಗೆಲುವಿನ ದಡ ಮುಟ್ಟಿಸಿದರು.

ಕರ್ನಾಟಕದ ಇನಿಂಗ್ಸ್ ಆರಂಭದಲ್ಲಿಯೇ ಎಲ್.ಆರ್.ಚೇತನ್ ಅವರ ವಿಕೆಟ್ ಗಳಿಸಿದ ತ್ರಿಪುರದ ಅಭಿಜಿತ್ ಸರ್ಕಾರ್ ಪೆಟ್ಟು ಕೊಟ್ಟರು. ಮಯಂಕ್ ಮತ್ತು ಕೃಷ್ಣನ್ ಶ್ರೀಜಿತ್ (16 ರನ್) ಸ್ವಲ್ಪ ಹೊತ್ತು ಇನಿಂಗ್ಸ್ ಬೆಳೆಸುವ ಪ್ರಯತ್ನ ಮಾಡಿದರು. ಆದರೆ ಐದನೇ ಓವರ್‌ನಲ್ಲಿ ಶ್ರೀಜಿತ್ ವಿಕೆಟ್ ಗಳಿಸಿದ ಸರ್ಕಾರ್ ಮತ್ತೊಂದು ಪೆಟ್ಟುಕೊಟ್ಟರು. ಈ ಸಂದರ್ಭದಲ್ಲಿ ಕ್ರೀಸ್‌ಗೆ ಬಂದ ಸ್ಮರಣ್ ಅವರು ನಾಯಕನೊಂದಿಗೆ ಸೇರಿ ಇನಿಂಗ್ಸ್‌ಗೆ ಬಲ ತುಂಬಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 101 ರನ್ ಸೇರಿಸಿದರು.

ಆರ್. ಸ್ಮರಣ್ ಬ್ಯಾಟಿಂಗ್ ವೈಖರಿ

ಆದರೆ 14ನೇ ಓವರ್‌ನಲ್ಲಿ ಸ್ಮರಣ್ ಅವರನ್ನು ರನ್‌ಔಟ್ ಮಾಡಿದ ಫೀಲ್ಡರ್ ಮನದೀಪ್ ಸಿಂಗ್ ಜೊತೆಯಾಟ ಮುರಿದರು. ಆದರೂ ತ್ರಿಪುರ ತಂಡದ ಸೋಲು ತಪ್ಪಲಿಲ್ಲ. ಐಪಿಎಲ್ ಹರಾಜಿನಲ್ಲಿ ಉತ್ತಮ ಪಡೆದ ಖುಷಿಯಲ್ಲಿರುವ ಅಭಿನವ್ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ಬೆಳಿಗ್ಗೆ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಕರ್ನಾಟಕ ತಂಡದ ಬೌಲರ್‌ಗಳು ದುಬಾರಿಯಾದರು. ಸಮರ್ಥ್ ಸೂತ್ರಧಾರ (55; 36ಎ) ಮತ್ತು ಮನದೀಪ್ (66; 41ಎ) ಕರ್ನಾಟಕದ ಬೌಲರ್‌ಗಳನ್ನು ದಂಡಿಸಿದರು.

ಸಂಕ್ಷಿಪ್ತ ಸ್ಕೋರು: ತ್ರಿಪುರ: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 185 (ಸಮರ್ಥ್ ಸೂತ್ರಧಾರ 55, ಮನದೀಪ್ ಸಿಂಗ್ ಔಟಾಗದೆ 66, ಮಣಿಶಂಕರ್ ಮುರಾಸಿಂಗ್ 26, ವಿ. ಕೌಶಿಕ್ 36ಕ್ಕೆ1, ವಿದ್ಯಾಧರ್ ಪಾಟೀಲ 29ಕ್ಕೆ1, ಶ್ರೇಯಸ್ ಗೋಪಾಲ್ 26ಕ್ಕೆ1) ಕರ್ನಾಟಕ: 19.3 ಓವರ್‌ಗಳಲ್ಲಿ 5ಕ್ಕೆ191 (ಮಯಂಕ್ ಅಗರವಾಲ್ 51, ಸ್ಮರಣ್ ರವಿಚಂದ್ರನ್ 57, ಅಭಿನವ್ ಮನೋಹರ್ ಔಟಾಗದೇ 34, ಅಭಿಜಿತ್ ಸರ್ಕಾರ್ 31ಕ್ಕೆ2). ಪಂದ್ಯದ ಆಟಗಾರ: ಸ್ಮರಣ್ ರವಿಚಂದ್ರನ್.

ರೋಹಿತ್ ಪಿಂಕ್ ಬಾಲ್ ಅಭ್ಯಾಸ

ಪರ್ತ್ (ಪಿಟಿಐ): ಸೋಮವಾರ ಇಲ್ಲಿ ಮುಕ್ತಾಯವಾದ ಟೆಸ್ಟ್ ಪಂದ್ಯದಿಂದ 'ಪಿತೃತ್ವ ರಜೆ' ಪಡೆದಿದ್ದ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಆಸ್ಟ್ರೇಲಿಯಾಕ್ಕೆ ಬಂದಿಳಿದಿದ್ದಾರೆ. ಅಡಿಲೇಡ್‌ನಲ್ಲಿ ನಡೆಯಲಿರುವ ಸರಣಿಯ ಎರಡನೇ ಪಂದ್ಯಕ್ಕಾಗಿ ನೆಟ್ಸ್ ಅಭ್ಯಾಸ ಮಾಡಿದರು.

ಭಾನುವಾರ ಪರ್ತ್‌ಗೆ ಬಂದರು. ಆಪ್ಟಸ್ ಕ್ರೀಡಾಂಗಣದಲ್ಲಿ ನಡೆಯುತ್ತಿದ್ದ ಟೆಸ್ಟ್ ಪಂದ್ಯ ವೀಕ್ಷಿಸಲು ತೆರಳಿದರು. ಡ್ರೆಸಿಂಗ್ ಕೋಣೆಯಲ್ಲಿ ಕುಳಿತು ಪಂದ್ಯ ವೀಕ್ಷಿಸಿದ್ದರು.

ಸೋಮವಾರ ಅವರು ನೆಟ್ಸ್‌ನಲ್ಲಿ ಪಿಂಕ್ ಬಾಲ್ ಎದುರಿಸುವ ಅಭ್ಯಾಸ ಮಾಡಿದರು. ವೇಗಿಗಳಾದ ನವದೀಪ್ ಸೈನಿ, ಯಶ್ ದಯಾಳ್ ಮತ್ತು ಮುಕೇಶ್ ಕುಮಾರ್ ಅವರು ಬೌಲಿಂಗ್ ಮಾಡಿದರು. ಅನುಭವಿ ಸ್ಪಿನ್ನರ್ ರವೀಂದ್ರ ಜಡೇಜ ಅವರೂ ರೋಹಿತ್‌ಗೆ ಬೌಲಿಂಗ್ ಮಾಡಿದರು. ತಂಡದ ಸ್ಲಿಂಗರ್ ಆಗಿರುವ ನುವಾನ ಸೆನಾವಿರತನೆ ಅವರ ಎಡಗೈ ಥ್ರೋಡೌನ್ ಬೌನ್ಸರ್‌ಗಳನ್ನೂ ರೋಹಿತ್ ಎದುರಿಸಿದರು.

ಡಿಸೆಂಬರ್ 6ರಿಂದ ಅಡಿಲೇಡ್‌ನಲ್ಲಿ ಹೊನಲು ಬೆಳಕಿನ ಟೆಸ್ಟ್ ನಡೆಯಲಿದೆ.

ಸಾಫ್ಟ್‌ಬಾಲ್ ಕ್ರಿಕೆಟ್ ಪಂದ್ಯ ಇಂದು

ಬೆಂಗಳೂರು: ಕರ್ನಾಟಕ ರಾಜ್ಯ ಸಾಫ್ಟ್‌ಬಾಲ್ ಕ್ರಿಕೆಟ್ ಸಂಸ್ಥೆ ಆಶ್ರಯದಲ್ಲಿ ಕರ್ನಾಟಕ ಸಾಫ್ಟ್‌ಬಾಲ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪ್ರದರ್ಶನ ಪಂದ್ಯವನ್ನು ಆಯೋಜಿಸಲಾಗಿದೆ.

ಮಂಗಳವಾರ ಆಚಾರ್ಯ ಕ್ರೀಡಾಂಗಣದಲ್ಲಿ ನಡೆಯಲಿರುವ ಕ್ರಿಕೆಟ್ ಪಂದ್ಯದಲ್ಲಿ ಬೆಸ್ಟ್ ಆಫ್ ಕರ್ನಾಟಕ ಮತ್ತು ಬೆಸ್ಟ್ ಆಫ್ ಇಂಡಿಯಾ ತಂಡಗಳು ಮುಖಾಮುಖಿಯಾಗಲಿವೆ. ಭಾರತ ಮಹಿಳಾ ತಂಡದ ಆಟಗಾರ್ತಿ ಶ್ರೇಯಾಂಕಾ ಪಾಟೀಲ ಅವರು ಈ ಪಂದ್ಯಕ್ಕೆ ಮುಖ್ಯ ಅತಿಥಿಯಾಗಿದ್ದಾರೆ. ರಾತ್ರಿ 7.30ಕ್ಕೆ ಪಂದ್ಯ ಆರಂಭವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಶ್ರೇಯಾಂಕಾ ಪಾಟೀಲ

ಟೆನ್‌ಪಿನ್ ಬೌಲಿಂಗ್: ಆಕಾಶ್ ಮುನ್ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಕರ್ನಾಟಕದ ಆಕಾಶ್ ಅಶೋಕಕುಮಾರ್ ಅವರು ಸೋಮವಾರ ಇಲ್ಲಿ ಆರಂಭವಾದ ಎಆರ್‌ಸಿ 33ನೇ ರಾಷ್ಟ್ರೀಯ ಟೆನ್‌ಪಿನ್ ಬೌಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಅಗ್ರಸ್ಥಾನಕ್ಕೇರಿದರು.

ದಿನದ ಆರಂಭದಿಂದಲೇ ಉತ್ತಮವಾಗಿ ಆಡಿದ ಆಕಾಶ್, ಮೊದಲ ಹಾಗೂ ಎರಡನೇ ಗೇಮ್‌ಗಳಲ್ಲಿ ಕ್ರಮವಾಗಿ 189 ಮತ್ತು 212 ಅಂಕಗಳನ್ನು ಕಲೆಹಾಕಿದರು. ನಂತರದ ನಾಲ್ಕು ಗೇಮ್‌ಗಳಲ್ಲಿ ತಮ್ಮ ಲಯವನ್ನು ಮತ್ತಷ್ಟು ಉತ್ತಮಪಡಿಸಿಕೊಂಡ ಅವರು ಕ್ರಮವಾಗಿ 221, 229, 222 ಮತ್ತು 229 ಅಂಕ ಗಳಿಸಿದರು. ಒಟ್ಟು ಆರು ಗೇಮ್‌ಗಳಿಂದ 1296 ಪಿನ್ಸ್ ಗಳಿಸಿದರು. 216ರ ಸರಾಸರಿಯನ್ನೂ ಸಾಧಿಸಿದರು. ತಮಿಳುನಾಡಿನ ಶಮೀರ್ 1229 ಪಿನ್‌ಗಳೊಂದಿಗೆ ಎರಡನೇ ಸ್ಥಾನಕ್ಕೇರಿದ್ದಾರೆ.



ರಾಷ್ಟ್ರೀಯ ಹಾಲು ದಿನವನ್ನು ಆಚರಿಸಲಾಗುತ್ತಿದೆ!

ಮೊದಲ ಟೆಸ್ಟ್: ಆಸ್ಟ್ರೇಲಿಯಾ ವಿರುದ್ಧ ಭಾರತಕ್ಕೆ 1–0 ಸರಣಿ ಮುನ್ನಡೆ

ಬೂಮ್ರಾ ಪಡೆಗೆ ಭರ್ಜರಿ ಗೆಲುವು

• ಮಧು ಜವಳಿ

ಪರ್ತ್: ಮೂರು ವಾರಗಳ ಹಿಂದೆ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನ್ಯೂಜಿಲೆಂಡ್ ಎದುರಿನ ಸರಣಿಯಲ್ಲಿ ಭಾರತ ಯಾರೂ ನಿರೀಕ್ಷಿಸದಂತೆ 3-0 ಮುಖಭಂಗ ಅನುಭವಿಸಿತ್ತು. ಶ್ರೀಲಂಕಾ ಎದುರು ಸರಣಿ ಸೋತಿದ್ದ ನ್ಯೂಜಿಲೆಂಡ್ ಎದುರಿನ ಸೋಲು ಭಾರತಕ್ಕೆ ಅವಮಾನಕಾರಿ ರೀತಿಯಲ್ಲಿತ್ತು. ಆದರೆ ಪ್ರಬಲ ಆಸ್ಟ್ರೇಲಿಯಾ ವಿರುದ್ಧ ಸೋಮವಾರ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡ ಯಾರೂ ಊಹಿಸದ ರೀತಿ ದೊಡ್ಡ ಅಂತರದ ಗೆಲುವನ್ನು ಸಾಧಿಸಿ ಬೀಗಿತು.

ಮೊದಲ ಟೆಸ್ಟ್‌ನಲ್ಲಿ ಗೆಲುವಿಗೆ 534 ರನ್‌ಗಳ ಭಾರಿ ಗುರಿಯನ್ನು ಎದುರಿಸಿದ್ದ ಆತಿಥೇಯರಿಗೆ ಮೂರನೇ ದಿನದಾಟದ ಕೊನೆಗೇ (3 ವಿಕೆಟ್‌ಗೆ 12) ಸೋಲು ಖಚಿತವಾಗಿತ್ತು. ನಾಲ್ಕನೇ ದಿನ, ಸ್ಥಳೀಯ ಕಾಲಮಾನ ಮಧ್ಯಾಹ್ನ 3.47ಕ್ಕೆ ಭಾರತ ಔಪಚಾರವನ್ನು ಪೂರ್ಣಗೊಳಿಸಿತು. ಆಸ್ಟ್ರೇಲಿಯಾ 238 ರನ್‌ಗಳಿಗೆ ಆಲೌಟ್ ಆಯಿತು. ಬೂಮ್ರಾ ನೇತೃತ್ವದ ತಂಡ 295 ರನ್‌ಗಳ ಭರ್ಜರಿ ಜಯ ಸಾಧಿಸಿ ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿತು. ಪುನರುತ್ಥಾನದ ಹಾದಿಯಲ್ಲಿ ಭಾರತ ದಿಟ್ಟ ಹೆಜ್ಜೆಯಿಟ್ಟಿತು.

ಆಪ್ಟಸ್ ಕ್ರೀಡಾಂಗಣದಲ್ಲಿ ತಂಪಾದ ಗಾಳಿ ಬೀಸುತ್ತಿದ್ದಂತೆ ಭಾರತದ ಪಾಳೆಯದಲ್ಲೂ ಸಂಭ್ರಮ ಮನೆ ಮಾಡಿತು. ರನ್ ಆಧಾರದಲ್ಲಿ ಇದು ಭಾರತಕ್ಕೆ ಆಸ್ಟ್ರೇಲಿಯಾ ವಿರುದ್ಧ ಅತಿ ದೊಡ್ಡ ಗೆಲುವು. ಪದಾರ್ಪಣೆ ಪಂದ್ಯ ಆಡಿದ ಹರ್ಷಿತ್ ರಾಣಾ, ಅಲೆಕ್ಸ್ ಕ್ಯಾರಿ ಅವರನ್ನು ಬೌಲ್ಡ್ ಮಾಡುತ್ತಿದ್ದಂತೆ, ಹಂಗಾಮಿ ನಾಯಕ ಬೂಮ್ರಾ ಸ್ಮರಣಿಕೆಯಾಗಿ ಸ್ಟಂಪ್ ಕೀಳಲು ಓಡಿದರು. ಪರಸ್ಪರ ಆಲಿಂಗನ, ಹೈ-ಫೈವ್ಸ್ ನಡೆದವು. ಅಷ್ಟರಲ್ಲಾಗಲೇ ಪರ್ತ್ ಕ್ರೀಡಾಂಗಣ ಬಹುತೇಕ ಖಾಲಿಯಾಗಿತ್ತು.

ಇದು ಈ ಕ್ರೀಡಾಂಗಣದಲ್ಲಿ ಆಡಿದ ಐದು ಟೆಸ್ಟ್‌ಗಳಲ್ಲಿ ಆಸ್ಟ್ರೇಲಿಯಾಕ್ಕೆ ಮೊದಲ ಸೋಲು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪಾಯಿಂಟ್ ಪಟ್ಟಿಯಲ್ಲಿ ಮರಳಿ ಅಗ್ರಸ್ಥಾನಕ್ಕೇರಿದರೂ, ಭಾರತ ತಂಡಕ್ಕೆ ಸಾಗಲು ಇನ್ನೂ ದೊಡ್ಡ ಹಾದಿಯಿದೆ. ಇತರ ಪಂದ್ಯಗಳ ಫಲಿತಾಂಶಗಳನ್ನು ಅವಲಂಬಿಸದೇ ಫೈನಲ್ ತಲುಪಲು ಭಾರತ ಇನ್ನೂ ಮೂರು ಟೆಸ್ಟ್ ಗೆಲ್ಲಬೇಕಾಗಿದೆ. ಭಾರತ ಆ ದಿಸೆಯಲ್ಲಿ ಉತ್ತಮ ಆರಂಭವನ್ನಂತೂ ಮಾಡಿದೆ.

ನಾಲ್ಕನೇ ದಿನ ಆಸ್ಟ್ರೇಲಿಯಾದ ಪ್ರತಿರೋಧ ಎಷ್ಟು ಹೊತ್ತು ಮುಂದುವರಿಯಬಹುದೆಂಬ ಕುತೂಹಲ ಅಷ್ಟೇ ಉಳಿದಿತ್ತು. ಮೊಹಮ್ಮದ್ ಸಿರಾಜ್ (51ಕ್ಕೆ3), ದಿನದ ಎರಡನೇ ಓವರಿನಲ್ಲೇ ಆರಂಭ ಆಟಗಾರ ಉಸ್ಮಾನ್ ಖ್ವಾಜಾ ಅವರನ್ನು ಶಾರ್ಟ್‌ಪಿಚ್ ಎಸೆತದಲ್ಲಿ ಔಟ್ ಮಾಡಿದರು. ಆತಿಥೇಯರು ಕೊಂಚ ಪ್ರತಿರೋಧ ತೋರಿದ ಬಳಿಕ ಅವರು ಸ್ಟೀವ್ ಸ್ಮಿತ್ ವಿಕೆಟ್ ಕೂಡ ಪಡೆದರು. ಪಂದ್ಯ ಬೇಗನೇ ಮುಗಿಯುವ ಹಾಗೆ ಕಂಡಿತು.

ಬೂಮ್ರಾ ಸಂಭ್ರಮ... ಟ್ರಾವಿಸ್ ಹೆಡ್ ವಿಕೆಟ್ ಪಡೆದ ವೇಗದ ಬೌಲರ್ ಬೂಮ್ರಾ ಅವರ ಜೊತೆ ಹರುಷದಲ್ಲಿ ಕೆ.ಎಲ್‌.ರಾಹುಲ್, ವಿರಾಟ್ ಕೊಹ್ಲಿ, ರಿಷಭ್ ಪಂತ್ ಭಾಗಿಯಾದರು ಎಎಫ್‌ಪಿ ಚಿತ್ರ

ಆದರೆ ಭಾರತವನ್ನು ಈ ಹಿಂದೆ ಸಾಕಷ್ಟು ಸಲ ಕಾಡಿರುವ ಟ್ರಾವಿಸ್ ಹೆಡ್ (89, 101ಎ) ಮತ್ತೊಮ್ಮೆ ಆಕರ್ಷಕ ಆಟವಾಡಿದರು. ಅವರಿಗೆ ಮಿಚೆಲ್ ಮಾರ್ಷ್ (47) ಬೆಂಬಲವಾಗಿ ನಿಂತರು. ಆದರೆ ಅವರು ಗೆಲುವನ್ನು ವಿಳಂಬಗೊಳಿಸಿದರಷ್ಟೇ. ಆರನೇ ವಿಕೆಟ್‌ಗೆ 82 ರನ್‌ಗಳು ಬಂದವು. ಈ ಜೊತೆಯಾಟವನ್ನು ಮುರಿಯಲು ಬೂಮ್ರಾ ಅವರೇ ಬರಬೇಕಾಯಿತು. ಹೆಡ್ ಅವರ ಆಕರ್ಷಕ ಆಟಕ್ಕೆ ಭಾರತದ ನಾಯಕ ತೆರೆಯೆಳೆದರು. ನಂತರ ಗೆಲುವಿಗೆ ಕ್ಷಣಗಣನೆ ಉಳಿದಿತ್ತು.

ಅಗತ್ಯವಿದ್ದಾಗಲ್ಲೆಲ್ಲಾ ವಿವಿಧ ಪಾತ್ರ ನಿರ್ವಹಿಸಿದ್ದ ಕೆ.ಎಲ್.ರಾಹುಲ್ ಇಲ್ಲಿ ಲಯಕ್ಕೆ ಮರಳಿದರು. ಜೈಸ್ವಾಲ್ ಅವರದ್ದು ಒತ್ತಡದ ಸಂದರ್ಭದಲ್ಲಿ ದಾಖಲಾದ ಶ್ರೇಷ್ಠ ಇನಿಂಗ್ಸ್‌ಗಳಲ್ಲಿ ಒಂದು. ವಿರಾಟ್ ಕೊಹ್ಲಿ ಅವರ 30ನೇ ಟೆಸ್ಟ್ ಶತಕ ತಂಡದ ನೈತಿಕ ಸ್ಥೈರ್ಯವನ್ನು ವೃದ್ಧಿಸಿತು. ಸಿರಾಜ್ ಅವರು ಎಂದಿನ ಲಯಕ್ಕೆ ಮರಳುವ ರೀತಿ ಬೌಲಿಂಗ್ ಮಾಡಿದರು. ಪದಾರ್ಪಣೆ ಪಂದ್ಯದಲ್ಲಿ ಹರ್ಷಿತ್ ರಾಣಾ ನಿರಾಸೆ ಮೂಡಿಸಲಿಲ್ಲ. ಆದರೆ ಇವರೆಲ್ಲರ ನಡುವೆಯೂ ಬೂಮ್ರಾ ಪ್ರಭಾವ ಮಸುಕಾಗಲಿಲ್ಲ. ಕರಾರುವಾಕ್ ಬೌಲಿಂಗ್ ಜೊತೆಗೆ ನಾಯಕತ್ವದಲ್ಲೂ ಅವರ ತಂತ್ರಗಳು ಕಡಿಮೆಯಿರಲಿಲ್ಲ. ಅವರು ಪಂದ್ಯದ ಆಟಗಾರ ಗೌರವಕ್ಕೆ ಅರ್ಹರಾಗಿದ್ದರು.

ಅಗ್ರಸ್ಥಾನಕ್ಕೆ ಭಾರತ: ಈ ಗೆಲುವಿನೊಂದಿಗೆ ಭಾರತ ತಂಡವು, ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ (ಡಬ್ಲ್ಯುಟಿಸಿ) ಅಂಕ ಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೆ ಏರಿದೆ. ಆಸ್ಟ್ರೇಲಿಯಾ ಎರಡನೇ ಸ್ಥಾನಕ್ಕೆ ಇಳಿದಿದೆ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ: 150. ಆಸ್ಟ್ರೇಲಿಯಾ: 104
ಎರಡನೇ ಇನಿಂಗ್ಸ್: ಭಾರತ: 6ಕ್ಕೆ 487 ಡಿಕ್ಲೇರ್ (134.3 ಓವರ್‌ಗಳಲ್ಲಿ). ಆಸ್ಟ್ರೇಲಿಯಾ: 238 (58.4 ಓವರುಗಳಲ್ಲಿ) (ಭಾನುವಾರ: 3ಕ್ಕೆ12)

ಖ್ವಾಜಾ ಸಿ ಪಂತ್ ಬಿ ಸಿರಾಜ್ 4 (13ಎ)
ಸ್ಮಿತ್ ಸಿ ಪಂತ್ ಬಿ ಸಿರಾಜ್ 17 (60ಎ)
ಹೆಡ್ ಸಿ ಪಂತ್ ಬಿ ಬೂಮ್ರಾ 89 (101ಎ, 4x8)
ಮಾರ್ಷ್ ಬಿ ನಿತೀಶ್ ರೆಡ್ಡಿ 47 (67ಎ, 4x3, 6x2)
ಕ್ಯಾರಿ ಬಿ ಹರ್ಷಿತ್ ರಾಣಾ 36 (58ಎ, 4x2)
ಸ್ಟಾರ್ಕ್ ಸಿ ಜುರೇಲ್ ಬಿ ಸುಂದರ್ 12 (35ಎ)
ಲಯನ್ ಬಿ ಸುಂದರ್ 0 (2ಎ)
ಹ್ಯಾಜಲ್‌ವುಡ್ ಔಟಾಗದೇ 4 (10ಎ, 4x1)

ಇತರೆ: 24 (ಬೈ 2, ಲೆಗ್‌ಬೈ 2, ನೋಬಾಲ್ 11, ವೈಡ್ 6)

ವಿಕೆಟ್ ಪತನ: 4–17 (ಉಸ್ಮಾನ್ ಖ್ವಾಜಾ, 5.3), 5–79 (ಸ್ಟೀವನ್ ಸ್ಮಿತ್, 24.4), 6–161 (ಟ್ರಾವಿಸ್ ಹೆಡ್, 38.5), 7–182 (ಮಿಚೆಲ್ ಮಾರ್ಷ್, 43.4), 8–227 (ಮಿಚೆಲ್ ಸ್ಟಾರ್ಕ್, 53.4), 9–227 (ನೇಥನ್ ಲಯನ್, 53.6), 10–238 (ಅಲೆಕ್ಸ್ ಕ್ಯಾರಿ, 58.4).

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 12–1–42–3; ಮೊಹಮ್ಮದ್ ಸಿರಾಜ್ 14–2–51–3; ಹರ್ಷಿತ್ ರಾಣಾ 13.4–1–69–1; ವಾಷಿಂಗ್ಟನ್ ಸುಂದರ್ 15–0–48–2; ನಿತೀಶ್ ಕುಮಾರ್ ರೆಡ್ಡಿ 4–0–21–1.

ಪಂದ್ಯದ ಆಟಗಾರ: ಜಸ್‌ಪ್ರೀತ್ ಬೂಮ್ರಾ

ಫಲಿತಾಂಶ: ಭಾರತಕ್ಕೆ 295 ರನ್ ಜಯ, ಸರಣಿಯಲ್ಲಿ 1–0 ಮುನ್ನಡೆ

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪಾಯಿಂಟ್‌ಪಟ್ಟಿ

ಸ್ಥಾನ	ತಂಡ	ಪಂದ್ಯ	ಗೆಲುವು	ಸೋಲು	ಡ್ರಾ	ಪಾಯಿಂಟ್ಸ್	%
1	ಭಾರತ	15	9	5	1	110	61.11
2	ಆಸ್ಟ್ರೇಲಿಯಾ	13	8	4	1	90	57.69
3	ಶ್ರೀಲಂಕಾ	9	5	4	0	60	55.56
4	ನ್ಯೂಜಿಲೆಂಡ್	11	6	5	0	72	54.55
5	ದಕ್ಷಿಣ ಆಫ್ರಿಕಾ	8	4	3	1	52	54.17
6	ಇಂಗ್ಲೆಂಡ್	19	9	9	1	93	40.79
7	ಪಾಕಿಸ್ತಾನ	10	4	6	0	40	33.33
8	ಬಾಂಗ್ಲಾದೇಶ	10	3	7	0	33	27.50
9	ವೆಸ್ಟ್ ಇಂಡೀಸ್	9	1	6	2	20	18.52